ಶನಿವಾರ, ಡಿಸೆಂಬರ್ 10, 2022 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ಮಹಿಳಾ ಸೋಲೊ
ಟ್ರಾವೆಲರ್‌ಗಳ ಅನುಭವ
ಕಥನ ಮತ್ತಷ್ಟು
ಪ್ರವಾಸ ಕೈಗೊಳ್ಳಲು
ಸ್ಫೂರ್ತಿಯಾಗಲಿ

ಕಾಂಗ್ರೆಸ್ ಸೇರ್ಪಡೆಗೆ ಜೆಡಿಎಸ್‌ನ 15 ಮಾಜಿ ಶಾಸಕರ ಅರ್ಜಿ • ರಾಜಕೀಯ ನಿಂತ ನೀರಲ್ಲ

ದಲಿತರು ಏಕೆ ಸಿ.ಎಂ ಆಗಬಾರದು: ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೇರೆಯವರಂತೆ ಮುಸ್ಲಿಮರನ್ನು ಮುಖ್ಯಮಂತ್ರಿ ಮಾಡುತ್ತೇನೆ, ದಲಿತರನ್ನು ಮಾಡುತ್ತೇನೆ ಎಂದು ನಾನು ಹೇಳುವುದಿಲ್ಲ. ಕಾಂಗ್ರೆಸ್ ಪಕ್ಷದಲ್ಲಿ ದಲಿತರಿಗೂ ಮುಖ್ಯಮಂತ್ರಿ ಆಗುವ ಅವಕಾಶವಿದೆ. ದಲಿತರು ಏಕೆ ಮುಖ್ಯಮಂತ್ರಿ ಆಗಬಾರದು' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಪ್ರಶ್ನಿಸಿದರು.

ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿದ ಅವರು, 'ನಮ್ಮ ಪಕ್ಷದಲ್ಲಿ ಅನೇಕ ಸಮರ್ಥ ನಾಯಕರಿದ್ದಾರೆ. ಕೆ.ಎಚ್. ರಂಗನಾಥ್ ಅವರಿಂದ ಆರಂಭವಾಗಿ ಮಲ್ಲಿಕಾರ್ಜುನ ಖರ್ಗೆ, ಜಿ.ಪರಮೇಶ್ವರ ಸೇರಿದಂತೆ ಹಲವು ಕಷ್ಟದ ಸಮಯದಲ್ಲಿ ಪಕ್ಷವನ್ನು ಮುನ್ನಡೆಸಿದ್ದಾರೆ. ಖರ್ಗೆ ಅವರನ್ನು ಎಐಸಿಸಿ ಅಧ್ಯಕ್ಷ ಸ್ಥಾನಕ್ಕೆ ಆಯ್ಕೆ ಮಾಡಿದ್ದೇವೆ. ಅವರು ದಲಿತರು ಎನ್ನುವುದಕ್ಕಿಂತ ಅತ್ಯಂತ ಹಿರಿಯ ಹಾಗೂ ಅನುಭವಿ ರಾಜಕಾರಣಿ ಎಂಬುದನ್ನು ಪರಿಗಣಿಸಿ ಪಕ್ಷವು ಈ ಸ್ಥಾನ ನೀಡಿದೆ' ಎಂದರು.

'ಕಾಂಗ್ರೆಸ್ ಪಕ್ಷ ಯಾರ ಮನೆಯ ಆಸ್ತಿಯಲ್ಲ. ಇದು ಎಲ್ಲರಿಗೂ ಸೇರಿರುವ ಪಕ್ಷ. ವೀರಪ್ಪ ಮೊಯಿಲಿ, ಧರ್ಮ ಸಿಂಗ್, ಎಸ್. ಬಂಗಾರಪ್ಪ ಅವರ ಸಮಾಜದ ಜನಸಂಖ್ಯೆ ಎಷ್ಟಿತ್ತು? ಹಿಂದುಳಿದ ವರ್ಗದವರು ಕಾಂಗ್ರೆಸ್‌ನಿಂದ ಮುಖ್ಯಮಂತ್ರಿಯಾಗಿಲ್ಲವೆ? ಗುಂಡೂರಾವ್ ಅವರೂ ಮುಖ್ಯಮಂತ್ರಿ ಆಗಿರಲಿಲ್ಲವೆ? ಕಾಂಗ್ರೆಸ್‌ನಲ್ಲಿ ಎಲ್ಲರಿಗೂ ಅವಕಾಶಗಳಿವೆ' ಎಂದು ಹೇಳಿದರು.

ಪಕ್ಷಕ್ಕೆ ಬರುವವರ ಸಂಖ್ಯೆ ಹೆಚ್ಚಿದೆ: ವಿಧಾನ ಪರಿಷತ್‌ನ ಬಿಜೆಪಿ ಸದಸ್ಯ ಎಚ್. ವಿಶ್ವನಾಥ್ ಕಾಂಗ್ರೆಸ್‌ಗೆ ಮರಳುತ್ತಾರಾ ಎಂಬ ಪ್ರಶ್ನೆಗೆ, 'ಕಾಂಗ್ರೆಸ್ ಪಕ್ಷದಿಂದ ಒಬ್ಬರು ಖಾಲಿಯಾದರೆ ಮತ್ತೊಬ್ಬರು ಆ ಸ್ಥಾನಕ್ಕೆ ಬರುತ್ತಾರೆ. ನಾನು ಈ ಸ್ಥಾನ ಬಿಟ್ಟರೆ ಇನ್ನೊಬ್ಬರು ಬರುತ್ತಾರೆ. ಶಿವರಾಂ ಹೆಬ್ಬಾರ್ ಕ್ಷೇತ್ರದಲ್ಲಿ ವಿ.ಎಸ್. ಪಾಟೀಲ್ ಟಿಕೆಟ್‌ಗೆ ಅರ್ಜಿ ಸಲ್ಲಿಸಿದ್ದಾರೆ. ಹಿರೇಕೆರೂರಿನಲ್ಲಿ ಯು.ಬಿ. ಬಣಕಾರ್ ಪಕ್ಷಕ್ಕೆ ಬಂದಿದ್ದಾರೆ' ಎಂದು ಉತ್ತರಿಸಿದರು.

ಚುನಾವಣೆಯಲ್ಲಿ ಸಾಕಷ್ಟು ಅಚ್ಚರಿ ಗಳಿರುತ್ತವೆ. ವಲಸಿಗರು ಎಂದೆಲ್ಲ ಚರ್ಚಿಸುವುದರಲ್ಲಿ ಅರ್ಥವಿಲ್ಲ. ಬಣಕಾರ್, ವಿ.ಎಸ್. ಪಾಟೀಲ್, ಮಧು ಬಂಗಾರಪ್ಪ, ಶರತ್ ಬಚ್ಚೇಗೌಡ ವಲಸಿಗರೆ? ಜೆಡಿಎಸ್‌ನ 15 ಮಾಜಿ ಶಾಸಕರು ಕಾಂಗ್ರೆಸ್ ಟಿಕೆಟ್ ಕೋರಿ ಅರ್ಜಿ ಸಲ್ಲಿಸಿದ್ದಾರೆ. ರಾಜಕೀಯ ನಿಂತ ನೀರಲ್ಲ. ಏನು ಬೇಕಾದರೂ ಆಗಬಹುದು ಎಂದು ಶಿವಕುಮಾರ್ ಅವರು ಹೇಳಿದರು.

ಗುಬ್ಬಿಯಲ್ಲಿ ಜೆಡಿಎಸ್ ಶಾಸಕ ಎಸ್.ಆರ್. ಶ್ರೀನಿವಾಸ್ ಅವರಿಗೆ ಕಾಂಗ್ರೆಸ್ ಟಿಕೆಟ್ ನೀಡಿದರೆ ಬಂಡಾಯ ಏಳುವುದಾಗಿ ಪಕ್ಷದ ಮುಖಂಡರು ಎಚ್ಚರಿಕೆ ನೀಡಿರುವ ಕುರಿತು ಕೇಳಿದಾಗ, 'ಯಾರು ಯಾವ ರೀತಿಯ ಬಂಡಾಯ ಬೇಕಾದರೂ ಏಳಲಿ. ಪಕ್ಷಕ್ಕೆ ಅನುಕೂಲವಾಗುವ ರೀತಿ ಟಿಕೆಟ್ ಹಂಚಿಕೆ ನಡೆಯುತ್ತದೆ. ವ್ಯಕ್ತಿಯ ಅರ್ಹತೆ ಪರಿಗಣಿಸಿ ಅಭ್ಯರ್ಥಿ ಆಯ್ಕೆ ಮಾಡಲಾಗುವುದು' ಎಂದರು.

ಉದಯಪುರ ಘೋಷಣೆಯಂತೆ ಹೊಸಬರಿಗೆ ಹೆಚ್ಚಿನ ಅವಕಾಶ ನೀಡುವ ಬಗ್ಗೆ ಖರ್ಗೆ ಒಲವು ಹೊಂದಿದ್ದಾರೆ. ಚುನಾವಣಾ ತಂತ್ರಗಾರಿಕೆಯ ಎಲ್ಲ ವಿವರಗಳನ್ನು ಈಗಲೇ ಬಹಿರಂಗಪಡಿಸಲು ಆಗುವುದಿಲ್ಲ ಎಂದು ಹೇಳಿದರು.

ಕೆಪಿಸಿಸಿ ಅಧ್ಯಕ್ಷ ಸ್ಥಾನ ಸುಲಭವಲ್ಲ: ಪರಮೇಶ್ವರ

ಕೊರಟಗೆರೆ: 'ಕೆಪಿಸಿಸಿ ಅಧ್ಯಕ್ಷ ಸ್ಥಾನ ನಿಭಾಯಿಸುವುದು ಸುಲಭದ ಮಾತಲ್ಲ. ನಾನೊಬ್ಬ ಸಮರ್ಥ ನಾಯಕ ಎಂದು ಹೈಕಮಾಂಡ್ ನನ್ನನ್ನು ನಂಬಿ ಎಂಟು ವರ್ಷ ಅಧ್ಯಕ್ಷನಾಗಿ ಮಾಡಿತ್ತು' ಎಂದು ಶಾಸಕ ಡಾ.ಜಿ. ಪರಮೇಶ್ವರ ಹೇಳಿದರು. ತಾಲ್ಲೂಕಿನ ರಂಗನಹಳ್ಳಿಯಲ್ಲಿ ಗುರುವಾರ ಸಂಜೆ ನಡೆದ ಸಮುದಾಯ ಭವನ ಹಾಗೂ ಹಾಲು ಉತ್ಪಾದಕರ ಸಹಕಾರ ಸಂಘದ ಕಟ್ಟಡಕ್ಕೆ ಭೂಮಿಪೂಜೆ ನೆರವೇರಿಸಿ ಅವರು ಮಾತನಾಡಿದರು.

'ಕೊರಟಗೆರೆ ಕ್ಷೇತ್ರದ ಅಭಿವೃದ್ಧಿಯಾಗಬೇಕಿದೆ. ಆ ಸಾಮರ್ಥ್ಯ ನನ್ನಲ್ಲಿದೆ ಎಂದುಕೊಂಡಿದ್ದೇನೆ. ಬೇರೆಯವರಿಗೆ ಇದೆಯೋ, ಇಲ್ಲವೋ ಗೊತ್ತಿಲ್ಲ. ಆ ಬಗ್ಗೆ ಟೀಕಿಸಲು ಹೋಗುವುದಿಲ್ಲ. ಸುಖಾಸುಮ್ಮನೆ ಪಕ್ಷದ ಅಧ್ಯಕ್ಷನನ್ನಾಗಿ ಮಾಡುತ್ತಾರೆಯೇ? ಆ ಸಾಮರ್ಥ್ಯ ನನ್ನಲ್ಲಿದೆ ಎಂದು ಅಧ್ಯಕ್ಷ ಸ್ಥಾನ ನೀಡಿದ್ದರು, ಸುಮ್ಮನೆ ಶಾಸ್ತ್ರಕ್ಕೆ ಕೂರಿಸಿರಲಿಲ್ಲ' ಎಂದು ಹೇಳಿದರು.

'ಬೆಳಿಗ್ಗೆ ಎದ್ದರೆ ನಮ್ಮ ಶಿವಕುಮಾರಣ್ಣ ಒದ್ದಾಡುತ್ತಾನೆ. ನಾವೆಲ್ಲಾ ಜೊತೆಗಿದ್ದೀವಿ. ಧೈರ್ಯವಾಗಿರು ಎಂದು ಶಿವಕುಮಾರ್‌ಗೆ ಹೇಳುತ್ತೇನೆ. ಅಂತಹ ಸ್ಥಾನ ಅದು. 224 ಮಂದಿಗೆ ಟಿಕೆಟ್ ಕೊಡಬೇಕು, ಗೆಲ್ಲಿಸಬೇಕು. ಸರ್ಕಾರ ರಚಿಸಬೇಕು. ಇದು ಸಾಮಾನ್ಯ ವಿಷಯವಲ್ಲ. ನಿಮ್ಮ ಆಶೀರ್ವಾದ ಇರುವವರೆಗೂ ಆ ಶಕ್ತಿ ನನಗೆ ಇರುತ್ತದೆ' ಎಂದು ಹೇಳಿದರು.

'ಕಾಳಜಿಯಿಂದ ಹೇಳಿದ ಮಾತು'

'ಕೆಪಿಸಿಸಿ ಅಧ್ಯಕ್ಷ ಸ್ಥಾನ ನಿಭಾಯಿಸಲು ಡಿ.ಕೆ. ಶಿವಕುಮಾರ್ ಹೆಣಗಾಡುತ್ತಿದ್ದಾರೆ' ಎಂದು ಕಾಂಗ್ರೆಸ್ ಶಾಸಕ ಜಿ. ಪರಮೇಶ್ವರ ನೀಡಿರುವ ಹೇಳಿಕೆ ಕುರಿತು ಪ್ರತಿಕ್ರಿಯಿಸಿದ ಶಿವಕುಮಾರ್, 'ಅವರು ನನ್ನ ಮೇಲಿನ ಕಾಳಜಿಯಿಂದ ಹಾಗೆ ಹೇಳಿದ್ದಾರೆ. ಆರೋಗ್ಯದ ಕುರಿತು ಕಾಳಜಿ ವಹಿಸುವಂತೆ ಯಾವಾಗಲೂ ಹೇಳುತ್ತಿರುತ್ತಾರೆ' ಎಂದರು.

'ದಿನಕ್ಕೆ ಇರುವುದೇ 24 ಗಂಟೆ. ಅದಕ್ಕಿಂತ ಹೆಚ್ಚು ಸಮಯವಿದ್ದರೆ ಇನ್ನಷ್ಟು ಕೆಲಸ ಮಾಡಬಹುದಿತ್ತು. ನಿತ್ಯವೂ ನಾನು ರಾತ್ರಿ ಮಲಗುವಾಗ 2ರಿಂದ 3 ಗಂಟೆ ಆಗಿರುತ್ತದೆ' ಎಂದು ಹೇಳಿದರು.

ಸುದ್ದಿ 2 ನಿಮಿಷ

ಬಾಲಕಿ ಮೇಲೆ ಅತ್ಯಾಚಾರ– ಅಪರಾಧಿಗೆ 10 ವರ್ಷ ಶಿಕ್ಷೆ

ಮೈಸೂರು: ಬಾಲಕಿ ಮೇಲೆ ಅತ್ಯಾಚಾರವೆಸಗಿದ್ದ ಅಪರಾಧಿ ಮಹದೇವ ಎಂಬುವವನಿಗೆ ಇಲ್ಲಿನ ಪೋಕ್ಸೊ ವಿಶೇಷ ನ್ಯಾಯಾಲಯವು 10 ವರ್ಷಗಳ ಕಠಿಣ ಶಿಕ್ಷೆ ಹಾಗೂ ₹ 25 ಸಾವಿರ ದಂಡ ವಿಧಿಸಿದೆ.

2019ರಲ್ಲಿ ತಿ.ನರಸೀಪುರದಲ್ಲಿ ಅಪರಾಧ ಕೃತ್ಯ ಎಸಗಿದ್ದ. ವಿಷಯ ತಿಳಿದ ಬಾಲಕಿಯ ತಂದೆ ಮರುದಿನ ತಿ.ನರಸೀಪುರ ಠಾಣೆಗೆ ದೂರು ನೀಡಿದ್ದರು. ಆರೋಪಿಯನ್ನು ಬಂಧಿಸಿದ ಪೊಲೀಸರು ಪೋಕ್ಸೊ ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲಿಸಿದ್ದರು.

ವಿಚಾರಣೆಯನ್ನು ಪೂರ್ಣಗೊಳಿಸಿದ ವಿಶೇಷ ನ್ಯಾಯಾಲಯದ ನ್ಯಾಯಾಧೀಶೆ [illegible] ಅವರು ಶುಕ್ರವಾರ ಶಿಕ್ಷೆ ವಿಧಿಸಿ ಅಂತಿಮ ತೀರ್ಪು ಪ್ರಕಟಿಸಿದ್ದಾರೆ. ದಂಡದ ಮೊತ್ತದಲ್ಲಿ ₹ 10 ಸಾವಿರವನ್ನು ಸಂತ್ರಸ್ತೆಗೆ ನೀಡಬೇಕು. ಕಾಯ್ದೆ ಅಡಿಯಲ್ಲಿ ₹3 ಲಕ್ಷ ಪರಿಹಾರ ಪಡೆಯಲು ಬಾಲಕಿಯು ಅರ್ಹಳು ಎಂದು ತಿಳಿಸಿದ್ದಾರೆ.

ತಿ.ನರಸೀಪುರ ಠಾಣೆಯ ಇನ್‌ಸ್ಪೆಕ್ಟರ್ ಎಂ.ಆರ್.ಲವ ಅವರು ದೋಷಾರೋಪ ಪಟ್ಟಿ ಸಲ್ಲಿಸಿದ್ದು, ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಕೆ.ಬಿ.ಜಯಂತಿ ವಾದ ಮಂಡಿಸಿದ್ದರು.

ಗಡಿ ತಂಟೆಗೆ ಬರಬೇಡಿ, ನಾವೇನು ಬಳೆ ಹಾಕಿಲ್ಲ: ಲಕ್ಷ್ಮಣ ಸವದಿ

ಅಥಣಿ (ಬೆಳಗಾವಿ ಜಿಲ್ಲೆ): 'ನಾವೇನು ಬಳೆ ಹಾಕಿಲ್ಲ. ನಾವು ಗಂಡಸರೇ ಇದ್ದೇವೆ. ನೆಲ–ಜಲದ ವಿಷಯಕ್ಕೆ ಬಂದರೆ ಯಾರಿಗೆ ಹೇಗೆ ಉತ್ತರ ಕೊಡಬೇಕೋ ಕೊಡುತ್ತೇವೆ' ಎಂದು ವಿಧಾನ ಪರಿಷತ್ ಸದಸ್ಯ ಲಕ್ಷ್ಮಣ ಸವದಿ ಶುಕ್ರವಾರ ಹೇಳಿದರು.

ಮಾಧ್ಯಮದವರೊಂದಿಗೆ ಇಲ್ಲಿ ಮಾತನಾಡಿದ ಅವರು, 'ಗಡಿ ವಿಚಾರವಾಗಿ ಎಲ್ಲ ಶಾಸಕರೂ ಪಕ್ಷಾತೀತವಾಗಿ, ಒಂದಾಗಿದ್ದೇವೆ. ಎಂಥ ಸ್ಥಿತಿಯೇ ಬರಲಿ ಸಿದ್ಧರಿದ್ದೇವೆ. ಬೆಳಗಾವಿ ರಕ್ಷಣೆಗೆ ಬೇರೆಯವರಿಂದ ಬುದ್ಧಿ ಹೇಳಿಸಿಕೊಳ್ಳಬೇಕಾಗಿಲ್ಲ' ಎಂದರು.

'ಎಂಇಎಸ್ ಸತ್ತುಹೋಗಿದೆ. ಈ ಹೆಣಕ್ಕೆ ಜೀವ ತುಂಬಲು ಮಹಾರಾಷ್ಟ್ರದವರು ಯತ್ನಿಸುತ್ತಿದ್ದಾರೆ. ಮಹಾರಾಷ್ಟ್ರ ಸಚಿವರ ನಡೆಯಿಂದ ಗಡಿಯಲ್ಲಿ ಜನಜೀವನ ಸಂಕಷ್ಟಕ್ಕೆ ಸಿಲುಕಿದೆ. ಸರ್ಕಾರ ಅವರನ್ನು ಹದ್ದುಬಸ್ತಿನಲ್ಲಿಡಬೇಕು' ಎಂದು ಆಗ್ರಹಿಸಿದರು.

ಸಂಕ್ಷಿಪ್ತ ಸುದ್ದಿ

ತೆರಿಗೆ ವಂಚನೆ ಆರೋಪ: ಹಲವೆಡೆ ಶೋಧ

ಬೆಂಗಳೂರು: ತೆರಿಗೆ ವಂಚನೆ ಆರೋಪದಡಿ ಬೆಂಗಳೂರು, ರಾಮನಗರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳ ಕೆಲವು ಕಾರ್ಪೊರೇಟ್ ಕಂಪನಿಗಳು ಹಾಗೂ ರಿಯಲ್ ಎಸ್ಟೇಟ್ ಉದ್ಯಮ ಸಂಸ್ಥೆಗಳ ಪ್ರಮುಖರ ಮನೆ, ಕಚೇರಿಗಳ ಮೇಲೆ ಶುಕ್ರವಾರ ದಾಳಿಮಾಡಿದ ಆದಾಯ ತೆರಿಗೆ (ಐ.ಟಿ) ಇಲಾಖೆ ಅಧಿಕಾರಿಗಳು, ಶೋಧ ನಡೆಸಿದ್ದಾರೆ.

ಸಂಜಯನಗರ ಮತ್ತು ಕೊಡಿಗೆಹಳ್ಳಿಯಲ್ಲಿರುವ ತಲಾ ಒಂದು ಅಪಾರ್ಟ್‌ಮೆಂಟ್, ಹೆಬ್ಬಾಳ, ಚಿಕ್ಕಬಳ್ಳಾಪುರ ಹಾಗೂ ಬಿಡದಿಯಲ್ಲಿರುವ ಉದ್ಯಮಿಗಳ ಮನೆ ಮತ್ತು ಕಚೇರಿಗಳಲ್ಲಿ ಶೋಧ ನಡೆಸಲಾಗಿದೆ. ದೊಡ್ಡ ಮೊತ್ತದ ವಹಿವಾಟು ನಡೆಸುತ್ತಿರುವ ಕಂಪನಿಗಳು ಆದಾಯ ಮುಚ್ಚಿಟ್ಟಿರುವ ಹಾಗೂ ತೆರಿಗೆ ವಂಚನೆ ಮಾಡಿರುವ ಆರೋಪಕ್ಕೆ ಸಂಬಂಧಿಸಿದಂತೆ ಪರಿಶೀಲನೆ ನಡೆಸಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

ಹಲವು ಕಂಪನಿಗಳ ಹಣಕಾಸು ವಹಿವಾಟಿಗೆ ಸಂಬಂಧಿಸಿದ ದಾಖಲೆಗಳು, ರಿಯಲ್ ಎಸ್ಟೇಟ್ ವಹಿವಾಟಿನ ಮಾಹಿತಿಯನ್ನೂ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಸಂಗ್ರಹಿಸಿದ್ದಾರೆ.

ಕೈ–ಕಮಲ ಕಾರ್ಯಕರ್ತರ ಜಟಾಪಟಿ

ಕೊರಟಗೆರೆ: ವೇದಿಕೆ ಏರಲು ನಿವೃತ್ತ ಐಎಎಸ್ ಅಧಿಕಾರಿ ಬಿ.ಎಚ್. ಅನಿಲ್‌ಕುಮಾರ್‌ಗೆ ಅಡ್ಡಿ

ಪ್ರಜಾವಾಣಿ ವಾರ್ತೆ

ತುಮಕೂರು: ಗೃಹ ಸಚಿವ ಆರಗ ಜ್ಞಾನೇಂದ್ರ ಮುಖ್ಯ ಅತಿಥಿಯಾಗಿದ್ದ ಸಮಾರಂಭದಲ್ಲಿ ವೇದಿಕೆ ಏರಲು ಮುಂದಾದ ಬಿಜೆಪಿ ಟಿಕೆಟ್ ಆಕಾಂಕ್ಷಿ, ನಿವೃತ್ತ ಐಎಎಸ್ ಅಧಿಕಾರಿ ಬಿ.ಎಚ್. ಅನಿಲ್‌ಕುಮಾರ್ ಅವರಿಗೆ ಕಾಂಗ್ರೆಸ್ ಕಾರ್ಯಕರ್ತರು ತಡೆಯೊಡ್ಡಿದರು. ಇದರಿಂದ ಗೊಂದಲ ಮೂಡಿದ್ದು, ಕೈ–ಕಮಲ ಕಾರ್ಯಕರ್ತರ ನಡುವೆ ವಾಗ್ವಾದ, ಜಟಾಪಟಿ ನಡೆಯಿತು

ಕೊರಟಗೆರೆ ತಾಲ್ಲೂಕಿನ ಕೋಳಾಲದಲ್ಲಿ ಶುಕ್ರವಾರ ನಡೆದ ಡಾ.ಬಿ.ಆರ್. ಅಂಬೇಡ್ಕರ್ ವಸತಿ ಶಾಲೆ ಉದ್ಘಾಟನೆ ಸಮಾರಂಭದಲ್ಲಿ ಇದರಿಂದ ಗೊಂದಲ ಮೂಡಿತು. ಅನಿಲ್‌ಕುಮಾರ್ ಅವರಿಗೆ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ತಡೆಯೊಡ್ಡಿದರು.

ಕ್ಷೇತ್ರದ ಶಾಸಕ ಡಾ.ಜಿ. ಪರಮೇಶ್ವರ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಅನಿಲ್‌ಕುಮಾರ್ ಅವರು ಬೆಂಬಲಿಗರೊಂದಿಗೆ ಬಿಜೆಪಿ ಬಾವುಟ ಹಾಗೂ ಕೇಸರಿ ಶಾಲು ಧರಿಸಿ ಘೋಷಣೆ ಕೂಗುತ್ತಾ ಶಾಲೆಯ ಒಳಗೆ ಪ್ರವೇಶಿಸಿ ವೇದಿಕೆಯತ್ತ ಸಾಗುತ್ತಿದ್ದರು.

ಸಮಾರಂಭದಲ್ಲಿ ಸಚಿವ ಆರಗ ಜ್ಞಾನೇಂದ್ರ ಮತ್ತು ಶಾಸಕ ಡಾ.ಜಿ. ಪರಮೇಶ್ವರ ಅವರ ಎದುರೇ ಕಾಂಗ್ರೆಸ್ –ಬಿಜೆಪಿ ಕಾರ್ಯಕರ್ತರ ನಡುವೆ ವಾಗ್ವಾದ ನಡೆಯಿತು

ಆಗ ಪರಮೇಶ್ವರ ಅವರ ಬೆಂಬಲಿಗರು ಅನಿಲ್ ಕುಮಾರ್ ವಿರುದ್ಧ ಘೋಷಣೆ ಕೂಗಿದರು. ಕೇಸರಿ ಶಾಲು, ಬಾವುಟ ಬಿಟ್ಟು ಶಾಲೆಯ ಒಳಗೆ ಬನ್ನಿ ಎಂದು ಪಟ್ಟುಹಿಡಿದರು. ಆಗ ಎರಡೂ ಪಕ್ಷದ ಕಾರ್ಯಕರ್ತರ ನಡುವೆ ಪರಸ್ಪರ ನೂಕಾಟ, ತಳ್ಳಾಟ ನಡೆಯಿತು. ಕಾರ್ಯಕರ್ತರು ಪರಸ್ಪರ ಕೈ, ಕೈ ಮಿಲಾಯಿಸಿದರು. ಪೊಲೀಸರು ಮಧ್ಯ ಪ್ರವೇಶಿಸಿ ಪರಿಸ್ಥಿತಿಯನ್ನು ತಿಳಿಗೊಳಿಸಿದರು.

ನಂತರ ಸಿದ್ಧರಬೆಟ್ಟ ಬಳಿಯ ಬಿದುರುಗುಟ್ಟೆ ಹತ್ತಿರದ ಇಂದಿರಾ ವಸತಿ ಶಾಲೆಯ ಉದ್ಘಾಟನಾ ಸಮಾರಂಭದಲ್ಲೂ ಎರಡು ಪಕ್ಷದ ಕಾರ್ಯಕರ್ತರ ನಡುವೆ ವಾಗ್ವಾದ ನಡೆಯಿತು. ಕಾಂಗ್ರೆಸ್ ಕಾರ್ಯಕರ್ತರು ಪಕ್ಷದ ಬಾವುಟ ಹಿಡಿದು ವೇದಿಕೆಯತ್ತ ತೆರಳಲು ಮುಂದಾದ ವೇಳೆ ಪೊಲೀಸರು ಮಧ್ಯ ಪ್ರವೇಶಿಸಿ ವಾತಾವರಣವನ್ನು ತಿಳಿಗೊಳಿಸಿದರು.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಹಾಸನ: ಕಾಂಗ್ರೆಸ್ ಕಾರ್ಯಕರ್ತರ ಆಕ್ರೋಶ

ಹಾಸನ: 'ಜಿಲ್ಲೆಯಲ್ಲಿ ಪಕ್ಷದ ಸಂಘಟನೆ ಸರಿಯಾಗಿಲ್ಲ ಎಂದು ಏಕೆ ಬೈತೀರಾ? ಮೊದಲು ನೀವು ಸರಿಯಾಗಿ ಕೆಲಸ ಮಾಡಿ. ಈಗಾಗಲೇ ಅಧಿಕಾರಕ್ಕೆ ಬಂದೇ ಬಿಟ್ಟೆವು ಎನ್ನುವ ಹುಮ್ಮಸ್ಸಿನಲ್ಲಿದ್ದೀರಿ. ಹೀಗಾದರೆ, ಕನಸು ಈಡೇರುವುದು ಸಾಧ್ಯವೇ ಇಲ್ಲ'.

–ಕಾಂಗ್ರೆಸ್ ಜಿಲ್ಲಾ ಘಟಕದ ಅಧ್ಯಕ್ಷರಾಗಿ ಇ.ಎಚ್.ಲಕ್ಷ್ಮಣ ನೇಮಕದ ನಂತರ ಉದ್ಭವಿಸಿರುವ ಗೊಂದಲ ನಿವಾರಣೆಗೆ ಶುಕ್ರವಾರ ನಗರಕ್ಕೆ ಬಂದಿದ್ದ, ಜಿಲ್ಲಾ ಉಸ್ತುವಾರಿಯೂ ಆದ ಕೆಪಿಸಿಸಿ ಕಾರ್ಯಾಧ್ಯಕ್ಷ ಧ್ರುವನಾರಾಯಣ ಎದುರು ಪಕ್ಷದ ಕಾರ್ಯಕರ್ತ ಆಲೂರು ಕ್ಷೇತ್ರದ ಶಾಂತಪ್ಪ ಹೀಗೆ ಆಕ್ರೋಶ ವ್ಯಕ್ತಪಡಿಸಿದರು.

'25 ವರ್ಷದಲ್ಲಿ ಜಿಲ್ಲಾ ಘಟಕಕ್ಕೆ ಒಬ್ಬ ಒಳ್ಳೆ ಅಧ್ಯಕ್ಷರನ್ನು ನೇಮಿಸಲು ಆಗಿಲ್ಲ. ನಾಚಿಕೆ ಆಗಬೇಕು. ನಿಮ್ಮ ಹತ್ರ ದುಡ್ಡಿರಬಹುದು. ನಾವಿಲ್ಲದಿದ್ದರೆ ನೀವು ಏನೂ ಮಾಡಲಾಗದು' ಎಂದು ಹೇಳಿದರು.

'ಸಿದ್ದರಾಮಯ್ಯ ಅವರನ್ನು ಬಿಜೆಪಿಯವರು 'ಸಿದ್ರಾಮುಲ್ಲಾಖಾನ್' ಎಂದು ಕರೆಯುತ್ತಾರೆ. ಅಂತಹ ಬಿಜೆಪಿಯಲ್ಲಿ ಇದ್ದವರನ್ನು ಕಾಂಗ್ರೆಸ್ ಅಧ್ಯಕ್ಷರಾಗಿ ಮಾಡಿದ್ದೀರಿ. ಇದರಲ್ಲೂ ಡೀಲ್ ಮಾಡಿಕೊಂಡ್ರಾ' ಎಂದು ಪೀರ್‌ಸಾಬ್ ಪ್ರಶ್ನಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಧ್ರುವನಾರಾಯಣ, 'ಇದು ಪಕ್ಷದ ಆಂತರಿಕ ವಿಚಾರ. ಕುಟುಂಬದಲ್ಲಿ ಭಿನ್ನಾಭಿಪ್ರಾಯಗಳಿರುತ್ತವೆ. ಕುಳಿತು ಪರಿಹರಿಸಿಕೊಳ್ಳುತ್ತೇವೆ. ಕಾರ್ಯಕರ್ತರ ಅಭಿಪ್ರಾಯವನ್ನು ವರಿಷ್ಠರ ಗಮನಕ್ಕೆ ತರುತ್ತೇನೆ' ಎಂದರು.

'ಸಾಮಾಜಿಕ ನ್ಯಾಯದಡಿ ನನ್ನನ್ನು ಜಿಲ್ಲಾ ಘಟಕದ ಅಧ್ಯಕ್ಷನಾಗಿ ನೇಮಿಸಲಾಗಿದೆ. ಹೈಕಮಾಂಡ್ ಹೇಳಿದರೆ ಸ್ಥಾನ ತೆರವಿಗೆ ಸಿದ್ಧ' ಎಂದು ಜಿಲ್ಲಾ ಘಟಕದ ಅಧ್ಯಕ್ಷ ಇ.ಎಚ್.ಲಕ್ಷ್ಮಣ್ ಸ್ಪಷ್ಟಪಡಿಸಿದರು.

ಬೆಂಗಳೂರಿನ ಕೃಷಿ ಆಯುಕ್ತರ ಕಚೇರಿ ಎದುರು ಶುಕ್ರವಾರ ರೈತರು ಭತ್ತ ಸುರಿದು ಪ್ರತಿಭಟಿಸಿದರು

ಭತ್ತಕ್ಕೆ ₹ 500 ಪ್ರೋತ್ಸಾಹಧನ ಸರ್ಕಾರಕ್ಕೆ ರೈತರ ಆಗ್ರಹ

ಬೆಂಗಳೂರು: ಕನಿಷ್ಠ ಬೆಂಬಲ ಬೆಲೆ ಯೋಜನೆ ಅಡಿ ಖರೀದಿಸುತ್ತಿರುವ ಭತ್ತಕ್ಕೆ ₹ 500 ಪ್ರೋತ್ಸಾಹಧನ ಹಾಗೂ ಕಬ್ಬಿಗೆ ಬೆಳೆ ವಿಮೆ ಜಾರಿಗೊಳಿಸಬೇಕು ಎಂದು ಆಗ್ರಹಿಸಿ ಶುಕ್ರವಾರ ಕೃಷಿ ಆಯುಕ್ತರ ಕಚೇರಿ ಎದುರು ರೈತರು ಭತ್ತ ಸುರಿದು ಪ್ರತಿಭಟಿಸಿದರು.

ರಾಜ್ಯ ಸರ್ಕಾರವು ಕೃಷಿಕರ ನಿರ್ಲಕ್ಷ್ಯ ಮಾಡುತ್ತಿದೆ ಎಂದು ಅಳಲು ತೋಡಿಕೊಂಡರು.

'ಅತಿವೃಷ್ಟಿಯಿಂದ ಭತ್ತದ ಇಳುವರಿ ಕುಂಠಿತವಾಗಿದೆ. ಭತ್ತದ ಬೆಳೆದ ರೈತರ ಉತ್ಪಾದನಾ ವೆಚ್ಚವು ಅಧಿಕವಾಗಿದ್ದು ರಾಜ್ಯ ಸರ್ಕಾರವು ಕೃಷಿಕರ ನೆರವಿಗೆ ಬರಬೇಕು' ಎಂದು ರೈತ ಮುಖಂಡ ಕುರುಬೂರು ಶಾಂತಕುಮಾರ ಆಗ್ರಹಿಸಿದರು.

ಬೆಂಬಲ ಬೆಲೆ ಯೋಜನೆ ಅಡಿ ಭತ್ತದ ಖರೀದಿಗೆ ರಾಜ್ಯ ಸರ್ಕಾರವು ಸಿದ್ಧತೆ ನಡೆಸಿದೆ. ಕೇಂದ್ರ ಸರ್ಕಾರ ನಿಗದಿ ಪಡಿಸಿರುವ ದರಕ್ಕೆ ಭತ್ತ ಖರೀದಿಸಿದರೆ ಭತ್ತದ ಬೆಳೆಗಾರರಿಗೆ ಲಾಭ ಸಿಗುವುದಿಲ್ಲ. ಪ್ರತಿ ಕ್ವಿಂಟಲ್ ಭತ್ತಕ್ಕೆ ₹ 500 ಪ್ರೋತ್ಸಾಹಧನ ನೀಡಿ ರೈತರ ರಕ್ಷಣೆ ಮಾಡಬೇಕು ಎಂದು ಕೋರಿದರು.

100 ಕ್ವಿಂಟಲ್ ಭತ್ತ ಖರೀದಿಸಿ: ಭತ್ತದ ಖರೀದಿ ಕೇಂದ್ರಗಳ ಮೂಲಕ ಗರಿಷ್ಠ 40 ಕ್ವಿಂಟಲ್ ಭತ್ತ ಖರೀದಿಸಲು ಆದೇಶ ಹೊರಡಿಸಲಾಗಿದೆ. ಈ ಆದೇಶವನ್ನು ಮರುಪರಿಶೀಲಿಸಬೇಕು. ಪ್ರತಿ ರೈತನಿಂದ ಗರಿಷ್ಠ 100 ಕ್ವಿಂಟಲ್ ಭತ್ತ ಖರೀದಿಸಬೇಕು. ತಮಿಳುನಾಡು ಹಾಗೂ ತೆಲಂಗಾಣ ರಾಜ್ಯದಂತೆ ಗ್ರಾಮೀಣಮಟ್ಟದಲ್ಲಿ ಖರೀದಿ ಕೇಂದ್ರ ಆರಂಭಿಸಬೇಕು ಎಂದು ಆಗ್ರಹಿಸಿದರು.

ಕಬ್ಬಿಗೆ ಪ್ರತಿ ಎಕರೆಗೆ ಸಾವಿರಾರು ರೂಪಾಯಿ ಖರ್ಚು ತಗುಲುತ್ತದೆ. ಕಬ್ಬಿನ ಬೆಳೆಗೆ ಬೆಂಕಿ ಬಿದ್ದಾಗ ಕನಿಷ್ಠ ಪರಿಹಾರ ನೀಡಲಾಗುತ್ತಿದೆ. ಬೆಳೆ ನಷ್ಟಕ್ಕೆ ನೀಡುವ ಪರಿಹಾರ ಮೊತ್ತ ಹೆಚ್ಚಿಸಬೇಕು ಎಂದು ಆಗ್ರಹಿಸಿದರು.

ಸುರೇಶ್ ಮಾ ಪಾಟೀಲ್, ಬಸವರಾಜ ಪಾಟೀಲ್, ಹತ್ತಳ್ಳಿ ದೇವರಾಜ್, ರಮೇಶ್ ಉಗಾರ್, ಜಗದೀಶ್, ಬರಡನಪುರ ನಾಗರಾಜ್, ಚೆನ್ನಪ್ಪ ಹಾಜರಿದ್ದರು.

ಆಮಂತ್ರಣ ಪತ್ರಿಕೆ ಕಸಾಪ ಸ್ಪಷ್ಟನೆ

ಬೆಂಗಳೂರು: 'ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿರುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಆಮಂತ್ರಣ ಪತ್ರಿಕೆ ಅಧಿಕೃತ ಆಮಂತ್ರಣ ಪತ್ರಿಕೆಯಲ್ಲ. ಡಿಟಿಪಿ ಹಂತದಲ್ಲಿದ್ದ ಪ್ರತಿಯನ್ನು ಯಾರೋ ಕಿಡಿಗೇಡಿಗಳು ಹರಿಬಿಟ್ಟಿದ್ದಾರೆ' ಎಂದು ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಅಧ್ಯಕ್ಷ ಮಹೇಶ ಜೋಶಿ ಸ್ಪಷ್ಟಪಡಿಸಿದ್ದಾರೆ.

2023ರ ಜ.6ರಿಂದ ಜ.8ರವರೆಗೆ ನಡೆಯಲಿರುವ ಸಮ್ಮೇಳನದ ಆಮಂತ್ರಣ ಪತ್ರಿಕೆ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. 'ಸಮ್ಮೇಳನದ ಆಹ್ವಾನ ಪತ್ರಿಕೆ ಸಿದ್ಧತೆಯ ಹಂತದಲ್ಲಿದ್ದು, ಗೊಂದಲವನ್ನು ಉಂಟು ಮಾಡುವ ದುರುದ್ದೇಶದಿಂದ ಸಾಮಾಜಿಕ ಜಾಲತಾಣದಲ್ಲಿ ಕಿಡಿಗೇಡಿಗಳು ಹರಿಬಿಟ್ಟಿದ್ದಾರೆ. ಅಂಥವರ ವಿರುದ್ಧ ಸೂಕ್ತ ಕ್ರಮಕ್ಕೆ ಪರಿಷತ್ತು ಮುಂದಾಗಲಿದೆ. ಆಹ್ವಾನ ಪತ್ರಿಕೆಯನ್ನು ಮುದ್ರಿಸಿದ ಬಳಿಕ ಪರಿಷತ್ತು ಪರಂಪರೆಯಂತೆ ಮಾಧ್ಯಮ ಗೋಷ್ಠಿ ಕರೆದು, ಗಣ್ಯರ ಸಮ್ಮುಖದಲ್ಲಿ ಆಹ್ವಾನ ಪತ್ರಿಕೆಯನ್ನು ಅಧಿಕೃತವಾಗಿ ಬಿಡುಗಡೆಗೊಳಿಸಲಿದೆ' ಎಂದರು.

'ಜಾಲತಾಣಗಳಲ್ಲಿ ಹರಿದಾಡುತ್ತಿರುವ ಅನಧಿಕೃತ ಆಮಂತ್ರಣ ಪತ್ರಿಕೆಗೆ ಮಹತ್ವ ನೀಡದೆ ನಿರ್ಲಕ್ಷಿಸಬೇಕು' ಎಂದು ಮನವಿ ಮಾಡಿಕೊಂಡಿದ್ದಾರೆ.

ಸಭಾಪತಿ ಚುನಾವಣೆ: ಬಸವರಾಜ ಹೊರಟ್ಟಿಗೆ ಮತ್ತೆ ಅವಕಾಶ?

ಬಿಜೆಪಿಯಲ್ಲಿ ಬಿರುಸಿನ ಚಟುವಟಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಪರಿಷತ್ ಸಭಾಪತಿ ಚುನಾವಣೆಗೆ ರಾಜ್ಯಪಾಲ ಥಾವರ್ ಚಂದ್ ಗೆಹಲೋತ್ ಅವರು ಡಿ.21ಕ್ಕೆ ದಿನಾಂಕ ನಿಗದಿ ಮಾಡಿ ಆದೇಶ ಹೊರಡಿಸಿದ ಬೆನ್ನಲ್ಲೇ, ಬಿಜೆಪಿಯಲ್ಲಿ ಸಭಾಪತಿ ಸ್ಥಾನದ ಆಕಾಂಕ್ಷಿಗಳ ಚಟುವಟಿಕೆ ಬಿರುಸಾಗಿದೆ.

ಬಿಜೆಪಿ ಮೂಲಗಳ ಪ್ರಕಾರ, ಬಸವರಾಜ ಹೊರಟ್ಟಿ ಅವರನ್ನೇ ಸಭಾಪತಿ ಹುದ್ದೆಯ ಅಭ್ಯರ್ಥಿಯನ್ನಾಗಿ ಆಯ್ಕೆ ಮಾಡುವ ಸಾಧ್ಯತೆ ಹೆಚ್ಚು. ಹೊರಟ್ಟಿಯವರನ್ನು ಬಿಜೆಪಿಗೆ ಸೇರ್ಪಡೆ ಮಾಡಿಕೊಳ್ಳುವ ಸಂದರ್ಭದಲ್ಲೇ, ಸಭಾಪತಿ ಹುದ್ದೆಯನ್ನು ನೀಡುವ ಭರವಸೆ ನೀಡಲಾಗಿತ್ತು. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಜತೆಯೂ ಮಾತುಕತೆ ನಡೆಸಿದ್ದರು.

ಆದರೆ, ಪರಿಷತ್ತಿನಲ್ಲಿ ಬಿಜೆಪಿಯ ಕೆಲವು ಹಿರಿಯ ಸದಸ್ಯರು ಈ ಹುದ್ದೆಯ ಮೇಲೆ ಕಣ್ಣಿಟ್ಟಿದ್ದಾರೆ. ಆ ಪೈಕಿ ಹಂಗಾಮಿ ಸಭಾಪತಿ ರಘುನಾಥರಾವ್ ಮಲ್ಕಾಪುರೆ ಮಾತ್ರ ಗಂಭೀರ ಪ್ರಯತ್ನ ನಡೆಸಿದ್ದಾರೆ. ಈ ಹಿಂದೆ ಪ್ರಯತ್ನ ನಡೆಸಿದ್ದ ಆಯನೂರು ಮಂಜುನಾಥ್, ವೈ.ಎ. ನಾರಾಯಣ ಸ್ವಾಮಿ ಅವರು ಈ ಬಾರಿ ಗಂಭೀರ ಪ್ರಯತ್ನ ನಡೆಸಿಲ್ಲ ಎಂದು ಮೂಲಗಳು ಹೇಳಿವೆ.

'ದೊಡ್ಡಬಳ್ಳಾಪುರದಲ್ಲಿ ನಡೆದ ಪಕ್ಷದ ಪ್ರಮುಖ ನಾಯಕರ ಸಭೆಯಲ್ಲೇ ಸಭಾಪತಿ ಸ್ಥಾನಕ್ಕೆ ಹೊರಟ್ಟಿ ಅವರನ್ನೇ ಆಯ್ಕೆ ಮಾಡುವ ತೀರ್ಮಾನ ತೆಗೆದುಕೊಳ್ಳಲಾಗಿತ್ತು. ಈ ಬಗ್ಗೆ ಸಾಕಷ್ಟು ಚರ್ಚೆ ನಡೆದಿತ್ತು. ಪರಿಷತ್ತಿನಲ್ಲಿ ಅತ್ಯಂತ ಹಿರೀಕರಾದ ಹೊರಟ್ಟಿಯವರು ಸದನವನ್ನು ಸಮತೂಕದಿಂದ ಒಯ್ಯುವ ಸಾಮರ್ಥ್ಯವನ್ನೂ ಹೊಂದಿದ್ದಾರೆ. ಆಡಳಿತ ಪಕ್ಷವಲ್ಲದೇ, ವಿರೋಧ ಪಕ್ಷದ ಸದಸ್ಯರೂ ಹೊರಟ್ಟಿ ಅವರ ಬಗ್ಗೆ ಗೌರವ ಹೊಂದಿದ್ದಾರೆ ಎಂಬ ವಿಷಯ ಪ್ರಸ್ತಾಪವಾಯಿತು. ಇನ್ನು ಕೆಲವರು ಅವರು ವಿರೋಧ ಪಕ್ಷಗಳಿಗೆ ಹೆಚ್ಚಿನ ಅವಕಾಶ ನೀಡುತ್ತಾರೆ. ಸರ್ಕಾರ ಪರವಾಗಿ ನಿಲ್ಲುವ ಸಾಧ್ಯತೆ ಕಡಿಮೆ ಎಂಬ ಅಭಿಪ್ರಾಯವನ್ನೂ ವ್ಯಕ್ತಪಡಿಸಿದರು' ಎಂದು ಮೂಲಗಳು ತಿಳಿಸಿವೆ.

'ಸಭಾಪತಿ ಕೇವಲ ಸರ್ಕಾರದ ಪರವಾಗಿ ಮಾತ್ರವಲ್ಲ, ವಿರೋಧ ಪಕ್ಷಗಳಿಗೂ ಅವಕಾಶ ನೀಡಬೇಕಾಗುತ್ತದೆ. ಆಗಲೇ ಸದನದ ಗೌರವ ಎತ್ತಿ ಹಿಡಿದಂತಾಗುತ್ತದೆ. ಆದ್ದರಿಂದ, ಹೊರಟ್ಟಿ ಅವರನ್ನು ಮಾಡುವುದೇ ಸೂಕ್ತ' ಎಂಬ ಅಭಿಪ್ರಾಯವೂ ಸಭೆಯಲ್ಲಿ ವ್ಯಕ್ತವಾಯಿತು.

'ಬಿಜೆಪಿಯ ಹಿರಿಯ ಸದಸ್ಯ ಮತ್ತು ಕುರುಬ ಸಮುದಾಯದ ರಘುನಾಥರಾವ್ ಮಲ್ಕಾಪುರೆ ಅವರು, ತಾವೂ ಹಿರಿಯ ಸದಸ್ಯರಾಗಿದ್ದು ತಮಗೂ ಅವಕಾಶ ನೀಡಬೇಕು. ಕೆ.ಎಸ್.ಈಶ್ವರಪ್ಪ ಅವರು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರಿಂದ ಮೂಲ ಬಿಜೆಪಿಯ ಕುರುಬ ಜನಾಂಗದ ಶಾಸಕರಿಗೆ ಸರ್ಕಾರದಲ್ಲಿ ಪ್ರಾತಿನಿಧ್ಯ ಸಿಕ್ಕಿಲ್ಲ. ಈಗ ಸಚಿವರಾಗಿರುವ ಬೈರತಿ ಬಸವರಾಜು ಮತ್ತು ಎಂ.ಟಿ.ಬಿ.ನಾಗರಾಜ್ ಅವರು ಕಾಂಗ್ರೆಸ್‌ನಿಂದ ವಲಸೆ ಬಂದವರು. ಹೀಗಾಗಿ ತಮಗೆ ಅವಕಾಶ ನೀಡಬೇಕು ಎಂಬ ವಾದ ಮುಂದಿಟ್ಟಿದ್ದಾರೆ' ಎಂದು ಮೂಲಗಳು ಹೇಳಿವೆ.

'ಜನಾರ್ದನ ರೆಡ್ಡಿ ಬೇರೆ ಪಕ್ಷ ಕಟ್ಟುವ ಪ್ರಶ್ನೆಯೇ ಇಲ್ಲ'

ಯಲ್ಲಾಪುರ (ಉತ್ತರ ಕನ್ನಡ): 'ಜನಾರ್ದನ ರೆಡ್ಡಿ ಒಂದು ವೇಳೆ ಪಕ್ಷ ಕಟ್ಟಿದರೂ, ನಾನು ಬಿಜೆಪಿ ಬಿಡುವುದಿಲ್ಲ. ಸ್ನೇಹ ಬೇರೆ, ಪಕ್ಷ ಬೇರೆ. ಸ್ನೇಹ, ಪಕ್ಷ ಎರಡು ಒಟ್ಟಾಗಿರುವಂತೆ ಮಾಡುತ್ತೇನೆ' ಎಂದು ಸಚಿವ ಬಿ.ಶ್ರೀರಾಮುಲು ಹೇಳಿದರು.

ತಾಲ್ಲೂಕಿನ ಮಾಗೋಡಿನಲ್ಲಿ ಸಿದ್ದಿ ಸಮುದಾಯದವರ ಮನೆಯಲ್ಲಿ ಗ್ರಾಮ ವಾಸ್ತವ್ಯಕ್ಕೆ ಗುರುವಾರ ಆಗಮಿಸಿದ್ದ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು. 'ರೆಡ್ಡಿ ಅವರು ಬೇರೆ ಪಕ್ಷ ಕಟ್ಟುವ ಪ್ರಶ್ನೆಯೇ ಇಲ್ಲ. ಪಕ್ಷದಲ್ಲೇ ಇರುತ್ತಾರೆ' ಎಂದರು.

ಕ್ಯಾಮೆರಾ ಕಂಡು ಓಡಿದ ಆರ್‌ಟಿಒ ಸಿಬ್ಬಂದಿ!

ಪ್ರಜಾವಾಣಿ ವಾರ್ತೆ

ಕೊಪ್ಪಳ: ರಾಷ್ಟ್ರೀಯ ಹೆದ್ದಾರಿ 50ರಲ್ಲಿ, ತಾಲ್ಲೂಕಿನ ಕೆರೆಹಳ್ಳಿ ಹತ್ತಿರ ವಾಹನಗಳ ಚಾಲಕರಿಂದ ಹಣ ವಸೂಲು ಮಾಡುತ್ತಿದ್ದ ಆರ್‌ಟಿಒ ಅಧಿಕಾರಿಗಳು ಶುಕ್ರವಾರ ಮಾಧ್ಯಮ ಪ್ರತಿನಿಧಿಗಳ ಕ್ಯಾಮೆರಾಗಳನ್ನು ಕಂಡು ದಿಕ್ಕಾಪಾಲಾಗಿ ಓಡಿಹೋದರು.

ಗಂಗಾವತಿ ತಾಲ್ಲೂಕಿನ ಅಂಜನಾದ್ರಿಗೆ ಶುಕ್ರವಾರ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಭೇಟಿ ನೀಡಿದ್ದರು. ಅಲ್ಲಿಗೆ ತೆರಳಿ ಮರಳುತ್ತಿದ್ದ ವಾರ್ತಾ ಇಲಾಖೆಯ ವಾಹನವನ್ನೂ ಅಧಿಕಾರಿಗಳು ತಡೆದರು. ಯಾಕೆಂದು ಪ್ರಶ್ನಿಸಿದಾಗ ಉತ್ತರಿಸಲಿಲ್ಲ. ಇದೇ ವೇಳೆ ಆರ್‌ಟಿಒ ಕಚೇರಿಯ ಬ್ರೇಕ್ ಇನ್‌ಸ್ಪೆಕ್ಟರ್ ಜವರೇಗೌಡ ಎಂಬವರಿಗೆ ಲಾರಿ ಚಾಲಕನೊಬ್ಬ ₹ 50 ಕೊಡಲು ಬಂದ. ಅದನ್ನು ಮಾಧ್ಯಮದವರು ಕ್ಯಾಮೆರಾದಲ್ಲಿ ದಾಖಲಿಸಲು ಮುಂದಾದರು. ಇದನ್ನು ಕಂಡ ಆರ್‌ಟಿಒ ಸಿಬ್ಬಂದಿ ಗಾಬರಿಯಿಂದ ರಸ್ತೆ ಪಕ್ಕದಲ್ಲಿದ್ದ ಹೊಲದಲ್ಲಿ ಓಡಿ ಹೋದರು. ಬೆನ್ನಟ್ಟಿದಾಗ ಹಣವಿದ್ದ ಚೀಲವನ್ನು ಹೊತ್ತು ಓಡುತ್ತಿದ್ದುದು ಕಂಡುಬಂತು.

ಈ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಕೊಪ್ಪಳ ಆರ್‌ಟಿಒ ಲಕ್ಷ್ಮಿಕಾಂತ್, 'ಜವರೇಗೌಡ ಎಂಬವರು ಬ್ರೇಕ್ ಇನ್‌ಸ್ಪೆಕ್ಟರ್ ಆಗಿದ್ದಾರೆ. ದಂಡ ವಿಧಿಸಿ ದಂಡದ ಹಣ ಪಡೆಯುತ್ತಿರಬಹುದು. ಘಟನೆಯ ಮಾಹಿತಿ ಪಡೆಯುವೆ' ಎಂದರು.

21 ತಾಲ್ಲೂಕುಗಳಲ್ಲಿ 'ಸಂರಕ್ಷಣ್'

ಪಾರಂಪರಿಕ ಮಹತ್ವದ ಸ್ಮಾರಕಗಳನ್ನು ಗುರುತಿಸಿ, ಸಂರಕ್ಷಣೆ ಉದ್ದೇಶ ಯೋಜನೆ

• ಎಂ.ಮಹೇಶ

ಪ್ರಜಾವಾಣಿ ವಿಶೇಷ

ಮೈಸೂರು: ಪಾರಂಪರಿಕ ಸ್ಮಾರಕಗಳ ಸಂರಕ್ಷಣೆಗಾಗಿ ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯು 'ಸಂರಕ್ಷಣ್' ಯೋಜನೆಯಡಿ ತಾಲ್ಲೂಕುವಾರು ಸಮಗ್ರ ಸಮೀಕ್ಷೆಯನ್ನು ಆರಂಭಿಸಿದೆ.

ಅದಕ್ಕಾಗಿ, 2022–23ನೇ ಸಾಲಿನಲ್ಲಿ ರಾಜ್ಯದ 21 ತಾಲ್ಲೂಕುಗಳನ್ನು ಆಯ್ಕೆ ಮಾಡಲಾಗಿದೆ. ರಾಜ್ಯದಲ್ಲಿ 844 ರಾಜ್ಯ ಸಂರಕ್ಷಿತ ಹಾಗೂ 605 ಕೇಂದ್ರ ಸಂರಕ್ಷಿತ ಸ್ಮಾರಕಗಳನ್ನು ಗುರುತಿಸಲಾಗಿದೆ.

ಅಂದಾಜಿನ ಪ್ರಕಾರ, 25 ಸಾವಿರಕ್ಕೂ ಹೆಚ್ಚು ಅಸಂರಕ್ಷಿತ ಸ್ಮಾರಕಗಳಿವೆ. ಅವುಗಳ ವ್ಯವಸ್ಥಿತ ಸಂರಕ್ಷಣೆ ಹಾಗೂ ನಿಖರವಾದ ಮಾಹಿತಿ ಸಂಗ್ರಹವೇ ಈ ಸಮೀಕ್ಷೆಯ ಗುರಿ. ಮೂರೂವರೆ ತಿಂಗಳಲ್ಲಿ ಸಮೀಕ್ಷೆ ಪೂರ್ಣಗೊಳಿಸುವ ಉದ್ದೇಶವಿದೆ. ಎರಡು ತಿಂಗಳವರೆಗೆ ಸಮೀಕ್ಷೆ, ಒಂದೂವರೆ ತಿಂಗಳು ದಾಖಲೆಗಳ ಕ್ರೋಢೀಕರಣ ನಡೆಯಲಿದೆ.

ಎಚ್.ಡಿ.ಕೋಟೆ, ಹುಣಸೂರು, ಕೆ.ಆರ್.ನಗರ, ಮಾಗಡಿ, ದೇವನಹಳ್ಳಿ, ಖಾನಾಪುರ, ಭದ್ರಾವತಿ, ರಾಣೆಬೆನ್ನೂರು, ಶಹಬಾದ್, ಕಂಪ್ಲಿ, ಸಂಡೂರು, ಕಾಳಗಿ, ಆಳಂದ, ಚಳ್ಳಕೆರೆ, ಸುಳ್ಯ, ಪುತ್ತೂರು, ಚಿಕ್ಕಮಗಳೂರು, ಸೋಮವಾರಪೇಟೆ, ಕುಶಾಲನಗರ, ಪಾಂಡವಪುರ ಹಾಗೂ ಹಿರಿಯೂರು ವ್ಯಾಪ್ತಿಯಲ್ಲಿ ಸಮೀಕ್ಷೆ ನಡೆಯಲಿದೆ.

ಸಮೀಕ್ಷೆ ಉದ್ದೇಶಕ್ಕಾಗಿ ಸರ್ಕಾರ ₹ 35 ಲಕ್ಷ ಅನುದಾನ ಒದಗಿಸಿದೆ. ಅಧಿಕಾರಿಗಳು, ಕ್ಯುರೇಟರ್‌ಗಳು, ಸಿಬ್ಬಂದಿ, ತಜ್ಞರು, ಪರಂಪರೆ ವಿಷಯದಲ್ಲಿ ಸ್ನಾತಕೋತ್ತರ ಪದವೀಧರರು, ಪಿಎಚ್.ಡಿ ಪದವೀಧರರು ಭಾಗಿಯಾಗುವರು.

'ನಿಯೋಜಿತ ತಂಡಗಳು ಗ್ರಾಮಗಳಿಗೆ ಭೇಟಿ ನೀಡಿ, ಗ್ರಾಮಸ್ಥರೊಂದಿಗೆ ಚರ್ಚೆ ನಡೆಸಲಿವೆ. ಅಲ್ಲಿರಬಹುದಾದ ವೀರಗಲ್ಲು, ಮಾಸ್ತಿಗಲ್ಲು, ಮಂಟಪ, ದೇವಸ್ಥಾನಗಳು ಮೊದಲಾದ ರಚನೆಗಳ ಮಾಹಿತಿಯನ್ನು ದಾಖಲಿಸಲಾಗುತ್ತದೆ. ಅವು ಯಾವ ಸ್ಥಿತಿಯಲ್ಲಿವೆ ಎನ್ನುವುದನ್ನು ನಮೂದಿಸಲಾಗುತ್ತದೆ. ಇತಿಹಾಸ ಪ್ರಸಿದ್ಧ ದೇಗುಲವಿದ್ದರೆ ವಿಶೇಷವಾಗಿ ದಾಖಲಿಸಲಾಗುತ್ತದೆ. ನಿಗದಿತ ನಮೂನೆಯಲ್ಲಿ ಮಾಹಿತಿ ಸಂಗ್ರಹಿಸಲಾಗುತ್ತಿದೆ' ಎಂದು ಇಲಾಖೆಯ ಆಯುಕ್ತ ಎ.ದೇವರಾಜು 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

'ದೇಶದ ಬದಲಾಯಿಸಲಾಗದ ಮತ್ತು ನವೀಕರಿಸಲಾಗದ ಸಾಂಸ್ಕೃತಿಕ ಸಂಪನ್ಮೂಲಗಳಾದ ಸ್ಮಾರಕಗಳನ್ನು ಮುಂದಿನ ಪೀಳಿಗೆಗಾಗಿ ಸಂರಕ್ಷಿಸಲು ಮತ್ತು ರಕ್ಷಿಸಲು ಕಾಳಜಿ ವಹಿಸಲಾಗುತ್ತಿದೆ. ನಿಖರ ಮಾಹಿತಿ ಸಂಗ್ರಹಿಸಿದ ನಂತರ, ಮಹತ್ವದ ಆಧಾರದಲ್ಲಿ ಸಂರಕ್ಷಿಸಲಾಗುವುದು. ಸ್ಮಾರಕದ ವಸ್ತು, ಪುರಾತತ್ವ, ವಿನ್ಯಾಸ ಮತ್ತು ಸಮಗ್ರತೆಯೇ ಅದಕ್ಕೆ ಆಧಾರ. ಅವು ಇರುವ ರೀತಿಯಲ್ಲಿಯೇ ಸಾಧ್ಯವಾದಷ್ಟು ಕಡಿಮೆ ಬದಲಾವಣೆಯೊಂದಿಗೆ ನಿರ್ವಹಿಸಲಾಗುತ್ತದೆ. ಇದುವರೆಗೆ ಇಷ್ಟು ದೊಡ್ಡ ಪ್ರಮಾಣದಲ್ಲಿ ತಾಲ್ಲೂಕುವಾರು ಸಮೀಕ್ಷೆ ಈವರೆಗೆ ನಡೆದಿರಲಿಲ್ಲ. ಮುಂದಿನ ಹಂತದಲ್ಲಿ ಮತ್ತಷ್ಟು ತಾಲ್ಲೂಕುಗಳನ್ನು ಕೈಗೆತ್ತಿಕೊಳ್ಳುವ ಯೋಜನೆ ಇದೆ' ಎಂದರು.

ಮೈಸೂರು ಜಿಲ್ಲೆ ಹುಣಸೂರು ತಾಲ್ಲೂಕಿನ ಚಿಲ್ಕುಂದದಲ್ಲಿ ಸ್ಮಾರಕವೊಂದು ಅವನತಿಯ ಅಂಚಿನಲ್ಲಿರುವುದನ್ನು ಸಮೀಕ್ಷೆಯಲ್ಲಿ ಗುರುತಿಸಲಾಗಿದೆ

ಸ್ಮಾರಕಗಳ ನಿಖರ ಮಾಹಿತಿ ಸಂಗ್ರಹಿಸಲೆಂದೇ ಸಮೀಕ್ಷೆ ನಡೆಯುತ್ತಿದೆ. ಸಂರಕ್ಷಣೆಗೆ ಸಹಕಾರಿಯಾಗಲಿದೆ

ಎ.ದೇವರಾಜು, ಆಯುಕ್ತ, ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ

ಮುಖ್ಯಾಂಶಗಳು

- ಪುರಾತತ್ವ ಸಂಗ್ರಹಾಲಯಗಳು, ಪರಂಪರೆ ರಕ್ಷಣೆಗೆ ಕ್ರಮ
- ಮೂರು ತಿಂಗಳಲ್ಲಿ ಸಮೀಕ್ಷೆ ಪೂರ್ಣಗೊಳಿಸುವ ಗುರಿ
- ಕ್ಯುರೇಟರ್‌ಗಳು, ತಜ್ಞರು, ಪದವೀಧರರ ಬಳಕೆ

ಬಂಡೀಪುರ: ಮೇಲುಕಾಮನಹಳ್ಳಿ ವ್ಯಾಪ್ತಿಯಲ್ಲಿ ಘಟನೆ

ಕಾಡು ಹಂದಿಗಳ ಸಾವು; ಆತಂಕ

• ಮಲ್ಲೇಶ ಎಂ.

ಗುಂಡ್ಲುಪೇಟೆ: ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಗೋಪಾಲಸ್ವಾಮಿ ಬೆಟ್ಟ ವಲಯದ ಮೇಲುಕಾಮನಹಳ್ಳಿ ಗ್ರಾಮದ ಸುತ್ತ ಕಾಡುಹಂದಿಗಳು ಅಸಹಜವಾಗಿ ಮೃತಪಡುತ್ತಿದ್ದು, ಗಿರಿಜನರು ಸೇರಿದಂತೆ ಸ್ಥಳೀಯರು ಆತಂಕಗೊಂಡಿದ್ದಾರೆ.

ತಿಂಗಳಲ್ಲಿ 40ಕ್ಕೂ ಹೆಚ್ಚು ಹಂದಿಗಳು ಮೃತಪಟ್ಟಿವೆ. ಕಾರಣ ಗೊತ್ತಾಗಿಲ್ಲ. ರೋಗದ ಶಂಕೆಯೂ ಇದೆ. ಅರಣ್ಯ ಇಲಾಖೆಯ ಪಶುವೈದ್ಯರು ಮರಣೋತ್ತರ ಪರೀಕ್ಷೆ ನಡೆಸಿ ಮಾದರಿಗಳನ್ನು ಪ್ರಯೋಗಾಲಯಕ್ಕೆ ಕಳುಹಿಸಿದ್ದಾರೆ.

ಬಂಡೀಪುರ ಅರಣ್ಯಕ್ಕೆ ಹೊಂದಿಕೊಂಡಿರುವ ಮೇಲುಕಾಮನಹಳ್ಳಿ ಹಾಗೂ ಗಿರಿಜನ ಕಾಲೊನಿ ಮತ್ತು ರಾಷ್ಟ್ರೀಯ ಹೆದ್ದಾರಿ ಅಕ್ಕಪಕ್ಕ ಕಾಡು ಹಂದಿಗಳು ಹೆಚ್ಚಿವೆ. ತಿಂಗಳಿನಿಂದೀಚೆಗೆ ನಿತ್ಯ ಹಂದಿಗಳು ಸಾಯುತ್ತಿವೆ. ಕುರುಚಲು ಗಿಡಗಳು, ಅರಣ್ಯದ ಅಂಚಿನಲ್ಲಿ ಸತ್ತರೆ, ಕೊಳೆತು ವಾಸನೆ ಬಂದಾಗಷ್ಟೇ ತಿಳಿಯುತ್ತಿದೆ.

ಮೇಲುಕಾಮನಹಳ್ಳಿಯಲ್ಲಿ ಮೃತಪಟ್ಟಿರುವ ಹಂದಿ

'ರೋಗದಿಂದ ಮೃತಪಟ್ಟಿದ್ದರೆ, ಅದು ಜನ, ಜಾನುವಾರುಗಳಿಗೆ ಸೋಂಕು ಹರಡುವುದೇ' ಎಂಬ ಆತಂಕ ಸ್ಥಳೀಯರದ್ದು. 'ಹಂದಿಗಳ ಸಾವಿನಿಂದ ಕಾಡು ಪ್ರಾಣಿಗಳಿಗೆ ಸಮಸ್ಯೆಯಾಗಲಿದೆಯೇ' ಎಂಬ ಚಿಂತೆಯಲ್ಲಿ ಅರಣ್ಯ ಸಿಬ್ಬಂದಿಯೂ ಇದ್ದಾರೆ.

'ಕಾಲುಬಾಯಿ ಜ್ವರ ಜಾನುವಾರುಗಳಲ್ಲಿ ಕಾಣಿಸಿದ್ದು, ಬಳಿಕ ಹಂದಿಗಳಿಗೆ ಬರುತ್ತದೆ. ಹಂದಿಗಳಿಗೆ ರೋಗ ನಿರೋಧಕ ಶಕ್ತಿ ಹೆಚ್ಚಿದೆ. ಜ್ವರದಿಂದ ಸಾಯಲು ಸಾಧ್ಯವಿಲ್ಲ' ಎಂದು ಬಂಡೀಪುರದ ಪಶುವೈದ್ಯ ಡಾ.ವಸೀಂ ಮಿರ್ಜಾ 'ಪ್ರಜಾವಾಣಿ'ಗೆ ತಿಳಿಸಿದರು.

'ಹಂದಿಗಳು ಕಾಯಿಲೆಯಿಂದ ಸಾಯುತ್ತಿರಬಹುದು. ಅರಣ್ಯ ಇಲಾಖೆ ಜಾನುವಾರುಗಳಿಗೆ ರೋಗ ನಿರೋಧಕ ಲಸಿಕೆ ಹಾಕಿಸಬೇಕು' ಎಂದು ಗ್ರಾಮದ ಕೃಷ್ಣಪ್ಪ ಒತ್ತಾಯಿಸಿದರು.

ಹಂದಿಗಳ ಸಾವಿನ ಕಾರಣ ತಿಳಿದಿಲ್ಲ. ವಿಷ ಪ್ರಾಷನವಾಗಿದೆಯೇ? ಎಂದು ತಿಳಿಯಲು ವಿಧಿವಿಜ್ಞಾನ ಪ್ರಯೋಗಾಲಯ ವರದಿ ಬರಬೇಕು.

ರಮೇಶ್ ಕುಮಾರ್
ಬಂಡೀಪುರ ಹುಲಿ ಯೋಜನೆ ನಿರ್ದೇಶಕ

ಹಂದಿಗಳ ಕಳೇಬರಗಳನ್ನು ಸ್ಥಳದಲ್ಲಿಯೇ ಮುಚ್ಚಲು ಅಥವಾ ಸುಟ್ಟು ಹಾಕಲು ವ್ಯವಸ್ಥೆ ಮಾಡಬೇಕು. ಮೃತ ಹಂದಿಗಳು ವನ್ಯಪ್ರಾಣಿಗಳಿಗೆ ಆಹಾರವಾಗುತ್ತದೆ ಎಂದು ಎಸೆದರೆ, ಅನಾಹುತ ಆಗಲಿದೆ

ಮೂರ್ತಿ, ಪರಿಸರವಾದಿ, ಮೇಲುಕಾಮನಹಳ್ಳಿ

ಹೈಕಮಾಂಡೇ ಸಿ.ಎಂ. ಆಯ್ಕೆ ಮಾಡಲಿ: ನೂತನವಾಗಿ ಆಯ್ಕೆಯಾದ ಕಾಂಗ್ರೆಸ್ ಶಾಸಕರ ಸಭೆಯಲ್ಲಿ ನಿರ್ಧಾರ

ಹಿಮಾಚಲ: ಮುಖ್ಯಮಂತ್ರಿ ಹುದ್ದೆಗೆ ಪೈಪೋಟಿ

ಶಿಮ್ಲಾ (ಪಿಟಿಐ): ಹಿಮಾಚಲ ಪ್ರದೇಶ ವಿಧಾನಸಭಾ ಚುನಾವಣೆಯಲ್ಲಿ ಬಹುಮತ ಪಡೆದಿರುವ ಕಾಂಗ್ರೆಸ್‌ನಲ್ಲಿ ಈಗ ಮುಖ್ಯಮಂತ್ರಿ ಹುದ್ದೆಗೆ ಪೈಪೋಟಿ ತೀವ್ರಗೊಂಡಿದೆ. ಪಕ್ಷದ ಹೈಕಮಾಂಡ್ ಮುಖ್ಯಮಂತ್ರಿಯನ್ನು ಆಯ್ಕೆ ಮಾಡಲಿ ಎಂದು ಶುಕ್ರವಾರ ಇಲ್ಲಿ ನಡೆದ ಕಾಂಗ್ರೆಸ್ ಶಾಸಕರ ಸಭೆಯಲ್ಲಿ ತೀರ್ಮಾನ ತೆಗೆದುಕೊಳ್ಳಲಾಗಿದೆ.

ಮುಖ್ಯಮಂತ್ರಿ ಹುದ್ದೆಯ ಸ್ಪರ್ಧೆಯಲ್ಲಿರುವವರ ಬೆಂಬಲಿಗರು ಈ ಸಭೆಗೂ ಮುನ್ನ ಪಕ್ಷದ ಕಚೇರಿ ಬಳಿ ಗದ್ದಲ ನಡೆಸಿದ್ದರು.

ಆಡಳಿತಾರೂಢ ಬಿಜೆಪಿಯನ್ನು ಚುನಾವಣೆಯಲ್ಲಿ ಸೋಲಿಸಿರುವ ಕಾಂಗ್ರೆಸ್ ಇನ್ನಷ್ಟೇ ಸರ್ಕಾರ ರಚಿಸಬೇಕಿದೆ. ಆದರೆ, ಮುಖ್ಯಮಂತ್ರಿ ಹುದ್ದೆಗೆ ಏರಲು ಪಕ್ಷದ ಅಧ್ಯಕ್ಷೆ ಪ್ರತಿಭಾ ಸಿಂಗ್, ಸುಖ್ವಿಂದರ್ ಸಿಂಗ್ ಸುಖು ಮತ್ತು ಮುಖೇಶ್ ಅಗ್ನಿಹೋತ್ರಿ ಅವರು ಸ್ಪರ್ಧೆಯಲ್ಲಿದ್ದಾರೆ. ಈವರೆಗೆ ತೆರೆಮರೆಯಲ್ಲಿ ಇದ್ದ ಈ ಪೈಪೋಟಿ ಶುಕ್ರವಾರ ಬಹಿರಂಗವಾಗಿದೆ.

ಛತ್ತೀಸಗಡ ಮುಖ್ಯಮಂತ್ರಿ ಮತ್ತು ಹಿಮಾಚಲ ಪ್ರದೇಶದ ಕಾಂಗ್ರೆಸ್ ಚುನಾವಣಾ ವೀಕ್ಷಕ ಭೂಪೇಶ್ ಬಘೇಲ್ ಅವರು ಶಿಮ್ಲಾದಲ್ಲಿನ ಪಕ್ಷದ ಕಚೇರಿಗೆ ಬರುವಾಗ ಪ್ರತಿಭಾ ಸಿಂಗ್ ಬೆಂಬಲಿಗರು, ಬಘೇಲ್ ಅವರ ಕಾರನ್ನು ತಡೆದಿದ್ದಾರೆ. ಪ್ರತಿಭಾ ಸಿಂಗ್ ಪರವಾಗಿ ಘೋಷಣೆ ಕೂಗಿದ್ದಾರೆ. ಇದೇ ವೇಳೆ ಸುಖ್ವಿಂದರ್ ಸಿಂಗ್ ಮತ್ತು ಮುಖೇಶ್ ಅಗ್ನಿಹೋತ್ರಿ ಅವರ ಪರವಾಗಿರುವ ಶಾಸಕರು ಮತ್ತು ಬೆಂಬಲಿಗರು ಹೋಟೆಲ್ ಒಂದರಲ್ಲಿ ಸೇರಿ, ಘೋಷಣೆ ಕೂಗಿದ್ದಾರೆ.

ಶಿಮ್ಲಾದಲ್ಲಿನ ಕಾಂಗ್ರೆಸ್ ಕಚೇರಿ ಎದುರು ಭೂಪೇಶ್ ಬಘೇಲ್ ಅವರ ಕಾರನ್ನು ಪ್ರತಿಭಾ ಸಿಂಗ್ ಬೆಂಬಲಿಗರು ತಡೆದರು — ಪಿಟಿಐ ಚಿತ್ರ

ಪಕ್ಷದ ವೀಕ್ಷಕರು ಶಾಸಕರ ಅಭಿಪ್ರಾಯವನ್ನು ಕೇಳಿಸಿಕೊಳ್ಳಲಿದ್ದಾರೆ. ಶಾಸಕರ ಅಭಿಪ್ರಾಯವನ್ನು ಆಧರಿಸಿ, ನಿರ್ಧಾರ ತೆಗೆದುಕೊಳ್ಳಲಾಗುತ್ತದೆ

ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ಅಧ್ಯಕ್ಷ

ಮುಳುವಾದ ಬಂಡಾಯ ಅಭ್ಯರ್ಥಿಗಳು

ಶಿಮ್ಲಾ (ಪಿಟಿಐ): ಹಿಮಾಚಲ ಪ್ರದೇಶ ವಿಧಾನಸಭೆಯ 68 ಕ್ಷೇತ್ರಗಳಿಗೆ ನಡೆದ ಚುನಾವಣೆಯಲ್ಲಿ, 12 ಕ್ಷೇತ್ರಗಳಲ್ಲಿ ಬಂಡಾಯ ಅಭ್ಯರ್ಥಿಗಳು ಬಿಜೆಪಿ ಮತ್ತು ಕಾಂಗ್ರೆಸ್‌ಗೆ ಮುಳುವಾಗಿದ್ದಾರೆ. ಎಂಟು ಕ್ಷೇತ್ರಗಳಲ್ಲಿ ಬಿಜೆಪಿ ಬಂಡಾಯ ಅಭ್ಯರ್ಥಿಗಳ ಕಾರಣದಿಂದ ಸೋತಿದ್ದರೆ, ಕಾಂಗ್ರೆಸ್ ನಾಲ್ಕು ಕ್ಷೇತ್ರಗಳನ್ನು ಬಂಡಾಯ ಅಭ್ಯರ್ಥಿಗಳ ಕಾರಣದಿಂದ ಕಳೆದುಕೊಂಡಿದೆ.

ಈ ಬಾರಿ ಒಟ್ಟು 99 ಪಕ್ಷೇತರ ಅಭ್ಯರ್ಥಿಗಳು ಕಣದಲ್ಲಿದ್ದರು. ಅವರಲ್ಲಿ 28 ಮಂದಿ ಬಂಡಾಯ ಅಭ್ಯರ್ಥಿಗಳಾಗಿದ್ದರು. ಇವರಲ್ಲಿ ಗೆದ್ದವರು ಮೂವರು ಮಾತ್ರ. ಆ ಮೂವರೂ ಬಿಜೆಪಿಯ ಬಂಡಾಯ ಅಭ್ಯರ್ಥಿಗಳಾಗಿದ್ದರು. ಬಿಜೆಪಿಯಲ್ಲಿ ಟಿಕೆಟ್ ನೀಡಲಿಲ್ಲ ಎಂದು ಬಂಡಾಯ ಅಭ್ಯರ್ಥಿಗಳಾಗಿ ಕಣಕ್ಕೆ ಇಳಿದಿದ್ದ ಕೆ.ಎಲ್. ಠಾಕೂರ್ (ನಾಲಾಗಢ್ ಕ್ಷೇತ್ರ), ಹೋಶಿಯಾರ್ ಸಿಂಗ್ (ಡೆಹ್ರಾ ಕ್ಷೇತ್ರ) ಮತ್ತು ಆಶಿಶ್ ಶರ್ಮಾ (ಹಮೀರ್‌ಪುರ್ ಕ್ಷೇತ್ರ) ಅವರು ಚುನಾವಣೆಯಲ್ಲಿ ಗೆದ್ದಿದ್ದಾರೆ. ಬಿಜೆಪಿ ಅಭ್ಯರ್ಥಿಗಳು ಈ ಕ್ಷೇತ್ರಗಳಲ್ಲಿ ಎರಡನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿದ್ದಾರೆ.

ಕಿನ್ನೌರ್, ಬಂಜಾರ್, ಕುಲ್ಲು, ಇಂದೋರಾ ಮತ್ತು ಧರ್ಮಶಾಲಾದಲ್ಲೂ ಕಾಂಗ್ರೆಸ್ ಅಭ್ಯರ್ಥಿಗಳ ಗೆಲುವಿನ ಅಂತರಕ್ಕಿಂತ ಬಿಜೆಪಿ ಬಂಡಾಯ ಅಭ್ಯರ್ಥಿಗಳು ಹೆಚ್ಚು ಮತ ಪಡೆದಿದ್ದಾರೆ.

ಸುಲ್ಲಾ ಮತ್ತು ಅನ್ನಿ ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳು ಜಯಗಳಿಸಿದ್ದಾರೆ. ಈ ಎರಡೂ ಕ್ಷೇತ್ರಗಳಲ್ಲಿ ಕಾಂಗ್ರೆಸ್‌ನ ಬಂಡಾಯ ಅಭ್ಯರ್ಥಿಗಳು ಎರಡನೇ ಸ್ಥಾನದಲ್ಲಿದ್ದರೆ, ಅಧಿಕೃತ ಅಭ್ಯರ್ಥಿಗಳು ಮೂರನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿದ್ದಾರೆ. ಪಾಚ್ಛಡ್ ಮತ್ತು ಚೋಪಾಲ್ ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳ ಗೆಲುವಿನ ಅಂತರಕ್ಕಿಂತ, ಕಾಂಗ್ರೆಸ್‌ನ ಬಂಡಾಯ ಅಭ್ಯರ್ಥಿಗಳು ಎರಡು–ಮೂರು ಪಟ್ಟು ಹೆಚ್ಚು ಮತಗಳನ್ನು ಪಡೆದಿದ್ದಾರೆ.

ಬಿಜೆಪಿ ಶಾಸಕಾಂಗ ಪಕ್ಷದ ಸಭೆ ಇಂದು

- ಗುಜರಾತ್ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಮತ್ತು ಅವರ ಸಂಪುಟದ ಸದಸ್ಯರು ತಮ್ಮ ಹುದ್ದೆಗಳಿಗೆ ಶುಕ್ರವಾರ ರಾಜೀನಾಮೆ ನೀಡಿದ್ದಾರೆ. ಬಿಜೆಪಿ ಶಾಸಕಾಂಗ ಪಕ್ಷದ ಸಭೆಯು ಶನಿವಾರ ನಡೆಯಲಿದ್ದು, ಹೊಸ ನಾಯಕನ ಆಯ್ಕೆ ಆಗಲಿದೆ. ಭೂಪೇಂದ್ರ ಪಟೇಲ್ ಅವರೇ ಮರು ಆಯ್ಕೆ ಆಗುವ ಸಾಧ್ಯತೆ ಇದೆ ಎನ್ನಲಾಗಿದೆ. ಸೋಮವಾರ ಹೊಸ ಸರ್ಕಾರ ಅಸ್ತಿತ್ವಕ್ಕೆ ಬರಲಿದೆ
- ಗುಜರಾತ್‌ನ ಕಛ್ ಪ್ರಾಂತ್ಯದ ಎಲ್ಲಾ ಆರು ಕ್ಷೇತ್ರಗಳಲ್ಲಿ ಬಿಜೆಪಿ ಜಯಗಳಿಸಿದೆ. ಈ ಪ್ರದೇಶದಲ್ಲಿ ಕಳೆದ ಬಾರಿ ಎರಡು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಗೆದ್ದಿತ್ತು. ಈ ಬಾರಿ ಅವುಗಳನ್ನು ಕಳೆದುಕೊಂಡಿದೆ
- **ಹಿಮಾಚಲ ಪ್ರದೇಶ:** ಕೇಂದ್ರ ಸಚಿವ ಅನುರಾಗ್ ಠಾಕೂರ್ ಅವರ ಲೋಕಸಭಾ ಕ್ಷೇತ್ರ ಹಮೀರ್‌ಪುರದ ಎಲ್ಲಾ ಐದೂ ವಿಧಾನಸಭಾ ಕ್ಷೇತ್ರಗಳಲ್ಲಿ ಬಿಜೆಪಿ ಸೋತಿದೆ
- ಹಿಮಾಚಲ ಪ್ರದೇಶ ವಿಧಾನಸಭೆಗೆ ಈ ಬಾರಿ ಚುನಾಯಿತರಾದವರಲ್ಲಿ 28 ಮಂದಿ ಮೊದಲ ಬಾರಿಯ ಶಾಸಕರು. ಕಣಕ್ಕೆ ಇಳಿದಿದ್ದ ಹಾಲಿ ಶಾಸಕರಲ್ಲಿ 26 ಮಂದಿ ಸೋತಿದ್ದಾರೆ

ಸುದ್ದಿ 2 ನಿಮಿಷ

‘ಕೊಲಿಜಿಯಂ: ಅಂತಿಮವಾಗದ ಮಾಹಿತಿ ಬಹಿರಂಗವಿಲ್ಲ’

ನವದೆಹಲಿ (ಪಿಟಿಐ): ಸುಪ್ರೀಂ ಕೋರ್ಟ್‌ನ ಕೊಲಿಜಿಯಂನಲ್ಲಿ ತೆಗೆದುಕೊಂಡ ತೀರ್ಮಾನಗಳು ಅಂತಿಮವಾಗುವವರೆಗೆ ಮತ್ತು ಆ ಸಂಬಂಧ ತೆಗೆದುಕೊಂಡ ನಿರ್ಣಯಕ್ಕೆ ಕೊಲಿಜಿಯಂನ ಎಲ್ಲಾ ಸದಸ್ಯರು ಸಹಿ ಹಾಕುವವರೆಗೆ, ಅದನ್ನು ಸಾರ್ವಜನಿಕ ವೇದಿಕೆಯಲ್ಲಾಗಲಿ ಮಾಹಿತಿ ಹಕ್ಕು ಕಾಯ್ದೆ ಅಡಿಯಲ್ಲಾಗಲಿ ಬಹಿರಂಗಪಡಿಸಲು ಸಾಧ್ಯವಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ನ್ಯಾಯಮೂರ್ತಿಗಳ ನೇಮಕಾತಿಗೆ ಸಂಬಂಧಿಸಿದಂತೆ 2018ರ ಡಿಸೆಂಬರ್ 12ರಂದು ನಡೆಸಿದ್ದ ಸಭೆಯ ನಿರ್ಧಾರಗಳನ್ನು ಬಹಿರಂಗಪಡಿಸಬೇಕು ಎಂದು ಕೋರಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ವೇಳೆ ಸುಪ್ರೀಂ ಕೋರ್ಟ್ ಹೀಗೆ ಹೇಳಿದೆ.

ಮಾಹಿತಿ ಹಕ್ಕು ಕಾರ್ಯಕರ್ತೆ ಅಂಜಲಿ ಭಾರದ್ವಾಜ್ ಸಲ್ಲಿಸಿದ್ದ ಇಂಥ ಅರ್ಜಿಯನ್ನು ದೆಹಲಿ ಹೈಕೋರ್ಟ್ ವಜಾ ಮಾಡಿತ್ತು. ಅಂಜಲಿ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಈಗ ಆ ಅರ್ಜಿಯನ್ನೂ ಸುಪ್ರೀಂ ಕೋರ್ಟ್ ವಜಾ ಮಾಡಿದೆ.

ಅಸ್ಸಾಂ–ಮೇಘಾಲಯ ಗಡಿ ವಿವಾದ: ಹೈಕೋರ್ಟ್ ತಾತ್ಕಾಲಿಕ ತಡೆ

ಶಿಲ್ಲಾಂಗ್ (ಪಿಟಿಐ): ಅಸ್ಸಾಂ ಮತ್ತು ಮೇಘಾಲಯ ರಾಜ್ಯಗಳ ನಡುವಿನ ಗಡಿವಿವಾದಕ್ಕೆ ಸಂಬಂಧಿಸಿ ಭೌತಿಕ ಬದಲಾವಣೆ, ಗಡಿ ಗುರುತಿಸುವ ಕಾರ್ಯಕ್ಕೆ ಮೇಘಾಲಯ ಹೈಕೋರ್ಟ್ ತಾತ್ಕಾಲಿಕ ತಡೆಯಾಜ್ಞೆ ನೀಡಿದೆ.

ಗಡಿ ಭಾಗದಲ್ಲಿ ಉದ್ವಿಗ್ನ ಸ್ಥಿತಿಗೆ ಕಾರಣವಾಗಿದ್ದ 12 ಕಡೆ ಗಡಿ ಗುರುತಿಸುವುದನ್ನು ಕೈಬಿಡುವ ಕುರಿತಂತೆ ಉಭಯ ರಾಜ್ಯಗಳ ಮುಖ್ಯಮಂತ್ರಿಗಳ ನಡುವೆ ಈ ವರ್ಷದ ಆರಂಭದಲ್ಲಿ ಒಡಂಬಡಿಕೆ ಮೂಡಿತ್ತು.

ಮುಂದಿನ ವಿಚಾರಣೆ ನಡೆಯುವ ಫೆ.6, 2023ರವರೆಗೆ ತಡೆಯಾಜ್ಞೆ ಜಾರಿಯಲ್ಲಿರಲಿದೆ. ಅಲ್ಲಿಯವರೆಗೆ ಗಡಿಯಲ್ಲಿ ಯಾವುದೇ ಭೌತಿಕ ಬದಲಾವಣೆ ಮಾಡಬಾರದು ಎಂದು ನ್ಯಾಯಮೂರ್ತಿ ಎಚ್.ಎಸ್. ಥ್ಯಾಂಖ್ಯೆವ್ ಆದೇಶಿಸಿದರು.

ಸ್ಥಳೀಯ ನಾಲ್ವರು ಸಾಂಪ್ರದಾಯಿಕ ಗುಂಪುಗಳ ಮುಖ್ಯಸ್ಥರು ಅರ್ಜಿ ಸಲ್ಲಿಸಿದ್ದು, ‘ಈ ಒಪ್ಪಂದವು ಬುಡಕಟ್ಟು ಪ್ರದೇಶದ ಆಡಳಿತಕ್ಕೆ ಸಂಬಂಧಿಸಿದ ಸಂವಿಧಾನದ 6ನೇ ಪರಿಚ್ಛೇದದ ಉಲ್ಲಂಘನೆ. ಒಪ್ಪಂದಕ್ಕೆ ಮುನ್ನ ಸ್ಥಳೀಯ ಸಾಂಪ್ರದಾಯಿಕ ಗುಂಪುಗಳ ಮುಖಂಡರ ಅಭಿಪ್ರಾಯ ಪರಿಗಣಿಸಿಲ್ಲ’ ಎಂದು ಆಕ್ಷೇಪಿಸಿದ್ದರು.

ಗುಜರಾತ್: ಶಾಸಕಿಯರ ಸಂಖ್ಯೆ ಏರಿಕೆ

ಅಹಮದಾಬಾದ್ (ಪಿಟಿಐ): ಗುಜರಾತ್ ವಿಧಾನಸಭಾ ಚುನಾವಣೆಯಲ್ಲಿ ಗೆದ್ದ ಮಹಿಳಾ ಅಭ್ಯರ್ಥಿಗಳ ಸಂಖ್ಯೆಯಲ್ಲಿ ಅಲ್ಪ ಏರಿಕೆ ಆಗಿದೆ. 2017ರ ಚುನಾವಣೆಯಲ್ಲಿ 13 ಮಹಿಳೆಯರು ಶಾಸಕಿಯರಾಗಿ ಆಯ್ಕೆ ಆಗಿದ್ದರು. ಈ ಬಾರಿ ಈ ಸಂಖ್ಯೆ 15ಕ್ಕೆ ಏರಿದೆ. ಗೆದ್ದ 15 ಮಂದಿಯಲ್ಲಿ 14 ಮಹಿಳೆಯರು ಬಿಜೆಪಿಯವರು. ಒಬ್ಬರು ಕಾಂಗ್ರೆಸ್‌ನವರು. ಈ ಬಾರಿ ಒಟ್ಟು 139 ಮಹಿಳೆಯರು ಸ್ಪರ್ಧಿಸಿದ್ದರು.

ಬಿಜೆಪಿ ಒಟ್ಟು 18 ಮಹಿಳೆಯರಿಗೆ ಮತ್ತು ಕಾಂಗ್ರೆಸ್ 14 ಮಹಿಳೆಯರಿಗೆ ಟಿಕೆಟ್ ನೀಡಿತ್ತು.

2017ಕ್ಕೆ ಹೋಲಿಸಿದರೆ, ಬಿಜೆಪಿ ಮತ್ತು ಕಾಂಗ್ರೆಸ್ ಈ ಬಾರಿ ದಲಿತ ಮತ್ತು ಬುಡಕಟ್ಟು ಮಹಿಳೆಯರಿಗೆ ಹೆಚ್ಚು ಟಿಕೆಟ್‌ಗಳನ್ನು ನೀಡಿತ್ತು. ಗೆದ್ದ ಮಹಿಳೆಯರಲ್ಲಿ ನಾಲ್ವರು ಪರಿಶಿಷ್ಟ ಜಾತಿಯವರಾದರೆ, ಇಬ್ಬರು ಪರಿಶಿಷ್ಟ ಪಂಗಡದವರು.

ಎಎಪಿ ಐದು ಮತ್ತು ಬಿಎಸ್‌ಪಿ 12 ಮಹಿಳೆಯರಿಗೆ ಟಿಕೆಟ್ ನೀಡಿತ್ತು. ಇವರಲ್ಲಿ ಯಾರೊಬ್ಬರೂ ಗೆಲ್ಲುವುದು ಸಾಧ್ಯವಾಗಿಲ್ಲ. ಈ ಬಾರಿ ಗೆದ್ದ ಆರು ಮಹಿಳೆಯರು 2017ರಲ್ಲಿಯೂ ಗೆದ್ದಿದ್ದರು.

ಬಿಜೆಪಿಗೆ ಮರಳಿದ ಪಾಟೀದಾರ್ ಸಮುದಾಯ

ಜನಸಂಖ್ಯಾ ದೃಷ್ಟಿಯಿಂದ ಗುಜರಾತ್‌ನ ದೊಡ್ಡ ಜಾತಿಗಳಲ್ಲಿ ಒಂದಾದ ಪಾಟೀದಾರ್ ಸಮುದಾಯದ ಜನರು, ಬಿಜೆಪಿಯ ಸಾಂಪ್ರದಾಯಿಕ ಬೆಂಬಲಿಗರು. ಮೀಸಲಾತಿಗೆ ಆಗ್ರಹಿಸಿ ಹೋರಾಟ ನಡೆಸಿದ್ದ ಈ ಸಮುದಾಯದ ಮತದಾರರು, 2017ರ ವಿಧಾನಸಭಾ ಚುನಾವಣೆಯ ವೇಳೆ ಕಾಂಗ್ರೆಸ್‌ನತ್ತ ಸರಿದಿದ್ದರು. ಆದರೆ, ಈ ಚುನಾವಣೆಯಲ್ಲಿ ಸಮುದಾಯದ ಎಲ್ಲಾ ಮತದಾರರೂ ಬಿಜೆಪಿಗೆ ಮರಳಿದ್ದಾರೆ. ಪಾಟೀದಾರರ ಪ್ರಾಬಲ್ಯವಿರುವ ಎಲ್ಲಾ ಕ್ಷೇತ್ರಗಳಲ್ಲಿ ಬಿಜೆಪಿ ಈ ಬಾರಿ ಜಯಗಳಿಸಿದೆ.

2017ರ ಚುನಾವಣೆಯಲ್ಲಿ ಪಾಟೀದಾರ್ ಪ್ರಾಬಲ್ಯವಿದ್ದ ಮೊರ್ಬಿ, ಟಂಕಾರಾ, ಧೊರಾಜಿ, ಅಮ್ರೇಲಿ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಜಯಗಳಿಸಿತ್ತು. ಈ ಬಾರಿ ಈ ಎಲ್ಲಾ ಕ್ಷೇತ್ರಗಳಲ್ಲಿ ಬಿಜೆಪಿ ಜಯಗಳಿಸಿದೆ. ಉತ್ತರ ಗುಜರಾತ್‌ನ ಉಂಜಾ ಕ್ಷೇತ್ರವು ಕಳೆದ ಬಾರಿ ಕಾಂಗ್ರೆಸ್ ಅನ್ನು ಗೆಲ್ಲಿಸಿತ್ತು. ಈ ಬಾರಿ ಉಂಜಾ ಬಿಜೆಪಿಯನ್ನು ಗೆಲ್ಲಿಸಿದೆ. ಪಾಟೀದಾರರ ಅತಿಪ್ರಾಬಲ್ಯವಿರುವ ಸೂರತ್‌ನ ಮೂರೂ ಕ್ಷೇತ್ರಗಳಲ್ಲಿ ಬಿಜೆಪಿ ಜಯಗಳಿಸಿದೆ.

ಚುನಾವಣೆಗೆ ವರ್ಷವಿದೆ ಎನ್ನುವಾಗಲೇ ಪಾಟೀದಾರ್ ಸಮುದಾಯದ ನಾಯಕರನ್ನು ಸಮಾಧಾನಪಡಿಸಲು ಬಿಜೆಪಿ ಹೆಜ್ಜೆ ಇಟ್ಟಿತ್ತು. ವಿಜಯ್ ರೂಪಾಣಿ ಅವರನ್ನು ಮುಖ್ಯಮಂತ್ರಿ ಹುದ್ದೆಯಿಂದ ಕೆಳಗೆ ಇಳಿಸಿತ್ತು. ಪಾಟೀದಾರರ ನಾಯಕ ಭುಪೇಂದ್ರ ಪಟೇಲ್ ಅವರನ್ನು ವರ್ಷದ ಹಿಂದೆ ಮುಖ್ಯಮಂತ್ರಿಯಾಗಿ ಆಯ್ಕೆ ಮಾಡಿತ್ತು. ಇನ್ನು ಪಾಟೀದಾರ್ ಮೀಸಲಾತಿ ಹೋರಾಟದ ಮುಂದಾಳು ಮತ್ತು ಕಾಂಗ್ರೆಸ್ ನಾಯಕ ಹಾರ್ದಿಕ್ ಪಟೇಲ್ ಅವರನ್ನು ಬಿಜೆಪಿ ಈಚೆಗೆ ತನ್ನತ್ತ ಸೆಳೆದುಕೊಂಡಿತ್ತು. ಇವೆಲ್ಲವೂ ಬಿಜೆಪಿಯ ಪರವಾಗಿ ಕೆಲಸ ಮಾಡಿವೆ ಎಂಬುದನ್ನು ಫಲಿತಾಂಶವು ಸಾಬೀತುಪಡಿಸಿದೆ.

ಪಾಟೀದಾರರಿಗೆ ಇತರೆ ಹಿಂದುಳಿದ ವರ್ಗಗಳ ಅಡಿ ಮೀಸಲಾತಿ ನೀಡದೇ ಇದ್ದರೂ, ಮೀಸಲಾತಿ ವ್ಯಾಪ್ತಿಯಲ್ಲಿ ಇರದ ಜಾತಿಗಳ ಆರ್ಥಿಕವಾಗಿ ದುರ್ಬಲ ವರ್ಗಗಳಿಗೆ ಶೇ 10ರಷ್ಟು ಮೀಸಲಾತಿಯನ್ನು ಕೇಂದ್ರ ಸರ್ಕಾರವು ಜಾರಿಗೆ ತಂದಿದೆ. ಈ ಮೀಸಲಾತಿಯ ವ್ಯಾಪ್ತಿಗೆ ಪಾಟೀದಾರರೂ ಬರುತ್ತಾರೆ. ಬಿಜೆಪಿ ಬಗೆಗೆ ಪಾಟೀದಾರರಿಗೆ ಇದ್ದ ಸಿಟ್ಟನ್ನು ಈ ಮೀಸಲಾತಿಯು ಸಂಪೂರ್ಣವಾಗಿ ಶಮನ ಮಾಡಿದೆ ಎನ್ನಲಾಗಿದೆ.

ನಳಂದ: ಅತಿಕ್ರಮಣ ತೆರವಿಗೆ ಒತ್ತಾಯ

ನವದೆಹಲಿ: ಜಿ–20 ರಾಷ್ಟ್ರಗಳ ತಂಡದ ಭೇಟಿ ಹಿನ್ನೆಲೆಯಲ್ಲಿ ವಿಶ್ವ ಪಾರಂಪರಿಕ ತಾಣಗಳಲ್ಲಿ ಒಂದಾದ ‘ನಳಂದ ಮಹಾವಿಹಾರ’ ಸುತ್ತಮುತ್ತಲಿನ ಅತಿಕ್ರಮಣ, ಮತ್ತು ಅನಧಿಕೃತ ಕಟ್ಟಡಗಳನ್ನು ಡಿ.31ರೊಳಗೆ ತೆರವುಗೊಳಿಸುವಂತೆ ಭಾರತಿಯ ಪುರಾತತ್ವ ಸರ್ವೇಕ್ಷಣಾ ಇಲಾಖೆ (ಎಎಸ್‌ಐ) ಬಿಹಾರ ಸರ್ಕಾರವನ್ನು ಒತ್ತಾಯಿಸಿದೆ.

ಡಿ.1ರಂದು ಭಾರತ ಅಧಿಕೃತವಾಗಿ ಜಿ–20 ರಾಷ್ಟ್ರಗಳ ಅಧ್ಯಕ್ಷ ಸ್ಥಾನವನ್ನು ವಹಿಸಿಕೊಂಡಿದೆ. ಹೀಗಾಗಿ ಪಟ್ನಾ ಹಾಗೂ ಇತರ ಕಡೆ ಇರುವ ಪುರಾತತ್ವ ಇಲಾಖೆಗೆ ಒಳಪಟ್ಟ ಪ್ರದೇಶಗಳಿಗೆ ತಂಡದ ಸದಸ್ಯರು ಮಾರ್ಚ್ 6 ಮತ್ತು 7ರಂದು ಭೇಟಿ ನೀಡಲಿದ್ದಾರೆ.

ಆಫ್ತಾಬ್‌ಗೆ ನೇಣು ಶ್ರದ್ಧಾ ತಂದೆ ಆಗ್ರಹ

ಮುಂಬೈ(ಪಿಟಿಐ): ತನ್ನ ಮಗಳನ್ನು ಹತ್ಯೆ ಮಾಡಿದ ಆರೋಪಿ ಅಫ್ತಾಬ್ ಅಮಿನ್ ಪೂನಾವಾಲಾನನ್ನು ನೇಣಿಗೇರಿಸಬೇಕು ಎಂದು ಶ್ರದ್ಧಾ ವಾಲಕರ್ ತಂದೆ ವಿಕಾಸ್ ವಾಲಕರ್ ಶುಕ್ರವಾರ ಆಗ್ರಹಿಸಿದ್ದಾರೆ.

ಮಹಾರಾಷ್ಟ್ರ ಉಪಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರನ್ನು ಭೇಟಿ ಮಾಡಿದ ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದ ವಿಕಾಸ್, ‘ಮಗಳನ್ನು ಕೊಲೆ ಮಾಡಿದ ಅಫ್ತಾಬ್‌ಗೆ ಮರಣದಂಡನೆ ಶಿಕ್ಷೆ ವಿಧಿಸಬೇಕು. ಪೂನಾವಾಲಾ ಸೇರಿದಂತೆ ಈ ಪ್ರಕರಣದಲ್ಲಿ ಯಾರೇ ಭಾಗಿಯಾಗಿದ್ದರೂ ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು’ ಎಂದು ಒತ್ತಾಯಿಸಿದರು.

‘ಶ್ರದ್ಧಾ ದೂರು ನೀಡಿದ್ದರೂ ತನಿಖೆ ವಿಳಂಬ ಮಾಡಿದ್ದಕ್ಕಾಗಿ ಪೊಲೀಸ್ ಅಧಿಕಾರಿಗಳ ವಿರುದ್ಧವೂ ತನಿಖೆ ನಡೆಸಬೇಕು. ಅವರು ತಕ್ಷಣ ಕಾರ್ಯಪ್ರವೃತ್ತರಾಗಿದ್ದರೆ, ನನ್ನ ಮಗಳು ಈಗ ಜೀವಂತವಾಗಿರುತ್ತಿದ್ದಳು’ ಎಂದರು.

ದೆಹಲಿ ರಾಜ್ಯಪಾಲರು ಮತ್ತು ಡಿಸಿಪಿ ದೆಹಲಿ ದಕ್ಷಿಣ ಮತ್ತು ಮಹಾರಾಷ್ಟ್ರ ಉಪಮುಖ್ಯಮಂತ್ರಿ ಫಡಣವೀಸ್ ಅವರು ಕುಟುಂಬಕ್ಕೆ ನ್ಯಾಯ ಒದಗಿಸುವ ಭರವಸೆ ನೀಡಿದ್ದಾರೆ ಎಂದು ವಿಕಾಸ್ ವಾಲಕರ್ ತಿಳಿಸಿದರು.

2020ರ ನವೆಂಬರ್‌ನಲ್ಲಿ ತುಲಿಂಜ್ ಪೊಲೀಸರಿಗೆ ಶ್ರದ್ಧಾ ಅವರು ಲಿಖಿತ ದೂರು ಸಲ್ಲಿಸಿದ್ದರು.

ನ್ಯಾಯಾಂಗ ಬಂಧನ ಅವಧಿ ವಿಸ್ತರಣೆ

ಅಫ್ತಾಬ್

ನವದೆಹಲಿ (ಪಿಟಿಐ): ಕಾಲ್‌ಸೆಂಟರ್ ಉದ್ಯೋಗಿ, ಮುಂಬೈ ಮೂಲದ ಶ್ರದ್ಧಾ ವಾಲಕರ್ ಹತ್ಯೆ ಪ್ರಕರಣದ ಆರೋಪಿ ಹಾಗೂ ಆಕೆಯ ಸಹಜೀವನದ ಸಂಗಾತಿ ಅಫ್ತಾಬ್ ಅಮೀನ್ ಪೂನಾವಾಲಾ ನ್ಯಾಯಾಂಗ ಬಂಧನವನ್ನು ಇಲ್ಲಿನ ನ್ಯಾಯಾಲಯ ಶುಕ್ರವಾರ 14 ದಿನಗಳ ಕಾಲ ವಿಸ್ತರಿಸಿದೆ ಎಂದು ಮೂಲಗಳು ತಿಳಿಸಿವೆ.

ವಿಡಿಯೊ ಕಾನ್ಫರೆನ್ಸ್ ಮೂಲಕ ಪೂನಾವಾಲಾನನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು ಎಂದು ಮೂಲಗಳು ತಿಳಿಸಿವೆ.

ನ. 26ರಂದು ನಡೆದ ಪ್ರಕರಣದ ವಿಚಾರಣೆ ವೇಳೆ ನ್ಯಾಯಾಲಯ ಆರೋಪಿಯ ನ್ಯಾಯಾಂಗ ಬಂಧನವನ್ನು 13 ದಿನಗಳ ಕಾಲ ವಿಸ್ತರಿಸಿತ್ತು.

ನೋಟುಗಳ ಅಮಾನ್ಯ ಉದ್ದೇಶ ಈಡೇರಿಲ್ಲ: ಕಾಂಗ್ರೆಸ್

ಸಂಸತ್ ಅಧಿವೇಶನ

ನವದೆಹಲಿ (ಪಿಟಿಐ): ₹1000 ಹಾಗೂ ₹ 500 ಮುಖಬೆಲೆಯ ನೋಟುಗಳ ಅಮಾನ್ಯೀಕರಣಗೊಳಿಸಿದ ಉದ್ದೇಶ ಈಡೇರಿಲ್ಲ. ಈಗಲೂ ನಗದು ಹರಿವಿನ ಪ್ರಮಾಣ ಹೆಚ್ಚಾಗಿಯೇ ಇದೆ. ಅಲ್ಲದೆ ನಕಲಿ ನೋಟುಗಳ ಹಾವಳಿಗೆ ಕಡಿವಾಣ ಬಿದ್ದಿಲ್ಲ ಎಂದು ಕಾಂಗ್ರೆಸ್ ನಾಯಕ ಅಧೀರ್ ರಂಜನ್ ಚೌಧರಿ ಅವರು ಶುಕ್ರವಾರ ಲೋಕಸಭೆಯಲ್ಲಿ ಕೇಂದ್ರ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡರು.

ಅಧೀರ್ ರಂಜನ್ ಚೌಧರಿ

ಶೂನ್ಯ ವೇಳೆಯಲ್ಲಿ ಈ ವಿಷಯ ಪ್ರಸ್ತಾಪಿಸಿದ ಅವರು, ‘2016ರಲ್ಲಿ ನಗದು ಹರಿವಿನ ಪ್ರಮಾಣ ₹18 ಲಕ್ಷ ಕೋಟಿಯಷ್ಟಿತ್ತು. ಆದರೆ, ಈಗ ₹31 ಲಕ್ಷ ಕೋಟಿಯಷ್ಟಿದೆ. ಅಲ್ಲದೇ ನಕಲಿ ನೋಟುಗಳ ಹಾವಳಿ ಹೆಚ್ಚಾಗಿದ್ದು, ಸ್ವಿಸ್ ಬ್ಯಾಂಕ್‌ಗಳಲ್ಲಿನ ಠೇವಣಿಗಳು ಸಹ ಅಧಿಕವಾಗಿವೆ’ ಎಂದರು.

‘ಕಪ್ಪುಹಣವನ್ನು ಮರಳಿ ದೇಶಕ್ಕೆ ತರಲು, ನಕಲಿ ನೋಟುಗಳ ಹಾವಳಿ ಹಾಗೂ ಭಯೋತ್ಪಾದನೆ ಕೊನೆಗೊಳಿಸುವ ಉದ್ದೇಶದಿಂದ ನೋಟುಗಳ ಅಮಾನ್ಯೀಕರಣ ಮಾಡಲಾಯಿತು. ಆದರೆ, ಈ ಯಾವ ಉದ್ದೇಶಗಳೂ ಈಡೇರಿಲ್ಲ. ನೋಟು ಅಮಾನ್ಯೀಕರಣದಿಂದ ಆರ್ಥಿಕ ಪರಿಸ್ಥಿತಿ ಹದಗೆಟ್ಟಿದೆ’ ಅವರು ಟೀಕಿಸಿದರು.

ಬಿಜೆಪಿ ನಾಯಕ ನಿಶಿಕಾಂತ್ ದುಬೆ ಅವರು, ‘ಕಾಂಗ್ರೆಸ್ ಆಡಳಿತದಲ್ಲಿ ಅಧಿಕವಾಗಿದ್ದ ಭ್ರಷ್ಟಾಚಾರ ಮತ್ತು ಭಯೋತ್ಪಾದಕರಿಗೆ ಸಂದಾಯವಾಗುತ್ತಿದ್ದ ಹಣದ ಹರಿವನ್ನು ನಿರ್ಮೂಲನಗೊಳಿಸಲು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ದೊಡ್ಡ ಹೆಜ್ಜೆಯನ್ನಿರಿಸಿದೆ’ ಎಂದು ನೀಡಿದ ಹೇಳಿಕೆಗೆ ಅಧೀರ್ ಅವರು ಪ್ರತ್ಯುತ್ತರ ನೀಡಿದರು.

ಹಣ ಅಕ್ರಮ ವರ್ಗಾವಣೆ: ಇಡಿ ವಿಚಾರಣೆ

ನವದೆಹಲಿ: ಎಂಬಿಬಿಎಸ್ ಆಕಾಂಕ್ಷಿಗಳು ಹಾಗೂ ಇತರ ಮೂಲಗಳಿಂದ ಅಕ್ರಮವಾಗಿ ಹಣ ಪಡೆಯಲಾಗಿದೆ ಎನ್ನಲಾದ ಪ್ರಕರಣದ ತನಿಖೆ ನಡೆಸುತ್ತಿರುವ ಜಾರಿ ನಿರ್ದೇಶನಾಲಯವು (ಇ.ಡಿ) ಆಂಧ್ರಪ್ರದೇಶದ ವೈದ್ಯಕೀಯ ಕಾಲೇಜಿನ ಪದಾಧಿಕಾರಿಗಳ ವಿರುದ್ಧ ಹಣ ಅಕ್ರಮ ವರ್ಗಾವಣೆ ಪ್ರಕರಣ ದಾಖಲಿಸಿದೆ.

ಇದೇ 2 ಮತ್ತು 3 ರಂದು ವಿಜಯವಾಡ, ಕಾಕಿನಾಡ, ಗುಂಟೂರು ಮತ್ತು ಹೈದರಾಬಾದ್‌ನಲ್ಲಿನ ಅನಿವಾಸಿ ಭಾರತೀಯ (ಎನ್‌ಆರ್‌ಐ) ವಿಜ್ಞಾನ ಅಕಾಡೆಮಿ ಮೇಲೆ ಇ.ಡಿ ದಾಳಿ ನಡೆಸಿ ಪ್ರಕರಣ ದಾಖಲಿಸಿದೆ.

ಲಖಿಂಪುರ ಖೀರಿ: ಸಂತ್ರಸ್ತರಿಗೆ ಪರಿಹಾರ ನೀಡಲು ಆಗ್ರಹ

ನವದೆಹಲಿ(ಪಿಟಿಐ): ಉತ್ತರ ಪ್ರದೇಶದ ಲಖಿಂಪುರ ಖೀರಿಯಲ್ಲಿ ಕಳೆದ ವರ್ಷ ನಡೆದ ಹಿಂಸಾಚಾರದಲ್ಲಿ ಮೃತರಾದ ರೈತರ ಕುಟುಂಬದ ಸದಸ್ಯರಿಗೆ ತಕ್ಷಣವೇ ಸರ್ಕಾರಿ ಉದ್ಯೋಗ ಮತ್ತು ಗಾಯಗೊಂಡ ರೈತರಿಗೆ ಪರಿಹಾರ ನೀಡಬೇಕು ಎಂದು ರಾಜ್ಯಸಭೆಯಲ್ಲಿ ಶುಕ್ರವಾರ ಒತ್ತಾಯಿಸಲಾಯಿತು.

ಶೂನ್ಯ ವೇಳೆಯಲ್ಲಿ ಈ ವಿಷಯ ಪ್ರಸ್ತಾಪಿಸಿದ ರಾಷ್ಟ್ರೀಯ ಲೋಕದಳದ ನಾಯಕ ಜಯಂತ್ ಚೌಧರಿ, ‘ಲಖಿಂಪುರ ಖೀರಿಯಲ್ಲಿ ಪ್ರತಿಭಟನನಿರತ ರೈತರ ಮೇಲೆ ವಾಹನ ಹತ್ತಿಸಿದ ಪ್ರಕರಣದಲ್ಲಿ ಮೃತರಾದ ನಾಲ್ವರು ರೈತರ ಕುಟುಂಬದ ಸದಸ್ಯರಿಗೆ ಸರ್ಕಾರಿ ಉದ್ಯೋಗ ಹಾಗೂ ಗಾಯಗೊಂಡವರಿಗೆ ₹10 ಲಕ್ಷ ಪರಿಹಾರ ನೀಡುವುದಾಗಿ ರಾಜ್ಯ ಸರ್ಕಾರ ಭರವಸೆ ನೀಡಿತ್ತು. ಆದರೆ, ಇದುವರೆಗೂ ನೀಡಿಲ್ಲ’ ಎಂದು ಆರೋಪಿಸಿದರು.

‘ಉತ್ತರ ಪ್ರದೇಶದ ವಿಧಾನಸಭೆಯಲ್ಲಿ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ಇದೇ ವಾರದಲ್ಲಿ ನೀಡಿರುವ ಉತ್ತರದ ಪ್ರಕಾರ ಸರ್ಕಾರ ಇನ್ನೂ ಭರವಸೆಯನ್ನು ಈಡೇರಿಸಿಲ್ಲ. ಇದುವರೆಗೆ ಯಾಕೆ ಪರಿಹಾರ ಮತ್ತು ಉದ್ಯೋಗ ನೀಡಿಲ್ಲ ಎಂಬುದನ್ನು ತಿಳಿಸಬೇಕು ಹಾಗೂ ಕೂಡಲೇ ಭರವಸೆಯನ್ನು ಈಡೇರಿಸಬೇಕು’ ಎಂದು ಒತ್ತಾಯಿಸಿದರು.

2021ರ ಅಕ್ಟೋಬರ್ 3ರಂದು ಲಖೀಂಪುರ ಖೀರಿಯಲ್ಲಿ ಉತ್ತರ ಪ್ರದೇಶದ ಉಪ ಮುಖ್ಯಮಂತ್ರಿ ಕೇಶವ ಪ್ರಸಾದ್ ಮೌರ್ಯ ಅವರ ವಿರುದ್ಧ ಪ್ರತಿಭಟನೆಗೆ ಇಳಿದಿದ್ದ ರೈತರ ಮೇಲೆ ವಾಹನ ಹರಿಸಲಾಗಿತ್ತು. ಹಿಂಸಾಚಾರದಲ್ಲಿ ಎಂಟು ಮಂದಿ ಮೃತಪಟ್ಟಿದ್ದರು.

‘ಎಐಜೆಎಸ್ ಜಾರಿ ಪ್ರಸ್ತಾವ ಸದ್ಯಕ್ಕಿಲ್ಲ’

ನವದೆಹಲಿ (ಪಿಟಿಐ): ಕೆಳಹಂತದ ಕೋರ್ಟ್‌ಗಳಲ್ಲಿನ ನ್ಯಾಯಾಧೀಶರ ನೇಮಕಕ್ಕೆ ಅಖಿಲ ಭಾರತ ನ್ಯಾಯಾಂಗ ಸೇವೆ (ಎಐಜೆಎಸ್) ಜಾರಿಗೊಳಿಸುವ ಪ್ರಸ್ತಾವ ಸದ್ಯಕ್ಕೆ ಸರ್ಕಾರದ ಮುಂದಿಲ್ಲ ಎಂದು ಕೇಂದ್ರ ಸರ್ಕಾರ ಶುಕ್ರವಾರ ಲೋಕಸಭೆಗೆ ತಿಳಿಸಿತು.

ಐಎಎಸ್ ಮತ್ತು ಐಪಿಎಸ್ ಮಾದರಿಯಲ್ಲಿಯೇ ನ್ಯಾಯಾಧೀಶರು ಅಥವಾ ನ್ಯಾಯಾಂಗ ಅಧಿಕಾರಿಗಳ ಆಯ್ಕೆಗೆ ಎಐಜೆಎಸ್ ವ್ಯವಸ್ಥೆಯನ್ನು ಜಾರಿಗೊಳಿಸುವುದು ಕೇಂದ್ರದ ಚಿಂತನೆಯಾಗಿತ್ತು. ಆದರೆ, ಎಐಜೆಎಸ್ ಕುರಿತಂತೆ ವಿವಿಧ ಭಾಗಿದಾರರಿಂದ ಭಿನ್ನ ಅಭಿಪ್ರಾಯಗಳಿವೆ ಎಂದು ಕಾನೂನು ಸಚಿವ ಕಿರಣ್ ರಿಜಿಜು ತಿಳಿಸಿದರು.

ಎಐಜೆಎಸ್ ವ್ಯವಸ್ಥೆಯಿಂದ ನ್ಯಾಯಾಂಗ ಕ್ಷೇತ್ರಕ್ಕೆ ಪ್ರತಿಭಾವಂತ ಮತ್ತು ಅರ್ಹರ ಪ್ರವೇಶವಾಗಲಿದೆ. ಸಾಮಾಜಿಕ ಒಳಗೊಳ್ಳುವಿಕೆಗೆ ಒತ್ತು ನೀಡುವುದರಿಂದ ನಿರ್ಲಕ್ಷ್ಯಕ್ಕೆ ಒಳಗಾದ ಸಮುದಾಯಗಳಿಗೂ ಸೂಕ್ತ ಪ್ರಾತಿನಿಧ್ಯ ನೀಡಿದಂತಾಗಲಿದೆ ಎಂದು ಸಚಿವರು ಪ್ರತಿಪಾದಿಸಿದರು.

ಎಐಜೆಎಸ್ ರಚನೆ ಕುರಿತು ಸಮಗ್ರ ಪ್ರಸ್ತಾವ ಸಿದ್ಧಪಡಿಸಲಾಗಿದ್ದು, 2012ರ ನವೆಂಬರ್‌ನಲ್ಲಿ ನಡೆದ ಕಾರ್ಯದರ್ಶಿಗಳ ಸಮಿತಿಯು ಅನುಮೋದನೆ ನೀಡಿತ್ತು. 2013ರ ಏಪ್ರಿಲ್‌ನಲ್ಲಿ ನಡೆದಿದ್ದ ಹೈಕೋರ್ಟ್‌ಗಳ ಮುಖ್ಯನ್ಯಾಯಮೂರ್ತಿಗಳ ಸಮ್ಮೇಳನದ ಕಾರ್ಯಸೂಚಿಗೂ ಇದನ್ನು ಸೇರಿಸಲಾಗಿತ್ತು. ಅಲ್ಲಿ, ಈ ಬಗ್ಗೆ ವಿಸ್ತೃತ ಚರ್ಚೆ ಅಗತ್ಯ ಎಂದು ತೀರ್ಮಾನಿಸಲಾಗಿತ್ತು.

ಅಗಸರ ಕಾಯಕ

ಆಗ್ರಾದಲ್ಲಿರುವ ತಾಜ್‌ಮಹಲ್‌ನ ಹಿಂಬದಿಯ ಹಾತಿ ಘಾಟ್‌ನಲ್ಲಿ ಶುಕ್ರವಾರ ಅಗಸರು ಬಟ್ಟೆಗಳನ್ನು ಒಣಗಿಸಿದರು –ಪಿಟಿಐ ಚಿತ್ರ

₹50 ಸಾವಿರ ಲಂಚ: ಕಾನ್‌ಸ್ಟೆಬಲ್ ಬಂಧನ

ಬೆಂಗಳೂರು: ಪ್ರಕರಣವೊಂದರಲ್ಲಿ ಜಪ್ತಿ ಮಾಡಿದ್ದ ವಾಹನವನ್ನು ಮಾಲೀಕರಿಗೆ ಹಿಂದಿರುಗಿಸಲು ₹ 50,000 ಲಂಚ ಪಡೆಯುತ್ತಿದ್ದ ನಗರದ ಕೆ.ಜಿ.ಹಳ್ಳಿ ಪೊಲೀಸ್ ಠಾಣೆಯ ಕಾನ್‌ಸ್ಟೆಬಲ್ ಶಕೀಲ್ ಮತ್ತು ಲಂಚದ ಹಣ ಪಡೆದುಕೊಂಡ ಮಧ್ಯವರ್ತಿ ಸೈಯದ್ ಎಂಬುವವರನ್ನು ಲೋಕಾಯುಕ್ತ ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ.

ಫಿರೋಝ್ ಎಂಬುವವರ ಮಗನ ದ್ವಿಚಕ್ರ ವಾಹನವನ್ನು ವಶಕ್ಕೆ ಪಡೆದಿದ್ದ ಪೊಲೀಸರು ಠಾಣೆಯ ದಾಖಲಾತಿಗಳಲ್ಲಿ ನಮೂದಿಸದೆಯೇ ತಮ್ಮ ಬಳಿ ಇರಿಸಿಕೊಂಡಿದ್ದರು ಎಂದು ಪೊಲೀಸರು ತಿಳಿಸಿದರು.

ಜಂತರ್ ಮಂತರ್‌ನಲ್ಲಿ ರೈತರ ಪ್ರತಿಭಟನೆ

‘ಎಂಎಸ್‌ಪಿಗೆ ಕಾನೂನು ಖಾತರಿ ನೀಡಿ’

ನವದೆಹಲಿ (ಪಿಟಿಐ): ಕನಿಷ್ಠ ಬೆಂಬಲ ಬೆಲೆಗೆ (ಎಂಎಸ್‌ಪಿ) ಕಾನೂನು ಖಾತರಿ ಮತ್ತು ಕೇಂದ್ರದ ಮೂರು ಕೃಷಿ ಕಾನೂನುಗಳ ವಿರುದ್ಧ ಕಳೆದ ವರ್ಷ ನಡೆದ ಪ್ರತಿಭಟನೆ ವೇಳೆ ಮೃತಪಟ್ಟ ರೈತರ ಕುಟುಂಬಗಳಿಗೆ ಪರಿಹಾರ ನೀಡುವಂತೆ ಒತ್ತಾಯಿಸಿ ಅಖಿಲ ಭಾರತ ಕಿಸಾನ್ ಕಾಂಗ್ರೆಸ್ ನೇತೃತ್ವದಲ್ಲಿ ರೈತರು ಶುಕ್ರವಾರ ಜಂತರ್ ಮಂತರ್‌ನಲ್ಲಿ ಪ್ರತಿಭಟನೆ ನಡೆಸಿದರು.

ಪಂಜಾಬ್, ಹರಿಯಾಣ ಮತ್ತು ಉತ್ತರ ಪ್ರದೇಶದ ಸಾವಿರಾರು ರೈತರು ಮೂರು ಕೃಷಿ ಕಾನೂನುಗಳನ್ನು ರದ್ದುಗೊಳಿಸುವಂತೆ ಒತ್ತಾಯಿಸಿ ವರ್ಷಕ್ಕೂ ಹೆಚ್ಚು ಕಾಲ ರಾಷ್ಟ್ರ ರಾಜಧಾನಿಯ ಗಡಿಗಳಲ್ಲಿ ಪ್ರತಿಭಟನೆ ನಡೆಸಿದರು. ಪ್ರಧಾನಿ ನರೇಂದ್ರ ಮೋದಿ ಅವರು ಕಳೆದ ವರ್ಷದ ನವೆಂಬರ್‌ನಲ್ಲಿ ಮೂರು ಕಾನೂನುಗಳನ್ನು ರದ್ದುಗೊಳಿಸುವುದಾಗಿ ಘೋಷಿಸಿದ್ದರು.

ದೆಹಲಿ ಗಡಿಗಳಲ್ಲಿ ಪ್ರತಿಭಟನೆ ಸ್ಥಗಿತಗೊಳಿಸಿದ ಬಳಿಕ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ರೈತರ ಬೇಡಿಕೆಗಳಿಗೆ ಸ್ಪಂದಿಸುತ್ತಿಲ್ಲ, ಆಗ ನೀಡಿದ ಭರವಸೆಗಳನ್ನು ಈಡೇರಿಸಿಲ್ಲ ಎಂದು ಕಿಸಾನ್ ಕಾಂಗ್ರೆಸ್ ಆರೋಪಿಸಿದೆ.

ಪ್ರತಿಭಟನಕಾರರನ್ನು ಉದ್ದೇಶಿಸಿದ ಮಾತನಾಡಿದ ಕಾಂಗ್ರೆಸ್‌ನ ಹಿರಿಯ ನಾಯಕ ರಣದೀಪ್ ಸುರ್ಜೇವಾಲಾ, ಕಳೆದ ವರ್ಷ ರೈತರಿಗೆ ನೀಡಿದ ಭರವಸೆಗಳನ್ನು ಈಡೇರಿಸುವಲ್ಲಿ ಮೋದಿ ಸರ್ಕಾರ ವಿಫಲವಾಗಿದೆ. ರೈತ ವಿರೋಧಿ ಸರ್ಕಾರ ಎಂದು ಟೀಕಿಸಿದರು.

ರೈತರು ನವದೆಹಲಿಯ ಜಂತರ್ ಮಂತರ್‌ನಲ್ಲಿ ಪ್ರತಿಭಟನೆ ನಡೆಸಿದರು. ಅಖಿಲ ಭಾರತ ಕಿಸಾನ್ ಕಾಂಗ್ರೆಸ್ ಅಧ್ಯಕ್ಷ ಸುಖಪಾಲ್ ಸಿಂಗ್ ಖೈರಾ, ಕಾಂಗ್ರೆಸ್ ನಾಯಕ ರಣದೀಪ್ ಸುರ್ಜೇವಾಲಾ ಇದ್ದಾರೆ. –ಪಿಟಿಐ ಚಿತ್ರ

ಮುಖ್ಯಾಂಶಗಳು

- ರೈತರ ಬೇಡಿಕೆಗಳಿಗೆ ಸ್ಪಂದಿಸದ ಕೇಂದ್ರ
- ಮೃತ ರೈತರ ಕುಟುಂಬಕ್ಕೆ ಪರಿಹಾರ ನೀಡಲು ಆಗ್ರಹ

ಈ ಪ್ರತಿಭಟನೆ ಜಂತರ್ ಮಂತರ್‌ಗೆ ಮಾತ್ರ ಸೀಮಿತವಾಗಬಾರದು. ಅದನ್ನು ಮುಂದಕ್ಕೆ ತೆಗೆದುಕೊಂಡು ಹೋಗಬೇಕು ಮತ್ತು ರಾಷ್ಟ್ರಕ್ಕೆ ಆಹಾರ ನೀಡುವ ರೈತರ ಹಕ್ಕುಗಳಿಗಾಗಿ ಹೋರಾಡಬೇಕು ಎಂದು ಅವರು ಹೇಳಿದರು.

ಕಾಂಗ್ರೆಸ್ ಚುನಾವಣೆಯಲ್ಲಿ ಸೋತರೂ ಹೋರಾಡುವ ಧೈರ್ಯವನ್ನು ಕಳೆದುಕೊಂಡಿಲ್ಲ. ಎಂಎಸ್‌ಪಿ ಕಾನೂನು ಜಾರಿಗೊಳಿಸುವ ಭರವಸೆ ಈಡೇರಿಸುವಲ್ಲಿ ಮೋದಿ ಸರ್ಕಾರ ವಿಫಲವಾಗಿದೆ ಎಂದು ಪಕ್ಷದ ನಾಯಕಿ ಅಲ್ಕಾ ಲಾಂಬಾ ಹೇಳಿದ್ದಾರೆ.

ಕೃಷಿ ಕಾನೂನುಗಳ ವಿರುದ್ಧ ನಡೆದ ಪ್ರತಿಭಟನೆ ಮುಗಿದು ಒಂದು ವರ್ಷ ಕಳೆದಿದೆ. ಆದರೆ, ರೈತರಿಗೆ ಎಂಎಸ್‌ಪಿ ಖಾತ್ರಿಪಡಿಸುವ ಸರ್ಕಾರದ ಭರವಸೆ ಇನ್ನೂ ಈಡೇರಿಲ್ಲ ಎಂದು ಎಐಕೆಸಿ ಜಂಟಿ ಸಂಯೋಜಕ ಹರ್ಗೋಬಿಂದ್ ಸಿಂಗ್ ಟೀಕಿಸಿದರು.

ತನಿಖೆಗೆ ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಸೂಚನೆ

ಮದರಸಾಗಳಲ್ಲಿ ಅನ್ಯ ಮಕ್ಕಳಿಗೆ ಶಿಕ್ಷಣ

ನವದೆಹಲಿ (ಪಿಟಿಐ): ಮುಸ್ಲಿಂಯೇತರ ಮಕ್ಕಳನ್ನು ದಾಖಲಿಸಿಕೊಳ್ಳುತ್ತಿರುವ ಸರ್ಕಾರಿ ಅನುದಾನಿತ ಮತ್ತು ನೋಂದಾಯಿತ ಮದರಸಾಗಳನ್ನು ವಿಚಾರಣೆಗೆ ಒಳಪಡಿಸುವಂತೆ ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ (ಎನ್‌ಸಿಪಿಸಿಆರ್) ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಸೂಚನೆ ನೀಡಿದೆ.

ಪ್ರಿಯಾಂಕ್

ಎನ್‌ಸಿಪಿಸಿಆರ್ ಅಧ್ಯಕ್ಷ ಪ್ರಿಯಾಂಕ್ ಕಾನುಂಗೊ ಅವರು ಎಲ್ಲ ರಾಜ್ಯಗಳ ಮುಖ್ಯ ಕಾರ್ಯದರ್ಶಿಗಳಿಗೆ ಬರೆದಿರುವ ಪತ್ರದಲ್ಲಿ, ಮುಸ್ಲಿಂಯೇತರ ಸಮುದಾಯಗಳಿಗೆ ಸೇರಿದ ಮಕ್ಕಳು ಸರ್ಕಾರಿ ಅನುದಾನಿತ ಅಥವಾ ಮಾನ್ಯತೆ ಪಡೆದ ಮದರಸಾಗಳಲ್ಲಿ ಪ್ರವೇಶ ಪಡೆಯುತ್ತಿದ್ದು, ಕೆಲವು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಅಂತಹ ಮಕ್ಕಳಿಗೆ ವಿದ್ಯಾರ್ಥಿ ವೇತನವನ್ನೂ ನೀಡುತ್ತಿರುವುದು ಗಮನಕ್ಕೆ ಬಂದಿದೆ ಎಂದು ಹೇಳಿದ್ದಾರೆ.

‘ಮುಸ್ಲಿಂಯೇತರ ಮಕ್ಕಳನ್ನು ದಾಖಲಿಸಿಕೊಂಡಿರುವ ಮದರಸಾಗಳಿಗೆ ಖುದ್ದು ಭೇಟಿ ನೀಡಿ ವಿಚಾರಣೆ ನಡೆಸಬೇಕು. ವಿಚಾರಣೆಯ ನಂತರ ಅಂತಹ ಎಲ್ಲ ಮಕ್ಕಳನ್ನು ಔಪಚಾರಿಕ ಶಿಕ್ಷಣ ಪಡೆಯಲು ಶಾಲೆಗಳಿಗೆ ದಾಖಲಿಸಬೇಕು’ ಎಂದು ಪತ್ರದಲ್ಲಿ ಸೂಚಿಸಿದ್ದಾರೆ.

‘ಪೋಷಕರ ಒಪ್ಪಿಗೆ ಇಲ್ಲದೆ, ಮಕ್ಕಳಿಗೆ ಯಾವುದೇ ಧಾರ್ಮಿಕ ಶಿಕ್ಷಣವನ್ನು ಶಿಕ್ಷಣ ಸಂಸ್ಥೆಗಳು ಬೋಧಿಸುವುದಕ್ಕೆ ಸಂವಿಧಾನದ ವಿಧಿ 28(3)ರಲ್ಲಿ ನಿರ್ಬಂಧವಿದೆ. ಆದರೆ, ಮದರಸಾಗಳ ಈ ನಡೆ ಸಂವಿಧಾನದ ಸ್ಪಷ್ಟ ಉಲ್ಲಂಘನೆ’ ಎಂದಿದ್ದಾರೆ.

ಮದರಸಾದಂತಹ ಸಂಸ್ಥೆಗಳು ಮುಖ್ಯವಾಗಿ ಮಕ್ಕಳಿಗೆ ಧಾರ್ಮಿಕ ಶಿಕ್ಷಣ ನೀಡುವ ಜವಾಬ್ದಾರಿ ಹೊಂದಿವೆ. ಸರ್ಕಾರದ ಧನಸಹಾಯ ಅಥವಾ ಮಾನ್ಯತೆ ಪಡೆದ ಮದರಸಾಗಳು ಧಾರ್ಮಿಕ ಶಿಕ್ಷಣ ಮತ್ತು ಸ್ವಲ್ಪ ಮಟ್ಟಿಗೆ ಔಪಚಾರಿಕ ಶಿಕ್ಷಣವನ್ನು ಮಕ್ಕಳಿಗೆ ನೀಡುತ್ತಿವೆ.

ಈ ಸಂಗತಿಗಳ ದೃಷ್ಟಿಯಿಂದ ಸರ್ಕಾರಿ ಅನುದಾನಿತ ಮತ್ತು ಸರ್ಕಾರಿ ಮಾನ್ಯತೆ ಹೊಂದಿರುವ ಎಲ್ಲ ಮದರಸಾಗಳನ್ನು ಸಮಗ್ರ ವಿಚಾರಣೆಗೆ ಒಳಪಡಿಸಲು ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಆಯೋಗವು ಶಿಫಾರಸು ಮಾಡಿರುವುದಾಗಿ ಅವರು ಪತ್ರದಲ್ಲಿ ತಿಳಿಸಿದ್ದಾರೆ.

ಶನಿವಾರ, ಡಿಸೆಂಬರ್ 10, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 340 | ಪುಟ 24

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

Scan to watch the video
Manipal Hospital Millers Road

ಅನುಭವ ಮಂಟಪ
'ನ್ಯಾಯ'ದ ಗೋಜಲು ಮೀಸಲು ಹೆಚ್ಚಳದ ದಾರಿಗಳು

ಮಾರಾಟದ ಒತ್ತಡ: ಇಳಿದ ಸೆನ್ಸೆಕ್ಸ್ 10

ಶೂಟೌಟ್‌ನಲ್ಲಿ ಬ್ರೆಜಿಲ್ 'ಔಟ್': ಸೆಮಿಗೆ ಕ್ರೊವೇಷ್ಯಾ 12

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
62,181 ▼	18,496 ▼	₹55,620 (ಬೆಂಗಳೂರು) ▲	₹68,300 (ಬೆಂಗಳೂರು) ▲	82.28 ▲

ರಾಜ್ಯ ಸರ್ಕಾರಕ್ಕೆ ಕೇಂದ್ರ ಚುನಾವಣಾ ಆಯೋಗ ನಿರ್ದೇಶನ

ತವರಿನಿಂದ ಅಧಿಕಾರಿಗಳ ವರ್ಗ

ಪ್ರಜಾವಾಣಿ ವಾರ್ತೆ

ನವದೆಹಲಿ: ಮುಂಬರುವ ಕರ್ನಾಟಕ ವಿಧಾನಸಭಾ ಚುನಾವಣೆಯ ಕರ್ತವ್ಯದಲ್ಲಿ ಭಾಗಿಯಾಗುವ ಅಧಿಕಾರಿಗಳನ್ನು ತವರು ಜಿಲ್ಲೆಯಿಂದ ವರ್ಗಾವಣೆ ಮಾಡಬೇಕು ಎಂದು ಕರ್ನಾಟಕ ಸರ್ಕಾರಕ್ಕೆ ಕೇಂದ್ರ ಚುನಾವಣಾ ಆಯೋಗ ನಿರ್ದೇಶನ ನೀಡಿದೆ.

ಈ ಸಂಬಂಧ ಸರ್ಕಾರದ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ ಹಾಗೂ ರಾಜ್ಯ ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ ಅವರಿಗೆ ಗುರುವಾರ ಪತ್ರ ಬರೆದಿರುವ ಆಯೋಗದ ಹಿರಿಯ ಪ್ರಧಾನ ಕಾರ್ಯದರ್ಶಿ ನರೇಂದ್ರ ಎನ್. ಬುಟೋಲಿಯಾ, ಅಧಿಕಾರಿಗಳ ವರ್ಗಾವಣೆ ಹಾಗೂ ನಿಯೋಜನೆ ಸಂಬಂಧ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳುವಂತೆ ಸೂಚಿಸಿದ್ದಾರೆ. ಈ ಸಂಬಂಧ ಕೈಗೊಂಡ ಕ್ರಮಗಳ ಅನುಪಾಲನಾ ವರದಿಯನ್ನು 2023ರ ಜನವರಿ 31ರೊಳಗೆ ಆಯೋಗಕ್ಕೆ ಮುಖ್ಯ ಕಾರ್ಯದರ್ಶಿ ಹಾಗೂ ಡಿಜಿಪಿ-ಐಜಿಪಿ ಸಲ್ಲಿಸಬೇಕು ಎಂದೂ ತಿಳಿಸಿದ್ದಾರೆ.

ಮುಖ್ಯಾಂಶಗಳು

- ವಿಧಾನಸಭಾ ಚುನಾವಣೆಗೆ ತಯಾರಿ ಆರಂಭಿಸಿದ ಆಯೋಗ
- 2023ರ ಜನವರಿ 31ರೊಳಗೆ ಅನುಪಾಲನಾ ವರದಿ ಸಲ್ಲಿಸಲು ಸೂಚನೆ
- ವಿಧಾನಸಭಾ ಚುನಾವಣೆ ಏಪ್ರಿಲ್– ಮೇ ಮೊದಲನೇ ವಾರ ನಡೆಯುವ ಸಾಧ್ಯತೆ

ಪ್ರಸ್ತುತ ವಿಧಾನ ಸಭೆಯ ಅವಧಿ 2023ರ ಮೇ 24ಕ್ಕೆ ಕೊನೆಗೊಳ್ಳಲಿದೆ. ವಿಧಾನಸಭಾ ಚುನಾವಣೆಯು ಏಪ್ರಿಲ್– ಮೇ ಮೊದಲನೇ ವಾರದಲ್ಲಿ ನಡೆಯುವ ಸಾಧ್ಯತೆ ಇದೆ. ಗುಜರಾತ್ ಹಾಗೂ ಹಿಮಾಚಲ ಪ್ರದೇಶ ವಿಧಾನಸಭೆಗಳ ಚುನಾವಣಾ ಪ್ರಕ್ರಿಯೆ ಪೂರ್ಣಗೊಂಡ ಬೆನ್ನಲ್ಲೇ, ಕರ್ನಾಟಕ ವಿಧಾನಸಭಾ ಚುನಾವಣೆಗೆ ಆಯೋಗ ತಯಾರಿ ಆರಂಭಿಸಿದೆ.

'ಚುನಾವಣೆಯೊಂದಿಗೆ ನೇರ ಸಂಪರ್ಕ ಹೊಂದಿರುವ ಯಾವುದೇ ಅಧಿಕಾರಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಜಿಲ್ಲೆಯಲ್ಲಿ ಮುಂದುವರಿಯುವಂತಿಲ್ಲ. ಒಂದೇ ಜಿಲ್ಲೆಯಲ್ಲಿ ಮೂರು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳನ್ನು ಸಹ ವರ್ಗಾವಣೆ ಮಾಡಬೇಕು' ಎಂದು ಆಯೋಗ ತಿಳಿಸಿದೆ. ಮೂರು ವರ್ಷಗಳ ಅವಧಿಯನ್ನು ಲೆಕ್ಕಾಚಾರ ಮಾಡುವಾಗ, ಜಿಲ್ಲೆಯೊಳಗಿನ ಒಂದು ಬಡ್ತಿಯನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು ಎಂದೂ ತಿಳಿಸಿದೆ.

ಜಿಲ್ಲಾ ಚುನಾವಣಾ ಅಧಿಕಾರಿ, ಉಪ ಜಿಲ್ಲಾ ಚುನಾವಣಾ ಅಧಿಕಾರಿ, ರಿಟರ್ನಿಂಗ್ ಅಧಿಕಾರಿಗಳು, ಸಹಾಯಕ ರಿಟರ್ನಿಂಗ್ ಅಧಿಕಾರಿಗಳು, ನೋಡಲ್ ಅಧಿಕಾರಿಗಳು, ಜಿಲ್ಲಾಧಿಕಾರಿ, ಉಪವಿಭಾಗಾಧಿಕಾರಿ, ತಹಶೀಲ್ದಾರ್, ಬ್ಲಾಕ್ ಡೆವಲಪ್‌ಮೆಂಟ್ ಆಫೀಸರ್ ಅಥವಾ ಸಮಾನ ಶ್ರೇಣಿಯ ಅಧಿಕಾರಿಗಳಿಗೆ ಈ ಸೂಚನೆ ಅನ್ವಯವಾಗುತ್ತದೆ. ಪೊಲೀಸ್ ಇಲಾಖೆಯಲ್ಲಿ ಸಬ್ ಇನ್‌ಸ್ಪೆಕ್ಟರ್‌ಗಿಂತ ಮೇಲಿನ ದರ್ಜೆಯ ಅಧಿಕಾರಿಗಳಿಗೂ ಇದು ಅನ್ವಯವಾಗುತ್ತದೆ. ಆದರೆ, ಕಂಪ್ಯೂಟರೀಕರಣ, ವಿಶೇಷ ಶಾಖೆ, ತರಬೇತಿ ಮತ್ತಿತರ ಕಾರ್ಯದಲ್ಲಿ ತೊಡಗಿರುವ ಅಧಿಕಾರಿಗಳಿಗೆ ಈ ಸೂಚನೆ ಅನ್ವಯ ಆಗುವುದಿಲ್ಲ ಎಂದು ಆಯೋಗ ಸ್ಪಷ್ಟಪಡಿಸಿದೆ.

ಇಲಾಖೆಗಳ ಕೇಂದ್ರ ಸ್ಥಾನದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳಿಗೆ ಈ ವರ್ಗಾವಣೆ ನೀತಿ ಅನ್ವಯವಾಗುವುದಿಲ್ಲ. ವೈದ್ಯರು, ಎಂಜಿನಿಯರ್‌ಗಳು, ಶಿಕ್ಷಕರು, ಪ್ರಾಂಶುಪಾಲರು ಸಹ ಇದರ ವ್ಯಾಪ್ತಿಗೆ ಬರುವುದಿಲ್ಲ. ಒಂದು ವೇಳೆ, ಈ ಅಧಿಕಾರಿಗಳು ಪೂರ್ವಗ್ರಹದಿಂದ ಕಾರ್ಯನಿರ್ವಹಿಸುತ್ತಿರುವುದು ಕಂಡುಬಂದರೆ ಅವರನ್ನು ವರ್ಗಾವಣೆ ಮಾಡಬೇಕು ಹಾಗೂ ಅವರ ವಿರುದ್ಧ ಇಲಾಖಾ ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ

ಕರ್ನಾಟಕ –ಮಹಾರಾಷ್ಟ್ರ ಗಡಿ ವಿವಾದ

14ಕ್ಕೆ ಸಿ.ಎಂಗಳ ಜೊತೆ ಶಾ ಚರ್ಚೆ

ನವದೆಹಲಿ (ಪಿಟಿಐ): ಗಡಿ ವಿವಾದ ಕುರಿತ ಉದ್ವಿಗ್ನ ಸ್ಥಿತಿ ಶಮನಗೊಳಿಸುವ ನಿಟ್ಟಿನಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ, ಇದೇ 14ರಂದು ಕರ್ನಾಟಕ – ಮಹಾರಾಷ್ಟ್ರ ಮುಖ್ಯಮಂತ್ರಿಗಳ ಜೊತೆ ಸಭೆ ನಡೆಸಲಿದ್ದಾರೆ.

ಗಡಿ ವಿವಾದ ಕುರಿತಂತೆ ಅಹವಾಲು ಹೇಳಿಕೊಳ್ಳಲು ಬಂದಿದ್ದ ಶಿವಸೇನೆ, ಎನ್‌ಸಿಪಿ, ಕಾಂಗ್ರೆಸ್ ಮೈತ್ರಿಕೂಟದ ನಿಯೋಗ ಶಾ ಅವರನ್ನು ಭೇಟಿಯಾದ ಬಳಿಕ, ಎನ್‌ಸಿಪಿ ನಾಯಕ ಅಮೋಲ್ ಕೊಲ್ಹೆ ಈ ವಿಷಯ ತಿಳಿಸಿದರು.

'ಶಾ ಅವರು ನಮ್ಮ ಅಹವಾಲುಗಳನ್ನು ತಾಳ್ಮೆಯಿಂದ ಆಲಿಸಿದರು. ಸೌಹಾರ್ದ ಪರಿಹಾರಕ್ಕಾಗಿ 14ರಂದು ಉಭಯ ರಾಜ್ಯಗಳ ಮುಖ್ಯಮಂತ್ರಿಗಳ ಸಭೆ ಕರೆಯಲಾಗುವುದು ಎಂಬುದಾಗಿ ತಿಳಿಸಿದರು' ಎಂದು ಕೊಲ್ಹೆ ಹೇಳಿದರು.

ಗುರುವಾರ ಶಾ ಅವರಿಗೆ ಪತ್ರ ಬರೆದಿದ್ದ ಮಹಾವಿಕಾಸ ಆಘಾಡಿ ಮೈತ್ರಿಕೂಟದ ಸಂಸದರು, 'ಕರ್ನಾಟಕ–ಮಹಾರಾಷ್ಟ್ರ ಗಡಿ ಸಮಸ್ಯೆ ತೀವ್ರ ರೂಪ ತಳೆದಿದೆ. ಯಾವುದೇ ವೇಳೆ ಹಿಂಸೆ ಭುಗಿಲೇಳಬಹುದು. ತಕ್ಷಣ ಮಧ್ಯಪ್ರವೇಶಿಸಬೇಕು' ಎಂದು ಕೋರಿದ್ದರು.

'ಕರ್ನಾಟಕದ ಕೆಲ ನಿಲುವುಗಳಿಂದ ಗಡಿ ಜಿಲ್ಲೆಗಳಲ್ಲಿ ಇರುವ ಮರಾಠಿ ಭಾಷಿಕ ಜನರ ಭಾವನೆಗಳಿಗೆ ಧಕ್ಕೆಯಾಗಿದೆ. ವಿಷಯ, ಪ್ರಸ್ತುತ ಸುಪ್ರೀಂ ಕೋರ್ಟ್ ಎದುರು ಇರುವಾಗಲೇ ಕರ್ನಾಟಕ ಇಂಥ ಕ್ರಮಕ್ಕೆ ಮುಂದಾಗಿದೆ' ಎಂದು ಆರೋಪಿಸಿದ್ದರು.

ರಾಜ್ಯಗಳ ಪುನಾರಚನೆ ಬಳಿಕ ಬೆಳಗಾವಿ ಸೇರಿ ಕರ್ನಾಟಕದ 865 ಗ್ರಾಮಗಳು ನಮಗೆ ಸೇರಬೇಕು ಎಂದು ಮಹಾರಾಷ್ಟ್ರ ತಗಾದೆ ತೆಗೆದಿದೆ. ಆದರೆ, 'ಗಡಿವಿವಾದ ಮುಗಿದ ಅಧ್ಯಾಯ' ಎಂದು ಕರ್ನಾಟಕ ಹೇಳುತ್ತ ಬಂದಿದೆ.

ಶಿರಾಡಿಯಲ್ಲಿ ಸುರಂಗ ಕಾರ್ಯಸಾಧುವಲ್ಲ: ಗಡ್ಕರಿ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಮಂಗಳೂರು–ಬೆಂಗಳೂರು ಸಂಪರ್ಕಿಸುವ ಶಿರಾಡಿ ಘಾಟ್‌ನಲ್ಲಿ ಸುರಂಗ ಮಾರ್ಗ ನಿರ್ಮಾಣಕ್ಕೆ ಭಾರಿ ಮೊತ್ತ ಬೇಕಾಗುತ್ತದೆ. ಜತೆಗೆ, ಅದು ಕಾರ್ಯಸಾಧು ಅಲ್ಲ' ಎಂದು ಕೇಂದ್ರ ಸರ್ಕಾರ ಸ್ಪಷ್ಟಪಡಿಸಿದೆ.

ಲೋಕಸಭೆಯಲ್ಲಿ ಸಂಸದ ನಳಿನ್ ಕುಮಾರ್ ಕಟೀಲ್ ಅವರ ಪ್ರಶ್ನೆಗೆ ಕೇಂದ್ರ ಭೂಸಾರಿಗೆ ಸಚಿವ ನಿತಿನ್ ಗಡ್ಕರಿ ಈ ಸಂಬಂಧ ಲಿಖಿತ ಉತ್ತರ ನೀಡಿದ್ದಾರೆ.

'ಶಿರಾಡಿ ಘಾಟ್‌ನಲ್ಲಿ ವಾಹನಗಳ ದಟ್ಟಣೆ ಜಾಸ್ತಿ ಇರುವುದು ಗಮನಕ್ಕೆ ಬಂದಿದೆ. ಹೀಗಾಗಿ, ದ್ವಿಪಥವನ್ನು ಚತುಷ್ಪಥವನ್ನಾಗಿ ಪರಿವರ್ತಿಸಲಾಗುತ್ತದೆ. ಇದಕ್ಕೆ ಸಮಗ್ರ ಯೋಜನಾ ವರದಿ ಸಿದ್ಧಪಡಿಸಲು ಸಮಾಲೋಚಕರನ್ನು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ನೇಮಿಸಿದ್ದು, ವರದಿ ಸಿದ್ಧಪಡಿಸಲಾಗುತ್ತಿದೆ' ಎಂದು ಅವರು ತಿಳಿಸಿದ್ದಾರೆ.

–ಸಾಂದರ್ಭಿಕ ಚಿತ್ರ

ಗುಡ್ಡದಹಳ್ಳಿ ಕೃಷ್ಣಪ್ಪಗೆ ಪ್ರಶಸ್ತಿ


ಗುಡ್ಡದಹಳ್ಳಿ ಕೃಷ್ಣಪ್ಪ

ಬೆಂಗಳೂರು: ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ನೀಡುವ ಶಾಂತವೇರಿ ಗೋಪಾಲಗೌಡ ಸ್ಮಾರಕ ಪ್ರಶಸ್ತಿಗೆ ಕನ್ನಡಪರ ಚಿಂತಕ ಗುಡ್ಡದಹಳ್ಳಿ ಕೃಷ್ಣಪ್ಪ ಆಯ್ಕೆಯಾಗಿದ್ದಾರೆ.

ಪ್ರಶಸ್ತಿಯು ₹ 10 ಸಾವಿರ ನಗದು ಮತ್ತು ಫಲಕವನ್ನು ಒಳಗೊಂಡಿದೆ. ಇದೇ ಭಾನುವಾರ ಬೆಳಿಗ್ಗೆ 10 ಗಂಟೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ಶತಮಾನೋತ್ಸವ ಕಟ್ಟಡದ ಅಕ್ಕಮಹಾದೇವಿ ಸಭಾಂಗಣದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ. ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

ಮೈಕೊ ಕನ್ನಡ ಬಳಗದ ಗೌರವಾಧ್ಯಕ್ಷೆ ಪದ್ಮನಿ ನಾಗರಾಜು ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಎಂ. ಪ್ರಕಾಶಮೂರ್ತಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಜ್ಯದಲ್ಲಿ ಮೂರು ದಿನ ಮಳೆ

ಬೆಂಗಳೂರು: ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಡಿ.10ರಿಂದ ಮೂರು ದಿನ ಮೋಡ ಮುಸುಕಿದ ವಾತಾವರಣ ಇರಲಿದ್ದು ಸಾಧಾರಣ ಮಳೆ ಆಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಶಿವಮೊಗ್ಗ, ಹಾವೇರಿ, ಬಳ್ಳಾರಿ, ಚಿಕ್ಕಮಗಳೂರು ಹಾಗೂ ಚಿತ್ರದುರ್ಗ ಜಿಲ್ಲೆಗಳಲ್ಲಿ ಶನಿವಾರ ಸಾಧಾರಣ ಮಳೆ ಸುರಿಯಲಿದ್ದು ಈ ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದೆ.

ಕೋಲಾರ, ಮೈಸೂರು, ತುಮಕೂರು, ಬಾಗಲಕೋಟೆ, ರಾಯಚೂರು, ವಿಜಯಪುರ ಹಾಗೂ ಯಾದಗಿರಿಯಲ್ಲೂ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಐಎಂಡಿ ತಿಳಿಸಿದೆ.

ಬಂಗಾಳ ಕೊಲ್ಲಿಯಲ್ಲಿ ಉಂಟಾಗಿರುವ ಚಂಡಮಾರುತ ಪರಿಣಾಮ ಬೆಂಗಳೂರು, ಹಾಸನ, ಕೊಡಗಿನ ಅಲ್ಲಲ್ಲಿ ಶುಕ್ರವಾರ ತುಂತುರು ಮಳೆ ಸುರಿದಿದೆ. ಮೈಕೊರೆಯುವ ಚಳಿಯಿತ್ತು.

ಮಲೆನಾಡು ಜಿಲ್ಲೆಗಳಲ್ಲಿ ಕಾಫಿ ಕೊಯ್ಲು ನಡೆಯುತ್ತಿದ್ದು ಮಳೆ ಹಾಗೂ ಮೋಡ ಮುಸುಕಿದ ವಾತಾವರಣದಿಂದ ಕೊಯ್ಲು ಮಾಡಿದ ಕಾಫಿ ಒಣಗಿಸಲು ಸಾಧ್ಯವಾಗುತ್ತಿಲ್ಲ ಎಂದು ಕೃಷಿಕರು ಅಳಲು ತೋಡಿಕೊಂಡಿದ್ದಾರೆ. ಭತ್ತದ ಕಟಾವಿಗೂ ವಾತಾವರಣ ಅಡ್ಡಿಯಾಗಿದೆ.

'ಭಾರತದ ಪೌರತ್ವ ತ್ಯಜಿಸಿದ 16 ಲಕ್ಷ ಮಂದಿ'

ನವದೆಹಲಿ (ಪಿಟಿಐ): '2011ರಿಂದ ಇಲ್ಲಿಯವರೆಗೆ ಒಟ್ಟು 16 ಲಕ್ಷಕ್ಕೂ ಅಧಿಕ ಮಂದಿ ಭಾರತದ ಪೌರತ್ವ ತ್ಯಜಿಸಿದ್ದಾರೆ' ಎಂದು ವಿದೇಶಾಂಗ ವ್ಯವಹಾರಗಳ ಖಾತೆ ರಾಜ್ಯ ಸಚಿವ ವಿ.ಮುರಳೀಧರನ್ ಅವರು ಶುಕ್ರವಾರ ಲೋಕಸಭೆಗೆ ತಿಳಿಸಿದ್ದಾರೆ.

ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, 'ಈ ವರ್ಷದ ಅಕ್ಟೋಬರ್ 31ರ ವೇಳೆಗೆ 1,83,741 ಮಂದಿ, 2015ರಲ್ಲಿ 1,31,489 ಜನ, 2016 ಮತ್ತು 2017ರಲ್ಲಿ ಕ್ರಮವಾಗಿ 1,41,603 ಮತ್ತು 1,33,049 ಮಂದಿ ಪೌರತ್ವ ತೊರೆದಿದ್ದಾರೆ. 2018ರಲ್ಲಿ ಈ ಸಂಖ್ಯೆ 1,34,561 ರಷ್ಟಿತ್ತು. 2019ರಲ್ಲಿ 1,44,017, 2020ರಲ್ಲಿ 85,256 ಹಾಗೂ 2021ರಲ್ಲಿ 1,63,370 ಮಂದಿ ಪೌರತ್ವ ತ್ಯಜಿಸಿದ್ದಾರೆ' ಎಂದು ಮಾಹಿತಿ ನೀಡಿದ್ದಾರೆ.

ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ಕಳವಳ

'ಮಾನಸಿಕ ರೋಗಿಗಳು ಹೆಚ್ಚಳ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಳೆದ 10 ವರ್ಷಗಳಲ್ಲಿ ನರ ಮತ್ತು ಮಾನಸಿಕ ರೋಗಿಗಳ ಸಂಖ್ಯೆ ಹೆಚ್ಚುತ್ತಿದ್ದು, ಇದು ಆತಂಕದ ವಿಷಯ' ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್ ಹೇಳಿದರು.

ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರ ವಿಜ್ಞಾನ ಸಂಸ್ಥೆ(ನಿಮ್ಹಾನ್ಸ್) ಆಯೋಜಿಸಿದ್ದ ಮಿದುಳು ಆರೋಗ್ಯ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಸಾಂಕ್ರಾಮಿಕವಲ್ಲದ ರೋಗಗಳಿಂದಲೂ ಮಿದುಳಿಗೆ ಸಂಬಂಧಿಸಿದ ಕಾಯಿಲೆಗಳು ಹೆಚ್ಚಾಗುತ್ತಿದೆ. ಕಳೆದ 10 ವರ್ಷಗಳಿಂದ ಮಾನಸಿಕ, ನರರೋಗಗಳು, ಪಾರ್ಶ್ವವಾಯು, ತಲೆನೋವಿನಿಂದ ನರಳುತ್ತಿರುವ ರೋಗಿಗಳ ಸಂಖ್ಯೆ ಹೆಚ್ಚಾಗುತ್ತಿದೆ. ಅಂಕಿ-ಅಂಶಗಳ ಪ್ರಕಾರ ಮಾನಸಿಕ ಅರೋಗ್ಯದಿಂದಲೇ ಶೇ 7ರಿಂದ 8 ಜನರು ಸಾವಿಗೀಡಾಗುತ್ತಿದ್ದಾರೆ. ಸಾವಿಗೆ ಕಾರಣವಾಗಿರುವ ಅಂಶಗಳ ಪೈಕಿ 2ನೇ ಸ್ಥಾನ ಪಡೆದಿದೆ' ಎಂದು ಕಳವಳ ವ್ಯಕ್ತಪಡಿಸಿದರು.

'ನಾವು ಎಷ್ಟು ವರ್ಷ ಬದುಕುತ್ತೇವೆ ಎನ್ನುವ ಜತೆಗೆ ಹೇಗೆ ಬದುಕುತ್ತೇವೆ ಎನ್ನುವುದು ಮುಖ್ಯ. ಮಾನಸಿಕ ಆರೋಗ್ಯದಲ್ಲಿನ ಏರುಪೇರು ಮನುಷ್ಯನ ಆರೋಗ್ಯದಲ್ಲಿ ಸಮಸ್ಯೆ ಸೃಷ್ಟಿಸುವ ಜೊತೆಗೆ ಸಮಾಜಕ್ಕೂ ಆತಂಕ ತರುತ್ತಿದೆ. ಬೆಂಗಳೂರಿನಲ್ಲಿ ನಿಮ್ಹಾನ್ಸ್ ರೀತಿಯ ಸಂಸ್ಥೆ ಇರುವುದು ರಾಜ್ಯದ ಸೌಭಾಗ್ಯ' ಎಂದರು.

ಮಾನಸಿಕ ರೋಗಗಳಿಗೆ ಸಂಬಂಧಿಸಿದ ರಾಷ್ಟ್ರೀಯ ಅಭಿಯಾನವನ್ನು ಕೇಂದ್ರ ಸರ್ಕಾರದಿಂದ ಮಾಡಲಾಗುತ್ತಿದೆ. ರಾಜ್ಯ ಸರ್ಕಾರ ಕೂಡ ಚಿಕ್ಕಬಳ್ಳಾಪುರ, ಕೋಲಾರ, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ನಿಮ್ಹಾನ್ಸ್ ನೆರವಿನೊಂದಿಗೆ ಪ್ರಾಯೋಗಿಕ ಯೋಜನೆಗಳನ್ನು ಕೈಗೆತ್ತಿಕೊಂಡಿದೆ. ಮುಂದಿನ ದಿನಗಳಲ್ಲಿ ಈ ಸೇವೆ ರಾಜ್ಯದ ಎಲ್ಲ ಕಡೆ ಸಿಗುವಂತೆ ಮಾಡಲು ಯೋಜನೆ ರೂಪಿಸಲಾಗಿದೆ ಎಂದು ಹೇಳಿದರು.

ಮಾನಸಿಕ ರೋಗಿಗಳಿಗೆ ಕೌನ್ಸೆಲಿಂಗ್ ಮತ್ತು ಚಿಕಿತ್ಸೆ ನೀಡುವ ಬಗ್ಗೆ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯರಿಗೆ ಮೂರು ತಿಂಗಳ ತರಬೇತಿ ನೀಡಲಾಗಿದೆ. ಮುಂದಿನ ದಿನಗಳಲ್ಲಿ ನರ್ಸ್‌ಗಳಿಗೆ, ಸಿಎಚ್‌ಒಗಳಿಗೆ ಹಾಗೂ ಆಶಾ ಕಾರ್ಯಕರ್ತೆಯರಿಗೂ ತರಬೇತಿ ನೀಡಲಾಗುವುದು ಎಂದು ತಿಳಿಸಿದರು.

ಮಕ್ಕಳ ತಜ್ಞ ಡಾ.ವಿನೋದ್‌ಕುಮಾರ್ ಪೌಲ್, ನಿಮ್ಹಾನ್ಸ್ ನಿರ್ದೇಶಕಿ ಡಾ. ಪ್ರತಿಮಾಮೂರ್ತಿ

ಕಾರ್ಯಕ್ರಮವನ್ನು ಸಚಿವ ಸುಧಾಕರ್ ಅವರು ಜಂಬೆ ಬಾರಿಸುವ ಮೂಲಕ ಉದ್ಘಾಟಿಸಿದರು. ಮಕ್ಕಳ ತಜ್ಞ ಡಾ.ವಿನೋದ್‌ಕುಮಾರ್ ಪೌಲ್, ನಿಮ್ಹಾನ್ಸ್ ನಿರ್ದೇಶಕಿ ಡಾ. ಪ್ರತಿಮಾಮೂರ್ತಿ ಇದ್ದರು

ಸಿ.ಎಂ ಪರಿಹಾರ ನಿಧಿಗೆ ₹1 ಕೋಟಿ

ಪ್ರಜಾವಾಣಿ ವಾರ್ತೆ

ಮೈಸೂರು: ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯೂನಿಕೇಷನ್ ಆ್ಯಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್ (ಕೆಎಸ್‌ಎಂಸಿಎ) ಕಂಪನಿಯು ಬುಧವಾರ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ₹ 1 ಕೋಟಿ ದೇಣಿಗೆ ನೀಡಿದೆ.

ಸರ್ಕಾರದ ಜಾಹೀರಾತು ಸಂಸ್ಥೆಯಾದ ಕೆಎಸ್‌ಎಂಸಿಎ, 2021-22ನೇ ಸಾಲಿನಲ್ಲಿ ₹ 358.13 ಕೋಟಿ ವಹಿವಾಟು ನಡೆಸಿದ್ದು, ತೆರಿಗೆ ನಂತರ ₹ 11.14 ಕೋಟಿ ಲಾಭ ಗಳಿಸಿದೆ. ಕಂಪನಿ ಅಧ್ಯಕ್ಷ ಎಂ.ಎಸ್.ಕರಿಗೌಡರ್ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಬೆಂಗಳೂರಿನಲ್ಲಿ ಚೆಕ್ ಹಸ್ತಾಂತರಿಸಿದರು ಎಂದು ಪ್ರಕಟಣೆ ತಿಳಿಸಿದೆ.

ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ ಮುರುಗೇಶ್ ಆರ್. ನಿರಾಣಿ, ಕಂಪನಿಯ ನಿರ್ದೇಶಕರಾದ ವೀರೇಶ್ ಸಂಗಳದ, ಎಚ್.ಆರ್. ತೀರ್ಥಲಿಂಗಪ್ಪ, ಕೆ.ಜಿ.ವಸಂತಗೌಡ ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಸಿದ್ದಲಿಂಗಪ್ಪ ಬಿ.ಪೂಜಾರಿ, ಉಪ ಪ್ರಧಾನ ವ್ಯವಸ್ಥಾಪಕ ಪಿ.ಎಸ್.ನಂದೀಶ, ವ್ಯವಸ್ಥಾಪಕ ನಾಗಪ್ಪ ಕಿತ್ತೂರು ಉಪಸ್ಥಿತರಿದ್ದರು.

ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯೂನಿಕೇಷನ್ ಆ್ಯಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್ ಕಂಪನಿಯ ಅಧ್ಯಕ್ಷ ಎಂ.ಎಸ್‌ಕರಿಗೌಡರ್ ಅವರು ಸಿಎಂ ಪರಿಹಾರ ನಿಧಿಗೆ ₹1 ಕೋಟಿ ದೇಣಿಗೆಯ ಚೆಕ್ ಅನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಹಸ್ತಾಂತರಿಸಿದರು. ಸಚಿವ ಮುರುಗೇಶ್ ಆರ್‌ನಿರಾಣಿ, ಕಂಪನಿಯ ನಿರ್ದೇಶಕರಾದ ವೀರೇಶ್ ಸಂಗಳದ, ಎಚ್‌ಆರ್‌.ತೀರ್ಥಲಿಂಗಪ್ಪ, ಕೆ.ಜಿ.ವಸಂತಗೌಡ, ವ್ಯವಸ್ಥಾಪಕ ನಿರ್ದೇಶಕ ಸಿದ್ದಲಿಂಗಪ್ಪ ಬಿ.ಪೂಜಾರಿ, ಉಪ ಪ್ರಧಾನ ವ್ಯವಸ್ಥಾಪಕ ಪಿ.ಎಸ್‌ನಂದೀಶ, ವ್ಯವಸ್ಥಾಪಕ ನಾಗಪ್ಪ ಕಿತ್ತೂರು ಇದ್ದಾರೆ.

ವಿದ್ಯುತ್ ವ್ಯತ್ಯಯ ನಾಳೆ

ಬೆಂಗಳೂರು: ನಿರ್ವಹಣೆ ಕಾರ್ಯ ಕೈಗೊಂಡಿರುವುದರಿಂದ ಡಿ.11ರಂದು ಬೆಳಿಗ್ಗೆ 11ರಿಂದ ಮಧ್ಯಾಹ್ನ 2ಗಂಟೆಯವರೆಗೆ ನಗರದ ವಿವಿಧೆಡೆ ವಿದ್ಯುತ್ ವ್ಯತ್ಯಯವಾಗಲಿದೆ.

ಸ್ಥಳಗಳು: ಕಮ್ಮಗೊಂಡನ ಹಳ್ಳಿ, ರಾಘವೇಂದ್ರ ಬಡಾವಣೆ, ಲಕ್ಷ್ಮಿಪುರ, ಅಬ್ಬಿಗೆರೆ ಕೈಗಾರಿಕೆ ಪ್ರದೇಶ, ವಡೇರಹಳ್ಳಿ, ಸಿಂಗಾಪುರ, ವಾಯುಪಡೆ (ಜಾಲಹಳ್ಳಿ ಪೂರ್ವ), ಅಬ್ಬಿಗೆರೆ ಕೈಗಾರಿಕೆ ಪ್ರದೇಶ, ಕೆಂಪೇಗೌಡ ಬಡಾವಣೆ, ವಿಶ್ವೇಶ್ವರಯ್ಯ ಬಡಾವಣೆ, ಕುವೆಂಪು ನಗರ, ಕಾನ್ಶಿರಾಮ ನಗರ, ಎಂ.ಎಸ್. ಪಾಳ್ಯ ವೃತ್ತ, ವಿನಾಯಕ ನಗರ, ಶ್ರೀನಿಧಿ ಬಡಾವಣೆ, ಲಕ್ಕಪ್ಪ ಬಡಾವಣೆ ಸುತ್ತಮುತ್ತ ಪ್ರದೇಶಗಳು.

ಪರಿಶಿಷ್ಟ ಪಂಗಡಕ್ಕೆ ಬೆಟ್ಟ ಕುರುಬರು: ಮಸೂದೆ ಮಂಡನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕ, ತಮಿಳುನಾಡು, ಹಿಮಾಚಲ ಪ್ರದೇಶ ಹಾಗೂ ಛತ್ತೀಸಗಡ ರಾಜ್ಯಗಳ ಪರಿಶಿಷ್ಟ ಪಂಗಡಗಳ ಪಟ್ಟಿಯನ್ನು ಪರಿಷ್ಕರಿಸಲು ನಾಲ್ಕು ಪ್ರತ್ಯೇಕ ಮಸೂದೆಗಳನ್ನು ಲೋಕಸಭೆಯಲ್ಲಿ ಶುಕ್ರವಾರ ಮಂಡಿಸಲಾಯಿತು.

ಸಂವಿಧಾನ (ಪರಿಶಿಷ್ಟ ಪಂಗಡ) ಆದೇಶ (ತಿದ್ದುಪಡಿ) ಮಸೂದೆಯನ್ನು ಕೇಂದ್ರ ಬುಡಕಟ್ಟು ವ್ಯವಹಾರಗಳ ಸಚಿವ ಅರ್ಜುನ್ ಮುಂಡಾ ಮಂಡಿಸಿದರು. ಕರ್ನಾಟಕದ ಕಾಡು ಕುರುಬ ಹಾಗೂ ಬೆಟ್ಟ ಕುರುಬರನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವ ಉದ್ದೇಶದಿಂದ ಈ ಮಸೂದೆ ಮಂಡಿಸಲಾಗಿದೆ.

ಬೆಟ್ಟ ಕುರುಬ ಜನಾಂಗ ಸೇರಿದಂತೆ ಒಟ್ಟು 12 ಜಾತಿಗಳನ್ನು ಪರಿಶಿಷ್ಟ ಪಂಗಡಗಳ ವರ್ಗಕ್ಕೆ ಸೇರ್ಪಡೆಗೊಳಿಸಲು ಕೇಂದ್ರ ಸಚಿವ ಸಂಪುಟವು ಸೆಪ್ಟೆಂಬರ್‌ನಲ್ಲಿ ಒಪ್ಪಿಗೆ ನೀಡಿತ್ತು.

ಪರಿಶಿಷ್ಟ ಪಂಗಡಕ್ಕೆ ಸೇರ್ಪಡೆ ಮಾಡುವಂತೆ ಬೆಟ್ಟ ಕುರುಬರು 30 ವರ್ಷಗಳಿಂದ ಹೋರಾಟ ಮಾಡುತ್ತಿದ್ದಾರೆ. ಈ ಸಂಬಂಧ ಕರ್ನಾಟಕ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಿತ್ತು. ಚಾಮರಾಜನಗರ, ಕೊಡಗು, ಮೈಸೂರು ಜಿಲ್ಲೆಗಳಲ್ಲಿ ಈ ಸಮುದಾಯದವರು 1 ಲಕ್ಷಕ್ಕೂ ಹೆಚ್ಚು ಇದ್ದಾರೆ.

ನಗರದಲ್ಲಿ ಇಂದು

ಬನ್ನಂಜೆ ಗೋವಿಂದಾಚಾರ್ಯರ ಆರಾಧನೆ: 'ಬನ್ನಂಜೆ: ವಸ್ತು-ಸ್ಥಿತಿ ಪ್ರದರ್ಶನ ಮಳಿಗೆ' ಉದ್ಘಾಟನೆ: ಎಸ್.ಆರ್. ರಾಮಸ್ವಾಮಿ, ಆಯೋಜನೆ: ಬನ್ನಂಜೆ ಗೋವಿಂದಾಚಾರ್ಯ ಪ್ರತಿಷ್ಠಾನ, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ, ಬಸವನಗುಡಿ, ಬೆಳಿಗ್ಗೆ 9.45

ಬನ್ನಂಜೆ ಗೋವಿಂದಚಾರ್ಯ

ಪ್ರವಚನ-ಭರತನಾಟ್ಯ: ವಿಷ್ಣು ಸಹಸ್ರನಾಮ ಕುರಿತು ಪ್ರವಚನ: ಅರಳುಮಲ್ಲಿಗೆ ಪಾರ್ಥಸಾರಥಿ, ಭರತನಾಟ್ಯ: ಕೀರ್ತನಾ ಹೆಗಡೆ, ಆಯೋಜನೆ ಹಾಗೂ ಸ್ಥಳ: ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಲೆಕ್ಕಾಧಿಕಾರಿಗಳ ಸಂಘದ ಬೆಳ್ಳಿ ಭವನ, ಆನಂದರಾವ್ ವೃತ್ತ, ಬೆಳಿಗ್ಗೆ 10

'ಧೀಮಂತ ಮುತ್ಸದ್ದಿ ಎಸ್. ನಿಜಲಿಂಗಪ್ಪ' ಕೃತಿ ಲೋಕಾರ್ಪಣೆ: ಪ್ರತಿಮೆಗೆ ಮಾಲಾರ್ಪಣೆ: ಬಸವರಾಜ ಬೊಮ್ಮಾಯಿ, ಲೀಲಾದೇವಿ ಆರ್. ಪ್ರಸಾದ್, ಮುಖ್ಯ ಅತಿಥಿ: ಪಿ. ವಿಜಯಕುಮಾರ್, ಆಯೋಜನೆ: ನಿರಂತರ ಸಾಯಿ ಕಮ್ಯೂನಿಕೇಷನ್, ಸ್ಥಳ: ಎಸ್. ನಿಜಲಿಂಗಪ್ಪ ಅವರ ಪ್ರತಿಮೆ ಮುಂಭಾಗ, ವಿಧಾನಸೌಧದ ಆವರಣ, ಬೆಳಿಗ್ಗೆ 10

ಪುನೀತ್ ರಾಜ್‌ಕುಮಾರ್ ಪುತ್ಥಳಿ ಉದ್ಘಾಟನೆ: ಶಿವರಾಜ್‌ಕುಮಾರ್, ರಾಘವೇಂದ್ರ ರಾಜ್‌ಕುಮಾರ್, ಅಶ್ವಿನಿ ಪುನೀತ್‌ರಾಜ್‌ಕುಮಾರ್, ಬಿ. ಬಾಲರಾಜ್, ಅಧ್ಯಕ್ಷತೆ: ಕೋಟೆ ನಂದೀಶ್ ರೆಡ್ಡಿ, ಸ್ಥಳ: ಸಪ್ತಗಿರಿ ಜಿಮ್ ರಸ್ತೆ, ರಾಜಣ್ಣ ಬಡಾವಣೆ, ಹೊರಮಾವು, ಬೆಳಿಗ್ಗೆ 10

'ಅನುವಾದ ಮತ್ತು ಸಂಸ್ಕೃತಿ' ಕಲಿಕಾ ಶಿಬಿರ: ಉದ್ಘಾಟನೆ: ಪ್ರೊ.ಜೆ.ಎಸ್. ಸದಾನಂದ, ಎಂ.ಎಸ್. ಚಿತ್ರಾ, ಆಯೋಜನೆ: ಚಾಣಕ್ಯ ವಿಶ್ವವಿದ್ಯಾಲಯ, ಭಾರತೀಯ ಭಾಷಾ ಸಮಿತಿ, ಸ್ಥಳ: ಯುವಪಥ, ಜಯನಗರ, ಬೆಳಿಗ್ಗೆ 10.30

ಸಂವಿಧಾನ-ಪ್ರಜಾಪ್ರಭುತ್ವ-ಮೀಸಲಾತಿ ಬಗ್ಗೆ ವಿದ್ಯಾರ್ಥಿಗಳೊಂದಿಗೆ ಸಂವಾದ: ಉದ್ಘಾಟನೆ: ನ್ಯಾ.ಎಚ್.ಎನ್. ನಾಗಮೋಹನ್ ದಾಸ್, ಅಧ್ಯಕ್ಷತೆ: ಎ.ಎಚ್. ರಾಮರಾವ್, ಆಶಯ ನುಡಿ: ಪ್ರೊ.ಎಸ್.ಎನ್. ನಾಗರಾಜ ರೆಡ್ಡಿ, ಉಪಸ್ಥಿತಿ: ವೈ.ಸಿ. ಕಮಲಾ, ಪ್ರೊ.ಸಿ.ಆರ್. ಸಂಪತ್ ಕುಮಾರಿ, ಆಯೋಜನೆ: ನ್ಯಾಷನಲ್ ಕಾಲೇಜು, ಜನಮಾಧ್ಯಮ ಬೆಂಗಳೂರು, ಸ್ಥಳ: ಡಾ.ಎಚ್.ಎನ್. ಕಲಾಕ್ಷೇತ್ರ, ಜಯನಗರ, ಬೆಳಿಗ್ಗೆ 10.30

ವಿವಿಧ ಲೇಖಕರ 67 ಕನ್ನಡ ಪುಸ್ತಕಗಳ ಲೋಕಾರ್ಪಣೆ: ಸಾನ್ನಿಧ್ಯ: ನಿರ್ಮಲಾನಂದನಾಥ ಸ್ವಾಮೀಜಿ, ಪುಸ್ತಕಗಳ ಲೋಕಾರ್ಪಣೆ: ಸುಧಾ ಮೂರ್ತಿ, 'ನಾಡು ನುಡಿಯ ದೃಷ್ಟಿಯಲ್ಲಿ ಪುಸ್ತಕಗಳು' ವಿಷಯದ ಬಗ್ಗೆ ಉಪನ್ಯಾಸ: ಬಿ.ಎಸ್. ಯಡಿಯೂರಪ್ಪ, ಸಮಕಾಲೀನ ಪುಸ್ತಕ ಸಂಸ್ಕೃತಿ ವಿಷಯದ ಬಗ್ಗೆ ಉಪನ್ಯಾಸ: ರವೀಂದ್ರ ಭಟ್ಟ, ಅಧ್ಯಕ್ಷತೆ: ದೊಡ್ಡರಂಗೇಗೌಡ, ಕೃತಿ ಪರಿಚಯ: ಮಲ್ಲೇಪುರಂ ಜಿ. ವೆಂಕಟೇಶ, ಉಪಸ್ಥಿತಿ: ನಿತಿನ್ ಷಾ, ಆಯೋಜನೆ: ಸಪ್ನ ಬುಕ್ ಹೌಸ್, ಸ್ಥಳ: ಗಾಂಧಿ ಭವನ, ಕುಮಾರ ಪಾರ್ಕ್ ಪೂರ್ವ, ಬೆಳಿಗ್ಗೆ 10

ನಿರ್ಮಲಾ ನಂದನಾಥ ಸ್ವಾಮೀಜಿ

ಕಟ್ಟಡ ಉದ್ಘಾಟನೆ: ಬಸವರಾಜ ಬೊಮ್ಮಾಯಿ, ಗಿರಿರಾಜ್ ಸಿಂಗ್, ಅಧ್ಯಕ್ಷತೆ: ವಿರೇಂದ್ರ ಹೆಗ್ಗಡೆ, ಉಪಸ್ಥಿತಿ: ಸಾಧ್ವಿ ನಿರಂಜನ್ ಜ್ಯೋತಿ, ಫಗ್ಗನ್ ಸಿಂಗ್ ಕುಲಸ್ತೆ, ಎಸ್.ಟಿ. ಸೋಮಶೇಖರ್, ಡಾ.ಸಿ.ಎನ್. ಅಶ್ವತ್ಥನಾರಾಯಣ, ಡಿ.ವಿ. ಸದಾನಂದಗೌಡ, ಶೈಲೇಶ್ ಕುಮಾರ್, ಕರ್ಮ ಜಿಂಪಾ ಭುಟಿಯಾ, ಎಲ್.ವಿ. ಪ್ರಭಾಕರ್, ಆಯೋಜನೆ ಹಾಗೂ ಸ್ಥಳ: ರಾಷ್ಟ್ರೀಯ ರುಡ್‌ಸೆಟ್ ಅಕಾಡೆಮಿ, ಕುಂಬಳಗೋಡು, ಕೆಂಗೇರಿ, ಬೆಳಿಗ್ಗೆ 10.30

'ಮಾನಿನಿ ಕಲಾ ಕೂಟ 9': ಮಹಿಳಾ ಕಲಾವಿದರ ಸಮ್ಮೇಳನ: ಸಮ್ಮೇಳನಾಧ್ಯಕ್ಷೆ: ಎಂ.ಎಸ್. ಶೀಲಾ, ಉದ್ಘಾಟನೆ: ಎಚ್. ಕೆ. ಜಯಲಕ್ಷ್ಮಿ, ಮುಖ್ಯ ಅತಿಥಿಗಳು: ಮುಕ್ತಾ ಬಿ. ಕಾಗಲಿ, ನೀಲಮ್ಮ, ಆಯೋಜನೆ: ಸಂಗೀತ ಗಂಗಾ, ಸ್ಥಳ: ಅಕ್ಕಮಹಾದೇವಿ ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 10.30

ಎಂ.ಎಸ್. ಶೀಲಾ

25ನೇ ವಾರ್ಷಿಕೋತ್ಸವ: ಉದ್ಘಾಟನೆ: ಸಿದ್ದರಾಮಯ್ಯ, ಅಧ್ಯಕ್ಷತೆ: ಎಂ.ಕೃಷ್ಣಪ್ಪ, ಅತಿಥಿಗಳು: ಜಮೀರ್ ಅಹಮದ್ ಖಾನ್, ಅಶೋಕ್ ಮಹದೇವಪ್ಪ ಪಟ್ಟಣ್ಣ, ಕೃಷ್ಣಪ್ಪ, ಎಂ. ಲಕ್ಷ್ಮೀನಾರಾಯಣ್, ಎನ್. ವೆಂಕಟಸ್ವಾಮಿ, ಅಜ್ಮಲ್ ಬೇಗ್, ಅಲ್ತಾಫ್ ಖಾನ್, ಟಿ.ವಿ. ಕೃಷ್ಣ, ಆಯೋಜನೆ ಹಾಗೂ ಸ್ಥಳ: ಶನಿದೇವರ ಸೇವಾ ಸಮಿತಿ, ನೆಹರು ರಸ್ತೆ, ಹೊಸ ಗುಡ್ಡದಹಳ್ಳಿ, ಬೆಳಿಗ್ಗೆ 10.50

67ನೇ ಕರ್ನಾಟಕ ರಾಜ್ಯೋತ್ಸವ ಹಾಗೂ ಸಂಸ್ಥೆಯ 8ನೇ ವಾರ್ಷಿಕೋತ್ಸವ: ಉದ್ಘಾಟನೆ: ಸಂತೋಷ್ ಹೆಗ್ಡೆ, ಅಧ್ಯಕ್ಷತೆ: ಡಿ. ಮಹೇಂದ್ರ, ಆಯೋಜನೆ: ಕಲಾ ದರ್ಪಣ-ಆರ್ಟ್‌ರಿಪ್ಲೆಕ್ಸ್, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತಿನ ಆರ್ಟ್ ಕಾಂಪ್ಲೆಕ್ಸ್, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11

10ನೇ ವಾರ್ಷಿಕೋತ್ಸವ: 'ದಾಸ ಮಾರ್ಗ' ಭರತನಾಟ್ಯ, ಸಂಗೀತ, ಗಾಯನ: ಶುಭಮುಕುಂದ್, ಹೇಮಶ್ರುತಿ, ರೋಹಿಣಿ ಚಿದಂಬರನ್, ಆಯೋಜನೆ: ವೇದಾಂತ ಮಾಲ ಕಲಾಕುಟೀರ, ಕಲಾ ಕುಟೀರ, ನಾಟ್ಯಶ್ರೀ ಕಲಾ ಕುಟೀರ, ಆಯೋಜನೆ: ಜೆ.ಎಸ್.ಎಸ್. ಸಭಾಂಗಣ, ಜಯನಗರ, ಸಂಜೆ 4

'ನಿನ್ನೊಲುಮೆಯಿಂದಲೇ...' ಕವಿ ಪತ್ನಿ ಗೌರವ ಪುರಸ್ಕಾರ ಪ್ರದಾನ: ಪುರಸ್ಕೃತರು: ಸಮತಾ ಸತ್ಯಾನಂದ ಪಾತ್ರೋಟ, ಗಿರಿಜಾ ಲಕ್ಷ್ಮಣರಾವ್, ಉದ್ಘಾಟನೆ: ಎಚ್.ಎಸ್. ವೆಂಕಟೇಶಮೂರ್ತಿ, ಅಧ್ಯಕ್ಷತೆ: ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಪ್ರಶಸ್ತಿ ಪ್ರದಾನ: ರಜನಿ ಜೈರಾಮ್, ರೇಖಾ ಸಿನ್ಹಾ, ಮುಖ್ಯ ಅತಿಥಿಗಳು ರಾಜ್ ಸಿಂಗ್, ಎನ್. ವಿ.ಎಚ್. ಕೃಷ್ಣನ್, ಉಪಸ್ಥಿತಿ: ಬಿ.ಆರ್. ಲಕ್ಷ್ಮಣರಾವ್, ಸತ್ಯಾನಂದ ಪಾತ್ರೋಟ, ಆಯೋಜನೆ: ಕೆ.ಎಸ್. ನರಸಿಂಹಸ್ವಾಮಿ ಟ್ರಸ್ಟ್, ಸ್ಥಳ: ಸಿ.ಎಂ.ಎಸ್. ಬಿಸಿನೆಸ್ ಸ್ಕೂಲ್, ಜೈನ್ ವಿಶ್ವವಿದ್ಯಾಲಯ, ಶೇಷಾದ್ರಿ ರಸ್ತೆ, ಗಾಂಧಿನಗರ, ಸಂಜೆ 4

ಅಂತರರಾಷ್ಟ್ರೀಯ ಮಾನವ ಹಕ್ಕುಗಳ ದಿನಾಚರಣೆ ಹಾಗೂ 'ನ್ಯಾಷನಲ್ ಹ್ಯುಮಾನಿಟಿ ಪ್ರಶಸ್ತಿ' ಪ್ರದಾನ: ನ್ಯಾ.ಎನ್. ಸಂತೋಷ್ ಹೆಗ್ಡೆ, ಮುಖ್ಯ ಅತಿಥಿಗಳು: ಪುರುಷೋತ್ತಮ್ ಎಂ., ಎಂ.ಜಿ. ಚಂದ್ರಕಾಂತ್, ಅಧ್ಯಕ್ಷತೆ: ಮೋಹನ್ ರಾವ್ ನಲವಡೆ, ಆಯೋಜನೆ: ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಸ್ಥಳ: ಎಸ್.ಜೆ.ಆರ್.ಸಿ. ಕಾಲೇಜು ಸಭಾಂಗಣ, ಆನಂದ್ ರಾವ್ ವೃತ್ತ, ಸಂಜೆ 4

ಎಚ್.ಎ. ಪಾರ್ಶ್ವನಾಥ್ ಅಮೃತ ಅಭಿನಂದನಾ ಸಮಾರಂಭ ಹಾಗೂ 'ಧೀಮಂತರು' ಕೃತಿ ಬಿಡುಗಡೆ: ಬರಗೂರು ರಾಮಚಂದ್ರಪ್ಪ, ಅಭಿನಂದನಾ ನುಡಿ: ಸಂಪಿಗೆ ತೋಂಟದಾರ್ಯ, ಕೃತಿ ಕುರಿತು ಮಾತು: ನಾರಾಯಣ ರಾಯಚೂರ್, ಮುಖ್ಯ ಅತಿಥಿಗಳು: ಬಿ.ವಿ. ರಾಜಾರಾಂ, ಬಿ. ನೀಲಮ್ಮ, ಆಯೋಜನೆ: ಪಂಪ ಸಾಂಸ್ಕೃತಿಕ ಮತ್ತು ಸಾಮಾಜಿಕ ಕೇಂದ್ರ, ಸ್ಥಳ: ನಯನ ಸಭಾಂಗಣ, ರವೀಂದ್ರ ಕಲಾಕ್ಷೇತ್ರ, ಸಂಜೆ 5

'ಸಂಭ್ರಮ' ಸಾಂಸ್ಕೃತಿಕ ಸಮ್ಮಿಲನ ಹಾಗೂ ಶಾಲಾ ವಾರ್ಷಿಕೋತ್ಸವ: ಅಧ್ಯಕ್ಷತೆ: ಚಿದಾನಂದ್ ಎಂ. ಗೌಡ, ಮುಖ್ಯ ಅತಿಥಿ: ಎಂ.ಆರ್. ದತ್ತಾತ್ರಿ, ಆಯೋಜನೆ: ಸಿಇಎಸ್ ಟ್ವಿಂಕ್ಲರ್ಸ್ ಸ್ಕೂಲ್, ಸ್ಥಳ: ಡಾ.ಎಚ್.ಎನ್. ಕಲಾಕ್ಷೇತ್ರ, ಜಯನಗರ, ಸಂಜೆ 5

ಸುತ್ತೂರು ಶಿವರಾತ್ರೀಶ್ವರ ರಥಯಾತ್ರೆ: ಆಯೋಜನೆ ಅಖಿಲ ಭಾರತ ವೀರಶೈವ ಮಹಾಸಭಾ ಬೆಂಗಳೂರು ನಗರ ಜಿಲ್ಲಾ ಘಟಕ, ಸ್ಥಳ: ವೀರಶೈವ-ಲಿಂಗಾಯತ ಭವನ, ಸದಾಶಿವನಗರ, ಸಂಜೆ 5

ಒಡಿಸ್ಸಿ ನೃತ್ಯ: ಶೋಮ್ರಿತ್ ಮಂಡಲ್, ಗೌರವ ಅತಿಥಿಗಳು: ಎಂ.ಆರ್. ಸತ್ಯನಾರಾಯಣ, ಸುದರ್ಶನ್ ಶೆಟ್ಟಿ, ಸುನಿಲ್ ಕುಮಾರ್ ಸಿಂಗ್, ಪಿ. ವೇಣುಗೋಪಾಲ್, ಬಿ.ಆರ್. ಸಾವಂತ್, ವೈ.ಕೆ. ಸಂಧ್ಯಾ ಶರ್ಮಾ, ಆಯೋಜನೆ: ಶುಭಂ, ಸ್ಥಳ: ಕೆ.ಎಚ್. ಕಲಾಸೌಧ, ಹನುಮಂತನಗರ, ಸಂಜೆ 6

'ನಮ್ಮ ಭಾರತ' ಕೃತಿ ಲೋಕಾರ್ಪಣೆ ಮತ್ತು ವಿಚಾರ ಸಂಕಿರಣ: ಭಾಗವಹಿಸುವವರು: ಕ್ಯಾಪ್ಟನ್ ಗೋಪಿನಾಥ್ (ಮೂಲ ಲೇಖಕ), ಬರಗೂರು ರಾಮಚಂದ್ರಪ್ಪ, ರವೀಂದ್ರ ಭಟ್ಟ, ಗೀತಾ ವಸಂತ, ಅನುವಾದ: ವಿಜಯ್ ಜೋಶಿ, ಆಯೋಜನೆ: ಹರಿವು ಬುಕ್ಸ್, ಸ್ಥಳ: ಬಿ.ಪಿ. ವಾಡಿಯಾ ಸಭಾಂಗಣ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಸವನಗುಡಿ, ಬೆಳಿಗ್ಗೆ 11

ಬರಗೂರು ರಾಮಚಂದ್ರಪ್ಪ

ಕರ್ನಾಟಕ ಸಂಗೀತ ಕಛೇರಿ: ಗಾಯನ: ಹರಿಹರನ್ ಎಂ.ಬಿ., ಅಶೋಕ್ ಎಸ್., ಪಿಟೀಲು: ಮಾಥುರ್ ವಿಶ್ವಜಿತ್, ಮೃದಂಗ: ಎಚ್.ಎಸ್. ಸುಧೀಂದ್ರ, ಮೋರ್ಸಿಂಗ್: ಕೆ.ಎಂ. ಲಿಖಿತಾ, ಆಯೋಜನೆ ಹಾಗೂ ಸ್ಥಳ: ಬಿ.ಪಿ. ವಾಡಿಯಾ ಸಭಾಂಗಣ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಸವನಗುಡಿ, ಸಂಜೆ 6

ಸಂಗೀತ ಕಾರ್ಯಕ್ರಮ: ಗಾಯನ: ಮನೋಜ್ ಆರ್.ಎಸ್., ಪಿಟೀಲು: ವೆಂಕಟೇಶ ಜೋಯಿಸ್, ಮೃದಂಗ, ಬಾಲಸುಬ್ರಹ್ಮಣ್ಯ ಜಿ.ಎಚ್., ಆಯೋಜನೆ: ಮಲ್ಲೇಶ್ವರ ಸಂಗೀತ ಸಭಾ ಟ್ರಸ್ಟ್, ಸ್ಥಳ: ಶ್ರೀರಾಮ ಮಂದಿರ, ಮಲ್ಲೇಶ್ವರ, ಸಂಜೆ 6.12

ತೋಟಗಾರಿಕೆ ಇಲಾಖೆ

ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಛೇರಿ, (ಜಿಪಂ) ಯಲಹಂಕ, ಬೆಂಗಳೂರು ಉತ್ತರ ತಾಲ್ಲೂಕು. ದೂರವಾಣಿ : 080-29798740
E-mail : sadhyalahanka@gmail.com

ಸಹಾಯಧನಕ್ಕಾಗಿ ಅರ್ಜಿ ಆಹ್ವಾನ

ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, ಯಲಹಂಕ/ಬೆಂಗಳೂರು ಉತ್ತರ ತಾಲ್ಲೂಕು ಇವರು ಪ್ರಸಕ್ತ ಸಾಲಿನ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ತೋಟಗಾರಿಕೆ ಇಲಾಖೆಯ ವಿವಿಧ ಕಾರ್ಯಕ್ರಮಗಳ ಅಡಿಯಲ್ಲಿ ವಿವಿಧ ಸಹಾಯಧನಕ್ಕೆ ಅರ್ಹರಿಂದ ಅರ್ಜಿ ಆಹ್ವಾನಿಸಿದೆ. ನೀರಿನಲ್ಲಿ ಕರಗುವ ರಸಗೊಬ್ಬರಗಳ ಖರೀದಿಗೆ, ಲಘು ಪೋಷಕಾಂಶಗಳ ಮಿಶ್ರಣ ಖರೀದಿಗೆ, ಬೆಳೆ ಹೊದಿಕೆ, ತೋಟಗಾರಿಕೆ ಬೆಳೆಗಳ ಮೇಲಾವರಣ ನಿರ್ವಹಣೆಗೆ, ಕ್ಷೇತ್ರ ಮಟ್ಟದಲ್ಲಿ ವಿಂಗಡಣೆ, ಕೊಯ್ಲೋತ್ತರ ನಂತರದ ಚಟುವಟಿಕೆಗಳಿಗೆ ಬಳಸುವ ಪ್ಲಾಸ್ಟಿಕ್ ಕ್ರೇಟ್ಸ್, ಪುನೆಟ್ ಬಾಕ್ಸ್, ಕೋರುಗೇಟೆಡ್ ಬಾಕ್ಸ್‌ಗಳ ಖರೀದಿಗೆ, Farm Gate ನಿರ್ಮಾಣಕ್ಕೆ ಸಹಾಯಧನ ಹಾಗೂ ತೋಟಗಾರಿಕೆ ಬೆಳೆಗಳ ಬೇಸಾಯದಲ್ಲಿ ಉಪಯೋಗಿಸುವ ಅನುಮೋದಿತ ಯಂತ್ರೋಪಕರಣಗಳ ಖರೀದಿಗೆ ಸಹಾಯಧನ ಕಾರ್ಯಕ್ರಮಗಳಿಗೆ ಅರ್ಜಿಗಳನ್ನು ಆಹ್ವಾನಿಸಿದ್ದಾರೆ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 26.12.2022, ಸಂಜೆ 5.30.

ಹೆಚ್ಚಿನ ವಿವರಗಳಿಗಾಗಿ ಮೇಲ್ಕಂಡ ಕಛೇರಿಯನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದು.

ಸಹಿ/-
ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು
(ಜಿಪಂ) ಯಲಹಂಕ, ಬೆಂಗಳೂರು ಉತ್ತರ ತಾಲ್ಲೂಕು.

ವಾ.ಸಾ.ಸಂ.ಇ/ವಾಪ್ರ/3477/ಆಕಾರ್/22-23

ಕರ್ನಾಟಕ ಸರ್ಕಾರ

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ

ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಜಯನಗರ ವಾಣಿಜ್ಯ ಸಂಕೀರ್ಣ ಮಳಿಗೆ, ಜಯನಗರ, ಬೆಂಗಳೂರು-560011.

ಟೆಂಡರ್ ಪ್ರಕಟಣೆ ಸಂಖ್ಯೆ: 22/2022-23 ದಿನಾಂಕ: 08.12.2022

ಐಟಂವಾರು ಟೆಂಡರ್
ಅಲ್ಪಾವಧಿ ಟೆಂಡರ್ (ಸಾರ್ವಜನಿಕ ಪ್ರೊಕ್ಯೂರ್‌ಮೆಂಟ್ ಮೂಲಕ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಬೆಂಗಳೂರು ಇವರಿಂದ ಈ ಕೆಳಕಂಡ ಲೆಕ್ಕಶೀರ್ಷಿಕೆ **4702**-ಅಣೆಕಟ್ಟುಗಳ ಮತ್ತು ಬಂಡಾರುಗಳ ನಿರ್ಮಾಣ ಯೋಜನೆ ಅಡಿಯಲ್ಲಿ ಕಾಮಗಾರಿಗಳ ಅನುಷ್ಠಾನಕ್ಕಾಗಿ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆಧ್ಯಾದೇಶ-2000ರ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆಡಬ್ಲ್ಯು-3 ಸೂಚನೆ ಮತ್ತು ನಿಬಂಧನೆಗಳಿಗೆ ಒಳಪಟ್ಟು ಟೆಂಡರ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪದ್ಧತಿಯ ಮುಖಾಂತರ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ.

ಕಾಮಗಾರಿಯ ಹೆಸರು:- ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕು, ದೊಡ್ಡಬಳ್ಳಾಪುರ ತಾಲ್ಲೂಕು, ರಾಮನಗರ ಜಿಲ್ಲೆ, ಮಾಗಡಿ ತಾಲ್ಲೂಕುಗಳಲ್ಲಿ, ಹಳ್ಳಕ್ಕೆ ಚೆಕ್ ಡ್ಯಾಂ ನಿರ್ಮಾಣ, ಚೆಕ್ ಡ್ಯಾಂ ಕಂ ಬ್ರಿಡ್ಜ್ ನಿರ್ಮಾಣ, ಕೊಳವೆ ಬಾವಿ ಕೊರೆಯುವ, ಕಾಮಗಾರಿಗಳನ್ನು ಸೇರಿದಂತೆ **ಒಟ್ಟು 6 ಕಾಮಗಾರಿಗಳನ್ನು ಆಹ್ವಾನಿಸಲಾಗಿದೆ.**

ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ): **ರೂ.1.70 (ಕನಿಷ್ಠ) & ರೂ.90.00 (ಗರಿಷ್ಠ)**
ಇಎಂಡಿ: **ರೂ.4,300.00 (ಕನಿಷ್ಠ) & ರೂ.1,80,000.00 (ಗರಿಷ್ಠ).**

ಕಾಮಗಾರಿ ಪೂರ್ಣಗೊಳಿಸಬೇಕಾದ ಅವಧಿ: 2 ರಿಂದ 6 ತಿಂಗಳು ಮಳೆಗಾಲ ಸೇರಿದಂತೆ.

(1) ವಿವರಗಳನ್ನು ಈ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದಾದ ದಿನಾಂಕ ಮತ್ತು ವೇಳೆ: **22.12.2022 ರ 16.30 ಗಂಟೆಯವರೆಗೆ.** (2) ಭರ್ತಿ ಮಾಡಿದ ಟೆಂಡರ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸಬಹುದಾದ ದಿನಾಂಕ ಮತ್ತು ವೇಳೆ: **23.12.2022 ರ 16.30 ಗಂಟೆಯವರೆಗೆ.** (3) ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ ಮತ್ತು ವೇಳೆ: **26.12.2022ರ 11.30** ಗಂಟೆಯವರೆಗೆ (4) ಆರ್ಥಿಕ ಬಿಡ್ಡನ್ನು ತೆರೆಯುವ ದಿನಾಂಕ ಮತ್ತು ವೇಳೆ: ಅರ್ಹ ಗುತ್ತಿಗೆದಾರರಿಗೆ ತಿಳಿಸಲಾಗುವುದು. (5) ಗುತ್ತಿಗೆ ಪಡೆಯಲು ಕನಿಷ್ಠ ಅರ್ಹತೆಗಳಿಗಾಗಿ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್‌ನ ಐ ಟಿ ಟಿ ನಿಬಂಧನೆ-3 ರಲ್ಲಿ ನಮೂದಿಸಿದ ಸೂಚನೆಗಳನ್ನು ಸೂಕ್ಷ್ಮವಾಗಿ ಗಮನಿಸುವಂತೆ ಗುತ್ತಿಗೆದಾರರಿಗೆ ಸೂಚಿಸಲಾಗಿದೆ. (6) ಎಲ್ಲಾ ಟೆಂಡರ್‌ನ್ನು ಅಥವಾ ಯಾವುದಾದರೂ ಟೆಂಡರ್‌ನ್ನು ಮುಂದೂಡುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ. (7) ಹೆಚ್ಚಿನ ವಿವರಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪದ್ಧತಿ ಮುಖಾಂತರ ವೆಬ್‌ಸೈಟ್ ವಿಳಾಸ https://www.eproc.karnataka.gov.in ರಲ್ಲಿ ಪಡೆಯಬಹುದಾಗಿದೆ. ಬದಲಾವಣೆ ಇದ್ದಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಪ್ರಕಟಿಸಲಾಗುವುದು.

ಸಹಿ/- ಕಾರ್ಯಪಾಲಕ ಅಭಿಯಂತರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ

ವಾಸಾಸಂಇ/ವಾ.ಪ್ರ/3444/2022-23

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ,

ಕಾರ್ಯಪಾಲಕ ಅಭಿಯಂತರರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಬಳ್ಳಾಪುರ ದೂರವಾಣಿ ಸಂಖ್ಯೆ:08156-270058
E-mail ID:eerdwsd.ckb2@gmail.com

ಸಂಖ್ಯೆ: ಕಾಅ/ಗ್ರಾ.ಕು.ನೀ.& ನೈ.ವಿ/ಚಿ.ಪುರ/ಟೆಂಡರ್/ಸ.ಇಂ-2/2022-23
ದಿನಾಂಕ:02.12.2022

ಇ-ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ
ಸಂಖ್ಯೆ:35/2022-23 ದಿನಾಂಕ: 02.12.2022
(ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ ಚಿಕ್ಕಬಳ್ಳಾಪುರ ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿ JJM-2215 ಯೋಜನೆಯಡಿಯಲ್ಲಿ ಅನುಮೋದನೆ ಗೊಂಡಿರುವ ಚಿಕ್ಕಬಳ್ಳಾಪುರ ಜಿಲ್ಲೆಯ ಚಿಕ್ಕಬಳ್ಳಾಪುರ ತಾಲ್ಲೂಕಿನ 09 ಗ್ರಾಮಗಳಲ್ಲಿ ನಲ್ಲಿ ನೀರು ಸಂಪರ್ಕ ಕುಡಿಯುವ ನೀರು ಪೂರೈಕೆ ಕಾಮಗಾರಿಗಳನ್ನು ನಿರ್ವಹಿಸಲು ಐಟಂವಾರು ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್‌ಗಳನ್ನು ಸೂಕ್ತ ದರ್ಜೆಯಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಿದ್ದು, ಕರ್ನಾಟಕ ಸರ್ಕಾರ ಇಲ್ಲಿ ಎನ್‌ರೋಲ್ ಮಾಡಿಸಿಕೊಂಡಿರುವ ಅಧಿಕೃತ ಗುತ್ತಿಗೆದಾರರಿಂದ ಆಹ್ವಾನಿಸಲಾಗಿದೆ. ಇ-ಪ್ರೊಕ್ಯೂರ್‌ಮೆಂಟ್ ದಾಖಲೆಗಳಿಗಾಗಿ ಇಲಾಖಾ ವೆಬ್‌ಸೈಟ್: **www.eproc.karnataka.gov.in** ಮೂಲಕ ಅರ್ಜಿಯನ್ನು ಸಲ್ಲಿಸಲು ಕೋರಲಾಗಿದೆ.

(1) ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ದರಗಳನ್ನು ನಮೂದಿಸಿ ಸಲ್ಲಿಸುವ ಕೊನೆಯ ದಿನಾಂಕ: **12.12.2022 ರಂದು ಸಂಜೆ 5.30 ಗಂಟೆಯವರೆಗೆ** (2) ಭರ್ತಿ ಮಾಡಿದ ಟೆಂಡರ್‌ಗಳನ್ನು ತೆರೆಯುವ **ದಿನಾಂಕ: 14.12.2022 ಸಂಜೆ 4.30 ಗಂಟೆಗೆ** (3) ಆರ್ಥಿಕ ಬಿಡ್‌ನ್ನು ತೆರೆಯುವ **ದಿನಾಂಕ: 15.12.2022 ಬೆಳಿಗ್ಗೆ 11.00 ಗಂಟೆಗೆ.** ಒಂದು ವೇಳೆ ಮೇಲೆ ಸೂಚಿಸಲಾಗಿರುವ ದಿನಗಳು ಸಾರ್ವಜನಿಕ ರಜಾದಿನವನ್ನಾಗಿ ಘೋಷಿಸಲ್ಪಟ್ಟರೆ ಮುಂದಿನ ದಿನ ಟೆಂಡರ್ ತೆರೆಯಲಾಗುವುದು.

ಸಹಿ/- ಕಾರ್ಯಪಾಲಕ ಅಭಿಯಂತರರು,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಬಳ್ಳಾಪುರ
ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ367/ಎಂ.ಸಿ.ಎ/2022-23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಹೊಸಕೋಟೆ ಯೋಜನಾ ಪ್ರಾಧಿಕಾರ

ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ - 562114, ಬೆಂಗಳೂರು ಗ್ರಾಮಾಂತರ ಜಿಲ್ಲೆ. ದೂರವಾಣಿ / ಫ್ಯಾಕ್ಸ್: 080-27934470/ 27935412
E-mail: hosakote.pa@gmail.com URL: www.hoskote.tpa.gov.in

ಸಂಖ್ಯೆ: ಹೊಯೋಪ್ರಾ/ಭೂಉಬ/32/2022-23 ದಿನಾಂಕ: 08-12-2022

ಸಾರ್ವಜನಿಕ ಪ್ರಕಟಣೆ

ವಿಷಯ: ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14(ಎ) ರಡಿಯಲ್ಲಿ ಕೃಷಿ ಉದ್ದೇಶಕ್ಕಾಗಿ ಕಾಯ್ದಿರಿಸಲಾಗಿರುವ ಜಮೀನುಗಳನ್ನು ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುವ ಬಗ್ಗೆ.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14(ಎ) ರಡಿಯಲ್ಲಿ ಈ ಕೆಳಕಂಡ ಜಮೀನುಗಳನ್ನು ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದಿಂದ ದಿನಾಂಕ: 30-01-2018 ರಂದು ಅನುಮೋದನೆಯಾದ ಮಹಾಯೋಜನೆಯಂತೆ **ಕೃಷಿ ವಲಯದಲ್ಲಿ ಕಾಯ್ದಿರಿಸಲಾಗಿರುವ ಜಮೀನುಗಳನ್ನು ವಸತಿ ಉದ್ದೇಶಕ್ಕಾಗಿ ಭೂ ಉಪಯೋಗ ಬದಲಾವಣೆ** ಮಾಡಲು ಕೋರಿ ಈ ಪ್ರಾಧಿಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸದರಿ ಭೂ ಉಪಯೋಗ ಬದಲಾವಣೆಯ ಪ್ರಸ್ತಾವನೆಯನ್ನು ಪರಿಗಣಿಸುವ ಬಗ್ಗೆ ಅಕ್ಕಪಕ್ಕದ ಜಮೀನಿನ ಮಾಲೀಕರಿಗೆ / ಇತರರಿಗೆ / ಪರಿಸರಕ್ಕೆ ಉಂಟಾಗಬಹುದಾದಂತಹ ತೊಂದರೆಗಳು ಹಾಗೂ ಇತರೆ ಅಂಶಗಳಿಗೆ ಸಂಬಂಧಿಸಿದಂತೆ ತಮ್ಮ ಸಲಹೆ / ಸೂಚನೆ / ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆ ನೀಡಿದ ದಿನಾಂಕದಿಂದ 15 ದಿನಗಳ ಒಳಗಾಗಿ ಲಿಖಿತ ರೂಪದಲ್ಲಿ **ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡ ರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ - 562114, ಬೆಂಗಳೂರು ಗ್ರಾಮಾಂತರ ಜಿಲ್ಲೆ** ರವರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಲು ಕೋರಲಾಗಿದೆ. ಅವಧಿ ಮೀರಿದ ನಂತರ ಸ್ವೀಕರಿಸಲಾಗುವ ಸಲಹೆ / ಸೂಚನೆ / ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಹೊಸಕೋಟೆ ತಾಲ್ಲೂಕು, ಅನುಗೊಂಡನಹಳ್ಳಿ ಹೋಬಳಿ, ಬೆಳ್ಳಿಕೆರೆ ಗ್ರಾಮದ ಸ.ನಂ. ಗಳ ವಿವರ

ಕ್ರ ಸಂ.	ಭೂ ಮಾಲೀಕರ ಹೆಸರು	ಸ.ನಂ.	ವಿಸ್ತೀರ್ಣ ಎ-ಗುಂ	'ಎ' ಖರಾಬು ಗುಂ
1	ಎ) ಶ್ರೀಮತಿ ಸ್ಪಂಧನ ಜೆ. ಕೋಂ ಅರ್ಜುನ್ ಎ ರೆಡ್ಡಿ ಬಿ) ಶ್ರೀಮತಿ ಸಂಯಮ ಜಿ.ಜೆ. ಕೋಂ ಯತಿನ್ ವಿ ರೆಡ್ಡಿ	104/1	02-00	-
2	ಎ) ಶ್ರೀ ಕೋದಂಡ ಬಿನ್ ವೆಂಕಟಸ್ವಾಮಿ ರೆಡ್ಡಿ ಬಿ) ಶ್ರೀ ಹರೀಶ್ ಬಿನ್ ವೆಂಕಟಸ್ವಾಮಿ ರೆಡ್ಡಿ ಸಿ) ಶ್ರೀ ಪ್ರಮೋದ್ ಬಿನ್ ವೆಂಕಟಸ್ವಾಮಿ ರೆಡ್ಡಿ ಡಿ) ಶ್ರೀಮತಿ ಪಿ. ಪಾರ್ವತಮ್ಮ, ಇ) ಶ್ರೀಮತಿ ಪಿ. ಶಶಿಕಲಾ, ಎಫ್) ಶ್ರೀಮತಿ ಪಿ. ಸೌಭಾಗ್ಯಮ್ಮ ಇವರುಗಳ ಪರವಾಗಿ ಜಿಪಿಎ ದಾರರಾದ ಮೆ॥ ಅಂತಿಲ್ ಪ್ರಾಜೆಕ್ಟ್ಸ್ ಎಲ್.ಎಲ್.ಪಿ., ಇದರ ಪರವಾಗಿ ಪಾಲುದಾರರಾದ ಶ್ರೀ ಅರ್ಜುನ್ ಆಂಜನೇಯ ರೆಡ್ಡಿ	105	05-39	-
3	ಶ್ರೀ ಅರ್ಜುನ್ ಎ ಬಿನ್ ಪಿ. ಆಂಜನೇಯ ರೆಡ್ಡಿ	106/5	02-00	-
4	ಶ್ರೀ ಅರ್ಜುನ್ ಎ ಬಿನ್ ಪಿ. ಆಂಜನೇಯ ರೆಡ್ಡಿ	106/8	00-20	00 ¾
5	ಸಿಂಧು ಎಸ್. ಬಿನ್ ಆರ್. ಸೋಮಶೇಖರ್ ರೆಡ್ಡಿ	106/12	00-20	01
6	ಶ್ರೀ ಚೆನ್ನಸ್ವಾಮಿ ಬಿನ್ ಹನುಮಪ್ಪ	106/13	01-00	-

ಷರಾ:- ಪ್ರಶ್ನಿತ ಜಮೀನುಗಳ ಪರಿಸರದಲ್ಲಿ ವಸತಿ ಬೆಳವಣಿಗೆಗಳು ಬಂದಿದ್ದು / ಬರುತ್ತಿದ್ದು, ಸದರಿ ಜಮೀನುಗಳಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡ ಯೋಜನಾ ಬದ್ಧವಾದ ವಸತಿ ಬಡಾವಣೆಯನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಿರುವುದರಿಂದ ಸಾರ್ವಜನಿಕರಿಗೆ ಕಡಿಮೆ ದರದಲ್ಲಿ ಉತ್ತಮವಾದ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಒಳಗೊಂಡ ವಸತಿ ನಿವೇಶನಗಳನ್ನು ಒದಗಿಸಿ ಕೊಡುವುದರ ಜೊತೆಗೆ ನಗರದ ಯೋಜನಾ ಬದ್ಧವಾದ ಬೆಳವಣಿಗೆಗೆ ಸಹಕಾರಿಯಾಗುವುದೆಂಬ ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಂಡಿರುತ್ತದೆ ಎಂದು ಅರ್ಜಿದಾರರು ಪ್ರಮಾಣ ಪತ್ರದ ಮುಖಾಂತರ ತಿಳಿಸಿರುತ್ತಾರೆ.

ಸಹಿ/-
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಹೊಸಕೋಟೆ.

ವಾಸಾಸಂಇ/ವಾ.ಪ್ರ/3473/2022-23

IN THE COURT OF THE 5th ADDL. SENIOR CIVIL JUDGE BENGALURU RURAL DISTRICT AT BENGALURU

O.S. No. 1062 OF 2007

Between : Sri Nanjappa & others ...Plaintiffs
And : Sri Lingappa & others ...Defendant

Particulars of proposed Defendants

9) Smt. Kempahanumakka, Aged about 58 years W/o. Rangappa,
10) Smt. Nagarathna, Aged about 32 years, D/o. Rangappa, No. 9 to 10 residents of Kulavanahalli Village & Post, Thyamagondalu Post, Nelamangala Taluk, Bangalore Urban District.
13) Smt. Gangahanumakka, Aged about 85 years, W/o. late Sanjeevaiah,
14) Smt. Jayamma, Aged about 62 years, D/o. late Sanjeevaiah,
15) Smt. Chikkathayamma, Aged about 55 years, D/o. late Sanjeevaiah,
No. 13 to 15 are residents of Kannahalli Dhakale, Hosahalli Village, Yeshwanthpura Hobli, Bangalore North Taluk.
16) Smt. Thimmakka, Aged about 90 years W/o late Nanjappa, R/o. Kamakshipalya, Opp. to Bus Stop, Bangalore.
17) Smt. Galihanumakka, aged about 75 years, D/o. late Nanjappa, R/o. H.M.T. Layout, Nelagadaranahalli, Bangalore.
18) Smt. Lakshmamma, aged about 70 years, D/o. late Nanjappa, R/o. Cholanayakanahalli Village and Post, Thavarekere Hobli, Bangalore South Taluk.
20) Smt. Bhylamma, Aged about 63 years D/o. late Nanjappa R/o. Nelagadaranahalli Yeshwanthpura Hobli, Bangalore North Taluk.
21) Smt. Sakamma, Aged about 60 years, D/o. late Nanjappa, R/o. Kempegowda Layout Bangalore.
22) Smt. Lakshmamma, Aged about 55 years, W/o. late Munibyrappa
23) Sri Ravikumar, Aged about 28 years, S/o. late Munibyrappa
24) Smt. Lakshmidevi, Aged about 26 years, D/o. late Munibyrappa
25) Sri Girisha, Aged about 24 years, S/o. late Munibyrappa
26) Sri Mudalalgiriyappa, Aged about 52 years, S/o. Lankappa & Bylamma
27) Sri Gangappa, Aged about 50 years, S/o. Lankeppa & Bylamma
28) Sri Srinivas, Aged about 48 years, S/o. Lankeppa & Bylamma
29) Smt. Jayama, Aged about 46 years, D/o. Lankeppa & Bylamma
30) Sri Nagarajuu, Aged about 44 years, S/o. Lankeppa & Bylamma, No. 22 to 30 are residing at Kalluru Village, Varadenahalli Hand Post, Magadi Taluk, Ramanagara District.

NOTICE ISSUED TO PROPOSED DEFENDANTS No. 4 to 8 UNDER ORDER V RULE 20 (i-a) OF CODE OF CIVIL PROCEDURE : 1908

Whereas the Plaintiffs above named has filed the above suit against the Defendant for the relief of partition and others consequential reliefs in respect of the schedule properties and against the Defendants your implied has impleading Proposed Defendant No. 9 and 10, 13 to 18 and 20 to 30 in the above case by the plaintiff. You are hereby summoned to appear before the court in person or by a pleader duly instructed **on 13.01.2023 at 11.00 a.m.** to answer the same, failing which the above suit will be disposed off ex-parte in your absence.

By Order of the Court, Chief Ministerial Officer, Senior Civil Judge's Court, Bangalore Rural Dist., Bangalore.

Advocate for Plaintiff Lr.s 1st plaintiff and Plaintiff No.2
S. CHENNAKRISHNA
CHANNAKRISHNA and ASSOCIATES
Advocates
No. 34 & 35, 2nd Floor, Kilari Main Road
Opp. Bhandari Jain High School,
Bangalore - 560 053.

ಎಚ್‌ಎಎಲ್ ಠಾಣೆಯಲ್ಲಿ ಎಫ್‌ಐಆರ್ • ರೌಡಿ ಪಟ್ಟಿಗೆ ಸೇರಿಸಲು ಕ್ರಮ • ಮತ್ತಷ್ಟು ಆರೋಪಿಗಳ ಪತ್ತೆಗೆ ವಿಶೇಷ ತಂಡ ರಚನೆ

ಬೇಕರಿಗೆ ನುಗ್ಗಿ ಹಲ್ಲೆ: ಹೋಟೆಲ್ ವ್ಯವಸ್ಥಾಪಕ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಚ್‌ಎಎಲ್ ಠಾಣೆ ವ್ಯಾಪ್ತಿಯ ಕುಂದಲಹಳ್ಳಿ ಬಳಿ ಬೇಕರಿಯೊಂದಕ್ಕೆ ನುಗ್ಗಿ ವ್ಯಾಪಾರಿಗಳಿಬ್ಬರ ಮೇಲೆ ಹಲ್ಲೆ ಮಾಡಲಾಗಿದ್ದು, ಈ ಸಂಬಂಧ ಮೂವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

‘ಎಚ್‌ಎಎಲ್ ಅಶ್ವಥ್‌ನಗರದ ಕಾರ್ತಿಕ್ (20), ಸಲ್ಮಾನ್ (23) ಹಾಗೂ ಮಾರತ್ತಹಳ್ಳಿಯ ಕಾರ್ತಿಕ್ (23) ಬಂಧಿತರು. ಈ ಮೂವರು ತಮ್ಮ ಸ್ನೇಹಿತರ ಜೊತೆ ಸೇರಿ ಗುರುವಾರ ರಾತ್ರಿ ಬೇಕರಿಗೆ ನುಗ್ಗಿ, ವ್ಯಾಪಾರಿಗಳಾದ ನವೀನ್ ಶೆಟ್ಟಿ ಹಾಗೂ ಪ್ರಜ್ವಲ್ ಶೆಟ್ಟಿ

ಸಲ್ಮಾನ್

ಅಶ್ವಥ್‌ನಗರದ ಕಾರ್ತಿಕ್

ಕಾರ್ತಿಕ್

ಎಂಬುವರ ಮೇಲೆ ಹಲ್ಲೆ ಮಾಡಿದ್ದರು. ರಕ್ಷಣೆಗೆ ಹೋಗಿದ್ದ ಗ್ರಾಹಕರೊಬ್ಬರನ್ನು ಥಳಿಸಿದ್ದರು. ಈ ದೃಶ್ಯ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿತ್ತು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಘಟನೆಯಲ್ಲಿ ಗಾಯಗೊಂಡಿರುವ ನವೀನ್ ಪ್ರಾಥಮಿಕ ಚಿಕಿತ್ಸೆ ಪಡೆದುಕೊಂಡಿದ್ದಾರೆ. ತೀವ್ರಗಾಯಗೊಂಡಿರುವ ಪ್ರಜ್ವಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಅವರಿಬ್ಬರಿಂದ ಹೇಳಿಕೆ ಆಧರಿಸಿ ಪ್ರಕರಣ ದಾಖಲಿಸಿಕೊಂಡು ಮೂವರನ್ನು ಬಂಧಿಸಲಾಗಿದ್ದು, ಮತ್ತಷ್ಟು ಆರೋಪಿಗಳ ಪತ್ತೆಗಾಗಿ ವಿಶೇಷ ತಂಡ ರಚಿಸಲಾಗಿದೆ’ ಎಂದು ತಿಳಿಸಿವೆ.

‘ಬಂಧಿತ ಮಾರತ್ತಹಳ್ಳಿಯ ಕಾರ್ತಿಕ್, ಕೆಂಗೇರಿಯಲ್ಲಿರುವ ತಾಜ್ ವೆಸ್ಟ್ ಹೋಟೆಲ್‌ನಲ್ಲಿ ವ್ಯವಸ್ಥಾಪಕನಾಗಿ ಕೆಲಸ ಮಾಡುತ್ತಿದ್ದ. ಅಶ್ವಥ್ ನಗರದ ಕಾರ್ತಿಕ್, ಡೆಲಿವರಿ ಬಾಯ್’ ಎಂದು ಮೂಲಗಳು ಹೇಳಿವೆ.

ಊರು ಬಿಟ್ಟು ಬಂದು ಮೆರೆಯುತ್ತಿದ್ದಿರೆಂದು ಬೆದರಿಕೆ: ‘ನವೀನ್ ಹಾಗೂ ಪ್ರಜ್ವಲ್, ಸ್ನೇಹಿತರು. ಕೆಲ ತಿಂಗಳ ಹಿಂದೆ ಪಾಲುದಾರಿಕೆಯಲ್ಲಿ ಬ್ರಹ್ಮಲಿಂಗೇಶ್ವರ ಹೆಸರಿನಲ್ಲಿ ಬೇಕರಿ ತೆರೆದಿದ್ದರು. ವ್ಯಾಪಾರದಿಂದ ಬಂದ ಹಣದಲ್ಲಿ ಬದುಕು ಕಟ್ಟಿಕೊಂಡಿದ್ದರು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಬೇಕರಿಗೆ ರಾತ್ರಿ ಹೋಗಿದ್ದ ಆರೋಪಿಗಳು, ಮಾಲೀಕರು ಯಾರು? ಎಂದು ಏರುಧ್ವನಿಯಲ್ಲಿ ಕೇಳಿದ್ದರು. ನಂತರ, ಕ್ಷುಲ್ಲಕ ಕಾರಣಕ್ಕೆ ಜಗಳ ತೆಗೆದು ನವೀನ್ ಹಾಗೂ ಪ್ರಜ್ವಲ್ ಮೇಲೆ ದಾಳಿ ಮಾಡಿದ್ದರು. ಒಬ್ಬೊಬ್ಬರಾಗಿ ಬೇಕರಿಗೆ ನುಗ್ಗಿ, ಇಬ್ಬರನ್ನೂ ಥಳಿಸಿದ್ದರು. ಒಬ್ಬಾತ, ಹೆಲ್ಮೆಟ್‌ನಿಂದ ಪ್ರಜ್ವಲ್ ಅವರ ತಲೆಗೆ ಹೊಡೆದಿದ್ದ’ ಎಂದು ಮೂಲಗಳು ತಿಳಿಸಿವೆ.

‘ಇದೊಂದು ಉದ್ದೇಶ ಪೂರ್ವಕ ಹಲ್ಲೆ ಎಂಬುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಹಲ್ಲೆಗೀಡಾದ ಯುವಕರೂ ಅದನ್ನೇ ಹೇಳುತ್ತಿದ್ದಾರೆ. ದರೋಡೆ ಆರೋಪದಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದ್ದು, ಆರೋಪಿಗಳ ಹೆಸರನ್ನು ರೌಡಿ ಪಟ್ಟಿಗೆ ಸೇರಿಸಲು ಕ್ರಮ ಕೈಗೊಳ್ಳಲಾಗುವುದು’ ಎಂದು ಹೇಳಿವೆ.

ಠಾಣೆ ಎದುರು ಪ್ರತಿಭಟನೆ

ಸಾಮಾಜಿಕ ಮಾಧ್ಯಮಗಳಲ್ಲಿ ಹಲ್ಲೆ ವಿಡಿಯೊ ಹರಿದಾಡುತ್ತಿದ್ದಂತೆ ಎಚ್‌ಎಎಲ್ ಠಾಣೆ ಎದುರು ಸೇರಿದ್ದ ಜನ, ಆರೋಪಿಗಳ ಬಂಧನಕ್ಕೆ ಆಗ್ರಹಿಸಿ ಘೋಷಣೆ ಕೂಗಿದರು.

‘ಉಡುಪಿ, ಬೈಂದೂರು, ಕುಂದಾಪುರ ಸೇರಿದಂತೆ ಕರಾವಳಿ ಭಾಗದ ಹಲವರು ಬದುಕು ಕಟ್ಟಿಕೊಳ್ಳಲು ನಗರಕ್ಕೆ ಬಂದಿದ್ದಾರೆ. ಇದೀಗ, ಬೈಂದೂರು ಯುವಕರ ಮೇಲೆ ಗೂಂಡಾಗಳು ಹಲ್ಲೆ ಮಾಡಿದ್ದಾರೆ. ಆರೋಪಿಗಳನ್ನು ಕೂಡಲೇ ಬಂಧಿಸಬೇಕು’ ಎಂದು ಪ್ರತಿಭಟನಕಾರರು ಒತ್ತಾಯಿಸಿದರು.

ಗೃಹ ಸಚಿವರಿಗೆ ಶಾಸಕ ಕರೆ: ಘಟನೆಯನ್ನು ಖಂಡಿಸಿರುವ ಬೈಂದೂರು ಶಾಸಕ ಬಿ.ಎಂ. ಸುಕುಮಾರ್ ಶೆಟ್ಟಿ ಅವರು ಗೃಹ ಸಚಿವರಿಗೆ ಕರೆ ಮಾಡಿ, ಆರೋಪಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದ್ದಾರೆ.

ಬೆಳಗಾವಿ ಚಳಿಗಾಲದ ಅಧಿವೇಶನದಲ್ಲಿ ಪಾಲ್ಗೊಳ್ಳಲ್ಲ: ಎಚ್‌ಡಿಕೆ

ಹುಬ್ಬಳ್ಳಿ: ‘ಬೆಳಗಾವಿಯಲ್ಲಿ ನಡೆಯಲಿರುವ ಚಳಿಗಾಲದ ಅಧಿವೇಶನದಲ್ಲಿ ಭಾಗವಹಿಸುವುದಿಲ್ಲ’ ಎಂದು ಜೆಡಿಎಸ್ ಮುಖಂಡ ಎಚ್‌.ಡಿ. ಕುಮಾರಸ್ವಾಮಿ ಹೇಳಿದರು.

ಶುಕ್ರವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ರಾಜ್ಯದಾದ್ಯಂತ ಪಂಚರತ್ನ ಯಾತ್ರೆ ಕೈಗೊಂಡಿದ್ದೇನೆ. ವಿಧಾನಸಭೆ ಚುನಾವಣೆ ಸಂಹಿತೆ ಜಾರಿಯಾಗುವುದರೊಳಗೆ, ಮಾರ್ಚ್ ಒಳಗೆ ಯಾತ್ರೆ ಪೂರ್ಣಗೊಳಿಸಬೇಕಾಗಿದೆ. ಅದಕ್ಕೆ ತಕ್ಕಂತೆ ಯಾತ್ರೆಯ ಕಾರ್ಯಕ್ರಮಗಳನ್ನು ಈಗಾಗಲೇ ನಿಗದಿಗೊಳಿಸಲಾಗಿದೆ. ಈ ಕಾರಣದಿಂದಾಗಿ ಅಧಿವೇಶನದಲ್ಲಿ ಪಾಲ್ಗೊಳ್ಳುತ್ತಿಲ್ಲ’ ಎಂದು ಸ್ಪಷ್ಟ ಪಡಿಸಿದರು.

ಸಾಹಸ ಬೆಂಗಳೂರಿನ ಎಎಸ್‌ಸಿ ಕೇಂದ್ರ ಮತ್ತು ಕಾಲೇಜಿನ 262ನೇ ಸ್ಥಾಪನಾ ದಿನ ಮತ್ತು 11ನೇ ಪುನರ್ ಮಿಲನ ಕಾರ್ಯಕ್ರಮ ಅಂಗವಾಗಿ ಶುಕ್ರವಾರ ಬಾನಂಗಳದಲ್ಲಿ ಭಾರತೀಯ ವಾಯು ಪಡೆಯ ‘ಸಾರಂಗ ತಂಡ’ ಹೆಲಿಕಾಪ್ಟರ್ ಮೂಲಕ ಪ್ರದರ್ಶಿಸಿದ ಕಸರತ್ತುಗಳು ಮೈನವಿರೇಳಿಸಿದವು ಮತ್ತು ಎಎಸ್‌ಸಿ ತಂಡದ ಯೋಧರು ವಿವಿಧ ಸಾಹಸಗಳನ್ನು ಪ್ರದರ್ಶಿಸಿದರು - ಪ್ರಜಾವಾಣಿ ಚಿತ್ರ/ ರಂಜು ಪಿ

ಶಾ ಭೇಟಿ ಮಾಡಲಿರುವ ರಾಜ್ಯದ ಸಂಸದರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಾರಾಷ್ಟ್ರ ಗಡಿ ವಿವಾದಕ್ಕೆ ಸಂಬಂಧಿಸಿದಂತೆ ರಾಜ್ಯದ ಸಂಸದರು ಗೃಹ ಸಚಿವ ಅಮಿತ್ ಶಾ ಅವರನ್ನು ಸೋಮವಾರ ಭೇಟಿ ಮಾಡಿ ರಾಜ್ಯದ ನಿಲುವನ್ನು ಪ್ರತಿಪಾದಿಸಲಿದ್ದಾರೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ಈ ಕುರಿತು ಟ್ವೀಟ್ ಮಾಡಿರುವ ಅವರು ಮಹಾರಾಷ್ಟ್ರ ಸಂಸದರು ಅಮಿತ್ ಶಾ ಅವರನ್ನು ಭೇಟಿ ವಿಚಾರದಿಂದ ವಿಚಲಿತರಾಗಿಲ್ಲ. ಈಗಾಗಲೇ ಈ ವಿಷಯ ನ್ಯಾಯಾಲಯದಲ್ಲಿದೆ ಎಂದು ತಿಳಿಸಿದ್ದಾರೆ.

ವಿದ್ಯುತ್ ಪ್ರವಹಿಸಿ ಸಾವು: ಪ್ರತಿಭಟನೆ

ಬೆಂಗಳೂರು: ‘ಬೆಸ್ಕಾಂ ಹಾಗೂ ಬಿಬಿಎಂಪಿ ಅಧಿಕಾರಿಗಳ ನಿರ್ಲಕ್ಷ್ಯದಿಂದ ವಿದ್ಯುತ್ ಪ್ರವಹಿಸಿ ಬಾಲಕರಿಬ್ಬರು ಮೃತಪಟ್ಟಿದ್ದಾರೆ’ ಎಂದು ಆರೋಪಿಸಿ ಸಂಬಂಧಿಕರು ನಗರದಲ್ಲಿ ಶನಿವಾರ ಪ್ರತಿಭಟನೆ ನಡೆಸಿದರು.

ಜಯಕರ್ನಾಟಕ ಜನಪರ ವೇದಿಕೆ ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಗಿತ್ತು. ಮೃತ ಬಾಲಕರಾದ ಚಂದ್ರು (13), ಸುಪ್ರೀತ್ (11) ಫೋಟೊ ಪ್ರದರ್ಶಿಸಿ ಮಕ್ಕಳನ್ನು ನೆನೆದು ಕಣ್ಣೀರಿಟ್ಟರು. ‘ನಂದಿನಿ ಲೇಔಟ್ ಠಾಣೆ ವ್ಯಾಪ್ತಿಯಲ್ಲಿ ವಿದ್ಯುತ್ ಪ್ರವಹಿಸಿ ಬಾಲಕರಿಬ್ಬರು ಮೃತಪಟ್ಟಿದ್ದು, ಈ ಸಾವಿಗೆ ಬೆಸ್ಕಾಂ ಕಾರಣ’ ಎಂದು ದೂರಿದರು.

ಸಾರ್ವಜನಿಕ ತಿಳುವಳಿಕೆಗಾಗಿ

ಈ ಕೆಳಗೆ ನಮೂದಿಸಿದ ಹಾಗೂ ಪ್ರಕಾರ ವಿವರಿಸಲಾದ ಆಸ್ತಿಯನ್ನು ಸರಿಯಾದ ನ್ಯಾಯ ತಪಾಸಣೆ ನಡೆಯುತ್ತಿದೆ. ಯಾವುದೇ ವ್ಯಕ್ತಿ/ಗಳು, ಕಾನೂನು ಘಟಕ, ಸಂಸ್ಥೆ, ಸಂಸ್ಥೆ (ಕಾರ್ಪೊರೇಟ್/ಬ್ಯಾಂಕ್/ಹಣಕಾಸು ಸಂಸ್ಥೆ/ಎನ್‌ಬಿಎಫ್‌ಸಿ ಅಥವಾ ಇತರೆ) ಯಾವುದೇ ಹಕ್ಕು, ಶೀರ್ಷಿಕೆ, ಆಸಕ್ತಿ, ಶುಲ್ಕ, ಬಾಕಿ ಇರುವ ದಾವೆ, ಯಾವುದೇ ನ್ಯಾಯಾಲಯದ ಆದೇಶ ಸೇರಿದಂತೆ ಆದರೆ ಸೀಮಿತವಾಗಿರದೆ ಯಾವುದೇ ಪ್ರಕೃತಿಯ ಯಾವುದೇ ಹಕ್ಕು ಹೊಂದಿರುವ, ನ್ಯಾಯಾಲಯದಿಂದ ನೀಡಲಾದ ಆಸ್ತಿಯ ಲಗತ್ತಿಸುವಿಕೆ, ಆಸ್ತಿಯ ಮೇಲೆ ಪರಿಣಾಮ ಬೀರುವ ಮರಣದಂಡನೆ ಪ್ರಕ್ರಿಯೆಗಳು, ಭದ್ರತಾ ಆಸಕ್ತಿ, ಭೂಸ್ವಾಧೀನ ಪ್ರಕ್ರಿಯೆಗಳು ಯಾವುದಾದರೂ ಅಥವಾ ಹಿಂದೆ ಮಾಡಿದ್ದರೆ ಅಥವಾ ಪ್ರಸ್ತುತ ಮಾಡಲಾದ ಬೇಡಿಕೆ ಮತ್ತು ಕೆಳಗೆ ತಿಳಿಸಲಾದ ಶೆಡ್ಯೂಲ್ ಆಸ್ತಿಯ ವಿರುದ್ಧ/ಮೇಲೆ ಭವಿಷ್ಯದಲ್ಲಿ ಮಾಡಬಹುದಾದ ಬೇಡಿಕೆ ಈ ಪ್ರಕಟಣೆಯ ದಿನಾಂಕದಿಂದ 10 ದಿನಗಳ ಅವಧಿಯೊಳಗೆ ಅಂತಹ ಹಕ್ಕು/ಗಳ ಎಲ್ಲಾ ವಸ್ತು ವಿವರಗಳೊಂದಿಗೆ ಕೆಳಗೆ ಒದಗಿಸಲಾದ ಯಾವುದೇ ಸಂಪರ್ಕ ವಿವರಗಳ ಮೂಲಕ ಕೆಳಗೆ ಸಹಿ ಮಾಡಿದವರನ್ನು ಸಂಪರ್ಕಿಸಲು ಈ ಮೂಲಕ ಕರೆ ನೀಡಲಾಗಿದೆ. ವಿಫಲವಾದರೆ, ಯಾವುದೇ ಕ್ಲೈಮ್/ಗಳು ಪರಿಣಾಮ ಬೀರುವುದಿಲ್ಲ.

ಆಸ್ತಿಯ ವಿವರ

ಮುನ್ಸಿಪಲ್ ಸಂಖ್ಯೆ. 437ರಲ್ಲಿರುವ ಎಲ್ಲಾ ಮನೆ ಆಸ್ತಿ, ಕೋರಮಂಗಲ ಮೂರನೇ ಬ್ಲಾಕ್, ಮುನ್ಸಿಪಲ್ ವಾರ್ಡ್ ನಂ. 68–ಈಜಿಪುರ, ಬೆಂಗಳೂರು ಮತ್ತು ಪೂರ್ವದಿಂದ ಪಶ್ಚಿಮಕ್ಕೆ ಅಳತೆ: 80 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 118 ಅಡಿ ಮತ್ತು 6 ಇಂಚುಗಳು ಮತ್ತು ಸಂಪೂರ್ಣವಾಗಿ 9488 ಚದರ ಅಳತೆ ಅಡಿ. ಖಾತಾ PID ಸಂಖ್ಯೆ. 68–2–437 ಅನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (BBMP) ಹೊರಡಿಸಿದೆ ಮತ್ತು

ಪೂರ್ವ: ಆಸ್ತಿ ಹೊಂದಿರುವ ಸಂಖ್ಯೆ 438 **ಪಶ್ಚಿಮ:** ಆಸ್ತಿ ಹೊಂದಿರುವ ಸಂಖ್ಯೆ 436
ಉತ್ತರ: ರಸ್ತೆ ಮತ್ತು **ದಕ್ಷಿಣ:** ಆಸ್ತಿ ಹೊಂದಿರುವ ಸಂಖ್ಯೆ. 414

ಆಸ್ತಿಯು ನೆಲ ಮತ್ತು ಮೊದಲ ಮಹಡಿಯಲ್ಲಿ ವಸತಿ ಗೃಹವನ್ನು ಹೊಂದಿದೆ ಮತ್ತು ಸಂಪೂರ್ಣವಾಗಿ 3923.6 ಚದರ ಅಡಿ ಅಳತೆಯನ್ನು ಹೊಂದಿದೆ. ಗೋಡೆಗಳನ್ನು ಇಟ್ಟಿಗೆ ಮತ್ತು ಸಿಮೆಂಟ್‌ನಿಂದ RCC ರೂಫಿಂಗ್ ಮತ್ತು ಮಾರ್ಬಲ್ ಫ್ಲೋರಿಂಗ್‌ನೊಂದಿಗೆ ನಿರ್ಮಿಸಲಾಗಿದೆ. ಇದು ವಿದ್ಯುತ್, ನೀರು ಮತ್ತು ನೈರ್ಮಲ್ಯ ಸಂಪರ್ಕಗಳನ್ನು ಹೊಂದಿದೆ. ತೇಗದ ಮರವನ್ನು ಬಳಸಲಾಗಿದೆ.

Ajith Anand Shetty, SA Partners, Advocates
No.71, 66th Cross, Rajajinagar 5th block, Bangalore-560010
ajith@sapartners.info | lawyers@sapartners.info
9845492482| 9591229404

ಮಹಿಳೆ ಮೇಲಿನ ದೌರ್ಜನ್ಯ ತಡೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳೆಯರ ವಿರುದ್ಧ ವಿಶ್ವವ್ಯಾಪಿ ನಡೆಯುತ್ತಿರುವ ಹಿಂಸೆ ಕೊನೆಗಾಣಿಸಲು ವಿಶ್ವಸಂಸ್ಥೆ ಮುಂದಾಗಿರುವ ಸಂದರ್ಭದಲ್ಲಿ ನಗರದಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯಗಳನ್ನು ತಡೆಯಲು ಸರ್ಕಾರ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಬೆಂಗಳೂರು ಉತ್ತರ ಮತ್ತು ದಕ್ಷಿಣ ಜಿಲ್ಲಾ ಸಮಿತಿ ಒತ್ತಾಯಿಸಿದೆ.

ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದ ಸಂಘಟನೆ ಕಾರ್ಯಕರ್ತರು, ‘ನಗರದ ಬಹುತೇಕ ಪೊಲೀಸ್ ಠಾಣೆಗಳು ಮಹಿಳಾ ಸ್ನೇಹಿಯಾಗಿಲ್ಲ. ನ್ಯಾಯ ಕೋರಿ ಬಂದ ಮಹಿಳೆಯನ್ನು ಮಾನಸಿಕವಾಗಿ ಮತ್ತಷ್ಟು ಕುಗ್ಗಿಸಲಾಗುತ್ತಿದೆ. ಇದಕ್ಕೆ ಕಡಿವಾಣ ಹಾಕಬೇಕು. ದುಡಿಯುವ ಸ್ಥಳದಲ್ಲಿ ಮಹಿಳೆಯರ ಮೇಲೆ ನಡೆಯುತ್ತಿರುವ ಲೈಂಗಿಕ ಕಿರುಕುಳ ತಡೆಯಲು ಸಮಿತಿಗಳನ್ನು ಕಡ್ಡಾಯವಾಗಿ ರಚಿಸಬೇಕು. ಸಮಿತಿಗಳ ಮತ್ತು ಸಂಪರ್ಕದ ವಿವರಗಳನ್ನು ಸಾರ್ವಜನಿಕ ಸ್ಥಳಗಳಲ್ಲಿ, ಸಾರಿಗೆ ವಾಹನಗಳ ಫಲಕಗಳಲ್ಲಿ ಅಳವಡಿಸಬೇಕು’ ಎಂದು ಒತ್ತಾಯಿಸಿದರು.

ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಸಾರ್ವಜನಿಕ ಕುಂದು–ಕೊರತೆಗಳ ಸಭೆಯಲ್ಲಿ ಮಹಿಳೆಯರ ಸಮಸ್ಯೆಗಳನ್ನು ಕೈಗೆತ್ತಿಕೊಂಡು ಕೆಲಸ ಮಾಡುವ ಮಹಿಳಾ ಸಂಘಟನೆಗಳನ್ನು ಕಡ್ಡಾಯವಾಗಿ ಒಳಗೊಳ್ಳಬೇಕು. ಬೆಂಗಳೂರಿನಲ್ಲಿ ಬದುಕು ಕಟ್ಟಿಕೊಳ್ಳಲು ಸಾವಿರಾರು ಸಂಖ್ಯೆಯಲ್ಲಿ ಬೀದಿ ಬದಿ ವ್ಯಾಪಾರಿಗಳಿದ್ದಾರೆ.

ಅವರಲ್ಲಿ ದೊಡ್ಡ ಸಂಖ್ಯೆಯಲ್ಲಿ ಮಹಿಳೆಯರಿದ್ದಾರೆ. ಪ್ರದೇಶದಿಂದ ಪ್ರದೇಶಕ್ಕೆ ತಳ್ಳುವ ಗಾಡಿಗಳಲ್ಲಿ ವ್ಯಾಪಾರ ಮಾಡುವ ಅಥವಾ ಬೀದಿ ಬದಿಗಳಲ್ಲಿ ವ್ಯಾಪಾರ ಮಾಡುವ ಮಹಿಳೆಯರು ನೀರಿನ ಸೌಕರ್ಯ ಮತ್ತು ಸ್ವಚ್ಛತೆ ಇರುವ ಶೌಚಾಲಯವಿಲ್ಲದೆ ಹಲವು ತೊಂದರೆಗಳನ್ನು ಎದುರಿಸುತ್ತಿದ್ದಾರೆ. ಸಾರ್ವಜನಿಕ ಉಚಿತ ಶೌಚಾಲಯಗಳ ವ್ಯವಸ್ಥೆಗೆ ಆದ್ಯತೆ ನೀಡಬೇಕು ಎಂದರು.

ಬೊಮ್ಮಾಯಿ–ಮುಕುಂದ್ ಚರ್ಚೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರ್‌ಎಸ್‌ಎಸ್ ಸಹ ಕಾರ್ಯವಾಹ ಮುಕುಂದ್ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಶುಕ್ರವಾರ ಭೇಟಿ ಮಾಡಿ ಮಾತುಕತೆ ನಡೆಸಿರುವುದು ಬಿಜೆಪಿ ವಲಯದಲ್ಲಿ ಚರ್ಚೆಗೆ ಕಾರಣವಾಗಿದೆ.

ಗುಜರಾತ್ ಚುನಾವಣೆಯಲ್ಲಿ ಬಿಜೆಪಿಯ ವಿಜಯದ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಚುನಾವಣೆ ಪೂರ್ವ ಪಕ್ಷ ಮತ್ತು ಸರ್ಕಾರದಲ್ಲಿ ಆಗಬೇಕಾದ ಬದಲಾವಣೆಗಳ ಬಗ್ಗೆ ಚರ್ಚೆ ನಡೆಸಲಾಗಿದೆ ಎಂದು ಮೂಲಗಳು ಹೇಳಿವೆ.

ಡಿ.15ಕ್ಕೆ ನಡ್ಡಾ ಭೇಟಿ: ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ಇದೇ 15ಕ್ಕೆ ಕೊಪ್ಪಳಕ್ಕೆ ಬರಲಿದ್ದು, ಅದೇ ದಿನ ಅವರು 11 ವರ್ಚುವಲ್ ರ‍್ಯಾಲಿಗಳನ್ನು ಉದ್ದೇಶಿಸಿ ಮಾತನಾಡಲಿದ್ದಾರೆ.

ವಕೀಲರ ಸುರಕ್ಷತೆ: ಮಸೂದೆ ಮಂಡನೆಗೆ ಆಗ್ರಹ

ಬೆಂಗಳೂರು: ‘19ರಿಂದ ಆರಂಭವಾಗಲಿರುವ ವಿಧಾನಮಂಡಲ ಅಧಿವೇಶದಲ್ಲಿ ವಕೀಲರ ಸುರಕ್ಷತಾ ಕಾಯ್ದೆಯ ಜಾರಿಗೆ ಸಂಬಂಧಿಸಿದಂತೆ ಮಸೂದೆ ಮಂಡಿಸಿ ಅಂಗೀಕರಿಸದೇ ಹೋದಲ್ಲಿ ರಾಜ್ಯದಾದ್ಯಂತ ವಕೀಲರು ಉಗ್ರ ಹೋರಾಟ ನಡೆಸಲಿದ್ದಾರೆ’ ಎಂದು ಬೆಂಗಳೂರು ವಕೀಲರ ಸಂಘ ರಾಜ್ಯ ಸರ್ಕಾರಕ್ಕೆ ಎಚ್ಚರಿಕೆ ನೀಡಿದೆ.

ರಾಜ್ಯದ ವಿವಿಧ ಭಾಗಗಳಲ್ಲಿ ವಕೀಲರ ಮೇಲೆ ಪೊಲೀಸರು ಹಾಗೂ ರೌಡಿಗಳಿಂದ ನಡೆಯುತ್ತಿರುವ ಹಲ್ಲೆಗಳನ್ನು ಖಂಡಿಸಿ ಬೆಂಗಳೂರು ವಕೀಲರ ಸಂಘವು ಶುಕ್ರವಾರ ಸಿಟಿ ಸಿವಿಲ್ ಕೋರ್ಟ್ ಹಾಲ್ ಆವರಣದಲ್ಲಿ ಶುಕ್ರವಾರ ಮೌನ ಪ್ರತಿಭಟನೆ ನಡೆಸಿತು.

ಬೆಂಗಳೂರು ವಕೀಲರ ಸಂಘದ ಅಧ್ಯಕ್ಷ ವಿವೇಕ್ ಸುಬ್ಬಾರೆಡ್ಡಿ, ‘ಸರ್ಕಾರ ನಮ್ಮ ಮನವಿಗೆ ಕಿವಿಗೊಡದಿದ್ದರೆ ಉಗ್ರ ಹೋರಾಟ ನಡೆಸುತ್ತೇವೆ’ ಎಂದು ಎಚ್ಚರಿಸಿದರು.

ಕೆರೆ ಅಭಿವೃದ್ಧಿಗೆ ಎಸ್‌ಬಿಐ ನೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ತನ್ನ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ಕಾರ್ಯಕ್ರಮದ ಅಡಿಯಲ್ಲಿ ಕೋಲಾರ ಜಿಲ್ಲೆಯ ಏಳು ಪ್ರಮುಖ ಕೆರೆಗಳ ಪುನರುಜ್ಜೀವನವನ್ನು ಕೈಗೆತ್ತಿಕೊಂಡಿದೆ.

ಈ ಉದ್ದೇಶಕ್ಕಾಗಿ ₹ 4.26 ಕೋಟಿ ಮೊತ್ತವನ್ನು ಮಂಜೂರು ಮಾಡಲಾಗಿದೆ ಎಂದು ಎಸ್‌ಬಿಐ ಹೇಳಿದೆ.

‘ಈ ತೀರ್ಮಾನವು ಸುಸ್ಥಿರ ಅಭಿವೃದ್ಧಿ ವಿಚಾರದಲ್ಲಿ ಬ್ಯಾಂಕ್ ಹೊಂದಿರುವ ಬದ್ಧತೆಯನ್ನು ತೋರಿಸುತ್ತದೆ. ಬ್ಯಾಂಕ್‌ನ ಬೆಂಗಳೂರು ವೃತ್ತದ ಮುಖ್ಯ ಜನರಲ್ ಮ್ಯಾನೇಜರ್ ನಂದಕಿಶೋರ್ ಅವರು ₹ 4.26 ಕೋಟಿ ಮೊತ್ತ ಮಂಜೂರು ಮಾಡಿರುವುದಕ್ಕೆ ಸಂಬಂಧಿಸಿದ ಪತ್ರವನ್ನು ಕೋಲಾರ ಜಿಲ್ಲಾ ಪಂಚಾಯಿತಿ ಸಿಇಒ ಯುಕೇಶ್ ಕುಮಾರ್ ಅವರಿಗೆ ಹಸ್ತಾಂತರಿಸಿದ್ದಾರೆ’ ಎಂದು ಪ್ರಕಟಣೆ ಹೇಳಿದೆ.

ಎಸ್‌ಬಿಐ ಬೆಂಗಳೂರು ವೃತ್ತದ ಮುಖ್ಯ ಜನರಲ್ ಮ್ಯಾನೇಜರ್ ನಂದಕಿಶೋರ್ ಅವರು ₹ 4.26 ಕೋಟಿ ಮೊತ್ತದ ಚೆಕ್ ಅನ್ನು ಕೋಲಾರ ಜಿಲ್ಲಾ ಪಂಚಾಯಿತಿ ಸಿಇಒ ಯುಕೇಶ್ ಕುಮಾರ್ ಅವರಿಗೆ ಹಸ್ತಾಂತರಿಸಿದರು

ಪ್ಲಾಸ್ಟಿಕ್ ಚೀಲದಲ್ಲಿ ಮಹಿಳೆ ಮೃತದೇಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಂಗಾರಪೇಟೆ–ಎಸ್‌ಎಂವಿಟಿ (ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್) ರೈಲಿನಲ್ಲಿ ಸುಮಾರು 35 ವರ್ಷ ವಯಸ್ಸಿನ ಮಹಿಳೆಯೊಬ್ಬರ ಮೃತದೇಹ ಪತ್ತೆಯಾಗಿದ್ದು, ಕೊಲೆ ಶಂಕೆ ವ್ಯಕ್ತವಾಗಿದೆ.

‘ಡಿ. 6ರಂದು ಬಂಗಾರಪೇಟೆಯಿಂದ ಎಸ್‌ಎಂವಿಟಿ ರೈಲು ನಿಲ್ದಾಣಕ್ಕೆ ಬಂದಿದ್ದ ರೈಲಿನ ಸೀಟಿನ ಕೆಳಗೆ ಪ್ಲಾಸ್ಟಿಕ್ ಚೀಲವಿತ್ತು. ಅನುಮಾನ ಬಂದು ತೆರೆದು ನೋಡಿದಾಗ ಮಹಿಳೆ ಮೃತದೇಹ ಕಂಡಿತು. ದೇಹದ ಮೇಲೆ ಗಾಯದ ಗುರುತುಗಳಿರುವುದರಿಂದ ಕೊಲೆ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದು ರೈಲು ಪೊಲೀಸರು ಹೇಳಿದರು.

‘ಮಹಿಳೆಯ ಕತ್ತು ಹಿಸುಕಿ ಕೊಲೆ ಮಾಡಿರುವ ಆರೋಪಿಗಳು, ಮೃತದೇಹವನ್ನು ಚೀಲದಲ್ಲಿ ತುಂಬಿ ರೈಲಿನಲ್ಲಿಟ್ಟು ಪರಾರಿಯಾಗಿರುವುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಕೊಲೆಯಾಗಿರುವ ಮಹಿಳೆಯ ಹೆಸರು ಗೊತ್ತಾಗಿಲ್ಲ. ಬಲಗೈ ಮೇಲೆ ‘ಎನ್’ ಇಂಗ್ಲಿಷ್ ಅಕ್ಷರದ ಅಚ್ಚೆ ಇದೆ. ಮಹಿಳೆಯ ಫೋಟೊವನ್ನು ನಗರ ಹಾಗೂ ಹೊರ ಜಿಲ್ಲೆಗಳ ಠಾಣೆಗಳಿಗೆ ಕಳುಹಿಸಲಾಗಿದೆ’ ಎಂದು ತಿಳಿಸಿದರು.

ಚೀಲ ಗಮನಿಸಿದ್ದ ಮೆಕ್ಯಾನಿಕ್: ‘ರೈಲಿನ ಎ.ಸಿ ಮೆಕ್ಯಾನಿಕ್‌ವೊಬ್ಬರು ಕರ್ತವ್ಯ ನಿಮಿತ್ತ ರೈಲಿನಲ್ಲಿ ಪ್ರಯಾಣಿಸುತ್ತಿದ್ದರು. ಅವರು ಕುಳಿತಿದ್ದ ಸೀಟಿನ ಕೆಳಗೆ ಪ್ಲಾಸ್ಟಿಕ್ ಚೀಲವಿತ್ತು. ಯಾರೋ ಮರೆತಿರಬಹುದೆಂದು ಸುಮ್ಮನಾಗಿದ್ದರು’ ಎಂದು ಪೊಲೀಸರು ಹೇಳಿದರು.

‘ರೈಲು ಸಂಚಾರದ ಕೊನೆ ನಿಲ್ದಾಣ ಎಸ್‌ಎಂವಿಟಿ ಬಂದರೂ ಚೀಲವನ್ನು ಯಾರೂ ತೆಗೆದುಕೊಂಡು ಹೋಗಿರಲಿಲ್ಲ. ಆಗ ಮೆಕ್ಯಾನಿಕ್, ಕರ್ತವ್ಯ ದಲ್ಲಿದ್ದ ರೈಲಿನ ಸಿಬ್ಬಂದಿಗೆ ತಿಳಿಸಿ, ಚೀಲವನ್ನು ರೈಲಿನಿಂದ ಕೆಳಗೆ ಇಳಿಸಿ ಬಿಚ್ಚಿದ್ದರು. ಆಗ ಚೀಲದಲ್ಲಿ ಮೃತದೇಹ ಕಂಡಿತ್ತು. ಠಾಣೆಗೆ ಮಾಹಿತಿ ನೀಡಿದ್ದರು’ ಎಂದು ತಿಳಿಸಿದರು.

ಶೌಚಾಲಯ ಗೋಡೆ ಕೊರೆದು ಕಳ್ಳತನ

ಬೆಂಗಳೂರು: ಕೋರಮಂಗಲ 1ನೇ ಅಡ್ಡರಸ್ತೆಯಲ್ಲಿರುವ ನವರತ್ನ ಬ್ಯಾಂಕರ್ಸ್ ಮಳಿಗೆಯಲ್ಲಿ ಕಳ್ಳತನ ನಡೆದಿದ್ದು, ಈ ಬಗ್ಗೆ ಆಡುಗೋಡಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ‘ಡಿ. 7ರಂದು ರಾತ್ರಿ ಮಳಿಗೆಗೆ ನುಗ್ಗಿದ್ದ ಕಳ್ಳರು, ₹ 1 ಲಕ್ಷ ನಗದು ಹಾಗೂ ₹ 2 ಲಕ್ಷ ಮೌಲ್ಯದ ಚಿನ್ನಾಭರಣ ಕದ್ದೊಯ್ದಿದ್ದಾರೆ. ಮಳಿಗೆ ಮಾಲೀಕರ ಹೇಳಿಕೆ ಪಡೆದು ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸರು ಹೇಳಿದರು. ‘ಮಳಿಗೆಯ ಶೌಚಾಲಯದ ಗೋಡೆ ಕೊರೆದು ರಂಧ್ರ ಮಾಡಿರುವ ಆರೋಪಿಗಳು, ಅದರ ಮೂಲಕವೇ ಒಳಗೆ ನುಗ್ಗಿರುವುದು ಗೊತ್ತಾಗಿದೆ’ ಎಂದು ತಿಳಿಸಿದರು.

ಗೊರಗುಂಟೆಪಾಳ್ಯ– ಹೆಬ್ಬಾಳ ಮಾರ್ಗ: ಹೆಸರಿಗಷ್ಟೇ ಹೊರವರ್ತುಲ ರಸ್ತೆ • ಸರ್ವೀಸ್ ರಸ್ತೆ ಮರೀಚಿಕೆ • ಬಳಕೆಯಾಗದ ಕೆಳಸೇತುವೆ

ಮುತ್ಯಾಲಮ್ಮ ಜಂಕ್ಷನ್: ವಿಪರೀತ ದಟ್ಟಣೆಗೆ ಜನರು ಸುಸ್ತು

• ಸಂತೋಷ ಜಿಗಳಿಕೊಪ್ಪ

ಗೊರಗುಂಟೆಪಾಳ್ಯದಿಂದ ಹೆಬ್ಬಾಳಕ್ಕೆ ಸಂಪರ್ಕ ಕಲ್ಪಿಸುವ ಹೊರವರ್ತುಲ ರಸ್ತೆಯ ಮುತ್ಯಾಲಮ್ಮ ಜಂಕ್ಷನ್‌ನಲ್ಲಿ ಉಂಟಾದ ದಟ್ಟಣೆಯಲ್ಲಿ ಸಿಲುಕಿ ಸಾಲುಗಟ್ಟಿ ನಿಂತಿರುವ ವಾಹನಗಳು — ಪ್ರಜಾವಾಣಿ ಚಿತ್ರಗಳು: ಎಂ.ಎಸ್.ಮಂಜುನಾಥ್

ಬೆಂಗಳೂರು: ಗೊರಗುಂಟೆಪಾಳ್ಯದಿಂದ ಹೆಬ್ಬಾಳಕ್ಕೆ ಸಂಪರ್ಕ ಕಲ್ಪಿಸುವ ಎಂಇಎಸ್ ಹೊರವರ್ತುಲ ರಸ್ತೆಯಲ್ಲಿರುವ ಮುತ್ಯಾಲಮ್ಮ ಜಂಕ್ಷನ್, ವಾಹನಗಳ ವಿಪರೀತ ದಟ್ಟಣೆ ಸ್ಥಳವಾಗಿ ಮಾರ್ಪಟ್ಟಿದೆ. ಈ ಮಾರ್ಗದಲ್ಲಿ ಸಂಚರಿಸುವ ಜನ ಹಾಗೂ ಸ್ಥಳೀಯರು ನಿತ್ಯವೂ ಗೋಳು ಅನುಭವಿಸುತ್ತಿದ್ದು, ಸಮಸ್ಯೆ ಬಗೆಹರಿಸದ ಆಡಳಿತ ವರ್ಗದವರ ವಿರುದ್ಧ ಹಿಡಿಶಾಪ ಹಾಕುತ್ತಿದ್ದಾರೆ.

ಇಕ್ಕಟ್ಟಾದ ರಸ್ತೆ, ಸರ್ವೀಸ್ ರಸ್ತೆ ಮರೀಚಿಕೆ, ಪಾದಚಾರಿ ಮಾರ್ಗದ ಕೊರತೆ, ಅವೈಜ್ಞಾನಿಕ ಕಟ್ಟಡಗಳು ಹಾಗೂ ಸಂಚಾರ ಶಿಸ್ತು ಇಲ್ಲದಿರುವುದರಿಂದ ಜಂಕ್ಷನ್‌ನಲ್ಲಿ ದಟ್ಟಣೆ ಉಂಟಾಗುತ್ತಿದೆ. ಲಾರಿ, ಕ್ಯಾಂಟರ್, ಬಸ್, ಕಾರು, ಆಟೊ, ಬೈಕ್... ಹೀಗೆ ನಾನಾ ಪ್ರಕಾರದ ಲಕ್ಷಕ್ಕೂ ಹೆಚ್ಚು ವಾಹನಗಳು ಈ ಮಾರ್ಗದಲ್ಲಿ ನಿತ್ಯವೂ ಸಂಚರಿಸುತ್ತವೆ.

ಬೆಳಿಗ್ಗೆ ಹಾಗೂ ಸಂಜೆ ಜಂಕ್ಷನ್‌ನಲ್ಲಿ ವಿಪರೀತ ದಟ್ಟಣೆಯಾಗುತ್ತಿದ್ದು, ಈ ರಸ್ತೆಯಲ್ಲಿ ಸಂಚರಿಸುವ ವಾಹನಗಳು ಕಿ.ಮೀ.ಗಟ್ಟಲೇ ಸಾಲುಗಟ್ಟಿ ನಿಲ್ಲಬೇಕಾದ ಸ್ಥಿತಿ ಇದೆ. ಈ ಜಂಕ್ಷನ್‌ನಲ್ಲಿ ಸುಗಮ ಸಂಚಾರವೇ ಇಲ್ಲದಂತಾಗಿದ್ದು, ಸಮಸ್ಯೆ ಬಗೆಹರಿಸಬೇಕಾದ ಬಿಬಿಎಂಪಿ ಹಾಗೂ ಸಂಚಾರ ವಿಭಾಗದ ಹಿರಿಯ ಅಧಿಕಾರಿಗಳು ಮೌನವಾಗಿದ್ದಾರೆ. ಅಧಿಕಾರಿಗಳು, ಜನಪ್ರತಿನಿಧಿಗಳ ವಿರುದ್ಧ ಕಿಡಿಕಾರುತ್ತಿರುವ ಸ್ಥಳೀಯರು, 'ಸ್ಥಳ ಪರಿಶೀಲನೆ ನಡೆಸಿ ದಟ್ಟಣೆಯಿಂದ ಮುಕ್ತಿ ನೀಡಬೇಕು' ಎಂದು ಒತ್ತಾಯಿಸುತ್ತಿದ್ದಾರೆ.

ಹೆಸರಿಗಷ್ಟೇ ಹೊರವರ್ತುಲ ರಸ್ತೆ: ಬಹುತೇಕ ಹೊರವರ್ತುಲ ರಸ್ತೆಯಲ್ಲಿ ಸರ್ವೀಸ್ ರಸ್ತೆ ಹಾಗೂ ಸಂಚಾರ ಶಿಸ್ತು ಕ್ರಮ ಕೈಗೊಳ್ಳಲಾಗಿದೆ. ಆದರೆ, ಜಾಲಹಳ್ಳಿಗೆ ಹೊಂದಿಕೊಂಡಿರುವ ಮುತ್ಯಾಲಮ್ಮ ಜಂಕ್ಷನ್ ಮಾತ್ರ ಮೂಲ ಸೌಕರ್ಯಗಳಿಂದ ವಂಚಿತವಾಗಿದೆ.

'ಹೆಬ್ಬಾಳ, ಬಿಇಎಲ್ ಹಾಗೂ ಇತರೆ ಸ್ಥಳಗಳಲ್ಲಿ ಹೊರವರ್ತುಲ ರಸ್ತೆಯನ್ನು ಶಿಸ್ತುಬದ್ಧವಾಗಿ ಅಭಿವೃದ್ಧಿಪಡಿಸಲಾಗಿದೆ. ಈ ರಸ್ತೆಯಲ್ಲಿ ದಟ್ಟಣೆ ಸಮಸ್ಯೆ ತೀರಾ ಕಡಿಮೆ. ಅಭಿವೃದ್ಧಿ ಕಾಣದ ಮುತ್ಯಾಲಮ್ಮ ಜಂಕ್ಷನ್, ದಟ್ಟಣೆ ಸ್ಥಳವೆಂಬ ಅಪಖ್ಯಾತಿಗೆ ಗುರಿಯಾಗುತ್ತಿದೆ' ಎಂದು ಜಾಲಹಳ್ಳಿ ನಿವಾಸಿ ಎಸ್. ಪ್ರಕಾಶ್ ಹೇಳಿದರು.

'20 ವರ್ಷದಿಂದ ಜಾಲಹಳ್ಳಿಯಲ್ಲಿ ವಾಸವಿದ್ದೇವೆ. ರಾಷ್ಟ್ರೀಯ ಹೆದ್ದಾರಿ ಹಾದುಹೋಗಿರುವ ಗೊರಗುಂಟೆಪಾಳ್ಯದಿಂದ ಹೆಬ್ಬಾಳಕ್ಕೆ ಹೋಗುವ ವಾಹನಗಳು ಮುತ್ಯಾಲಮ್ಮ ಜಂಕ್ಷನ್ ಮೂಲಕವೇ ಹೋಗುತ್ತವೆ. ಹೊರವರ್ತುಲ ರಸ್ತೆಯಾದ ನಂತರ ಜಂಕ್ಷನ್ ಅಭಿವೃದ್ಧಿಯಾಗಬಹುದೆಂದು ಅಂದುಕೊಂಡಿದ್ದೆವು. ನಮ್ಮ ನಂಬಿಕೆ ಸುಳ್ಳಾಗಿದೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಪ್ರಗತಿ ಇಂಡಸ್ಟ್ರೀಸ್ ಎಂಟರ್‌ಪ್ರೈಸಸ್ ಮಳಿಗೆ ಚಂದ್ರಹಾಸ್, 'ಇಲ್ಲಿ 15 ವರ್ಷದಿಂದ ಮಳಿಗೆ ನಡೆಸುತ್ತಿದ್ದೇನೆ. ಸಮಸ್ಯೆಗಳ ಆಗರವಾಗಿರುವ ಜಂಕ್ಷನ್‌ನಿಂದಾಗಿ ದಟ್ಟಣೆ ಉಂಟಾಗುತ್ತಿದೆ. ದೂಳು ಹಾಗೂ ವಾಹನಗಳ ಹೊಗೆಯಿಂದ ಸ್ಥಳೀಯರು ಆರೋಗ್ಯ ಸಮಸ್ಯೆ ಎದುರಿಸುತ್ತಿದ್ದಾರೆ. ನಿತ್ಯವೂ ಮಳಿಗೆಯಲ್ಲಿ ಮಾಸ್ಕ್ ಧರಿಸಿಯೇ ವ್ಯಾಪಾರ ಮಾಡಬೇಕಾದ ಸ್ಥಿತಿ ಇದೆ' ಎಂದರು.

ಸರ್ವೀಸ್ ರಸ್ತೆ ಕೊರತೆ, ಬಳಕೆಯಾಗದ ಕೆಳಸೇತುವೆ: ಮುತ್ಯಾಲಮ್ಮ ಜಂಕ್ಷನ್‌ಗೆ ಹೊಂದಿಕೊಂಡು ರೈಲು ಹಳಿ ಹಾದು ಹೋಗಿದ್ದು, ಅದರ ಮೇಲ್ಭಾಗದಲ್ಲಿ ಎರಡು ಪಥಗಳ ಮೇಲ್ಸೇತುವೆ ನಿರ್ಮಾಣ ಮಾಡಲಾಗಿದೆ. ಸ್ಥಳೀಯ ವಾಹನಗಳ ಸಂಚಾರಕ್ಕಾಗಿ ಕೆಳಸೇತುವೆಯನ್ನೂ ನಿರ್ಮಿಸಲಾಗಿದೆ. ಆದರೆ, ಸೂಕ್ತ ಸರ್ವೀಸ್ ರಸ್ತೆ ಇಲ್ಲದಿರುವುದರಿಂದ ಕೆಳಸೇತುವೆ ಬಳಕೆ ಆಗುತ್ತಿಲ್ಲ.

'ಬಿಇಎಲ್ ವೃತ್ತದಿಂದ ಮುತ್ಯಾಲಮ್ಮ ಜಂಕ್ಷನ್‌ವರೆಗಿನ ಅಕ್ಕ-ಪಕ್ಕದಲ್ಲಿ ಅಂಗಡಿಗಳು ಹಾಗೂ ಮನೆಗಳಿವೆ. ಇಲ್ಲಿ ಯಾವುದೇ ಸರ್ವೀಸ್ ರಸ್ತೆ ಇಲ್ಲ. ಹೆಬ್ಬಾಳದಿಂದ ಬರುವ ವಾಹನಗಳು, ಮುಖ್ಯರಸ್ತೆಯಲ್ಲೇ ಬಲ ತಿರುವು ಪಡೆದು ಜಾಲಹಳ್ಳಿ, ಎಚ್‌ಎಂಟಿ ಹಾಗೂ ಪೀಣ್ಯದತ್ತ ಹೋಗುತ್ತವೆ. ಈ ಸಂದರ್ಭದಲ್ಲಿ ಗೊರಗುಂಟೆಪಾಳ್ಯದಿಂದ ಬರುವ ವಾಹನಗಳನ್ನು ರೈಲ್ವೆ ಮೇಲ್ಸೇತುವೆ ಮೇಲೆ ತಡೆದು ನಿಲ್ಲಿಸಲಾಗುತ್ತದೆ. ಗೊರಗುಂಟೆಪಾಳ್ಯದಿಂದ ಬರುವ ವಾಹನಗಳು ಬಿಇಎಲ್ ವೃತ್ತದತ್ತ ಸಂಚರಿಸುತ್ತದೆ. ಆಗ, ಎದುರಿಗೆ ಬರುವ ವಾಹನಗಳನ್ನು ಪೊಲೀಸರು ತಡೆದು ನಿಲ್ಲಿಸುತ್ತಾರೆ. ಇಂಥ ಸಂದರ್ಭದಲ್ಲಿ 1 ಕಿ.ಮೀ.ನಷ್ಟು ವಾಹನಗಳು ಸಾಲುಗಟ್ಟಿ ನಿಲ್ಲುತ್ತವೆ' ಎಂದು ಸ್ಥಳೀಯರು ತಿಳಿಸಿದರು.

'ಕರ್ನಾಟಕ ಫ್ಯಾಬ್ರಿಕೇಷನ್ ಕಾರ್ಖಾನೆ ಎದುರು 4 ಅಡಿಯಷ್ಟು ಮಾತ್ರ ಸರ್ವೀಸ್ ರಸ್ತೆ ಇದೆ. ಇದರ ಸಮೀಪದಲ್ಲಿ ಕೆಳಸೇತುವೆ ಇದೆ. ಸರ್ವೀಸ್ ರಸ್ತೆ ಇಕ್ಕಟ್ಟಾಗಿರುವುದರಿಂದ ಬೈಕ್ ಹೊರತುಪಡಿಸಿ ಬೇರೆ ವಾಹನಗಳು ಹೋಗುವುದಿಲ್ಲ. ಹೀಗಾಗಿ, ಕೆಳಸೇತುವೆ ಬಳಕೆಯಾಗುತ್ತಿಲ್ಲ. ಜೊತೆಗೆ, ಉಪಯೋಗವಾಗದ ರೀತಿಯಲ್ಲಿ ಇನ್ನೊಂದು ಬದಿಯಲ್ಲಿ ಸರ್ವೀಸ್ ರಸ್ತೆ ಅಭಿವೃದ್ಧಿಪಡಿಸಲಾಗಿದೆ. ಈ ರಸ್ತೆ ವಾಹನಗಳ ಪಾರ್ಕಿಂಗ್‌ಗೆ ಸೀಮಿತವಾಗಿದೆ' ಎಂದು ಹೇಳಿದರು.

'ರೆನೆಸಾನ್ಸ್ ರಿಸರ್ವ್ ಅಪಾರ್ಟ್‌ಮೆಂಟ್ ಸಮುಚ್ಚಯ ಎದುರು ಸರ್ವೀಸ್ ರಸ್ತೆ ನಿರ್ಮಿಸಬೇಕಿದೆ. ಅದರ ಪಕ್ಕದಲ್ಲೇ ಇರುವ ಕರ್ನಾಟಕ ಫ್ಯಾಬ್ರಿಕೇಷನ್ ಕಾರ್ಖಾನೆ ಬಂದ್ ಆಗಿದ್ದು, ಅದನ್ನು ಸರ್ಕಾರ ಸ್ವಾಧೀನಪಡಿಸಿಕೊಂಡಿರುವ ಮಾಹಿತಿ ಇದೆ. ಎರಡೂ ಕಡೆಯಲ್ಲಿ ಸರ್ವೀಸ್ ರಸ್ತೆ ವಿಸ್ತರಣೆ ಮಾಡಿ, ಜಾಲಹಳ್ಳಿಯತ್ತ ಹೋಗುವ ವಾಹನಗಳನ್ನು ಕೆಳಸೇತುವೆ ಮೂಲಕ ಮುಂದಕ್ಕೆ ಕಳುಹಿಸಿದರೆ ದಟ್ಟಣೆ ಕಡಿಮೆಯಾಗಲಿದೆ' ಎಂದು ತಿಳಿಸಿದರು.

'ವ್ಯಾಪಾರ ಲೆಕ್ಕಾಚಾರ: ಮೇಲ್ಸೇತುವೆಯಲ್ಲಿ ವಾಹನ ಬಂದ್'

'ಸರಕು ಸಾಗಣೆ ಸೇರಿದಂತೆ ಭಾರಿ ವಾಹನಗಳು ಮುತ್ಯಾಲಮ್ಮ ಜಂಕ್ಷನ್ ರೈಲ್ವೆ ಮೇಲ್ಸೇತುವೆ ಮೂಲಕ ಸಂಚರಿಸುತ್ತವೆ. ಮಾಲೀಕರ ವ್ಯಾಪಾರ ಲೆಕ್ಕಚಾರದಿಂದಾಗಿ ಮೇಲ್ಸೇತುವೆ ಮೇಲೆಯೇ ವಾಹನಗಳು ಎಂಜಿನ್ ಆಫ್ ಆಗಿ ನಿಲ್ಲುತ್ತಿದ್ದು, ಅದರ ಹಿಂದೆ ಇತರೆ ವಾಹನಗಳು ಸಾಲುಗಟ್ಟಿ ನಿಂತು ಕೆಲ ಬಾರಿ ದಟ್ಟಣೆ ಉಂಟಾಗುತ್ತಿದೆ' ಎಂದು ಸಂಚಾರ ಪೊಲೀಸರು ಹೇಳಿದರು.

'ಮಾಲೀಕರು, ತಮ್ಮ ವಾಹನಗಳಿಗೆ ನಿಗದಿತ ಸ್ಥಳದಿಂದ ಬೆಂಗಳೂರಿಗೆ ತಲುಪಲು ಅಗತ್ಯವಿರುವಷ್ಟು ಮಾತ್ರ ಡೀಸೆಲ್ ಹಾಕಿಸುತ್ತಾರೆ. ಹೆಬ್ಬಾಳ ಕಡೆಯಿಂದ ಗೊರಗುಂಟೆಪಾಳ್ಯ, ಯಶವಂತಪುರದ ಆರ್‌ಎಂಸಿ ಯಾರ್ಡ್ ಕಡೆ ಹೋಗುವ ವಾಹನಗಳು ಮುತ್ಯಾಲಮ್ಮ ಜಂಕ್ಷನ್ ಮೂಲಕ ಸಾಗುತ್ತವೆ. ಇಂತ ವಾಹನಗಳಲ್ಲಿ ಡೀಸೆಲ್ ತೀರಾ ಕಡಿಮೆ ಇರುತ್ತದೆ. ಮೇಲ್ಸೇತುವೆ ಏರುವಾಗ ಟ್ಯಾಂಕ್‌ನಲ್ಲಿದ್ದ ಡೀಸೆಲ್ ಒಂದು ಬದಿ ಹೋಗುತ್ತದೆ. ತಾಂತ್ರಿಕ ಕಾರಣಗಳಿಂದ ಎಂಜಿನ್‌ಗೆ ತೈಲ ಪೂರೈಕೆಯಾಗದೇ ಎಂಜಿನ್ ಬಂದ್ ಆಗಿ, ನಡುರಸ್ತೆಯಲ್ಲೇ ವಾಹನ ನಿಲ್ಲುತ್ತದೆ. ಬಳಿಕ, ಅದನ್ನು ತಳ್ಳಬೇಕಾದ ಸ್ಥಿತಿ ಬರುತ್ತದೆ. ಅಷ್ಟರಲ್ಲಿ ರಸ್ತೆಯುದ್ದಕ್ಕೂ ವಾಹನಗಳು ಸಾಲುಗಟ್ಟಿ ನಿಂತಿರುತ್ತವೆ' ಎಂದು ಪೊಲೀಸರು ತಿಳಿಸಿದರು.

'ರಸ್ತೆ ದಾಟಲು ಭಯ'

'ಜಂಕ್ಷನ್ ಬಳಿಯೇ ಶಾಲೆ-ಕಾಲೇಜುಗಳಿದ್ದು, ಸಾವಿರಾರು ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ. ಶಾಲೆ ಆರಂಭ ಹಾಗೂ ಬಿಡುವ ಸಮಯದಲ್ಲಿ ವಿದ್ಯಾರ್ಥಿಗಳು ಭಯದಲ್ಲೇ ಜಂಕ್ಷನ್ ರಸ್ತೆ ದಾಟುತ್ತಿದ್ದಾರೆ. ರಾತ್ರಿ ವೇಳೆ ರಸ್ತೆ ದಾಟುವ ಸಂದರ್ಭದಲ್ಲೇ ಹಲವು ಅಪಘಾತಗಳೂ ಸಂಭವಿಸುತ್ತಿವೆ' ಎಂದು ಸ್ಥಳೀಯರು ದೂರಿದರು.

ಸಂಚಾರ ಕಿರಿಕಿರಿ; ಸೂಚಿಸಿ ಪರಿಹಾರ

ಸಂಚಾರ ಕಿರಿಕಿರಿ ಹಾಗೂ ದಟ್ಟಣೆಯಲ್ಲಿ ಸಿಲುಕಿ ಗೋಳು ಅನುಭವಿಸುತ್ತಿದ್ದೀರಾ? ಹಾಗಿದ್ದರೆ ನಿಮ್ಮ ಸಮಸ್ಯೆ ಬರೆದು ಕಳುಹಿಸಿ. ಅದಕ್ಕೆ ಕ್ರಿಯಾತ್ಮಕ ಪರಿಹಾರವಿದ್ದಲ್ಲಿ ಅದನ್ನೂ ಸೂಚಿಸಿ. ನಿಮ್ಮ ಬರಹ 50 ಪದಗಳ ಮಿತಿಯಲ್ಲಿರಲಿ. ಯಾವ ಸ್ಥಳದಲ್ಲಿ ಸಮಸ್ಯೆ ಇದೆ ಎನ್ನುವುದನ್ನು ಸ್ಪಷ್ಟವಾಗಿ ನಮೂದಿಸಿ. ನಿಮ್ಮ ಹೆಸರು, ಪೂರ್ಣ ವಿಳಾಸವೂ ಇರಲಿ.

ವಾಟ್ಸ್‌ಆ್ಯಪ್ ನಂಬರ್:

9606038256

ಮುತ್ಯಾಲಮ್ಮ ಜಂಕ್ಷನ್‌ನಲ್ಲಿ ಸರ್ವೀಸ್ ರಸ್ತೆ ಕೊರತೆಯಿಂದ ಬಳಕೆಯಾಗದ ರೈಲ್ವೆ ಕೆಳಸೇತುವೆ – ಪ್ರಜಾವಾಣಿ ಚಿತ್ರ

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Overseas

Wanted
Immediately required house help lady care taker for a couple and a small child settled at Singapore. Must know cooking both veg and non veg Salary 30k per month with accommodation and food, age should be below 50 yrs. If no passport, we will support and guide to get it. Interested may contact : +91 9741913516

General

'EXCELLENT OPPORTUNITY from AAA rated MNC to work from home & earn more than a Lakh with travel abroad opportunity, Age 25- 75 Contact: 7348847923'

Marketing & Sales

URGENTLY REQUIRED Sales Executives For An Established UPVC Products For Bangalore Contact 7022723432

Multiple Vacancy

REQUIRED TEAMLEADER, Telecaller, Field Executive For Bank Loan collection. Direct recruitment to company. 9620206756, 9620200756.

Part-Time Jobs

PART TIME Job SMS Typing work Laptop, Sellphone, Simcard Company Provide (Reg. 1099) 9389525534/ 8433101939

Receptionist/ Secretary

LOOKING FOR female candidate who is experience in Govt e - tender of facility management services at Mysore road Bangalore Contact 9739923651

Teachers/ Professors

REQUIRED KANNADA Teacher for High school classes, contact Kenmore School, near Lalbagh west Gate. Salary 12k to 15k. contact kenmoreschool@gmail.com or whatsapp to 9901501185

BUSINESS

Business to Business

Business

NRI INVESTMENT and Finance Introducing new purchase finance for Buying Houses, Flats, Plots upto 100% Loan Available on Low Interest for Low & Middle Income Group Contact- 7411265189

MORE Classifieds IN SUPPLEMENT

Business Offers

Finance

LOOKING FOR A FINANCER For Our Coming Tender Project Which Takes 6 Months Time and Will Give You Handsome Interest For The Respective Period. For More Information Please Call: 7338320587.

GREEN HERBAL 2 Lakh Investment Required Daily Collection Contact:- 8892501007/ 9606701007

PERSONAL

Announcements

CERTIFICATE OF Origin For Exporters/ CHA's C&F's- Call 8089696173/ 8089696172 The South Indian Chamber of Commerce and Industry™ (SICCI™), ICD Whitefield, Bangalore

Change of Name

CHANGE OF NAME
I, **David Rajesh. A,** R/at No. 27, Pillappa Block, Jayamahal, J.C. Nagar, Bangalore North, Bangalore - 560 006, have changed my name to **Alexander Rajesh Kumar** vide affidavit dated: 09.12.2022 before Notary L. Gopalakrishna, Bangalore. Henceforth, I shall be known as **Alexander Rajesh Kumar only.**

RESHAMA BELIM, Wife/o, 14827849W, HAV/MT, BELIM IMARAN KHAN REMAN KHAN, Vill- Nandarkhi, Shil, Mangrol, Junagadh, Gujarat changed name RESHAMA BELIM to BELIM RESHMA IMARANKHAN, 08/12/2022 Notary K.V. Mani Bangalore

I, DILIP CHANDRA KUMAR, R/a. #17, New 240, 6th Cross, Saraswathipura, Nandini Layout, Bengaluru-560096, have changed my name to DILIP CHANDRA KUMAR. S vide affidavit dated 09.12.2022 before notary K. Venkateshan Bangalore.

14827849W, HAV/MT, BELIM IMARAN KHAN REMAN KHAN, Vill- Nandarkhi, Shil, Mangrol, Junagadh, Gujarat, changed daughter's name ALIYA to BELIM ALIYA IMARAN, 08/12/2022, Notary K.V. Mani Bangalore

I,SOLOMON JEBASELVAN ARUL SELVAN, changed_my name_to SOLOMON JEBASELVAN ARUL dated: 02-12-2022 Sworn before_notary H.S.Sakalesh Aradhya, Bengaluru.

I,RADHIKA CHAKRABORTY, changed my name-to RADHIKA CHAKRABARTI dated: 03-12-2022 Sworn before notary H.S.Sakalesh Aradhya, Bengaluru.

I, SHEETAL, changed-my name-to SHEETAL SHRINIVAS NAIK dated: 02-12-2022. Sworn_before notary H.S.Sakalesh Aradhya, Bengaluru.

JC682066X, SUB/ASH, VENKATESWARLU BATTINI, Vill- Chollaveedu, Giddalur, Prakasam, Andhra Pradesh, changed daughter's name SUPRITI to BATTINI VENKATA SUPRITI, 08/12/2022, Notary K.V. Mani, Bangalore

DH DECCAN HERALD
ಪ್ರಜಾವಾಣಿ

BOOK YOUR CLASSIFIEDS ADVERTISEMENT

DECCAN HERALD & PRAJAVANI
CLASSIFIEDS PACKAGE RATES

Per word	Ordinary	Bold	Ordinary Semi Display	Bold Semi Display
	80	125	95	150

CD Per Sqcm	Single Col	Double Col	Multi Col
	535	500	515

SPECIAL OFFER					
PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details Contact:
Ph: 080- 45557160 | 163 | 164 |
9845114560 | 9731810277 | 9901641752 | 9886213331
dhclassifieds@deccanherald.co.in www.dhclassifieds.com
conditions apply*

ನಟ ಅನಿರುದ್ಧ ಬಹಿಷ್ಕಾರ: ಇಂದು ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಟ ಅನಿರುದ್ಧ ಅವರನ್ನು ಕಿರುತೆರೆಯಿಂದ ತಾತ್ಕಾಲಿಕವಾಗಿ ಬಹಿಷ್ಕರಿಸಲು ಕಿರುತೆರೆ ನಿರ್ಮಾಪಕರ ಸಂಘವು ಮಾಡಿರುವ ಆಗ್ರಹಕ್ಕೆ ಸಂಬಂಧಿಸಿದಂತೆ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯು ಶನಿವಾರ (ಡಿ.10) ಸಂಧಾನ ಸಭೆ ಕರೆದಿದೆ.

'ಜೊತೆ ಜೊತೆಯಲಿ' ಧಾರಾವಾಹಿಯಿಂದ ಹೊರಬಿದ್ದ ಬಳಿಕ ಅನಿರುದ್ಧ ಅವರು ಇತ್ತೀಚೆಗಷ್ಟೇ ಎಸ್. ನಾರಾಯಣ್ ನಿರ್ದೇಶನದ ಹೊಸ ಧಾರಾವಾಹಿ 'ಸೂರ್ಯವಂಶ'ಕ್ಕೆ ಪ್ರವೇಶಿಸಿದ್ದರು. ಇದರ ಬೆನ್ನಲ್ಲೇ ಅವರಿಗೆ ಮತ್ತೊಮ್ಮೆ ಬಹಿಷ್ಕಾರದ ಬಿಸಿಯನ್ನು ಸಂಘವು ಮುಟ್ಟಿಸಿತ್ತು. ಅನಿರುದ್ಧ ಅವರನ್ನು ಬಹಿಷ್ಕರಿಸಲು ಆಗ್ರಹಿಸಿ ಕಿರುತೆರೆ ನಿರ್ಮಾಪಕರ ಸಂಘವು ನಟ, ನಿರ್ಮಾಪಕ ಎಸ್. ನಾರಾಯಣ್ ಅವರಿಗೆ ಮನವಿ ನೀಡಿದೆ. ಈ ನಡೆಯನ್ನು ಪ್ರಶ್ನಿಸಿ ಅನಿರುದ್ಧ ಅವರು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಭಾ.ಮ.ಹರೀಶ್ ಅವರಿಗೆ ಪತ್ರವೊಂದನ್ನು ಬರೆದಿದ್ದಾರೆ.

ಈ ಎಲ್ಲ ಘಟನೆಗಳ ಬೆನ್ನಲ್ಲೇ ಭಾ.ಮ.ಹರೀಶ್ ಅವರು ಶುಕ್ರವಾರ ಸಂಜೆ ನಿರ್ಮಾಪಕರ ಸಂಘದ ಸಭೆ ಕರೆದಿದ್ದರು. ಸಭೆಗೆ ಅನಿರುದ್ಧ ಅವರೂ ಆಗಮಿಸಿದ್ದರು. ಆದರೆ ನಿರ್ಮಾಪಕರ ಸಂಘದ ಪದಾಧಿಕಾರಿಗಳು ಗೈರಾಗಿದ್ದ ಕಾರಣ ಶನಿವಾರ ಸಭೆ ನಡೆಸಲು ತೀರ್ಮಾನಿಸಲಾಯಿತು.

ಈ ವೇಳೆ ಸುದ್ದಿಗಾರರ ಜೊತೆ ಮಾತನಾಡಿದ ಅನಿರುದ್ಧ ಅವರು, 'ಜೊತೆ ಜೊತೆಯಲಿ ಧಾರಾವಾಹಿ ವಿವಾದ ಆದಾಗ ನನ್ನನ್ನು ಕರೆಸಿ ಮಾತನಾಡಿದ್ದರೆ ಎಲ್ಲವೂ ಬಗೆಹರಿಯುತ್ತಿತ್ತು. ಆ ಧಾರಾವಾಹಿ ನಿರ್ದೇಶಕ ಆರೂರು ಜಗದೀಶ್ ಅವರಿಂದ ನಾನು ಹಲವು ಬಾರಿ ಸ್ಪಷ್ಟನೆ ಕೇಳಿದ್ದೆ. ಆದರೆ ಸೂಕ್ತ ಉತ್ತರ ದೊರೆಯಲಿಲ್ಲ. ನನ್ನ ಮೇಲೆ ಸಾಕಷ್ಟು ಆರೋಪಗಳನ್ನು ಅವರು ಮಾಡಿದ್ದರು. ಹೌದು, ಚಿತ್ರೀಕರಣದ ಸ್ಥಳದಲ್ಲಿ ಸರಿಯಾದ ಶೌಚಾಲಯ ವ್ಯವಸ್ಥೆ ಇರಲಿಲ್ಲ. ಮಹಿಳಾ ಕಲಾವಿದರಿಗೂ ಇದರಿಂದ ಸಮಸ್ಯೆ ಆಗಿತ್ತು. ಹೀಗಾಗಿ ಕ್ಯಾರವಾನ್ ಕೇಳಿದ್ದೆ. ನಾನು ಹಠ ಮಾಡಿದ ಮೇಲೆ ಕ್ಯಾರವಾನ್ ತರಿಸಿದರು. ದುರಂತ ಏನೆಂದರೆ, ನಾನು ಹೊಸ ಧಾರಾವಾಹಿ ಮಾಡುತ್ತಿದ್ದೇನೆ ಎಂದಾಗ ಇವರನ್ನು ಹಾಕಿಕೊಳ್ಳಬೇಡಿ ಎಂದು ನಿರ್ಮಾಪಕರಿಗೆ, ಉದಯ ವಾಹಿನಿಗೆ ಹಲವರು ಹೇಳಿದ್ದಾರೆ. ಇದು ಯಾವ ಮನೋಭಾವ?

'ಯಾರು ಏನೇ ಹೇಳಿದರೂ ಹೊಸ ಧಾರಾವಾಹಿ ಮಾಡುತ್ತಿದ್ದೇವೆ. ನಮಗೆ ನೀವು ಬೇಕು' ಎಂದು ಎಸ್. ನಾರಾಯಣ್ ಅವರು ನನಗೆ ಭರವಸೆ ನೀಡಿದ್ದಾರೆ' ಎಂದರು.

ಅನಿರುದ್ಧ ಪತ್ರದಲ್ಲೇನಿದೆ?



ಅನಿರುದ್ಧ

'ಎರಡು ವರ್ಷಗಳ ಕಾಲ ನನ್ನನ್ನು ಕಿರುತೆರೆಯಿಂದ ಬ್ಯಾನ್ ಮಾಡುವುದಾಗಿ ನಿರ್ಮಾಪಕರ ಸಂಘದವರು ಹೇಳಿದರು. 'ಜೊತೆ ಜೊತೆಯಲಿ' ಧಾರಾವಾಹಿಯಲ್ಲಿ ಮುಖ್ಯ ಪಾತ್ರಧಾರಿಯಾಗಿದ್ದ ನನ್ನ ಅಭಿಪ್ರಾಯವನ್ನು ಕೇಳದೆ ಕಿರುತೆರೆಯ ನಿರ್ಮಾಪಕರ ಸಂಘವು ಏಕಪಕ್ಷೀಯವಾಗಿ ನನ್ನ ವಿರುದ್ಧ ಇಂತಹ ಬಹಿಷ್ಕಾರದ ನಿರ್ಬಂಧ ಹೇರಿದ್ದು, ನನ್ನ ತೇಜೋವಧೆ ಮಾಡಿದ್ದು ಎಷ್ಟರ ಮಟ್ಟಿಗೆ ಸಮಂಜಸ? ನಾನೀಗ ಪುನಃ ಹೊಸದೊಂದು ಧಾರಾವಾಹಿಯಲ್ಲಿ ನಟಿಸಲಿರುವ ವಿಷಯ ತಿಳಿದ ಕೂಡಲೇ, ಕಿರುತೆರೆಯ ನಿರ್ಮಾಪಕರ ಸಂಘವು ನನಗೆ ಬಹಿಷ್ಕರಿಸುತ್ತಿರುವುದಾಗಿ ಹೇಳಿ ನನ್ನ ವೃತ್ತಿ ಜೀವನಕ್ಕೆ ಅನಗತ್ಯವಾಗಿ ಕಿರುಕುಳ ನೀಡುತ್ತಿದೆ' ಎಂದು ಅನಿರುದ್ಧ ಅವರು ಚಲನಚಿತ್ರ ವಾಣಿಜ್ಯ ಮಂಡಳಿಗೆ ಬರೆದ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಬಿಡುಗಡೆ ಕೋರಿದ ಕುಲಸಚಿವ

ತುಮಕೂರು: ತುಮಕೂರು ವಿಶ್ವವಿದ್ಯಾಲಯದ ಕುಲಸಚಿವ ಪ್ರೊ.ಕೆ. ಶಿವಚಿತ್ತಪ್ಪ ತಮ್ಮ ಹುದ್ದೆಯಿಂದ ಬಿಡುಗಡೆ ಮಾಡುವಂತೆ ಶುಕ್ರವಾರ ಕೇಳಿಕೊಂಡಿದ್ದಾರೆ.

ಕುಲಸಚಿವ ಸ್ಥಾನಕ್ಕೆ ಕೊರಟಗೆರೆ ತಹಶೀಲ್ದಾರ್ ಅವರನ್ನು ಸರ್ಕಾರ ವರ್ಗಾವಣೆ ಮಾಡಿತ್ತು. ತಹಶೀಲ್ದಾರ್ ವಿ.ವಿಗೆ ಬಂದು ಪಟ್ಟಾ, ಪಹಣಿ ಕೊಡುತ್ತಾರೆಯೆ? ಎಂದು ಹೇಳಿದ್ದು ವಿವಾದಕ್ಕೆ ಕಾರಣವಾಗಿತ್ತು. ಈ ಬಗ್ಗೆ ಸಾರ್ವಜನಿಕ ವಲಯದಲ್ಲಿ ಸಾಕಷ್ಟು ವಿರೋಧ ವ್ಯಕ್ತವಾಗಿತ್ತು.

'ಸಂಜೆ ಆರು ಗಂಟೆಗೆ ಬಿಡುಗಡೆ ಮಾಡುವಂತೆ ಕೋರಿಕೆ ಸಲ್ಲಿಸಿದ್ದಾರೆ. ಇನ್ನಷ್ಟೇ ಸರ್ಕಾರಕ್ಕೆ ಕಳುಹಿಸಿಕೊಡಬೇಕಿದೆ' ಎಂದು ಕುಲಪತಿ ಪ್ರೊ. ವೆಂಕಟೇಶ್ವರಲು ಸ್ಪಷ್ಟಪಡಿಸಿದರು.

ನಯಿದಾ ವಿರುದ್ಧದ ಹೇಳಿಕೆಗೆ ಖಂಡನೆ (ಬೆಂಗಳೂರು ವರದಿ): ಕೆಎಎಸ್ ಅಧಿಕಾರಿ ನಯಿದಾ ಜಮ್‌ಜಮ್ ಅವರ ವಿರುದ್ಧ ಪ್ರೊ.ಶಿವಚಿತ್ತಪ್ಪ ಅವರು ನೀಡಿದ ಅನುಚಿತ ಹೇಳಿಕೆಯನ್ನು ಕರ್ನಾಟಕ ಆಡಳಿತ ಸೇವೆ ಅಧಿಕಾರಿಗಳ ಸಂಘ ಖಂಡಿಸಿದೆ.

ಗೌರವಧನ ಹೆಚ್ಚಿಸಲು ಆಗ್ರಹ

ನಗರದ ಸ್ವಾತಂತ್ರ್ಯ ಉದ್ಯಾನವನದಲ್ಲಿ ಶುಕ್ರವಾರ ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ಮಟ್ಟದ ಮುಖ್ಯ ಪುಸ್ತಕ ಬರಹಗಾರರ ಮತ್ತು ಸ್ಥಳೀಯ ಸಮುದಾಯದ ಸಂಪನ್ಮೂಲ ವ್ಯಕ್ತಿಗಳು ಮಹಾ ಒಕ್ಕೂಟದ ಸದಸ್ಯರು ಗೌರವಧನ ಹೆಚ್ಚಿಸಲು ಆಗ್ರಹಿಸಿ ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ

ಪಿಇಎಸ್: ವಿಜ್ಞಾನ ಮೇಳದಲ್ಲಿ ಪ್ರೊ.ಸಿ.ಎನ್.ಆರ್.ರಾವ್ ಕರೆ

'ಕಲ್ಪನೆಗಳೇ ಸಾಧನೆಗೆ ಭದ್ರ ಬುನಾದಿ'

ಪ್ರಜಾವಾಣಿ ವಾರ್ತೆ

ನಗರದ ಪಿಇಎಸ್ ವಿಶ್ವವಿದ್ಯಾಲಯದಲ್ಲಿ ಶುಕ್ರವಾರ ಆರಂಭವಾದ 'ವಿಜ್ಞಾನ ಮೇಳ'ದಲ್ಲಿ ಶಾಲಾ ಮಕ್ಕಳ ಪ್ರಯೋಗಗಳನ್ನು ವಿಶ್ವವಿದ್ಯಾಲಯದ ಕುಲಾಧಿಪತಿ ಪ್ರೊ.ಎಂ.ಆರ್. ದೊರೆಸ್ವಾಮಿ, ಸ್ವಾಮಿ ವಿವೇಕಾನಂದ ಯೋಗ ಅನುಸಂಧಾನ ಸಂಸ್ಥಾನ ವಿಶ್ವವಿದ್ಯಾಲಯ ಕುಲಾಧಿಪತಿ ಪ್ರೊ.ಎಚ್.ಆರ್. ನಾಗೇಂದ್ರ ಹಾಗೂ ಕುಲಪತಿ ಜೆ.ಸೂರ್ಯಪ್ರಸಾದ್ ವೀಕ್ಷಿಸಿದರು – ಪ್ರಜಾವಾಣಿ ಚಿತ್ರ

ಬೆಂಗಳೂರು: 'ಪ್ರಪಂಚ ಅದ್ಭುತ ಕಲ್ಪನೆಗಳಿಂದ ಕೂಡಿದೆ. ಕಲ್ಪನೆಗಳೇ ಸಾಧನೆಗೆ ಭದ್ರ ಬುನಾದಿ' ಎಂದು ವಿಜ್ಞಾನಿ ಪ್ರೊ.ಸಿ.ಎನ್.ಆರ್. ರಾವ್ ಸಲಹೆ ನೀಡಿದರು.

ಪಿಇಎಸ್ ವಿಶ್ವವಿದ್ಯಾಲಯದಲ್ಲಿ ಶಾಲಾ ಶಿಕ್ಷಣ ಸಾಕ್ಷರತಾ ಇಲಾಖೆಯ ಸಹಯೋಗದಲ್ಲಿ ಶುಕ್ರವಾರ ಆರಂಭವಾದ 'ವಿಜ್ಞಾನ ಮೇಳ'ವನ್ನು ವರ್ಚುವಲ್ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

'ಕಲ್ಪನೆಗಳ ಜತೆಗೆ ಸಾಧನೆಯ ಹಾದಿಯಲ್ಲಿ ಸಾಗಬೇಕು. ಆಗ ನಿರೀಕ್ಷಿತ ಯಶಸ್ಸು ತರಲಿದೆ. ಅಡ್ಡದಾರಿಯಲ್ಲಿ ಸಾಗಿದರೆ ಅಲ್ಪ ಯಶಸ್ಸು ಮಾತ್ರ. ವಿದ್ಯಾರ್ಥಿಗಳಲ್ಲಿ ಉತ್ತಮ ಆಲೋಚನೆ, ಭವಿಷ್ಯದ ಯೋಜನೆಗಳು ಇರಬೇಕು' ಎಂದು ಸಲಹೆ ನೀಡಿದರು.

ಕಂದಾಯ ಸಚಿವ ಆರ್.ಅಶೋಕ ಮಾತನಾಡಿ, 'ವಿಜ್ಞಾನ ಕ್ಷೇತ್ರ ದೇಶಕ್ಕೆ ಅಪಾರ ಕೊಡುಗೆ ನೀಡಿದೆ. ಪ್ರಸ್ತುತ ಸರ್ಕಾರಿ ಶಾಲೆಗಳಿಗೂ ಹೆಚ್ಚಿನ ಮೂಲಸೌಲಭ್ಯ ಕಲ್ಪಿಸಲಾಗುತ್ತಿದೆ' ಎಂದರು.

ಸ್ವಾಮಿ ವಿವೇಕಾನಂದ ಯೋಗ ಅನುಸಂಧಾನ ಸಂಸ್ಥಾನ ವಿಶ್ವವಿದ್ಯಾಲಯ ಕುಲಾಧಿಪತಿ ಪ್ರೊ.ಎಚ್.ಆರ್. ನಾಗೇಂದ್ರ, 'ಭಾರತವು ಸಾಂಸ್ಕೃತಿಕ ಮೌಲ್ಯಗಳ ಅಮೂಲ್ಯ ಭಂಡಾರ' ಎಂದು ಬಣ್ಣಿಸಿದರು.

ರಾಜ್ಯ ಸರ್ಕಾರದ ಶಿಕ್ಷಣ ಸುಧಾರಣೆಗಳ ಸಲಹೆಗಾರ, ವಿಶ್ವವಿದ್ಯಾಲಯದ ಕುಲಾಧಿಪತಿ ಪ್ರೊ. ಎಂ.ಆರ್.ದೊರೆಸ್ವಾಮಿ, 'ಬಡವರ ಹಾಗೂ ಶ್ರೀಮಂತರ ಶಾಲೆ ಎಂಬ ತಾರತಮ್ಯ ನಿವಾರಣೆಗೆ ಸರ್ಕಾರ ಕ್ರಮ ಕೈಗೊಳ್ಳಬೇಕು. ಆಗ ಮಾತ್ರ ಶಿಕ್ಷಣ ಕ್ಷೇತ್ರದಲ್ಲಿ ವ್ಯತ್ಯಾಸಗಳು ಬರುವುದಿಲ್ಲ. ಶಾಸಕರು, ಸಂಸದರು ಹಾಗೂ ಸ್ಥಳೀಯ ಜನಪ್ರತಿನಿಧಿಗಳು ಶಾಲೆಗಳನ್ನು ದತ್ತು ಪಡೆಯುವ ಕಾರ್ಯ ಕೈಗೊಳ್ಳಬೇಕು' ಎಂದು ಸಲಹೆ ನೀಡಿದರು.

'ರಾಜ್ಯದ 70 ವಿಶ್ವವಿದ್ಯಾಲಯಗಳ ವ್ಯಾಪ್ತಿಯ ಶಾಲೆಗಳಲ್ಲೂ ಇಂತಹ ವಿಜ್ಞಾನ ಮೇಳ ಆಯೋಜಿಸಬೇಕು. ಈ ಮೇಳವು ಜ್ಞಾನ, ವಿಜ್ಞಾನ ಹಾಗೂ ಕೌಶಲಗಳ ಸಂಗಮ' ಎಂದರು.

ಕುಲಪತಿ ಪ್ರೊ.ಜೆ.ಸೂರ್ಯಪ್ರಸಾದ್, ಕುಲಸಚಿವ, ಪ್ರೊ.ಕೆ.ಎಸ್. ಶ್ರೀಧರ್ ಹಾಜರಿದ್ದರು. ವಿವಿಧ ಶಾಲೆಯ ವಿದ್ಯಾರ್ಥಿಗಳು ಈ ವಿಜ್ಞಾನ ಮೇಳದಲ್ಲಿ ಪಾಲ್ಗೊಂಡಿದ್ದರು.

'ಉಪಕರಣಗಳ ಕೊರತೆ'

'ಶಾಲೆಗಳಲ್ಲಿ ಮೂಲಸೌಕರ್ಯ, ಸಂತೋಷದಾಯಕ ಶೈಕ್ಷಣಿಕ ವಾತಾವರಣ, ಪ್ರಯೋಗಗಳ ಮೂಲಕ ಕಲಿಕೆ, ಮೌಲ್ಯ ಶಿಕ್ಷಣ, ಯೋಗ ಹಾಗೂ ಧ್ಯಾನಕ್ಕೆ ಆದ್ಯತೆ ನೀಡಬೇಕು. ಆದರೆ, ರಾಜ್ಯದ ಗ್ರಾಮಾಂತರ ಶಾಲೆಗಳಲ್ಲಿ ಪ್ರಯೋಗಾಲಯಗಳಲ್ಲಿ ಉಪಕರಣಗಳ ಕೊರತೆಯಿದೆ. ರಾಮನಗರದ ಶಾಲೆಗಳಲ್ಲಿ ಇದನ್ನು ಖುದ್ದು ನೋಡಿದ್ದೇನೆ' ಎಂದು ಪ್ರೊ.ಎಂ.ಆರ್. ದೊರೆಸ್ವಾಮಿ ಹೇಳಿದರು.

'ಕೋವಿಡ್: ತುರ್ತು ಸಂಗ್ರಹದಲ್ಲಿದ್ದ ಲಸಿಕೆ ವ್ಯರ್ಥವಾಗಿಲ್ಲ'

ನವದೆಹಲಿ (ಪಿಟಿಐ): 'ಸರ್ಕಾರದ ತುರ್ತು ಸಂಗ್ರಹದಲ್ಲಿದ್ದ ಕೋವಿಡ್ ಲಸಿಕೆಯು ಅವಧಿ ಮೀರಿರುವ ಕಾರಣದಿಂದಾಗಿ ವ್ಯರ್ಥವಾಗಿಲ್ಲ' ಎಂದು ಕೇಂದ್ರ ಸಚಿವೆ ಭಾರತಿ ಪ್ರವೀಣ್ ಪವಾರ್ ಅವರು ಶುಕ್ರವಾರ ಲೋಕಸಭೆಗೆ ತಿಳಿಸಿದ್ದಾರೆ.

'ವಿವಿಧ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ ಸಂಗ್ರಹಿಸಿಟ್ಟಿರುವ ಲಸಿಕೆಗಳ ಮೇಲೆ ಕೇಂದ್ರ ಸರ್ಕಾರ ನಿಗಾವಹಿಸಿದೆ. ಇದರಿಂದಾಗಿ ಲಸಿಕೆಗಳ ಅತ್ಯುತ್ತಮ ಬಳಕೆ ಹಾಗೂ ಕನಿಷ್ಠ ವ್ಯರ್ಥವನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗಿದೆ' ಎಂದು ಭಾರತಿ ಅವರು ಪ್ರಶ್ನೆಯೊಂದಕ್ಕೆ ನೀಡಿದ ಲಿಖಿತ ಉತ್ತರದಲ್ಲಿ ಹೇಳಿದ್ದಾರೆ.

'ವ್ಯರ್ಥವಾಗಬಹುದಾದ ಲಸಿಕೆಗಳ ಕುರಿತು ಪರಿಶೀಲಿಸಲು ಹಾಗೂ ಅಗತ್ಯವಿದ್ದಲ್ಲಿ ಅತ್ಯುತ್ತಮ ಬಳಕೆಗಾಗಿ ಲಸಿಕೆಗಳನ್ನು ಮರುಹಂಚಿಕೆ ಮಾಡುವ ಸಂಬಂಧ ಪ್ರತಿನಿತ್ಯ ರಾಜ್ಯಗಳ ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಸಲಹೆ ನೀಡಲಾಗುತ್ತಿದೆ' ಎಂದೂ ಅವರು ತಿಳಿಸಿದ್ದಾರೆ.

'ಅವಧಿ ಮೀರಲಿರುವ ಲಸಿಕೆಗಳನ್ನು ಅಗತ್ಯವಿದ್ದಲ್ಲಿ ಬೇರೆಡೆಗೆ ಕಳುಹಿಸಲು ಆಂತರಿಕ ಹಾಗೂ ಅಂತರರಾಜ್ಯ ಸಾಗಣೆಯನ್ನು ಬೆಂಬಲಿಸಲಾಗುತ್ತಿದೆ. ಕಡಿಮೆ ಅವಧಿಯ ಲಸಿಕೆಗಳನ್ನು ಲಸಿಕೆ ತಯಾರಿಕಾ ಘಟಕಗಳು ಬದಲಾಯಿಸುತ್ತಿವೆ' ಎಂದಿದ್ದಾರೆ.

ಪೂರಕ ಅಂದಾಜಿನಲ್ಲಿ ನಿಗದಿ • ಆರ್ಥಿಕ ಇಲಾಖೆಯಿಂದ ವಿಲೇವಾರಿಯಾಗದ ಕಡತ

ಗಡಿ ಅಭಿವೃದ್ಧಿಗೆ ಸಿಗದ ₹25 ಕೋಟಿ

• ರಾಜೇಶ್ ರೈ ಚಟ್ಲ

ಪ್ರಜಾವಾಣಿ ವಿಶೇಷ

ಬೆಂಗಳೂರು: ರಾಜ್ಯದ ಗಡಿಭಾಗದ ಕನ್ನಡ ಶಾಲೆಗಳನ್ನು ಇದೇ ವರ್ಷ ₹100 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಿಸಿದ್ದಾರೆ. ಆದರೆ, ಗಡಿಭಾಗದ ಬೇಡಿಕೆಗಳಿಗೆ ಅನುಗುಣವಾಗಿ ಅಭಿವೃದ್ಧಿ ಚಟುವಟಿಕೆ ಅನುಷ್ಠಾನಗೊಳಿಸಲು ಪ್ರಸಕ್ತ ಸಾಲಿನ (2022-23) ಪೂರಕ ಅಂದಾಜಿನಲ್ಲಿ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರಕ್ಕೆ ನೀಡಿದ ₹ 25 ಕೋಟಿ ಇನ್ನೂ ಬಿಡುಗಡೆಯೇ ಆಗಿಲ್ಲ!

ವಿಧಾನಸಭೆಯಲ್ಲಿ ಸೆ.21ರಂದು ಮಂಡಿಸಿದ ಪೂರಕ ಅಂದಾಜಿನಲ್ಲಿ 'ಮುಂದುವರಿದ ಕಾಮಗಾರಿಗಳನ್ನು ಪೂರ್ಣಗೊಳಿಸಲು' ಎಂಬ ಷರತ್ತು ವಿಧಿಸಿ ₹ 25 ಕೋಟಿ ಹಂಚಿಕೆ ಮಾಡಲಾಗಿದೆ. ಬಳಿಕ ಆ ಷರತ್ತು ಬದಲಿಸಿದ ಮುಖ್ಯಮಂತ್ರಿ, ಪ್ರಸಕ್ತ ಸಾಲಿ ಗಡಿಭಾಗದ ಬೇಡಿಕೆಗೆ ಅನುಗುಣವಾಗಿ ಹೊಸ ಅಭಿವೃದ್ಧಿ ಚಟುವಟಿಕೆ ಅನುಷ್ಠಾನಗೊಳಿಸಲು ಸಂಬಂಧಿಸಿದ ಇಲಾಖೆಗೆ ನಿರ್ದೇಶನ ನೀಡುವಂತೆ ಆರ್ಥಿಕ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ನಿರ್ದೇಶನ ನೀಡಿದ್ದಾರೆ.

ಆದರೆ, ಎರಡೂವರೆ ತಿಂಗಳು ಕಳೆದರೂ ಈ ಹಣ ಬಿಡುಗಡೆ ಆಗಿಲ್ಲ. ನ.4ರಿಂದ 16ರವರೆಗೆ ಹಣಕಾಸು ಇಲಾಖೆಯ ಕಾರ್ಯದರ್ಶಿ (ವೆಚ್ಚ) ಪಿ.ಸಿ. ಜಾಫರ್ ಬಳಿ ಇದ್ದ ಹಣ ಬಿಡುಗಡೆಯ 'ಇ-ಕಡತ', ನ. 18ರಿಂದ ಸಿ ಎಂ ಪ್ರಧಾನ ಕಾರ್ಯದರ್ಶಿ ಎನ್. ಮಂಜುನಾಥ್ ಪ್ರಸಾದ್ ಅವರ ಬಳಿ ಇದೆ.

ಕರ್ನಾಟಕಕ್ಕೆ ಹೊಂದಿಕೊಂಡಿರುವ ಆಂಧ್ರಪ್ರದೇಶ, ತೆಲಂಗಾಣ, ಮಹಾರಾಷ್ಟ್ರ, ಗೋವಾ, ಕೇರಳ, ತಮಿಳುನಾಡು ಗಡಿಯಲ್ಲಿನ ಕನ್ನಡ ಪರಿಸರದ ಭಾಗಗಳಲ್ಲಿ ಮತ್ತು ರಾಜ್ಯದ 19 ಜಿಲ್ಲೆಯ 63 ಗಡಿ ತಾಲ್ಲೂಕುಗಳಲ್ಲಿ ಶೈಕ್ಷಣಿಕ, ಸಾಂಸ್ಕೃತಿಕ, ಸಾಮಾಜಿಕವಾಗಿ ಅಭಿವೃದ್ಧಿಗೊಳಿಸಲು ಪ್ರಾಧಿಕಾರ ರಚಿಸಲಾಗಿದೆ.

ಕಳೆದ 10 ವರ್ಷಗಳಲ್ಲಿ ಮಹಾರಾಷ್ಟ್ರದ ಗಡಿ ಕನ್ನಡ ಪ್ರದೇಶಗಳಲ್ಲಿ ವಿವಿಧ ಯೋಜನೆ, ಕಾರ್ಯಕ್ರಮಗಳಿಗೆ ಬಿಡುಗಡೆಯಾಗಿರುವುದು ಕೇವಲ ₹26.54 ಕೋಟಿ. ಅದರಲ್ಲಿ ₹ 10.40 ಕೋಟಿ ಸಾಂಸ್ಕೃತಿಕ ಭವನಗಳ ನಿರ್ಮಾಣಕ್ಕೆ ವೆಚ್ಚವಾಗಿದೆ. ₹ 1.65 ಕೋಟಿ ಶಾಲಾ ಆವರಣ ಗೋಡೆ, ₹1.38 ಕೋಟಿ ಕ್ರೀಡಾ ಕೊಠಡಿ ನಿರ್ಮಾಣಕ್ಕೆ ಬಳಕೆಯಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮೂಲ ತಿಳಿಸಿದೆ.

'ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಗಡಿ ಅಭಿವೃದ್ಧಿ ಪ್ರಾಧಿಕಾರಕ್ಕೆ ₹ 15.14 ಕೋಟಿ ಹಂಚಿಕೆ ಮಾಡಲಾಗಿದೆ. ಹೊರನಾಡುಗಳಲ್ಲಿ ನಿರ್ಮಿಸಲು ಉದ್ದೇಶಿಸಿದ ಮೂರು ಕನ್ನಡ ಭವನಗಳಿಗೆ ಒದಗಿಸಿದ ₹ 5 ಕೋಟಿಯೂ ಇದರಲ್ಲಿ ಸೇರಿದೆ. ಕನ್ನಡ ಭವನ ನಿರ್ಮಾಣಕ್ಕಾಗಿ ಈವರೆಗೆ ₹ 1.25 ಕೋಟಿ (ಶೇ 25) ಬಿಡುಗಡೆಯಾಗಿದೆ. ಭವನ ನಿರ್ಮಾಣಕ್ಕೆ ದಕ್ಷಿಣ ಕನ್ನಡ (ಕಾಸರಗೋಡು) ಮತ್ತು ಬೆಳಗಾವಿ (ಸೊಲ್ಲಾಪುರ) ಜಿಲ್ಲಾಧಿಕಾರಿಗಳ ಖಾತೆಗೆ ತಲಾ ₹ 50 ಲಕ್ಷ, ಉತ್ತರ ಕನ್ನಡ ಜಿಲ್ಲಾಧಿಕಾರಿಗೆ (ಗೋವಾ) ₹ 25 ಲಕ್ಷ ನೀಡಲಾಗಿದೆ. ಆದರೆ, ಬಿಡುಗಡೆಯಾದ ಮೊತ್ತದಲ್ಲಿ ಶೇ 75ರಷ್ಟು ವೆಚ್ಚವಾದ ನಂತರ ಎರಡನೇ ಕಂತಿನ ಹಣ ಬಿಡುಗಡೆ ಮಾಡಲಾಗುವುದು' ಎಂದು ಮೂಲಗಳು ತಿಳಿಸಿವೆ.

ಸರ್ಕಾರಿ ಜಾಗ ಕೊಡಲ್ಲ– ಗೋವಾ

ಗೋವಾದಲ್ಲಿ ₹ 10 ಕೋಟಿ ವೆಚ್ಚದಲ್ಲಿ ಕನ್ನಡ ಭವನ ನಿರ್ಮಿಸುವುದಾಗಿ ಬಜೆಟ್ ಪೂರ್ವದಲ್ಲಿಯೇ ಮುಖ್ಯಮಂತ್ರಿ ಘೋಷಿಸಿದ್ದರು. ಭವನ ನಿರ್ಮಿಸಲು ಜಾಗ ನೀಡುವಂತೆ ಗೋವಾ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರೂ ಆಗಿರುವ ವಾಸ್ಕೊ ಶಾಸಕ ಕೃಷ್ಣಾಜಿ ಸಲ್ಗಾರ್, ಗೋವಾ ಜಿಲ್ಲಾಧಿಕಾರಿ ಮತ್ತು ಝುವಾರಿ ಕೆಮಿಕಲ್ ಸಂಸ್ಥೆಗೆ ಪ್ರಾಧಿಕಾರದಿಂದ ಪತ್ರ ಬರೆದರೂ ಸಕಾರಾತ್ಮಕ ಸ್ಪಂದನೆ ಸಿಕ್ಕಿಲ್ಲ. ಹೀಗಾಗಿ, ಕನಿಷ್ಠ 1ರಿಂದ 2 ಎಕರೆಯಷ್ಟು ಸರ್ಕಾರಿ ಜಾಗ ನೀಡುವಂತೆ ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್‌ಗೆ ಸೆ. 20ರಂದು ಬೊಮ್ಮಾಯಿ ಪತ್ರ ಬರೆದಿದ್ದಾರೆ. ಆದರೆ, ನ. 13ರಂದು ಗೋವಾದ ಬಿಚೋಲಿಯಲ್ಲಿ ನಡೆದ ಕನ್ನಡಿಗರ ಸಮ್ಮೇಳನದಲ್ಲಿ ಮಾತನಾಡಿದ ಸಾವಂತ್, 'ಕನ್ನಡ ಭವನ ನಿರ್ಮಾಣಕ್ಕೆ ಕೊಡಲು ಸರ್ಕಾರದ ಬಳಿ ಜಾಗ ಇಲ್ಲ. ಖಾಸಗಿಯಾಗಿ ಖರೀದಿಸಿ, ಕಟ್ಟಿಕೊಳ್ಳಿ' ಎಂದು ಸ್ಪಷ್ಟವಾಗಿ ಹೇಳಿದ್ದಾರೆ.

ಗಡಿ ಅಭಿವೃದ್ಧಿ ಪ್ರಾಧಿಕಾರಕ್ಕೆ ₹ 25 ಕೋಟಿ ಬಿಡುಗಡೆಗೆ ಸಂಬಂಧಿಸಿದ 'ಇ- ಕಡತ' ನನ್ನ ಬಳಿ ಬಂದ ಬಗ್ಗೆ ಮಾಹಿತಿ ಇಲ್ಲ. ಬಂದಿದ್ದರೆ ಪರಿಶೀಲಿಸಿ, ತಕ್ಷಣವೇ ವಿಲೇವಾರಿ ಮಾಡುತ್ತೇನೆ.
ಎನ್. ಮಂಜುನಾಥ್ ಪ್ರಸಾದ್, ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ

ಸರ್ಕಾರದ ಜಾಗ ಕೊಡಲ್ಲ ಎಂದು ಗೋವಾ ಮುಖ್ಯಮಂತ್ರಿ ಸ್ಪಷ್ಟವಾಗಿ ಹೇಳಿರುವುದರಿಂದ ಕರ್ನಾಟಕ ಸರ್ಕಾರ ಖಾಸಗಿ ಜಾಗ ಖರೀದಿಸಿ ಕನ್ನಡ ಭವನ ನಿರ್ಮಿಸಬೇಕು
ಸಿದ್ದಣ್ಣ ಮೇಟಿ, ಅಧ್ಯಕ್ಷ, ಕನ್ನಡ ಸಾಹಿತ್ಯ ಪರಿಷತ್‌ ಗೋವಾ ರಾಜ್ಯ ಘಟಕ

₹100 ಕೋಟಿ ಒದಗಿಸಿ ಗಡಿ ಭಾಗ ಅಭಿವೃದ್ಧಿಪಡಿಸುವ ಕನಸನ್ನು ರಾಮದುರ್ಗದಲ್ಲಿ ಸಿಎಂ ಬಿಚ್ಚಿಟ್ಟಿದ್ದಾರೆ. ಕನಸು ಸಾಕಾರಗೊಳಿಸಲು ಸಹಕಾರಾತ್ಮಕವಾಗಿ ಸ್ಪಂದಿಸುವ ವಿಶ್ವಾಸವಿದೆ.
ಸಿ. ಸೋಮಶೇಖರ, ಅಧ್ಯಕ್ಷರು, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ

ಗಡಿ ಪ್ರದೇಶಗಳ ಅಭಿವೃದ್ಧಿ ಅನುದಾನ ನೀಡುವ ವಿಚಾರದಲ್ಲಿ ಕಾರ್ಯಸಾಧುವಾದ ಭರವಸೆಗಳನ್ನು ಮುಖ್ಯಮಂತ್ರಿ ನೀಡಬೇಕು. ಅದರಂತೆ ನಡೆದುಕೊಳ್ಳಬೇಕು.
ಅಶೋಕ ಚಂದರಗಿ, ಅಧ್ಯಕ್ಷ, ಬೆಳಗಾವಿ ಜಿಲ್ಲಾ ಕನ್ನಡ ಸಂಘಟನೆಗಳ ಕ್ರಿಯಾ ಸಮಿತಿ

'ವೈದ್ಯಕೀಯ ವೆಚ್ಚ ನಿಯಂತ್ರಣಕ್ಕೆ ಆಯೋಗ ಸ್ಥಾಪಿಸಿ'

ನವದೆಹಲಿ: ವೈದ್ಯಕೀಯ ವೆಚ್ಚ ಏರಿಕೆಯಾಗುವುದನ್ನು ನಿಯಂತ್ರಿಸಲು ರಾಷ್ಟ್ರೀಯ ಆಯೋಗವನ್ನು ಸ್ಥಾಪಿಸಬೇಕೆಂದು ಕೋರಿ ಸಿಪಿಐ ಸಂಸದ ಸಂತೋಷ್ ಕುಮಾರ್ ಅವರು ಶುಕ್ರವಾರ ರಾಜ್ಯಸಭೆಯಲ್ಲಿ ಖಾಸಗಿ ಮಸೂದೆಯನ್ನು ಮಂಡಿಸಿದ್ದಾರೆ.

ಭಾರತದಲ್ಲಿ ಚಿಕಿತ್ಸಾ ವೆಚ್ಚವು ಶೇ 7.21ರಷ್ಟು ಹೆಚ್ಚಾಗಿದೆ ಎಂದು ಅವರು ಮಸೂದೆಯಲ್ಲಿ ಉಲ್ಲೇಖಿಸಿದ್ದಾರೆ.

ಈ ಆಯೋಗವು ವೈದ್ಯಕೀಯ ವೆಚ್ಚ ಹೆಚ್ಚಳದ ಮೇಲೆ ನಿಗದಿತವಾಗಿ ನಿಗಾ ವಹಿಸಬೇಕು ಮತ್ತು ಔಷಧಗಳ ವೆಚ್ಚ, ರೋಗ ಪತ್ತೆಗಾಗಿ ನಡೆಸುವ ಪರೀಕ್ಷೆಗಳ ವೆಚ್ಚಗಳನ್ನು ನಿಯಂತ್ರಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದೂ ಅವರು ಆಶಯ ವ್ಯಕ್ತಪಡಿಸಿದ್ದಾರೆ.

ಆರೋಗ್ಯ ವೆಚ್ಚವು ಪ್ರತಿ ವರ್ಷ ಏರಿಕೆಯಾಗುತ್ತಿರುವುದರ ಪರಿಣಾಮ ಮಧ್ಯಮ ವರ್ಗದವರಿಗೆ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯಲು ಕಷ್ಟವಾಗುತ್ತಿದೆ ಎಂದು ಸಂತೋಷ್ ಕುಮಾರ್ ಅವರು ಮಂಡಿಸಿರುವ ಮಸೂದೆಯಲ್ಲಿ ಹೇಳಲಾಗಿದೆ.

ದೆಹಲಿ ಪಾಲಿಕೆ: ಕಾಂಗ್ರೆಸ್‌ನ ಇಬ್ಬರು ಎಎಪಿಗೆ ಸೇರ್ಪಡೆ

ನವದೆಹಲಿ: ಕಾಂಗ್ರೆಸ್ ದೆಹಲಿ ಘಟಕದ ಉಪಾಧ್ಯಕ್ಷ ಅಲಿ ಮೆಹದಿ ಹಾಗೂ ಮಹಾನಗರ ಪಾಲಿಕೆಗೆ ಹೊಸದಾಗಿ ಆಯ್ಕೆಯಾಗಿದ್ದ ಸಬಿಲಾ ಬೇಗಂ ಹಾಗೂ ನಾಜಿಯಾ ಖಾತೂನ್ ಅವರು ಶುಕ್ರವಾರ ಆಮ್ ಆದ್ಮಿ ಪಕ್ಷಕ್ಕೆ (ಎಎಪಿ) ಸೇರ್ಪಡೆಯಾಗಿದ್ದಾರೆ.

ಕಾಂಗ್ರೆಸ್‌ನ ಇಬ್ಬರು ಪಾಲಿಕೆ ಸದಸ್ಯರ ಸೇರ್ಪಡೆಯಿಂದಾಗಿ ಮಹಾನಗರ ಪಾಲಿಕೆಯಲ್ಲಿ ಎಎಪಿ ಸದಸ್ಯ ಬಲ 136ಕ್ಕೆ ಏರಿಕೆಯಾಗಿದೆ. ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ಕೆಲಸಗಳನ್ನು ಮೆಚ್ಚಿ ಕಾಂಗ್ರೆಸ್‌ನವರು ಎಎಪಿಗೆ ಸೇರಿದ್ದಾರೆ ಎಂದು ಶಾಸಕ ದುರ್ಗೇಶ್ ಪಾಠಕ್ ಹೇಳಿದ್ದಾರೆ.

ಎಚ್‌.ಡಿ.ಕೋಟೆ ತಾಲ್ಲೂಕಿನ ಅಂತರಸಂತೆ ವನ್ಯಜೀವಿ ವ್ಯಾಪ್ತಿಯ ಕಬಿನಿ ಹಿನ್ನೀರಿನ ಬಳಿ ಶುಕ್ರವಾರ ಬೆಳಿಗ್ಗೆ ವನ್ಯಜೀವಿ ಸಫಾರಿಯಲ್ಲಿ ತಾಯಿ ಹುಲಿ ಮತ್ತು ನಾಲ್ಕು ಮರಿಗಳ ದರ್ಶನ

ದರ್ಶನ ನೀಡಿದ ಹುಲಿ, ನಾಲ್ಕು ಮರಿಗಳು

ಪ್ರಜಾವಾಣಿ ವಾರ್ತೆ

ಎಚ್‌.ಡಿ.ಕೋಟೆ (ಮೈಸೂರು ಜಿಲ್ಲೆ): ತಾಲ್ಲೂಕಿನ ಅಂತರಸಂತೆ ವನ್ಯಜೀವಿ ವ್ಯಾಪ್ತಿಯ ಕಬಿನಿ ಹಿನ್ನೀರಿನ ಬಳಿ ಶುಕ್ರವಾರ ಬೆಳಿಗ್ಗೆ ತಾಯಿ ಹುಲಿ ಮತ್ತು ನಾಲ್ಕು ಮರಿಗಳು ಮತ್ತೆ ಕಾಣಿಸಿಕೊಂಡಿವೆ.

ಸಫಾರಿಗೆ ಹೋಗಿದ್ದವರು ವ್ಯಾಘ್ರ ಕುಟುಂಬ ಕಂಡು ಪುಳಕಗೊಂಡಿದ್ದಾರೆ. ವನ್ಯಜೀವಿ ಪ್ರೇಮಿಗಳಿಂದ 'ಬ್ಯಾಕ್ ವಾಟರ್ ಫೀಮೇಲ್' ಎಂದೇ ಕರೆಸಿಕೊಂಡಿರುವ ಹುಲಿಯು ತನ್ನ ಮರಿಗಳೊಂದಿಗೆ ಅ.12ರಂದು ಕಾಣಿಸಿಕೊಂಡಿತ್ತು.

'ನಾಗರಹೊಳೆ ರಾಷ್ಟ್ರೀಯ ಉದ್ಯಾನದ ವ್ಯಾಪ್ತಿಯಲ್ಲಿ 2 ಹೆಣ್ಣು ಹುಲಿಗಳು ತಲಾ 4 ಮರಿಗಳಿಗೆ ಜನ್ಮ ನೀಡಿರುವುದು ಇದೇ ಮೊದಲು' ಎಂದು ಅಂತರಸಂತೆ ವನ್ಯಜೀವಿ ವಲಯದ ಅರಣ್ಯ ಅಧಿಕಾರಿ ಎಸ್.ಎಸ್. ಸಿದ್ದರಾಜು ತಿಳಿಸಿದರು.

'ಕಬಿನಿ ಹಿನ್ನೀರು ವ್ಯಾಪ್ತಿಯ ಹೆಣ್ಣು ಹುಲಿಯು ನಾಲ್ಕು ಮರಿಗಳಿಗೆ 6 ತಿಂಗಳ ಹಿಂದೆ ಜನ್ಮ ನೀಡಿತ್ತು. ಅದರ ಜೋಡಿಯಾದ ಗಂಡು ಹುಲಿಯನ್ನು ವನ್ಯಜೀವಿ ಪ್ರಿಯರು 'ಟೈಗರ್ ಟ್ಯಾಂಕ್' ಎಂದು ಕರೆಯುತ್ತಿದ್ದಾರೆ.

ತಾರಕ ಹಿನ್ನೀರಿನ ವ್ಯಾಪ್ತಿಯ ಹೆಣ್ಣು ಹುಲಿಯು (ರಸುಲ್ ಲೈನ್ ಫೀಮೇಲ್) 4 ಮರಿಗಳಿಗೆ 11 ತಿಂಗಳ ಹಿಂದೆ ಜನ್ಮ ನೀಡಿತ್ತು. ಈ ಹೆಣ್ಣು ಹುಲಿಗೆ 'ಸೀಳುತುಟಿ' ಎಂಬ ಗಂಡುಹುಲಿ ಜೋಡಿಯಾಗಿದೆ.

ಕರ್ನಾಟಕ ಸರಕಾರ
ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಕಲಬುರಗಿ
"ಅಭಿವೃದ್ಧಿ ಭವನ" ಐವಾನ–ಎ–ಶಾಹಿ, ಕಲಬುರಗಿ–585102
ದೂರವಾಣಿ : (08472) – 256767, 239556, 255564, ಫ್ಯಾಕ್ಸ್ : (08472) 227527
E-mail : hkadbgulb@gmail.com, Website : hkrdb.kar.nic.in
ಸಂಖ್ಯೆ: KKRDB/TECH/PMC/ 2022-23/ ದಿನಾಂಕ: 09–12–2022

ಅಲ್ಪಾವಧಿ ಟೆಂಡರ ಪ್ರಕಟಣೆ

1) ಕಾಮಗಾರಿಯ ಹೆಸರು: "Providing Project Management Consultancy (PMC) services for developmental projects funded by KKRDB in **Raichur and Koppal districts"** **(LOT-3),** 2) ಲೆಕ್ಕ ಶೀರ್ಷಿಕೆ: KKRDB ನಿಧಿ, 3) ಗುತ್ತಿಗೆದಾರರ ಅರ್ಹತೆ:ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನ ದಸ್ತಾವೇಜಿನಲ್ಲಿ, 4) ಟೆಂಡರ್ ದಸ್ತಾವೇಜನ್ನು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಡೌನ್‌ಲೋಡ್ ಮಾಡಿಕೋಳ್ಳುವ ಪ್ರಾರಂಭ ದಿನಾಂಕ : **09–12–2022 ಬೆಳಿಗ್ಗೆ 11.00ಕ್ಕೆ,** 5) ಪ್ರಿ–ಬಿಡ್ ಸಭೆ ದಿನಾಂಕ (online) : **19–12–2022 ಬೆಳಿಗ್ಗೆ 11.30ಕ್ಕೆ,** 6) ಕ್ಯಾರೀಸ್ ಸಲ್ಲಿಸುವ ದಿನಾಂಕ: **20–12–2022 ಬೆಳಿಗ್ಗೆ 11.30ಕ್ಕೆ,** 7) ಟೆಂಡರ್ ಫಾರಂ ಸಲ್ಲಿಸುವ ಅಂತಿಮ ದಿನಾಂಕ: **22–12–2022 ಮಧ್ಯಾಹ್ನ 4.00ರ ವರೆಗೆ,** 8) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **23–12–2022 ಮಧ್ಯಾಹ್ನ 4.30ಕ್ಕೆ,** 9) ಆರ್ಥಿಕ ಬಿಡ್ ತೆರೆಯುವ ದಿನಾಂಕ : **26–12–2022 ಬೆಳಿಗ್ಗೆ 11.00ಕ್ಕೆ,** 10) ಟೆಂಡರ್ ಅರ್ಜಿ ಬೆಲೆ: ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಇದ್ದಂತೆ, 11) ಇ.ಎಂ.ಡಿ.ಮೊತ್ತ : ರೂ. 2,00,000/–, 12) ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ವಿಳಾಸ: https://eproc.karnataka.gov.in ಅಥವಾ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ, ಐವಾನ್–ಇ–ಶಾಹಿ, ಕಲಬುರಗಿ ರಲ್ಲಿ ಸಂಪರ್ಕಿಸಬಹುದು, 13) ಅಂತರ್‌ಜಾಲ ತಾಣದ ವಿಳಾಸ: https://eproc.karnataka.gov.in, 14) ಬದಲಾವಣೆಗಾಗಿ ಸಂಪರ್ಕಿಸುವ ಬಗ್ಗೆ: ಯಾವುದೇ ಬದಲಾವಣೆ ಹಾಗು ಮಾರ್ಪಾಡುಗಳಿಗಾಗಿ https://eproc.karnataka.gov.in ಕ್ಕೆ ಸಂಪರ್ಕಿಸಬಹುದು.

ಸಹಿ/– ಉಪ ಕಾರ್ಯದರ್ಶಿಗಳು
ಕ.ಕ.ಪ್ರ.ಅ.ಮಂಡಳಿ, ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/940/ಎಂ.ಸಿ.&ಎ/2022–23

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರವರ ಕಛೇರಿ,
ಲೋಕೋಪಯೋಗಿ ಇಲಾಖೆ, ಧಾರವಾಡ ವಿಭಾಗ, ಧಾರವಾಡ
Phone No: 0836–2747944, Email.ID :eepwddha@gmail.com
ಸಂ.ಕ್ರಸಂ : ಕಾನಿಇಂ/ಲೋಇ/ಧಾ/ಪಿಬಿ–2, 5/ಟೆಂಡರ/2022–23/7122 ದಿನಾಂಕ : 09/12/2022

ಟೆಂಡರ ಪ್ರಕಟಣೆ

ಉಲ್ಲೇಖ : 1) ಈ ಕಚೇರಿ ಟೆಂಡರ ಪ್ರಕಟಣೆ ಸಂಖ್ಯೆ: ಕಾನಿಇಂಧಾ/ಪಿಬಿ–1,2,3,4,5/ಗುತ್ತಿಗೆ/2022–23/4620 ದಿ: 07/10/2022.
2) ಈ ಕಚೇರಿ ಟೆಂಡರ ಪ್ರಕಟಣೆ ಸಂಖ್ಯೆ: ಕಾನಿಇಂಧಾ/ಪಿಬಿ–1,2/ಗುತ್ತಿಗೆ/2022–23/4379 ದಿ: 23/09/2022.
3) ಈ ಕಚೇರಿ ಟೆಂಡರ ಪ್ರಕಟಣೆ ಸಂಖ್ಯೆ: ಕಾನಿಇಂಧಾ/ಪಿಬಿ–1,2,5/ಗುತ್ತಿಗೆ/2022–23/5780 ದಿ: 03/11/2022.
4) ಈ ಕಚೇರಿ ಟೆಂಡರ ಪ್ರಕಟಣೆ ಸಂಖ್ಯೆ: ಕಾನಿಇಂಧಾ/ಪಿಬಿ–1,2,3 & 4/ಗುತ್ತಿಗೆ/2022–23/5902 ದಿ: 09/11/2022.

ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ಧಾರವಾಡರವರು ಕರ್ನಾಟಕ ರಾಜ್ಯಪಾಲರ ಪರವಾಗಿ ಕೆ.ಟಿ.ಪಿ.ಪಿ 2000 ರನ್ವಯ ಮತ್ತು ಸ್ಟ್ಯಾಂಡರ್ಡ ಡಾಕ್ಯೂಮೆಂಟ್ ಕೆ ಡಬ್ಲ್ಯೂ–1, 2, 3 ಮತ್ತು 4 ರ ನಿಯಮದಂತೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರಮೆಂಟ (e-Procurement) ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಣಿ ಮಾಡಿದ ಅರ್ಹ ಗುತ್ತಿಗೆದಾರರಿಂದ ಒಂದು ಹಾಗೂ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರಗಳನ್ನು ಅಹ್ವಾನಿಸಲಾಗಿದೆ. ಧಾರವಾಡ, ನವಲಗುಂದ ಹಾಗೂ ಹುಬ್ಬಳ್ಳಿ ವಿಭಾಗ ವ್ಯಾಪ್ತಿಯಲ್ಲಿ ಸಂಬಂಧಿಸಿದಂತೆ ಉಲ್ಲೇಖಿತ (1) ರಿಂದ (4) ರಲ್ಲಿ ಯ ಕಾಮಗಾರಿಗಳ ಮಾಹಿತಿ ಈ ಕೆಳಕಂಡಂತೆ ವಿವರಿಸಲಾಗಿದೆ.

ಲೆಕ್ಕ ಶೀರ್ಷಿಕೆ:–2022–23 ನೇ ಸಾಲಿನ 3054 ರಾಜ್ಯ ಹೆದ್ದಾರಿ ನಿರ್ವಹಣೆ, W I No: 155250. **ಲೆಕ್ಕ ಶೀರ್ಷಿಕೆ:–2022–23 ನೇ ಸಾಲಿನ 5054 ಅಪೆಂಡಿಕ್ಸ್ ಇ ಯೋಜನೆ ಅಡಿಯಲ್ಲಿ** W I No: 157736 -(Extension), W I No: 157733 – (Extension), W I No: 157728 – (Extension), W I No: 157726 – (Extension), W I No: 158313 (Extension), W I No: 158314 (Extension), W I No: 158317 (Extension), W I No: 158318 (Extension), W I No: 158319 (Extension), W I No: 158320 (Extension), W I No: 158321 (Extension), W I No: 158322 (Extension), W I No: 158323 (Extension), W I No: 158324 (Extension), W I No: 158325 (Extension), W I No: 158326 (Extension), W I No: 158327 (Extension), W I No: 158329 (Extension), W I No: 158330 (Extension), W I No: 161956 (Extension), **8443 ಠೇವಣಿ ವಂತಿಕೆ ಕಾಮಗಾರಿ** W I No: 158150, W I No: 159861.

(50.00 ರಿಂದ 375.00) ವರೆಗಿನ ಕಾಮಗಾರಿಗಳ ಒಟ್ಟು– 22 ಕಾಮಗಾರಿಗಳ ದಿನಾಂಕಗಳನ್ನು ಈ ಕೆಳಗಿನಂತೆ ನಿಗದಿಪಡಿಸಲಾಗಿದೆ
(1) ಆಕ್ಷೇಪಣೆ–ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ: **12/01/2023** (ಬೆಳಿಗ್ಗೆ 11:30 ಗಂಟೆಯವರೆಗೆ) (2) ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: **13/01/2023** (ಸಾಯಂಕಾಲ 4:00 ಗಂಟೆಯವರೆಗೆ) (3) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **16/01/2023** (ಸಾಯಂಕಾಲ 4:30 ಗಂಟೆಯ ನಂತರ) (4) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ : **17/01/2023** (ಸಾಯಂಕಾಲ 4:30 ಗಂಟೆಯ ನಂತರ)

(1.00 ರಿಂದ 50.00) ವರೆಗಿನ ಕಾಮಗಾರಿಗಳ ಒಟ್ಟು– 01 ಕಾಮಗಾರಿಗಳ ದಿನಾಂಕಗಳನ್ನು ಈ ಕೆಳಗಿನಂತೆ ನಿಗದಿಪಡಿಸಲಾಗಿದೆ
(1) ಆಕ್ಷೇಪಣೆ–ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ : **12/01/2023** (ಬೆಳಿಗ್ಗೆ 11:30 ಗಂಟೆಯವರೆಗೆ) (2) ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: **13/01/2023** (ಸಾಯಂಕಾಲ 4:00 ಗಂಟೆಯವರೆಗೆ) (3) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: **17/01/2023** (ಸಾಯಂಕಾಲ 4:30 ಗಂಟೆಯ ನಂತರ)

ಲೆಕ್ಕ ಶೀರ್ಷಿಕೆ:–2022–23 ನೇ ಸಾಲಿನ 3054 ರಾಜ್ಯ ಹೆದ್ದಾರಿ ನಿರ್ವಹಣೆ , W I No: 157275 – Call-3, **ಲೆಕ್ಕ ಶೀರ್ಷಿಕೆ:–2022–23 ನೇ ಸಾಲಿನ 3054 ಜಿಲ್ಲಾ ಮುಖ್ಯ ರಸ್ತೆ ನಿರ್ವಹಣೆ** , W I No: 157294 – Call-2, W I No: 157937– Call-3, W I No: 157948 – Call-3, **ಲೆಕ್ಕ ಶೀರ್ಷಿಕೆ:–2022–23 ನೇ ಸಾಲಿನ 5054 ಅಪೆಂಡಿಕ್ಸ್ ಇ ಯೋಜನೆ ಅಡಿಯಲ್ಲಿ** W I No: 152275 – Call-3, W I No: 151612 – Call-4, W I No: 154498 – Call-2, W I No: 154496 – Call-2, W I No: 154497 – Call-3, W I No: 154742 – Call-3 (Extension), **8443 ಠೇವಣಿ ವಂತಿಕೆ ಕಾಮಗಾರಿ** W I No: 158696 – Call-2, W I No: 156798 – Call-3, W I No: 157996 – Call-2, W I No: 158333 – Call-2, W I No: 158696 – Call-2, W I No: 158717 (Extension), W I No: 158846 – Call-2, **ಲೆಕ್ಕ ಶೀರ್ಷಿಕೆ:–2022–23 ನೇ ಸಾಲಿನ 2059 ಇಲಾಖಾ ಕಟ್ಟಡ ನಿರ್ವಹಣೆ** W I No: 158721 (Extension), W I No: 158722 (Extension), **ಲೆಕ್ಕ ಶೀರ್ಷಿಕೆ:–2022–23 ನೇ ಸಾಲಿನ 2059 ಇಲಾಖಾ ಕಟ್ಟಡ ನಿರ್ವಹಣೆ** W I No: 158724 (Extension), W I No: 158774 (Extension), ಕಾಮಗಾರಿಗಳಿಗೆ ಈ ಕೆಳಕಂಡಂತೆ ದಿನಾಂಕಗಳನ್ನು ನಿಗದಿಪಡಿಸಲಾಗಿದೆ.

(1.00 ರಿಂದ 50.00) ವರೆಗಿನ ಕಾಮಗಾರಿಗಳ ಒಟ್ಟು– 09 ಕಾಮಗಾರಿಗಳ ದಿನಾಂಕಗಳನ್ನು ಈ ಕೆಳಗಿನಂತೆ ನಿಗದಿಪಡಿಸಲಾಗಿದೆ.
(1) ಆಕ್ಷೇಪಣೆ–ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ : **23/12/2022** (ಬೆಳಿಗ್ಗೆ 11:30 ಗಂಟೆಯವರೆಗೆ) (2) ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: **26/12/2022** (ಸಾಯಂಕಾಲ 4:00 ಗಂಟೆಯವರೆಗೆ) (3) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: **28/12/2022** (ಸಾಯಂಕಾಲ 4:30 ಗಂಟೆಯ ನಂತರ)

(50.00 ರಿಂದ 400.00) ವರೆಗಿನ ಕಾಮಗಾರಿಗಳ ಒಟ್ಟು– 12 ಕಾಮಗಾರಿಗಳ ದಿನಾಂಕಗಳನ್ನು ಈ ಕೆಳಗಿನಂತೆ ನಿಗದಿಪಡಿಸಲಾಗಿದೆ.
(1) ಆಕ್ಷೇಪಣೆ–ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ : **23/12/2022** (ಬೆಳಿಗ್ಗೆ 11:30 ಗಂಟೆಯವರೆಗೆ) (2) ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ : **26/12/2022** (ಸಾಯಂಕಾಲ 4:00 ಗಂಟೆಯವರೆಗೆ) (3) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **27/01/2023** (ಸಾಯಂಕಾಲ 4:30 ಗಂಟೆಯ ನಂತರ) (4) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ : **28/12/2022** (ಸಾಯಂಕಾಲ 4:30 ಗಂಟೆಯ ನಂತರ)

ಕಾಮಗಾರಿಗಳಿಗೆ ಸಂಬಂಧಿಸಿದ ವಿವರಗಳನ್ನು ಲೋಕೊಪಯೋಗಿ ಇಲಾಖೆ ಧಾರವಾಡ ವಿಭಾಗ ಕಛೇರಿಯಿಂದ ಕಚೇರಿಯ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ವಿಶೇಷ ಸೂಚನೆ : (1) ಮೀಸಲಾತಿ ಕಾಮಗಾರಿಗಳಿಗೆ ಭಾಗವಹಿಸುವ ಗುತ್ತಿಗೆದಾರರು, ಸಕ್ಷಮ ಪ್ರಾಧಿಕಾರದಿಂದ ಪಡೆದ ಜಾತಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಲಗತ್ತಿಸತಕ್ಕದ್ದು. (2) ಮೀಸಲಾತಿ ಕಾಮಗಾರಿಗಳಿಗೆ ಗುತ್ತಿಗೆ ಸಲ್ಲಿಸುವ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡ ಗುತ್ತಿಗೆದಾರರು, ಕನಿಷ್ಠ 10 ವರ್ಷ ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು ಹಾಗೂ ಸಕ್ಷಮ ಪ್ರಾಧಿಕಾರದಿಂದ ಪಡೆದ ನಿವಾಸಿ ಪ್ರಮಾಣ ಪತ್ರ ಲಗತ್ತಿಸತಕ್ಕದ್ದು. (3) ಗುತ್ತಿಗೆದಾರರು ಫರ್ಮ ಗುತ್ತಿಗೆದಾರರಾಗಿದ್ದರೆ, ಎಲ್ಲ ಪಾರ್ಟನರ್ ಅಥವಾ ಸದಸ್ಯರು ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡದವರಾಗಿರಬೇಕು.

ಸಹಿ/– ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ, ಧಾರವಾಡ ವಿಭಾಗ, ಧಾರವಾಡ
ವಾಸಾಸಂಇ/ಧಾರವಾಡ/ಎಂಸಿಎ/842/2022–23

Government of Karnataka
District Surgeon District Hospital,Dharwad-580008
No: DHD/DNB/CR/82 /2022-23. **CORRIGENDUM** Date: 08/12/2022

This is with reference to the Notification No. DHD/DNB/CR/82/1084/2022-23, Dated: 05/12/2022 inviting application for the post of Junior Consultant for the post of Pediatrics.
It is hereby inform that the following corrections had been made and may be read as follows.

Sl. No	Name of the Post	No.of posts	Qualification	Experience and eligibility as per notification	Experience is Corrected and read as
1	Junior Consultant PG Teacher (Pediatrics)	1	PG Degree / DNB in concerned speciality.	**1)** 5-8 years of Post PG experience in Dept of OBG. **2)** Preference to be given to those with PG teaching experience in the concerned specialty in recognized medical college or a DNB centre. **3)** He or She should be Registered under Karnataka Medical Council. **4)** Age limit: Within 67 Years with good physical and mental health. Younger age is preferred.	**1) 5-8 years of Post PG experience in Dept of Pediatrics. 2) All other criteria remains the same as notified in the Notification on 05-12-2022.**

ವಾಸಾಸಂಇ/ಧಾ/ದಿಶಾ/840/2022–23
District Surgeon, District Hospital Dharwad.

ಬೆಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್
(ಕಂಪನಿಗಳ ಕಾಯಿದೆ 2013ರಡಿಯಲ್ಲಿ ಸ್ಥಾಪಿತವಾಗಿರುವ ಸಂಸ್ಥೆ)
ಸಿಐಎನ್ ಸಂಖ್ಯೆ: ಯು74999ಕೆಎ2018ಪಿಎಲ್‌ಸಿ109175
Bengaluru SMART CITY
ವ್ಯವಸ್ಥಾಪ ನಿರ್ದೇಶಕರವರ ಕಚೇರಿ, #30/1, ತಿಮ್ಮಯ್ಯ ರಸ್ತೆ, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು – 560 052.
ಸಂಖ್ಯೆ: ಬೆಂಸ್ಮಾಸಿಲಿ/ಟಿಎಸ್/ಕಾಪಾಅ–02/ದರಪಟ್ಟಿ–02/2022–23 ದಿನಾಂಕ: 09.12.2022

ಮುಚ್ಚಿದ ಲಕೋಟೆಗಳ ಆಹ್ವಾನ ಪ್ರಕಟಣೆ

ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್, ಇವರ ಪರವಾಗಿ ಕಾರ್ಯಪಾಲಕ ಅಭಿಯಂತರರು–02 ಇವರು ಮಾನ್ಯತೆ ಪಡೆದ ಸಂಸ್ಥೆಗಳಿಂದ ಅನುಬಂಧದಲ್ಲಿ ವಿವರಿಸಿರುವ ಅಂಶಗಳಿಗೆ ದರಪಟ್ಟಿ / ಕೊಟೇಷನ್‌ಗಳನ್ನು ಆಹ್ವಾನಿಸಿದ್ದಾರೆ. ಸಲ್ಲಿಸುವ ದರಗಳನ್ನು ಅಂದಾಜುಪಟ್ಟಿ ಸಿದ್ಧಪಡಿಸುವುದಕ್ಕಾಗಿ ಮಾತ್ರ ಪರಿಗಣಿಸಲಾಗುತ್ತದೆ.

ವೇಳಾಪಟ್ಟಿಗಳ ವಿವರ

ಕ್ರ ಸಂ	ದರಪಟ್ಟಿಗಳ ವಿವರಣೆ	ದರಪಟ್ಟಿಗಳಿಗಾಗಿ ಅನುಬಂಧ ಬುಕ್‌ಲೆಟ್ ವಿತರಣೆ ಮಾಡುವ ದಿನಾಂಕ	ದರ ಪಟ್ಟಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ	ದರ ಪಟ್ಟಿಗಳನ್ನು ತೆರೆಯುವ ದಿನಾಂಕ	ಷರಾ
1.	ಐಸಿಸಿಸಿ ಯೋಜನೆಯಡಿ ಹೆಚ್ಚುವರಿ ಅಂಶಗಳು	12.12.2022ರಂದು ಬೆಳಿಗ್ಗೆ 10:00 ರಿಂದ ಸಂಜೆ 4:00 ಗಂಟೆಯವರೆಗೆ – ಮೆ॥ ಐಡೆಕ್ ಪಿಎಂಸಿ ಬೆಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್, #30/1, ತಿಮ್ಮಯ್ಯ ರಸ್ತೆ, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–560 052	20.12.2022 ರ ಸಂಜೆ 4:00 ಗಂಟೆಗೆ	20.12.2022 ರ ಸಂಜೆ 4:30 ಗಂಟೆಗೆ	ಅತಿ ಕಡಿಮೆ ದರಗಳನ್ನು ಅಂದಾಜುಪಟ್ಟಿ ಸಿದ್ಧಪಡಿಸಲು ಪರಿಗಣಿಸಲಾಗುತ್ತದೆ

ಟಿಪ್ಪಣಿ:– ಭರ್ತಿ ಮಾಡಿದ ಮತ್ತು ಸಹಿ ಮಾಡಿದ ಅನುಬಂಧ ಮುಚ್ಚಿದ ಲಕೋಟೆಯಲ್ಲಿರಿಸಿ ಕಾರ್ಯಪಾಲಕ ಅಭಿಯಂತರರು–02, ಬೆಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್, ಬೆಂಗಳೂರು ಇಲ್ಲಿಗೆ ದಿನಾಂಕ: 20.12.2022ರ ಸಂಜೆ 4:00 ಗಂಟೆಯೊಳಗಾಗಿ ತಲುಪುವಂತೆ ಸಲ್ಲಿಸತಕ್ಕದ್ದು.
ಸಹಿ/– ಕಾರ್ಯಪಾಲಕ ಅಭಿಯಂತರರು–02, ಬೆಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್

ಬೆಂಗಳೂರು ವಿಶ್ವವಿದ್ಯಾಲಯ
NAAC Accredited with 'A' GRADE
ಜ್ಞಾನಭಾರತಿ ಆವರಣ, ಬೆಂಗಳೂರು – 560 056. Website: www.bangaloreuniversity.ac.in
ಸಂಖ್ಯೆ: ಎಸಿಎ.4/ಸ್ನಾ.ಪ./2022–2023 ದಿನಾಂಕ: 09.12.2022

ಅಧಿಸೂಚನೆ

ಉಲ್ಲೇಖ: ಕುಲಪತಿಗಳ ಅನುಮೋದನೆ ದಿನಾಂಕ: 09.12.2022

ಬೆಂಗಳೂರು ವಿಶ್ವವಿದ್ಯಾಲಯ ದಿನಾಂಕ: 27.10.2022 ಸಮಸಂಖ್ಯೆ ಸ್ನಾತಕೋತ್ತರ ಪದವಿ ಪ್ರವೇಶಾತಿಯ ಅಧಿಸೂಚನೆಯನ್ನು ಮುಂದುವರೆಸಿ, ಖಾಲಿ ಇರುವ ಸ್ಥಾನಗಳನ್ನು ಭರ್ತಿ ಮಾಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ ಆಸಕ್ತ ಅಭ್ಯರ್ಥಿಗಳು ಆನಲೈನ್ ಮೂಲಕ ದಿನಾಂಕ: 09.12.2022 ರಿಂದ 14.12.2022 ರವರೆಗೆ ಅರ್ಜಿ ಸಲ್ಲಿಸಬಹುದಾಗಿದೆ.

ಎ. ಜ್ಞಾನಭಾರತಿ ಆವರಣ:

1) **ಕಲಾ ನಿಕಾಯ: ಎಂ.ಎ.** – ಅರ್ಥಶಾಸ್ತ್ರ, ಆಂಗ್ಲ, ಹಿಂದಿ, ಇತಿಹಾಸ, ಪತ್ರಿಕೋದ್ಯಮ ಮತ್ತು ಸಂವಹನ, ಕನ್ನಡ, ತತ್ವಶಾಸ್ತ್ರ, ರಾಜ್ಯಶಾಸ್ತ್ರ, ಗ್ರಾಮೀಣಾಭಿವೃದ್ಧಿ ಅಧ್ಯಯನ, ಸಂಸ್ಕೃತ, ಸಮಾಜಶಾಸ್ತ್ರ, ತೆಲುಗು, ಉರ್ದು, ಮಹಿಳಾ ಅಧ್ಯಯನ, ಪ್ರದರ್ಶನ ಕಲೆ, ನೃತ್ಯ (ಭರತನಾಟ್ಯ), ನಾಟಕ, ಸಂಗೀತ.
ಸ್ವ ಹಣಕಾಸು ಕೋರ್ಸುಗಳು: ಎಂ.ಎ.– ಮಾಧ್ಯಮ ಅಧ್ಯಯನ ಮತ್ತು ಸಾರ್ವಜನಿಕ ಸಂಪರ್ಕ ಮತ್ತು ಜಾಹೀರಾತು.

2) **ವಿಜ್ಞಾನ ನಿಕಾಯ: ಎಂ.ಎಸ್ಸಿ.**–ಅನ್ವಯಿಕ ತಳಿಶಾಸ್ತ್ರ, ಅನ್ವಯಿಕ ಭೂಗರ್ಭಶಾಸ್ತ್ರ, ಜೀವರಸಾಯನಶಾಸ್ತ್ರ, ಜೀವತಂತ್ರಜ್ಞಾನ, ರಸಾಯನಶಾಸ್ತ್ರ, (Specialization in Organic, Inorganic & Physical Chemistry at 2nd year level only) ಗಣಕ ವಿಜ್ಞಾನ, ವಿದ್ಯುನ್ಮಾನ ಮಾಧ್ಯಮ, ವಿದ್ಯುನ್ಮಾನ ವಿಜ್ಞಾನ, ಪರಿಸರ ವಿಜ್ಞಾನ, ಫುಡ್ ಟೆಕ್ನಾಲಜಿ, ಫ್ಯಾಷನ್ ಅಂಡ್ ಅಪೆರಲ್ ಡಿಸೈನ್, ಭೂಗೋಳಶಾಸ್ತ್ರ, ಯೋಗ ವಿಜ್ಞಾನ, ಜೀವ ವಿಜ್ಞಾನ, ಗಣಿತ ಶಾಸ್ತ್ರ, ಸೂಕ್ಷ್ಮಜೀವಶಾಸ್ತ್ರ, ಭೌತಶಾಸ್ತ್ರ, ಮನ:ಶಾಸ್ತ್ರ, ಸಂಖ್ಯಾಶಾಸ್ತ್ರ, ಪ್ರಾಣಿಶಾಸ್ತ್ರ, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ, (ಎಂ.ಎಲ್.ಐ.ಎಸ್.ಸಿ (ಮೊದಲ ಎರಡು ಸೆಮಿಸ್ಟರ್‌ಗಳನ್ನು ಪೂರೈಸ ಬಯಸಿದಲ್ಲಿ ಸ್ನಾತಕ ಪದವಿಯೊಂದಿಗೆ ನಿರ್ಗಮಿಸಬಹುದು).
ಸ್ವ ಹಣಕಾಸು ಕೋರ್ಸುಗಳು: ಎಂ.ಎಸ್ಸಿ.–ಫಿಲ್ಮ್ ಮೇಕಿಂಗ್, ವಿಧಿ ವಿಜ್ಞಾನ, ಗ್ರಾಫಿಕ್ಸ್ ಮತ್ತು ಅನಿಮೇಷನ್, ನೈಸರ್ಗಿಕ ವಿಪತ್ತು ನಿರ್ವಹಣೆ, ಘನತ್ಯಾಜ್ಯನಿರ್ವಹಣೆ, ಭೌಗೋಳಿಕ ಮಾಹಿತಿ ವಿಜ್ಞಾನ, ಅಣುಜೀವ ವಿಜ್ಞಾನ ಮತ್ತು ಮನ:ಶಾಸ್ತ್ರ ಸಮಾಲೋಚನೆ.

3) **ವಾಣಿಜ್ಯ ನಿಕಾಯ: ಎಂ.ಕಾಂ.**
ಸ್ವ ಹಣಕಾಸು ಕೋರ್ಸುಗಳು: ಎಂ.ಕಾಂ (ಎಫ್.ಎ.), ಎಂ.ಕಾಂ (ಐ.ಬಿ.) ಮತ್ತು ಎಂ.ಟಿ.ಟಿ.ಎಂ.

4) **ಶಿಕ್ಷಣ ನಿಕಾಯ: ಎಂ.ಎಡ್.**

ಅರ್ಜಿಗಳನ್ನು ಸಲ್ಲಿಸುವ ಹಾಗೂ ಪ್ರವೇಶ ಪ್ರಕ್ರಿಯೆಯ ದಿನಾಂಕಗಳು:

ಅ)	ರೂ. 200/– ದಂಡ ಶುಲ್ಕದೊಂದಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ	09.12.2022 to 14.12.2022
ಆ)	ಡೌನ್‌ಲೋಡ್ ಮಾಡಿಕೊಂಡ ಅರ್ಜಿಗಳ ಜೊತೆಯಲ್ಲಿ ಸ್ವಯಂ ದೃಢೀಕರಿಸಿದ ಪ್ರಮಾಣ ಪತ್ರಗಳನ್ನು ಸಲ್ಲಿಸಲು ಕೊನೆಯ ದಿನಾಂಕ	15.12.2022
ಇ)	ತಾತ್ಕಾಲಿಕ ಜೇಷ್ಠತಾ ಪಟ್ಟಿ ಪ್ರಕಟಿಸುವ ದಿನಾಂಕ	16.12.2022
ಈ)	ಜೇಷ್ಠತಾ ಪಟ್ಟಿಯಲ್ಲಿನ ದೋಷಗಳ ಬಗ್ಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ (ಆನ್ ಲೈನ್/ಆಫ್ ಲೈನ್)	17.12.2022
ಉ)	ಅಂತಿಮ ಜೇಷ್ಠತಾ ಪಟ್ಟಿ ಪ್ರಕಟಿಸುವ ದಿನಾಂಕ	19.12.2022
ಊ)	ಆಫ್‌ಲೈನ್ ಮುಖಾಂತರ ವಿಜ್ಞಾನ, ಕಲಾ, ಶಿಕ್ಷಣ ಮತ್ತು ವಾಣಿಜ್ಯ ವಿಷಯಗಳ ಪ್ರವೇಶ ಪ್ರಕ್ರಿಯೆ ದಿನಾಂಕಗಳು	20.12.2022
ಋ)	ಪ್ರಥಮ ಸೆಮೆಸ್ಟರ್ ತರಗತಿಗಳು ಪ್ರಾರಂಭವಾಗುವ ದಿನಾಂಕ	21.12.2022

ಸೂಚನೆ: ಮೊದಲೇ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ಅರ್ಜಿ ಸಲ್ಲಿಸುವ ಅಗತ್ಯವಿಲ್ಲ. ಹಿಂದಿನ ಅಧಿಸೂಚನೆಗೆ ವಿರುದ್ಧವಾಗಿ ಈಗಾಗಲೇ ಅರ್ಜಿ ಸಲ್ಲಿಸಿದ ಮತ್ತು ಕೌನ್ಸೆಲಿಂಗ್‌ಗೆ ಹಾಜರಾಗದ/ ಮೊದಲೇ ಸೀಟುಗಳನ್ನು ನೀಡದ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು.
ಸಹಿ/– ಕುಲಸಚಿವರು

Government of Karnataka
Office of the Commissioner, Hindu Religious Institutions and Charitable Endowments, Chamarajpet, Bangalore-18
E-AUCTION FOR INVESTMENT OF SURPLUS FUNDS IN FIXED DEPOSITS (CALLABLE) THROUGH E-PORTAL OF GOVERNMENT OF KARNATKA
e-Auction Document - ACT 2/CR1/2022-23 Date : 08.12.2022

(e-Auction Notification, Eligibility Criteria and Terms and Conditions)
SCHEDULE OF EVENTS FOR e-AUCTION 2/CR 2/2022--23
Particulars : 1) Date of e-Auction Notification, **Date : 09.12.2022**
2) Last Date to upload the Eligibility Criteria in Annexure-A & Declaration in Annexure-B & Annexure-C in the e-portal, **Date : 15.12.2022 on or before 17.00 hrs. 3)** Evaluation of Bankers based on documentary evidence : **Date 16.12.2022. 4)** Live Bidding, **Date : 17.12.2022**
For any further details please logon to: https://eproc.karnataka.gov.in
Note : For any further information and announcement regarding this tender please contact office of the Commissioner.

Sd/-
Commissioner
Hindu Religious Institutions and Charitable Endowments, Bangalore
DIPR/CP/SSC/3462/2022-23

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ದಾಸರಹಳ್ಳಿ ವಿಭಾಗ, ದಾಸರಹಳ್ಳಿ ವಲಯ, 2ನೇ ಮತ್ತು 4ನೇ ಅಡ್ಡರಸ್ತೆ, 2ನೇ ಮುಖ್ಯ ರಸ್ತೆ, 3ನೇ ಬ್ಲಾಕ್, ಹೆಚ್.ಎಂ.ಟಿ. ಬಡಾವಣೆ, ಬಿಡಬ್ಲ್ಯೂಎಸ್ಎಸ್‌ಬಿ ಹತ್ತಿರ, ನಾಗಸಂದ್ರ ಅಂಚೆ, ಬೆಂಗಳೂರು–560 073.
ಸಂಖ್ಯೆ:ಬೃಬೆಂಮಪಾ/ಕಾಅ/ದಾವಿ/ಟೆಂಪ್ರ/12/2022-23 ದಿನಾಂಕ: 08-12-2022

ಟೆಂಡರ್ ಮುಂದೂಡಿಕೆ ಪ್ರಕಟಣೆ–01

ವಿಷಯಃ ಟೆಂಡರ್ ಪ್ರಕಟಣೆಯನ್ನು ಮುಂದೂಡುವ ಬಗ್ಗೆ.
ಉಲ್ಲೇಖಃ 1. ಈ ಕಛೇರಿಯ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಟೆಂಡರ್ ಪ್ರಕಟಣೆ ಸಂಖ್ಯೆ:ಬೃಬೆಂಮಪಾ/ಕಾಅ/ದಾವಿ/ಟೆಂಪ್ರ/12/2022-23, ದಿನಾಂಕ: 25-11-2022
ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಉಲ್ಲೇಖ ರೀತ್ಯಾ ಟೆಂಡರ್ ಕರೆಯಲಾಗಿದ್ದು, ತಾಂತ್ರಿಕ ಕಾರಣಗಳಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಪ್ರೀಬಿಡ್ ಮೀಟಿಂಗ್, ಬಿಡ್‌ನ್ನು ಸಲ್ಲಿಸುವ ಅಂತಿಮ ದಿನಾಂಕ, ತಾಂತ್ರಿಕ ಮತ್ತು ಆರ್ಥಿಕ ಬಿಡ್‌ನ ತೆರೆಯುವ ದಿನಾಂಕಗಳನ್ನು ಮುಂದೂಡಿದ್ದು ಈ ಕೆಳಕಂಡಂತಿದೆ. ಉಳಿದಂತೆ ಯಾವುದೇ ಬದಲಾವಣೆಗಳಿರುವುದಿಲ್ಲ.
ಪರಿಷ್ಕೃತ ವೇಳಾ ಪಟ್ಟಿಃ 1) ಪೂರ್ವ ಬಿಡ್ ಸಭೆಯು ಮುಖ್ಯ ಅಭಿಯಂತರರು, ದಾಸರಹಳ್ಳಿ ವಲಯ ಇಲ್ಲಿ ದಿನಾಂಕ: 13–12–2022 ಬೆಳಗ್ಗೆ 11:30 ಗಂಟೆಗೆ ನಡೆಸಲಾಗುವುದು. 2) ಟೆಂಡರ್ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಆನ್‌ಲೈನ್‌ನಲ್ಲಿ ಸಲ್ಲಿಸುವ ದಿನಾಂಕ: 17–12–2022 ಸಂಜೆ 4:00 ಗಂಟೆಗೆ ಅಥವಾ ಅದಕ್ಕೂ ಮುಂಚಿತವಾಗಿ. 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 19–12–2022ರ ಸಂಜೆ 4:30 ಗಂಟೆಗೆ. 4) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 20–12–2022ರ ಸಂಜೆ 4:30 ಗಂಟೆಗೆ (ಸಾಧ್ಯವಾದಲ್ಲಿ).
ಸಹಿ/– ಕಾರ್ಯಪಾಲಕ ಅಭಿಯಂತರರು, ದಾಸರಹಳ್ಳಿ ವಿಭಾಗ, ಬೃಬೆಂಮಪಾ.

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ ಬಾಗಲಕೋಟೆ
ಕಾರ್ಯಪಾಲಕ ಅಭಿಯಂತರರ ಕಛೇರಿ,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬಾಗಲಕೋಟೆ.
Fax: 08354-235043 Email: bgkeezpe@yahoo.com Phone:08354-235042
ನಂ.ಕಾನಿಇಂ/ಪಂರಾ.ಇಂ.ವಿ/ಬಿಜಿಕೆ/ಪಿಬಿ–1,2,3/ಕಟ್ಟಡ/ಟೆಂಡರ/2022–23/4021 ದಿನಾಂಕ:09.12.2022

–:ಅಲ್ಪಾವಧಿ ಇ–ಪ್ರೋಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ (ಏಕ–ಲಕೋಟೆ):– :ಕೆ.ಡಬ್ಲ್ಯೂ–1 & 2 ಬಿಡ್ ಡಾಕ್ಯೂಮೆಂಟ್ :

ಕರ್ನಾಟಕ ಸರಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಅಧಿಕೃತ ಅರ್ಹ ಗುತ್ತಿಗೆದಾರರಿಂದ ವಿವಿಧ ಲೆಕ್ಕ ಶೀರ್ಷಿಕೆಯಲ್ಲಿ ಬಾಗಲಕೋಟೆ ಜಿಲ್ಲೆಯಲ್ಲಿನ ಈ ಕೆಳಕಂಡ ಕಾಮಗಾರಿಗಳಿಗೆ Standard Tender Document KW-1 ರ ನಿಬಂಧನೆಗೊಳಪಟ್ಟಂತೆ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಆದ್ಯಾದೇಶ 1999–2000ರ ಪ್ರಕಾರ ಆ್ಯಕ್ಟ್ 2000ರ ನಿಯಮದಂತೆ ಏಕ–ಲಕೋಟೆ ಪದ್ಧತಿಯನ್ವಯ ಐಟಂವಾರು ಗುತ್ತಿಗೆಯನ್ನು ಇ–ಪ್ರೋಕ್ಯೂರ್‌ಮೆಂಟ್ ಮೂಲಕ ಟರ್ನಕೀ ಆಧಾರದ ಮೇಲೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

2022–23 ನೇ ಸಾಲಿನ ವಿವೇಕ ಶಾಲಾ ಯೋಜನೆಯಡಿ ಆಯ್ಕೆಯಾದ ಶಾಲೆಗಳಲ್ಲಿನ ಭೋದನಾ ಕೊಠಡಿಗಳ ನಿರ್ಮಾಣದ ಅನುದಾನ ಹಾಗೂ 2021–22 ನೇ ಸಾಲಿನ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಡಶಾಲೆಗಳ ದುರಸ್ತಿ ಮತ್ತು ಮರು ನಿರ್ಮಾಣಕ್ಕೆ ಅನುದಾನ ಅಡಿಯಲ್ಲಿ ಸರ್ಕಾರಿ ಪತ್ರ ಸಂಖ್ಯೆ:ಇಪಿ/145/ಯೋಸಕ/2021 (ಭಾಗ–1) ಬೆಂಗಳೂರು ದಿನಾಂಕ:11.01.2022 & 13.01.2022 ರಂತೆ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಡಶಾಲೆಗಳ ಮೂಲಭೂತ ಸೌಲಭ್ಯಕ್ಕಾಗಿ ಬಾಗಲಕೋಟೆ ಜಿಲ್ಲೆಗೆ ರೂ.101.52 ಲಕ್ಷ ಅನುದಾನದಲ್ಲಿ 8 ಕೊಠಡಿಗಳ ಮರು ನಿರ್ಮಾಣ ಹಾಗೂ ಕೊಠಡಿಗಳ ದುರಸ್ತಿ ಲೆಕ್ಕಶಿರ್ಷಿಕೆ:4202–01–202–1–05–133 ಮಂಜೂರಾದ ಅನುದಾನ ಅಡಿಯಲ್ಲಿ ಬಾಗಲಕೋಟೆ ಜಿಲ್ಲೆ ಬಾಗಲಕೋಟೆ, ಬಾದಾಮಿ, ಬೀಳಗಿ, ಮುಧೋಳ, ಗುಳೇದಗುಡ್ಡ ಹುನಗುಂದ, ರಬಕವಿ ಬನಹಟ್ಟಿ, ಜಮಖಂಡಿ, ಹಾಗೂ ಇಲಕಲ್ಲ, ತಾಲೂಕಿನ ಅಡಿಯಲ್ಲಿ ಇತರೆ ವರ್ಗಕ್ಕೆ ಮೀಸಲಾದ ಕಾಮಗಾರಿಗಳ ಇಂಡೆಂಟ್ ನಂ:96157, 97227, 95613 ಮತ್ತು ಪರಿಶಿಷ್ಟ ಜಾತಿ ವರ್ಗಕ್ಕೆ ಮೀಸಲಾದ ಕಾಮಗಾರಿಗಳ ಇಂಡೆಂಟ್ ನಂ:96221, 96222, 96175, 96176, 96196, 96189,96172,96187, 96200, 96191, 96193, 96160, 96163, 96164, 96165, 96169, 96232, 96236, 96237, 96241, 96242, 96243, 96245, 96248, 96251,96254, 96255 ಹಾಗೂ ಪರಿಶಿಷ್ಟ ಪಂಗಡ ವರ್ಗಕ್ಕೆ ಮೀಸಲಾದ ಇಂಡೆಂಟ ಸಂಖ್ಯೆ:97664, 96186, 96185, 96190, 96192, 96162, 96167, 96235, 96238, 96246, 96247, 96252 ಟೆಂಡರ ಕಾಮಗಾರಿ ವಿವರ, ಗುತ್ತಿಗೆದಾರರ ಅರ್ಹತೆ ವಿವರ, ಟೆಂಡರಗಿಟ್ಟ ಮೊತ್ತ ರೂ.13.90 ದಿಂದ 49.20 ಲಕ್ಷಗಳ ಮಿತಿಗೊಳಪಟ್ಟು) ಟೆಂಡರ ಅರ್ಜಿಯ ಬೆಲೆ, ಮತ್ತು ಇ.ಎಂ.ಡಿ ಮೊತ್ತ ಎಲ್ಲ ವಿವರಗಳು ಇ–ಪೋರ್ಟಲ್‌ನಲ್ಲಿ ಇದ್ದಂತೆ,

ಇ–ಪ್ರೋಕ್ಯೂರ್‌ಮೆಂಟ್ ಮುಖಾಂತರ ಅರ್ಜಿ ಸಲ್ಲಿಸುವ ಹಾಗೂ ಶೆಡ್ಯೂಲ್–ಬಿಯನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ: 27.12.2022 ರ ಸಾಯಂಕಾಲ 5.30 ಗಂಟೆವರೆಗೆ.

ಇ–ಪ್ರೋಕ್ಯೂರ್‌ಮೆಂಟ್‌ನಲ್ಲಿ ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಸಮಯ:29.12.2022 ರಂದು ಮುಂಜಾನೆ 11.00 ಗಂಟೆಯ ನಂತರ.

ಸೂಚನೆ:ಹೆಚ್ಚಿನ ವಿವರಗಳಿಗಾಗಿ ಈ ಕೆಳಗೆ ಸಹಿ ಮಾಡಿದವರ ಕಛೇರಿಗೆ ಅಥವಾ ವೆಬ್‌ಸೈಟ್ http://www.eprocurment.karnataka.gov.in ಮುಖಾಂತರ ಸಂಪರ್ಕಿಸಬಹುದಾಗಿದೆ.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು,
ಪಂಚಾಯತ ರಾಜ್ ಇಂಜಿನಿಯರಿಂಗ್ ವಿಭಾಗ, ಬಾಗಲಕೋಟೆ
DIPR/BGK/RO-NO-665/MCA/2022-23

ಭೂಮಿಕಾ
ಮಹಿಳೆಯ ಆಪ್ತ ಸಂಗಾತಿ

ವಿಲ್ಮಾ ಕ್ರಾಸ್ಟೊ ಕರ್ವಾಲೊ

ಲೋಕ ಪಯಣ... ಆತ್ಮಾನುಸಂಧಾನ

ವಯಸ್ಸು, ದೇಶ, ಗಡಿಗಳ ಹಂಗಿಲ್ಲದೇ ಮಕ್ಕಳಂತೆ ಅದಮ್ಯ ಉತ್ಸಾಹವನ್ನು ಬೆನ್ನಿಗಿಟ್ಟುಕೊಂಡು ಪಯಣಿಸುವ ಮಹಿಳಾ ಸೋಲೊ ಟ್ರಾವೆಲರ್‌ಗಳು ನಮ್ಮ ನಡುವೆ ಇದ್ದಾರೆ. ಸವಾಲಿಗೆ ಮುಖ ಒಡ್ಡುತ್ತ ನಡೆಯುವ ದಿಟ್ಟ 'ಏಕಾಂಗಿ ಪಯಣಿಗರ' ಅನುಭವಗಳು ಈ ಕ್ರಿಸ್ಮಸ್ ರಜೆಯಲ್ಲಿ ಮತ್ತಷ್ಟು ಪ್ರವಾಸ ಕೈಗೊಳ್ಳಲು ಸ್ಫೂರ್ತಿಯಾಗಲಿ

'ವೆಸ್ಪಾ'ದಲ್ಲಿ ಘಟ್ಟ ಹತ್ತಿಳಿಯುವ ಸುಖವೇ ಬೇರೆ

ಮೈಸೂರು, ತುಮಕೂರಿನಿಂದ ಆರಂಭಿಸಿ, ಕರ್ನಾಟಕದ ಕರಾವಳಿಯಲ್ಲಿ ಮಂಗಳೂರಿಂದ ಶುರುವಾಗಿ, ಉಡುಪಿ, ಕುಂದಾಪುರ, ಬೈಂದೂರು, ಹೊನ್ನಾವರ, ಗೋಕರ್ಣ, ಶಿರಸಿ, ಯಲ್ಲಾಪುರ, ಮುಂಡಗೋಡು, ಬನವಾಸಿ, ಬೇಲೂರು, ಹಾವೇರಿ, ಶಿವಮೊಗ್ಗ, ಸಾಗರ, ಆನವಟ್ಟಿ ಕಾರವಾರದವರೆಗೆ ಹೋಗಿ ಬಂದಿದ್ದೇನೆ. ಶಿರಾಡಿ, ಆಗುಂಬೆ, ಚಾರ್ಮಾಡಿ, ಅರೆಬೈಲು, ಸೇರಿದಂತೆ ಬಹುತೇಕ ಎಲ್ಲಾ ಘಟ್ಟಗಳನ್ನೂ ಎರಡೆರಡು ಸಲ ಹತ್ತಿ ಇಳಿದಿದ್ದೇನೆ ಅದೂ ನನ್ನ ಪ್ರೀತಿಯ ಕಿತ್ತಳೆ ಬಣ್ಣದ 'ವೆಸ್ಪಾ' ಗಾಡಿಯಲ್ಲಿ.

ಮರೆಯಲಾಗದ ಅನುಭವಗಳನ್ನು ಪಡೆಯಬೇಕು ಎನ್ನುವ ಕಾರಣಕ್ಕಾಗಿಯೇ ನಾನು ಏಕಾಂಗಿಯಾಗಿ ಹೊರಡುತ್ತೇನೆ. ಎದುರಾದ ಪ್ರತಿ ವ್ಯಕ್ತಿಯೂ ಒಂದು ಅನುಭವದ ಮೊತ್ತವೆ. ದಾರಿ ತೋರಿಸಿದವರು, ನೀರು ಕೊಟ್ಟವರು, ಊಟ ಹಾಕಿದವರು, ಮಳೆಯಲ್ಲಿ ನಿಂತಾಗ 'ನಮ್ ಮನೆಯಲ್ಲಿ ಉಳಿಯಿರಿ' ಎಂದು ಆತ್ಮೀಯವಾಗಿ ಕಂಡವರು ಹೀಗೆ ಎಲ್ಲರೂ ನನ್ನ ಪಾಲಿನ ನಿಜದ ಬಂಧುಗಳು.

ಒಮ್ಮೆ ಶಿರಸಿಯಿಂದ ಬೈಂದೂರು ಮಾರ್ಗವಾಗಿ ಹೊರಟಿದ್ದೆ. ಸಂಜೆಯಷ್ಟರಲ್ಲಿ ಮಂಗಳೂರು ತಲುಪಬೇಕಿತ್ತು. ಮಧ್ಯೆ ಹಿಂದಿನ ಚಕ್ರದಲ್ಲಿ ಒಂದ್ ರೀತಿಯ ಶಬ್ದ ಬರಲು ಶುರುವಾಯ್ತು, ಆದರೆ ಅಲ್ಲಂತೂ ನರಪಿಳ್ಳೆಯೂ ಸಿಗದಂಥ ನಿರ್ಜನ ಘಟ್ಟ ಪ್ರದೇಶ. ನನ್ ಅದೃಷ್ಟಕ್ಕೆ ಸಿಕ್ಕಿದ್ರು ಒಬ್ಬರು ಮೆಕಾನಿಕ್. ಆದ್ರೆ ಅವರು ಈ ಗಾಡಿಯನ್ನು ನೋಡಿದ್ದೇ ಮೊದಲ ಬಾರಿಯಂತೆ. ಕಡೆಗೆ ಬೆಂಗಳೂರಿನಲ್ಲಿ ಪರಿಚಯ ಇರುವ ಗ್ಯಾರೇಜ್‌ನವರಿಗೆ ನವರಿಗೆ ವಿಡಿಯೊ ಕಾಲ್ ಮಾಡಿ ಸರಿಪಡಿಸಿಕೊಂಡು ಹೊರಟೆ. ಅವರು ಬೆಂಗಳೂರು ತಲುಪುವವರೆಗೂ ನನ್ನ ಸಂಪರ್ಕಿಸಿ, ಯೋಗಕ್ಷೇಮ ವಿಚಾರಿಸಿದ್ದರು. ಆಗೆಲ್ಲ ಈ ಜನ ತೋರಿಸುವ ಕಾಳಜಿಗೆ ಕಣ್ಣ ಹನಿಗಳೇ ಕಾಣಿಕೆ.

ಈವರೆಗೆ ದೊಡ್ಡ ಸವಾಲುಗಳಂತೇನೂ ಎದುರಾಗಿಲ್ಲ. ಆದರೆ, ಹೆಣ್ಣು ಎನ್ನುವುದೇ ದೊಡ್ಡ ಸವಾಲು. ಅದರಲ್ಲಿಯೂ ಸೀರೆ ಉಟ್ಟು, ಸ್ಕೂಟರ್‌ನಲ್ಲಿ ಹೊರಡುವುದು ಸವಾಲೇ. ನನ್ನದು ನಿಯೋಜಿತವಲ್ಲದ ಪ್ರಯಾಣ. ಹಾಗಾಗಿ ಅಲ್ಲಲ್ಲಿ ಉಳಿದುಕೊಳ್ಳುವ ಸವಾಲು ಎದುರಾಗುತ್ತದೆ. ಕಾಡಿನ ದಾರಿಯಲ್ಲಿ, ಪ್ರಾಣಿಗಳು ಎದುರಾಗುವ ಸಂಭವ ಇರುತ್ತದೆ. ಆದರೆ, ಈ ಎಲ್ಲ ಸವಾಲುಗಳನ್ನು ಇಷ್ಟಪಟ್ಟು ಎದುರು ಹಾಕಿಕೊಂಡಿರುವುದರಿಂದ ತನ್ನಿಂತಾನೇ ಪರಿಹಾರವೂ ಸಿಕ್ಕಿಬಿಡುತ್ತದೆ !

ಸರಳವಾದ ಹುಡುಗಿ ನಾನು. ಓದುವ ಹವ್ಯಾಸ ಕೂಡ ನನಗೆ ದೇಶ ಸುತ್ತುವಂತೆ ಪ್ರೇರೇಪಣೆ ನೀಡಿದೆ. ಲೇಹ್, ಲಡಾಕ್‌ಗೆ ಸೀರೆಯುಟ್ಟು ಏಕಾಂಗಿಯಾಗಿ ಬೈಕ್‌ನಲ್ಲಿಯೇ ಹೋಗುವ ಆಸೆಯಿದೆ.

ಅರ್ಚನಾ ಆರ್ಯ

ನಿರೂಪಣೆ: ರೂಪಾ ಕೆ.ಎಂ.

ನಿಮ್ಮ ಕನಸು ಏನಿದೆಯೋ ಆ ದಿಕ್ಕಿನಲ್ಲಿ ಸಾಗಿ. ನನ್ನ ಕನಸು ಇದ್ದಿದ್ದು; ಸಮುದ್ರಮಟ್ಟದಿಂದ ಅತಿ ಎತ್ತರದ 5,359 ಮೀಟರ್ ಎತ್ತರವಿರುವ ಲಡಾಕ್‌ನ 'ಖರ್ದುಂಗ್ಲಾ ಪಾಸ್' ನ ಬೈಕ್‌ನಲ್ಲಿ ತಲುಪುವುದು. ಅದನ್ನು ನಾನು ಈ ವರ್ಷ ಆಗಸ್ಟ್‌ನಲ್ಲಿ ಈಡೇರಿಸಿಕೊಂಡಿದ್ದೇನೆ. ಕಡಿದಾದ ಹಾದಿಯಲ್ಲಿ ಬೈಕ್ ಏರಿ ಹೋಗುವ ಸುಖವಿದೆಯೆಲ್ಲ ಅದು ಅನನ್ಯ.

ನಿಮಗೆ ಗೊತ್ತಿರಲಿ ನನ್ನ ವಯಸ್ಸು ಬರೀ 54! ನನಗೆ ತಿಳಿದಿರುವಂತೆ, ಈವರೆಗೆ ಖರ್ದುಂಗ್ಲಾವನ್ನು 51 ಮತ್ತು 53 ವರ್ಷದ ಮಹಿಳೆಯರು ಬೈಕ್‌ನಲ್ಲಿ ತಲುಪಿದ್ದಾರೆ. ಬಹುಶಃ ಈ ವಯೋಮಾನದ ಮೊದಲ ಮಹಿಳಾ ಬೈಕ್ ರೈಡರ್ ನಾನೇ. ನನಗೆ ಬೈಕ್ ಹಾಗೂ ಕಾರುಗಳ ಬಗ್ಗೆ ಮೊದಲಿನಿಂದಲೂ ಆಸಕ್ತಿ ಇತ್ತು. ಈ ಆಸಕ್ತಿಯನ್ನು ಪೋಷಿಸಿದ್ದು ನನ್ನಿಬ್ಬರು ಮಕ್ಕಳೇ.

ನನ್ನೂರು ಕುಂದಾಪುರ. ಎಳವೆಯಿಂದಲೂ ನನಗೆ ಕ್ರೀಡೆಯಲ್ಲಿ ಅಪಾರ ಆಸಕ್ತಿ. ಕಾಲೇಜು ದಿನಗಳಲ್ಲಿ ವಾಲಿಬಾಲ್ ಆಟಗಾರ್ತಿಯಾಗಿ ರಾಷ್ಟ್ರಮಟ್ಟದ ಟೂರ್ನಿಗಳಲ್ಲಿ ಕರ್ನಾಟಕ ತಂಡವನ್ನು ಪ್ರತಿನಿಧಿಸಿದ್ದೆ. 25 ವರ್ಷಗಳಿಂದೀಚೆಗೆ ಬದುಕು ಕಟ್ಟಿಕೊಂಡಿದ್ದು ಬೆಂಗಳೂರಿನಲ್ಲಿ, ವೃತ್ತಿಯಲ್ಲಿ 'ಕಾರ್ಪೊರೇಟ್ ಟ್ರೇನರ್'.

ಪಯಣ ಆರಂಭವಾಗಿದ್ದು..

ಬೆಂಗಳೂರಿನಿಂದ ಲಡಾಕ್‌ಗೆ ವಿಮಾನದಲ್ಲಿ ಪ್ರಯಾಣ ಮಾಡಿದ್ದೆ. ಲಡಾಕ್‌ನಿಂದ ಖರ್ದುಂಗ್ಲಾಗೆ ಸುಮಾರು 900ಕಿ.ಮೀ ಅನ್ನು ಬೈಕ್‌ನಲ್ಲಿ ಏಳು ದಿನದಲ್ಲಿ ತಲುಪಿದ್ದೆ. ಬಾಲ್ಯದಿಂದಲೂ ಏಕಾಂಗಿಯಾಗಿ ಬೈಕ್ ಪಯಣ ಮಾಡಬೇಕು ಎನ್ನುವ ಆಸೆಯಿತ್ತು. ಅದು ಈಡೇರಿದ್ದು ಮಾತ್ರ 54ನೇ ವಯಸ್ಸಿನಲ್ಲಿ. ನನ್ನ ಕನಸನ್ನು ಮದುವೆ, ಮಕ್ಕಳು ಎನ್ನುವ ಜವಾಬ್ದಾರಿಗಳ ನಡುವೆ ಎಂದಿಗೂ ಬಿಟ್ಟುಕೊಟ್ಟುವಳಲ್ಲ. ಹಾಗಾಗಿ ಇದು ಸಾಧ್ಯ ಆಯಿತು. ಇದಕ್ಕೆಲ್ಲ ಕುಟುಂಬದ ಒತ್ತಾಸೆಯಿತ್ತು.

ಯುವಸಮೂಹ ಹೆಚ್ಚಾಗಿ ಬೆಂಗಳೂರಿಂದಲೇ ಲಡಾಕ್‌ಗೆ ಬೈಕ್‌ನಲ್ಲಿ ಹೋಗ್ತಾರೆ. ಆದರೆ, ನನಗೆ ಅಷ್ಟು ಸಮಯವಿರಲಿಲ್ಲ. ಹಾಗೂ ವಯಸ್ಸಿನ ಮಿತಿ ಇತ್ತು. ಹಾಗಾಗಿ ಸವಾಲು ತೆಗೆದುಕೊಳ್ಳಲಿಲ್ಲ. ಸಾಮರ್ಥ್ಯ ಹಾಗೂ ಮಿತಿ ಅರಿತು, ಅದರ ಅನುಸಾರವೇ ಸವಾಲು ಎದುರಿಸಿದರೆ ದಾರಿ ಸುಗಮವಾಗುತ್ತದೆ.

ಇದೇ ಮೊದಲಲ್ಲ

ಖರ್ದುಂಗ್ಲಾ ಪಾಸ್ ಬಗ್ಗೆ ಸಂಪೂರ್ಣ ಅರಿವೂ ಇರಲಿಲ್ಲ. ಹಿಂದಿನ ವರ್ಷವೂ ಖರ್ದುಂಗ್ಲಾ ಪಾಸ್‌ಗೆ ತೆರಳುವ ಪ್ರಯತ್ನ ಮಾಡಿದ್ದೆ. ಅದಕ್ಕಾಗಿ ಸಾಕಷ್ಟು ತಯಾರಿ ನಡೆಸಿದ್ದೆ. ಫಿಟ್‌ನೆಸ್, ಡಯಟ್‌ಗೆ ಆದ್ಯತೆ ನೀಡುವ ಜೊತೆಗೆ, ನಿತ್ಯ ಎರಡು–ಮೂರು ತಾಸು ಯೋಗಾಭ್ಯಾಸ ಮಾಡ್ತಿದ್ದೆ. ದುರ್ಗಮ ಹಾದಿ ಹಾಗೂ ಹೊಂದಿಕೆಯಾಗಲು ಕಷ್ಟವಾಗುವಂತಹ ವಾತಾವರಣದ ನಡುವೆಯೂ ಪ್ರಯಾಣ ಕೈಗೊಂಡೆ. ಆದರೆ ಖರ್ದುಂಗ್ಲಾ ಪಾಸ್ ರಸ್ತೆಯ ತುತ್ತ ತುದಿಗೆ ತಲುಪಲು ಹೊರಟಾಗ ಬೈಕ್‌ನಲ್ಲಿ ಕಾಣಿಸಿಕೊಂಡ ತಾಂತ್ರಿಕ ದೋಷದಿಂದ ಹಿಂದಿರುಗಬೇಕಾಯಿತು.

ಆದರೆ ಗುರಿ ಸ್ಪಷ್ಟವಾಗಿತ್ತು. ಪ್ರಯತ್ನ ಕೈಬಿಡಲಿಲ್ಲ. ಮಗಳೂ ರೈಡರ್ ಆಗಿರುವುದರಿಂದ ಹುರಿದುಂಬಿಸಿದಳು. ಛಲ ಕಳೆದುಕೊಳ್ಳದೇ ಈ ವರ್ಷದ ಮಾರ್ಚ್‌ನಲ್ಲಿ ಏಕಾಂಗಿಯಾಗಿ ಬೈಕ್‌ನಲ್ಲಿ ಪ್ರಯಾಣಿಸಲು ಪಣ ತೊಟ್ಟೆ. ಶೇಕಡ 40ರಷ್ಟು ಕಲ್ಲು, ಮಣ್ಣಿನ ಹಾದಿಯ ಪಯಣವದು. ಇಳಿಜಾರಿನ ಪ್ರದೇಶ, ಆಳವಾದ ಕಣಿವೆಗಳು, ಎತ್ತರಕ್ಕೆ ಹೋದಂತೆ ಆಮ್ಲಜನಕ ಕಡಿಮೆಯಾಗುತ್ತಿತ್ತು. ಇಂಥ ಸವಾಲುಗಳ ನಡುವೆಯೂ ಆಗಸ್ಟ್ 22ರಂದು ಖರ್ದುಂಗ್ಲಾದ ತುತ್ತತುದಿ ತಲುಪಿದೆ. ಆ ಖುಷಿಯನ್ನು ಬಣ್ಣಿಸಲು ಪದಗಳಿಲ್ಲ.

ಖರ್ದುಂಗ್ಲಾ ರಸ್ತೆಯಲ್ಲಿ ಹಿಮಕರಗಿ ಅಲ್ಲಲ್ಲಿ ನೀರು ನಿಂತಿರುತ್ತದೆ. ಆ ನೀರಿನ ಮೇಲೆ ಬೈಕ್ ಓಡಿಸುವ ಅನುಭವವೇ ಅದ್ಭುತ. ಕೆಲವೊಮ್ಮೆ ಆ ನೀರು ಮೊಳಕಾಲಿನ ಮಟ್ಟಕ್ಕೆ ಇದ್ದರೆ, ಇನ್ನು ಕೆಲವೊಮ್ಮೆ ಸೊಂಟದ ಮಟ್ಟಕ್ಕೆ ಬರುತ್ತದೆ. ಅಂಥ ಸಮಯದಲ್ಲಿ ಧೃತಿಗೆಡದೆ ಬ್ಯಾಲೆನ್ಸ್ ಮಾಡುತ್ತಾ ಬೈಕ್ ಓಡಿಸುವುದಿದೆಯಲ್ಲಾ, ಅದು ರೋಮಾಂಚನವೇ ಸರಿ. ನನ್ನೊಂದಿಗೆ ಬಂದಿದ್ದ ಬಹುತೇಕ ರೈಡರ್‌ಗಳು ನೀರಿನಲ್ಲಿ ಬಿದ್ದು ಬಿಟ್ಟರು. ಆದರೆ, ನಾನು ಬೀಳಲಿಲ್ಲ. ಅಲ್ಲಿದ್ದ ಉಳಿದ ರೈಡರ್‌ಗಳು ತೋರಿಸಿದ ಪ್ರೋತ್ಸಾಹದಾಯಕ ಚಪ್ಪಾಳೆ ಎಂದಿಗೂ ಮರೆಯಲಾಗದು.

55 ವರ್ಷ ಆಗುವ ಹೊತ್ತಿಗೆ ಜಗತ್ತಿನ ಅತಿ ಎತ್ತರ ಹಾಗೂ ಬೈಕಿನಲ್ಲಿ ಸಾಗಬಹುದಾದ ಕಡಿದಾದ ಪ್ರದೇಶ ಎನಿಸಿಕೊಂಡಿರುವ ಲಡಾಕ್‌ನ ಒಮ್ಲಿಂಗ್ ಲಾ ತಲುಪುವ ಇರಾದೆಯಿದೆ.

ವಿಲ್ಮಾ ಕ್ರಾಸ್ಟೊ ಕರ್ವಾಲೊ

'ಸಪ್ತ ಸಹೋದರಿಯರ' ರಾಜ್ಯಕ್ಕೆ ಪಯಣಿಸುವ ಕನಸು

ಬಾಲ್ಯದಿಂದಲೂ ನನಗೆ ಏಕಾಂಗಿಯಾಗಿ ಪ್ರವಾಸ ಮಾಡಬೇಕೆಂಬ ಆಸೆಯಿತ್ತು. ಚಿಕ್ಕವಳಿದ್ದಾಗ ಹಳ್ಳಿಯಲ್ಲಿ ಸ್ನೇಹಿತರ ಜತೆ ಕಾಡು, ಗುಡ್ಡ ಅಂತ ಸುತ್ತುತ್ತಿದ್ದೆ. ಊರ ನಡುವೆ ಮಾವಿನ ತೋಪು ಅಚ್ಚುಮೆಚ್ಚಿನ ತಾಣವಾಗಿತ್ತು. ಆದರೆ, ಏಕಾಂಗಿ ಪಯಣದ ಆಸಕ್ತಿ ಬಲಿತದ್ದು ಮಾತ್ರ 'ನೆನಪಿರಲಿ' ಸಿನಿಮಾದ 'ಇಂದು ಬಾನಿಗೆಲ್ಲ ಹಬ್ಬ' ಹಾಡು ನೋಡಿದ ಮೇಲೆ. ಆ ಹಾಡಲ್ಲಿ ನಾಯಕಿ ತನ್ನ ಕಾರಿನ ಜತೆ, ಸಮುದ್ರ, ಹಸಿರು ಅಂತ ಹೊರಟು ಬಿಡುತ್ತಾಳೆ. ಅದನ್ನು ನೋಡಿದ ಮೇಲೆ ಏಕಾಂಗಿಯಾಗಿ ಪ್ರಯಾಣ ಮಾಡಿದರೆ ಇಷ್ಟು ಮಜಾ ಸಿಗುತ್ತೆ ಅಂತ ಅನಿಸಿದ್ದು ಸುಳ್ಳಲ್ಲ. ಆಗಿನಿಂದಲೂ ಒಂಟಿ ಪಯಣದ ಬಗ್ಗೆ ಒಂದು ಸಣ್ಣ ಸೆಳೆತ ಇತ್ತು. ವಿದ್ಯಾಭ್ಯಾಸಕ್ಕಾಗಿ ಊರಿಂದ ಬೆಂಗಳೂರಿಗೆ ಒಬ್ಬಳೇ ಓಡಾಡುತ್ತಿದ್ದಾಗ ಆದ ಅನುಭವವೂ ಏಕಾಂಗಿ ಪ್ರಯಾಣಕ್ಕೆ ಇಂಬು ನೀಡಿತು.

ಓದು ಮುಗಿದ ಮೇಲೆ ಉದ್ಯೋಗಕ್ಕೆ ಸೇರಿದೆ. ಒಂದು ವಾರಾಂತ್ಯ ಇದ್ದಕ್ಕಿದ್ದ ಹಾಗೇ ಎಂದೂ ನೋಡಿರದ ಕೇರಳದ ಕಾಡು, ಬೆಟ್ಟ, ಜಲಪಾತ ನೋಡಬೇಕೆನಿಸಿತು. ಮನೆಯಲ್ಲಿಯೂ ಹೇಳಿರಲಿಲ್ಲ. ಸರಿಯಾದ ಸಮಯಕ್ಕೆ ರೈಲು ಟಿಕೆಟ್ ಕೂಡ ಮಾಡಿರಲಿಲ್ಲ. ಯಾವುದೇ ತಯಾರಿ ಇಲ್ಲದೇ ಹೊರಟು ಬಿಟ್ಟೆ. ವಾಸ್ತವ ಬೇರೆ ಇತ್ತು. ಇಡೀ ದಿನ ರೈಲಿನಲ್ಲಿ ಪ್ರಯಾಣ ಮಾಡಿ, ರಾತ್ರಿ 9.30ರ ಸುಮಾರಿಗೆ ಕೇರಳದ ಪಾಲಕ್ಕಾಡ್ ತಲುಪಿದೆ. ಅಲ್ಲಿಂದ ಎಲ್ಲಿಗೆ ಹೋಗಬೇಕು ಗೊತ್ತಿಲ್ಲ. ಎಲ್ಲಿ ಉಳಿದುಕೊಳ್ಳಬೇಕು ಗೊತ್ತಿಲ್ಲ. ಹಸಿವು ಒಂದು ಕಡೆ, ಸುಸ್ತಾಗಿ ಮಲಗುವುದಕ್ಕೆ ಜಾಗ ಬೇಕು. ಇನ್ನೊಂದು ಕಡೆ ಒಂಟಿ ಮಹಿಳೆ ಅಂತ ಉಳಿಯುವುದಕ್ಕೆ ರೂಮೂ ಕೊಡಲಿಲ್ಲ. 'ಒಬ್ಳೇ ಏನ್ ಮಾಡ್ತಿದ್ದಿಯಾ?' 'ಸೂಸೈಡ್ ಕೇಸಾ' – ಹೀಗೆ ಏನೇನೋ ಪ್ರಶ್ನೆಗಳು ಎದುರಾದವು. ಕಾಡಿಬೇಡಿ ರೂಮ್ ಗಿಟ್ಟಿಸಿಕೊಂಡೆ. ಈ ಅನುಭವ ಮರುದಿನ ನನ್ನನ್ನು ಪಾಲಕ್ಕಾಡ್‌ನಿಂದ ವಾಪಸ್ ಬೆಂಗಳೂರು ರೈಲು ಹತ್ತುವಂತೆ ಮಾಡಿತು.

ಚಂದನಾ

ಇದಾದ ನಂತರ ನಾನು ತಿರುಗಿ ನೋಡಿದ್ದೇ ಇಲ್ಲ. ಎಲ್ಲೇ ಹೋಗುವುದಿದ್ದರೂ ಆಯಾ ಊರಿನ, ಸ್ಥಳದ, ಸ್ಥಳೀಕರ ಬಗ್ಗೆ ಒಂದಷ್ಟು ಮಾಹಿತಿ ಕಲೆ ಹಾಕಿ ಪೂರ್ಣ ಸಿದ್ಧತೆಯೊಂದಿಗೆ ಪ್ರಯಾಣ ಆರಂಭಿಸ್ತೀನಿ. ಕೆಲವು ಕಡೆ 'ಒಂಟಿ ಹುಡುಗಿ'ಎನ್ನುವ ಕಾರಣಕ್ಕೆಎದುರಾಗುವ ಸಂಕಷ್ಟಗಳು, ಪುಟ್ಟ ಹಳ್ಳಿಗಳಲ್ಲಿ ಹೆಣ್ಣುಮಕ್ಕಳಿಗೆ ಶೌಚಾಲಯದ ಕೊರತೆ.. ಇಂಥವನ್ನೆಲ್ಲ ಎದುರಿಸೋದು ಕಷ್ಟ. ಆದರೆ, ನನ್ನಲ್ಲಿದ್ದ ಜಂಗ್ಲಿತನ, ಅಂದುಕೊಂಡಿದ್ದನ್ನು ಸಾಧಿಸಬೇಕು ಎನ್ನುವ ಛಲ ಮಾತ್ರ ಸೋಲೊ ಟ್ರಾವೆಲರ್ ಆಗಿ ರೂಪಿಸಿದೆ.

ಸದ್ಯಕ್ಕೆ ಮಗಳಿನ್ನು ಚಿಕ್ಕವಳು. ಅವಳ ಜವಾಬ್ದಾರಿ ಇದೆ. ತುಂಬಾ ದಿನದಿಂದಲೂ ಈಶಾನ್ಯ ಭಾರತದ 'ಸಪ್ತ ಸಹೋದರಿಯರ' ರಾಜ್ಯಗಳಿಗೆ ಏಕಾಂಗಿ ಪ್ರವಾಸ ಹೋಗುವ ಯೋಚನೆ ಇದೆ. ಇದರ ಜತೆಗೆ ನೆದರ್ಲೆಂಡ್ಸ್, ನಾರ್ವೆ, ಚೀನಾ, ರಷ್ಯಾ, ಜಪಾನ್ ನೋಡಬೇಕಿದೆ. ಜತೆಗೆ ಮಗಳನ್ನು ಕರೆದುಕೊಂಡು ಹೋಗುವ ಆಸೆನೂ ಇದೆ.

ಚಂದನಾ ರಾವ್

ಹೆರಿಗೆಯ ನಂತರ ಲೈಂಗಿಕಾಸಕ್ತಿ ಕುಂದುವುದೇ?

ಸ್ಪಂದನ

ಡಾ. ವೀಣಾ ಎಸ್. ಭಟ್

1. ನನ್ನ ವಯಸ್ಸು 33 ವರ್ಷ. ನನ್ನ ಪತ್ನಿಯ ವಯಸ್ಸು 27ವರ್ಷ. ಮದುವೆಯಾಗಿ 5 ವರ್ಷಗಳಾಗಿವೆ. 4 ವರ್ಷ ಹಾಗೂ ಆರು ತಿಂಗಳು ವಯಸ್ಸಿನ ಇಬ್ಬರು ಗಂಡು ಮಕ್ಕಳಿದ್ದಾರೆ. ಈಗ ಹೆಂಡತಿಗೆ ಲೈಂಗಿಕ ಆಸಕ್ತಿ ಕಡಿಮೆಯಾಗಿದೆ. ತೃಪ್ತಿಯ ಮಟ್ಟ ಶೂನ್ಯ. ಹೆಂಡತಿಯ ಲೈಂಗಿಕ ಆಸಕ್ತಿ ಹೆಚ್ಚಿಸಲು ಪರಿಹಾರವೇನು?

ಹೆಸರು ತಿಳಿಸಿಲ್ಲ, ಬೆಳಗಾವಿ.

ಉತ್ತರ: ನವಮಾಸಗಳವರೆಗೆ ಗರ್ಭಧರಿಸಿ, ಮಗುವಿಗೆ ಜನ್ಮ ನೀಡಿದ ಮಹಿಳೆಗೆ, ಹೆರಿಗೆ ನಂತರ ಆರರಿಂದ ಒಂಬತ್ತು ತಿಂಗಳವರೆಗೂ ಲೈಂಗಿಕ ಬಯಕೆ ಕಡಿಮೆಯಾಗುವುದು ಸಹಜ. ಮಗು ಹುಟ್ಟಿದ ನಂತರ ಮೊದಲ ಆರು ತಿಂಗಳು ಬಾಣಂತಿಯರಲ್ಲಿ ಹೆಣ್ತನದ ಹಾರ್ಮೋನು ಇಸ್ಟ್ರೊಜನ್ ಕಡಿಮೆ ಮಟ್ಟದಲ್ಲಿರುತ್ತದೆ. ಮಗುವಿಗೆ ನಿರಂತರ ಹಾಲುಣಿಸುವುದರಿಂದ(ಅದು ಅನಿವಾರ್ಯ ಅತ್ಯಗತ್ಯ) ಎದೆ ಹಾಲಿನಲ್ಲಿರುವ ಪ್ರೋಲ್ಯಾಕ್ಟಿನ್ ಮತ್ತು ಆಕ್ಸಿಟೋಸಿನ್ ಎಂಬ ಹಾರ್ಮೋನುಗಳ ಉತ್ಪಾದನೆಯೂ ಹೆಚ್ಚಿರುತ್ತದೆ. ಇದು ಲೈಂಗಿಕ ಬಯಕೆಯನ್ನು ಇನ್ನಷ್ಟು ಕಡಿಮೆಮಾಡಬಹುದು. ಜೊತೆಗೆ ನವಜಾತ ಶಿಶುವಿನ ಬಗ್ಗೆ ಕಾಳಜಿವಹಿಸಲು ತಾಯಂದಿರು ನಿದ್ದೆಗೆಡುತ್ತಾರೆ. ಆಹಾರ ಸೇವನೆಯಲ್ಲೂ ವ್ಯತ್ಯಾಸವಾಗಿ ಅದರಿಂದ ರಕ್ತಹೀನತೆ, ಅಪೌಷ್ಟಿಕತೆಯಂತಹ ಸಮಸ್ಯೆಯೂ ಉಂಟಾಗುವ ಸಾಧ್ಯತೆ ಇರುತ್ತದೆ. ಇಂಥವು ಲೈಂಗಿಕಾಸಕ್ತಿಗಳನ್ನು ಕುಂದಿಸಿರಬಹುದು.

ಹೆಚ್ಚಿನ ಮಹಿಳೆಯರಿಗೆ ಇವೆಲ್ಲ ಸಾಮಾನ್ಯ ಸಂಗತಿಗಳು. ನಿಮಗೆ ಲೈಂಗಿಕಾಸಕ್ತಿ ಆದ್ಯತೆ ಎನಿಸಿದರೂ, ಮಗುವಿನ ತಾಯಿಯಾಗಿರುವ ನಿಮ್ಮ ಪತ್ನಿಗೆ ಅದು ಕೊನೆಯ ಆದ್ಯತೆ ಎನಿಸಬಹುದು. ಹೆಚ್ಚಿನ ತಾಯಿಯಂದಿರಿಗೆ ಹೆರಿಗೆಯಾಗಿ ಒಂಬತ್ತು ತಿಂಗಳ ಒಳಗೆ ಲೈಂಗಿಕ ಆಸಕ್ತಿ ಸಹಜವಾಗಿ ಮರುಕಳಿಸಬಹುದು. ನೀವು ನಿರಾಶೆಯಾಗದೇ ನಿಮ್ಮ ಮಡದಿಯೊಂದಿಗೆ ಹೆಚ್ಚು ಆತ್ಮೀಯವಾಗಿ ವರ್ತಿಸಲು ತೊಡಗಿರಿ. ಮಗುವಿನ ಲಾಲನೆ–ಪಾಲನೆ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಿ. ಪತಿ–ಪತ್ನಿಯರಿಬ್ಬರೂ ಸಾಧ್ಯವಾದಷ್ಟು ಒಟ್ಟಿಗೇ ಸಮಯ ಕಳೆಯಿರಿ. ಪರಸ್ಪರ ಕಾಳಜಿವಹಿಸಿ. ಮುಕ್ತವಾಗಿ ಮಾತನಾಡಿ ಲೈಂಗಿಕ ಸಮಾಸಕ್ತಿ ಸಾಧಿಸಿ. ಹೀಗೆ ಪರಸ್ಪರ ಅನ್ಯೋನ್ಯವಾಗಿರುವುದು ಲೈಂಗಿಕ ಕ್ರಿಯೆಗಿಂತ ಹೆಚ್ಚಿನದ್ದಾಗಿರುತ್ತದೆ.

ನಿಮ್ಮ ಮಡದಿಗೆ ಹೆರಿಗೆಯ ನಂತರ ದೈಹಿಕ ಬದಲಾವಣೆಯಾಗಿದೆ ಎಂಬ ಆತಂಕವಿರುವ ಬಗ್ಗೆ ಚರ್ಚಿಸಿ. ಸಮತೂಕ ಹೊಂದಲು ಪ್ರಯತ್ನಿಸಲು ತಿಳಿಸಿ. ನಿತ್ಯ 'ಕೆಗಲ್ಸ್' ವ್ಯಾಯಾಮ ಮಾಡುವುದರಿಂದ ಯೋನಿಸ್ನಾಯುಗಳ ಸಂವೇದನೆ ಹೆಚ್ಚಿ ಲೈಂಗಿಕ ಕ್ರಿಯೆಗೆ ಸಹಾಯವಾಗುತ್ತದೆ. ಯಾವುದೇ ರೀತಿಯ ಶಾರೀರಿಕ ಅಸ್ವಸ್ಥತೆ ಅಥವಾ ಖಿನ್ನತೆಯಂತಹ ಸಮಸ್ಯೆಗಳಿಂದ ಬಳಲುತ್ತಿದ್ದರೂ ಲೈಂಗಿಕಾಸಕ್ತಿ ಕುಂದಬಹುದು. ಆದ್ದರಿಂದ ನೀವು ತಜ್ಞವೈದ್ಯರ ಸಲಹೆ ಸೂಚನೆ ಪಡೆಯಲು ಖಂಡಿತ ಹಿಂಜರಿಯಬೇಡಿ.

ಯಾವುದೇ ಸಂಕೋಚ ಇಲ್ಲದೇ ನೀವಿಬ್ಬರೂ ಲೈಂಗಿಕಕ್ರಿಯೆ ಬಗ್ಗೆ ಚರ್ಚಿಸಿ. ಈ ವೇಳೆ ಪತ್ನಿಯಲ್ಲಿ ಲೈಂಗಿಕಾಸಕ್ತಿ ಏಕೆ ಕುಂದಿದೆ ಎಂಬುದನ್ನು ಗುರುತಿಸಿ. ಅದನ್ನು ನಿವಾರಿಸಲು ಪ್ರಯತ್ನಿಸಿ. ಕೆಲವೊಮ್ಮೆ ಲೈಂಗಿಕ ಪ್ರಚೋದಕ ಸಾಹಿತ್ಯ, ಚಿತ್ರಗಳನ್ನು ನಿಮ್ಮ ಮಡದಿಗೆ ತೋರಿಸಿ. ಇದು ಚಿಕಿತ್ಸೆಯ ಭಾಗವಾಗಿರಲಿ. ಇದನ್ನು ಹೊರತುಪಡಿಸಿ ಯಾವುದೇ ಔಷಧ, ಇಂಜೆಕ್ಷನ್ ಅಗತ್ಯ ಇಲ್ಲ. ಈರುಳ್ಳಿ, ನುಗ್ಗೆಕಾಯಿ, ಬೆಳ್ಳುಳ್ಳಿ, ಮಾಂಸ ಇಂಥವೆಲ್ಲ ಲೈಂಗಿಕ ಆಸಕ್ತಿ ಹೆಚ್ಚಿಸುವುದಿಲ್ಲ(ಅದು ಪೌಷ್ಟಿಕ ಆಹಾರದ ಭಾಗವಾಗಬಹುದಷ್ಟೇ). ನೀವು, ಈ ತಾತ್ಕಾಲಿಕ ಸಮಸ್ಯೆಗೆ ಚಿಂತಿಸದೇ, ಅದನ್ನು ಸರಿಪಡಿಸಿಕೊಳ್ಳಿ. ಉತ್ತಮ ದಾಂಪತ್ಯ ಜೀವನ ನಿಮ್ಮದಾಗಲಿ.

2. ನನಗೆ 21ವರ್ಷ. ಕಳೆದ ಎರಡು ತಿಂಗಳಿಂದ ಪ್ರತಿ ತಿಂಗಳು 2 ಬಾರಿ ಮುಟ್ಟಾಗುತ್ತಿದ್ದೇನೆ. ಉದಾಹರಣೆ ಈ ತಿಂಗಳು 25ನೇ ದಿನ ಮುಟ್ಟಾಗಿದ್ದರೆ, ಮುಂದಿನ ತಿಂಗಳು 9 ರಂದು ಮುಟ್ಟಾಗಿ, ಅದೇ ತಿಂಗಳು 25 ರಂದು ಮತ್ತೊಮ್ಮೆ ಮುಟ್ಟಾಗುತ್ತೇನೆ. ಇದಕ್ಕೆ ಕಾರಣ ಹಾಗೂ ಪರಿಹಾರವನ್ನು ತಿಳಿಸಿ.

ಹೆಸರು, ಊರು ತಿಳಿಸಿಲ್ಲ.

ನಿಮಗೆ ವಿವಾಹವಾಗಿದೆಯೇ? ನೀವು ಲೈಂಗಿಕವಾಗಿ ಸಕ್ರಿಯವಾಗಿದ್ದೀರಾ? ಈ ಬಗ್ಗೆ ನೀವು ತಿಳಿಸಿಲ್ಲ. ಹೆಚ್ಚಿನ ಸಂದರ್ಭಗಳಲ್ಲಿ ಪದೇ ಪದೇ ಮುಟ್ಟಾಗುವುದಕ್ಕೆ ಭಾವನಾತ್ಮಕ ಏರಿಳಿತವೂ ಕಾರಣವಾಗುತ್ತದೆ. ಗರ್ಭಕೋಶ, ಅಂಡಾಶಯದ, ಗರ್ಭನಾಳದ ಸೋಂಕಿದ್ದಾಗಲೂ ಅಂಡಾಶಯದಲ್ಲಿ ನೀರು ಗುಳ್ಳೆಗಳಿದ್ದಾಗಲೂ ಈ ರೀತಿ ಪದೇ ಪದೇ ಮುಟ್ಟಾಗಲೂಬಹುದು. ಸೋಂಕಿನಿಂದ ಈ ರೀತಿ ಉಂಟಾಗಿದ್ದರೆ ಸೂಕ್ತ ಆ್ಯಂಟಿಬಯೋಟಿಕ್ಸ್ ಚಿಕಿತ್ಸೆ ತೆಗೆದುಕೊಳ್ಳಬೇಕಾಗುತ್ತದೆ. ಆದ್ದರಿಂದ ನೀವು ತಜ್ಞವೈದ್ಯರನ್ನು ಸಂಪರ್ಕಿಸಿ.

ಸ್ಪಂದನ... ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳ ಬಗ್ಗೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗತಜ್ಞೆ ಡಾ.ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.inಗೆ ಕಳುಹಿಸಬಹುದು

ರಾಜ್ಯಸಭೆಯಲ್ಲಿ ವಿರೋಧ ಪಕ್ಷಗಳ ಸದಸ್ಯರ ತೀವ್ರ ಆಕ್ಷೇಪ

ಏಕರೂಪ ಸಂಹಿತೆಗೆ ಖಾಸಗಿ ಮಸೂದೆ

ನವದೆಹಲಿ (ಪಿಟಿಐ): ಏಕರೂಪ ನಾಗರಿಕ ಸಂಹಿತೆ ರೂಪಿಸಲು ಸಮಿತಿ ರಚಿಸುವುದಕ್ಕೆ ಅವಕಾಶ ಕೋರುವ ವಿವಾದಿತ, ಖಾಸಗಿ ಮಸೂದೆಯನ್ನು ಶುಕ್ರವಾರ ರಾಜ್ಯಸಭೆಯಲ್ಲಿ ಮಂಡಿಸಲಾಯಿತು.

ವಿರೋಧ ಪಕ್ಷಗಳ ಸದಸ್ಯರ ತೀವ್ರ ಆಕ್ಷೇಪ, ವಿರೋಧದ ನಡುವೆಯೇ ಬಿಜೆಪಿ ಸಂಸದ ಕಿರೋಡಿ ಲಾಲ್ ಮೀನಾ ಅವರು, 'ಭಾರತದ ಏಕರೂಪ ನಾಗರಿಕ ಸಂಹಿತೆ ಮಸೂದೆ 2020' ಅನ್ನು ಮಂಡಿಸಿದರು. ಏಕರೂಪ ನಾಗರಿಕ ಸಂಹಿತೆ ರಚನೆ ಹಾಗೂ ದೇಶದಾದ್ಯಂತ ಇದನ್ನು ಜಾರಿಗೊಳಿಸಲು ರಾಷ್ಟ್ರೀಯ ಮೇಲ್ವಿಚಾರಣಾ ಮತ್ತು ಪರಿಶೀಲನಾ ಸಮಿತಿ ರಚಿಸಬೇಕೆಂದು ಮಸೂದೆ ಮಂಡನೆಯ ಮೂಲಕ ಕೋರಲಾಗಿದೆ.

ಕಾಂಗ್ರೆಸ್, ಸಿಪಿಐ, ಸಿಪಿಎಂ, ಎಂಡಿಎಂಕೆ, ಆರ್‌ಜೆಡಿ, ಸಮಾಜವಾದಿ ಪಕ್ಷ (ಎಸ್‌ಪಿ), ಎನ್‌ಸಿಪಿ, ತೃಣಮೂಲ ಕಾಂಗ್ರೆಸ್ ಪಕ್ಷಗಳಿಂದ ಮಸೂದೆ ಮಂಡನೆಗೆ ವಿರೋಧ ವ್ಯಕ್ತವಾಯಿತು.

'ದೇಶದಲ್ಲಿ ಬೇರೂರಿರುವ ವಿವಿಧತೆಯಲ್ಲಿ ಏಕತೆ ಮತ್ತು ಸಾಮಾಜಿಕ ಚಿಂತನೆಯನ್ನು ಇದು ನಾಶಪಡಿಸಲಿದೆ' ಎಂದು ಟೀಕಿಸಿದರು. ಮಸೂದೆ ಹಿಂಪಡೆಯಲು ವಿರೋಧ ಪಕ್ಷಗಳು ಆಗ್ರಹಿಸಿದ್ದವು. ಆದರೆ, ಸಭಾಪತಿ ಜಗದೀಪ್ ಧನ್‌ಕರ್ ಅವರು ಮತಕ್ಕೆ ಹಾಕಲು ನಿರ್ಧರಿಸಿದರು. ಆಗ ಮಸೂದೆ ಪರ 63, ವಿರುದ್ಧ 23 ಮತ ಚಲಾವಣೆಯಾದವು.

ಈ ಹಿಂದೆಯೂ ಉಲ್ಲೇಖಿತ ಮಸೂದೆಯನ್ನು ಕಾರ್ಯಸೂಚಿಯಲ್ಲಿದ್ದರೂ ಮಂಡಿಸಿರಲಿಲ್ಲ. ಎಲ್ಲ ನಾಗರಿಕರ ವೈಯಕ್ತಿಕ ಹಕ್ಕುಗಳ ರಕ್ಷಣೆಗೆ ಎಲ್ಲ ಕಾಯ್ದೆಗಳನ್ನು ಒಗ್ಗೂಡಿಸಲು ಮಸೂದೆ ಅವಕಾಶ ಕಲ್ಪಿಸಲಿದೆ.

'ಸದ್ಯ ಖಾಸಗಿ ಮಸೂದೆಯು ಅಸಂವಿಧಾನಿಕ, ಅನೈತಿಕ ಹಾಗೂ ಜಾತ್ಯತೀತ ವಿರೋಧಿಯಾದುದು. ಕೇಂದ್ರವು ಈ ಮಸೂದೆಯ ಮೂಲಕ ಜನರನ್ನು ಅಪಾಯಕಾರಿ ಕೂಪಕ್ಕೆ ತಳ್ಳಿ, ಅವ ನೋಡುವ ತಂತ್ರ ಅನುಸರಿಸುತ್ತಿದೆ' ಎಂದು ತೃಣಮೂಲ ಕಾಂಗ್ರೆಸ್‌ನ ಜವಾಹರ್ ಸಿರ್ಕಾರ್ ದೂರಿದ್ದಾರೆ.

'ಕಾಶ್ಮೀರ ನಾಶಗೊಳಿಸಿರುವ ಕೇಂದ್ರವು ಈ ಮಸೂದೆ ಮೂಲಕ ಆರ್‌ಎಸ್‌ಎಸ್ ಮತ್ತು ಬಿಜೆಪಿ ಸಿದ್ಧಾಂತ ಹೇರಲು ಹೊರಟಿದೆ. ಇದು ದೇಶವನ್ನು ದುರಂತಕ್ಕೆ ನೂಕಲಿದೆ' ಎಂದು ಎಂಡಿಎಂಕೆ ಸಂಸದ ವೈಕೊ ಆರೋಪಿಸಿದ್ದಾರೆ.

ಕಾಂಗ್ರೆಸ್ ಸಂಸದರಾದ ಎಲ್. ಹನುಮಂತಯ್ಯ, ಇಮ್ರಾನ್ ಪ್ರತಾಪ್‌ಗಡಿ ಮತ್ತು ಜೆ.ಬಿ. ಮಥೇರ್ ಹಿಶಾಮ್, ಸಿಪಿಐ ಸಂಸದರಾದ ಎಲಮಾರಮ್ ಕರೀಂ, ವಿಕಾಸ್ ರಂಜನ್ ಭಟ್ಟಾಚಾರ್ಯ, ವಿ.ಶಿವದಾಸನ್, ಜಾನ್ ಬ್ರಿಟಾಸ್ ಮತ್ತು ಎ.ಎ.ರಹೀಂ, ಡಿಎಂಕೆಯ ತಿರುಚಿ ಶಿವ, ಸಿಪಿಐನ ಪಿ.ಸಂತೋಷ್ ಕುಮಾರ್ ಅವರೂ ಮಸೂದೆ ವಿರೋಧಿಸಿದರು. 'ಇದು ದೇಶದಲ್ಲಿ ಧ್ರುವೀಕರಣಕ್ಕೆ ದಾರಿಯಾಗಲಿದೆ' ಎಂದು ದೂರಿದರು.

ಸದನದ ನಾಯಕ ಪಿಯೂಷ್ ಗೋಯಲ್ ಅವರು ವಿರೋಧ ಪಕ್ಷಗಳ ಆರೋಪಗಳಿಗೆ ಆಕ್ಷೇಪ ವ್ಯಕ್ತಪಡಿಸಿದರು. ಖಾಸಗಿ ಮಸೂದೆ ಬಗ್ಗೆ ಸದನದಲ್ಲಿ ಚರ್ಚೆಯಾಗಲಿ ಎಂದರು.

ಲೋಕಸಭೆಯಲ್ಲಿ 50ಕ್ಕೂ ಅಧಿಕ ಮಸೂದೆ ಮಂಡನೆ: ಇವಿಎಂ ಬದಲು ಈ ಹಿಂದೆ ಇದ್ದ ಮತದಾನ ವ್ಯವಸ್ಥೆ ಜಾರಿಗೊಳಿಸುವುದೂ ಸೇರಿ 50ಕ್ಕೂ ಹೆಚ್ಚು ಖಾಸಗಿ ಮಸೂದೆಗಳನ್ನು ಲೋಕಸಭೆಯಲ್ಲಿ ಮಂಡಿಸಲಾಗಿದೆ.

ಕೇಂದ್ರ ಸಚಿವರಾದ ಶೋಭಾ ಕರಂದ್ಲಾಜೆ, ಭಾರತಿ ಪವಾರ್ ಹಾಗೂ ಡಿಎಂಕೆ ಸಂಸದೆ ಟಿ. ಸುಮತಿ ಶುಕ್ರವಾರ ಕುಶಲೋಪರಿಯಲ್ಲಿ ತೊಡಗಿದ್ದರು – ಪಿಟಿಐ ಚಿತ್ರ

ಗಾಂಧಿ ನಿಂದಿಸಿದವರಿಗೆ 7 ವರ್ಷ ಜೈಲು

ನವದೆಹಲಿ: ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಹಾಗೂ ಇತರ ಸ್ವಾತಂತ್ರ್ಯ ಹೋರಾಟಗಾರರನ್ನು ನಿಂದಿಸುವವರಿಗೆ ಗರಿಷ್ಠ 7 ವರ್ಷ ಜೈಲು ಶಿಕ್ಷೆ ವಿಧಿಸುವ ಕುರಿತ ಖಾಸಗಿ ಸದಸ್ಯರ ಮಸೂದೆಯನ್ನು ಶುಕ್ರವಾರ ರಾಜ್ಯಸಭೆಯಲ್ಲಿ ಮಂಡಿಸಲಾಗಿದೆ.

'ರಾಷ್ಟ್ರ ಪಿತ ಹಾಗೂ ಇತರ ಸ್ವಾತಂತ್ರ್ಯ ಹೋರಾಟಗಾರರ ಅವಹೇಳನ ತಡೆ ಮಸೂದೆ-2022'ನ್ನು ಸಮಾಜವಾದಿ ಪಕ್ಷದ (ಎಸ್‌ಪಿ) ಸಂಸದ ಜಾವೇದ್ ಅಲಿ ಅವರು ಮಂಡಿಸಿದ್ದಾರೆ.

ಹೋರಾಟಗಾರರನ್ನು ನಿಂದಿಸುವವರನ್ನು ಗರಿಷ್ಠ 7 ವರ್ಷ ಜೈಲು ಶಿಕ್ಷೆಗೆ ಗುರಿಪಡಿಸುವ ಅಥವಾ ದಂಡ ವಿಧಿಸುವ ಅಥವಾ ಜೈಲು ಶಿಕ್ಷೆಯ ಜೊತೆಗೆ ದಂಡ ಹೇರುವುದಕ್ಕೂ ಈ ಮಸೂದೆ ಅವಕಾಶ ಕಲ್ಪಿಸಲಿದೆ. ಗಾಂಧೀಜಿ ಹತ್ಯೆಕೋರ ನಾಥೂರಾಮ್ ಗೋಡ್ಸೆಗೆ ಗೌರವ ಸೂಚಿಸಲು ಕಾರ್ಯಕ್ರಮ ಆಯೋಜಿಸುವವರು ಹಾಗೂ ಸ್ವಾತಂತ್ರ್ಯ ಚಳವಳಿಗೆ ಸಂಬಂಧಿಸಿದ ಸ್ಮಾರಕಗಳನ್ನು ವಿರೂಪಗೊಳಿಸುವವರನ್ನು ಶಿಕ್ಷೆಗೆ ಗುರಿಪಡಿಸುವ ಅವಕಾಶವೂ ಈ ಮಸೂದೆಯಲ್ಲಿದೆ.

ಎನ್‌ಜೆಎಸಿ ಖಾಸಗಿ ಮಸೂದೆ

ನವದೆಹಲಿ (ಪಿಟಿಐ): ರಾಷ್ಟ್ರೀಯ ನ್ಯಾಯಾಂಗ ನೇಮಕ ಆಯೋಗದ (ಎನ್‌ಜೆಎಸಿ) ಮೂಲಕ ನ್ಯಾಯಮೂರ್ತಿಗಳ ನೇಮಕಕ್ಕೆ ಅವಕಾಶ ಕೊಡುವ ಖಾಸಗಿ ಮಸೂದೆಯನ್ನು ಸಿಪಿಎಂನ ವಿಕಾಶ್ ರಂಜನ್ ಭಟ್ಟಾಚಾರ್ಯ ಅವರು ಶುಕ್ರವಾರ ರಾಜ್ಯಸಭೆಯಲ್ಲಿ ಮಂಡಿಸಿದರು. ಆಮ್ ಆದ್ಮಿ ಪಕ್ಷದ ರಾಘವ್ ಚಡ್ಡಾ ಈ ಖಾಸಗಿ ಮಸೂದೆ ವಿರೋಧಿಸಿದರು.

ಧ್ವನಿ ಮತದ ವೇಳೆ ಮಸೂದೆಯ ಪರ ಬಹುಮತ ಇದ್ದಿದ್ದರಿಂದ ಎನ್‌ಜೆಎಸಿ 2022 ಮಸೂದೆಯನ್ನು ರಾಜ್ಯಸಭೆಯಲ್ಲಿ ಮಂಡಿಸಲಾಯಿತು.

ಎನ್‌ಜೆಎಸಿ ಮೂಲಕ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ, ಸುಪ್ರೀಂ ಕೋರ್ಟ್ ಹಾಗೂ ಹೈಕೋರ್ಟ್‌ನ ನ್ಯಾಯಮೂರ್ತಿಗಳನ್ನು ನೇಮಿಸಲು ಅವಕಾಶ ನೀಡುವುದು ಇದರ ಉದ್ದೇಶ.

ಒಂದೊಮ್ಮೆ ಈ ಮಸೂದೆಗೆ ಒಪ್ಪಿಗೆ ದೊರೆತರೆ, ಆಯೋಗದ ಮೂಲಕ ನ್ಯಾಯಮೂರ್ತಿಗಳ ವರ್ಗಾವಣೆಯ ನಿಯಂತ್ರಣ ಹಾಗೂ ನ್ಯಾಯಮೂರ್ತಿಗಳನ್ನು ಹೆಚ್ಚು ಹೊಣೆಗಾರರನ್ನಾಗಿ ಮಾಡಬಹುದಾಗಿದೆ. ಸುಪ್ರೀಂ ಕೋರ್ಟ್ ಅಥವಾ ಹೈಕೋರ್ಟ್ ನ್ಯಾಯಮೂರ್ತಿಗಳ ವಿರುದ್ಧದ ದೂರಿನ ತನಿಖೆಯನ್ನು ನಿಯಂತ್ರಿಸುವುದಾಗಿದೆ. ರಾಷ್ಟ್ರಪತಿ ಅವರಿಗೆ ಸಂಸತ್ತು ಮಾಹಿತಿ ನೀಡುವ ಮೂಲಕ ನ್ಯಾಯಮೂರ್ತಿಗಳ ವಜಾ ಪ್ರಕ್ರಿಯೆ ಆರಂಭಿಸುವ ಪ್ರಸ್ತಾವನೆ ಈ ಮಸೂದೆಯಲ್ಲಿದೆ.

> ನ್ಯಾಯಮೂರ್ತಿಗಳ ನೇಮಕದಲ್ಲಿ ಕೇಂದ್ರ ಸರ್ಕಾರವು ಹಸ್ತಕ್ಷೇಪ ಮಾಡುವುದಕ್ಕೆ ಯಾವುದೇ ಅವಕಾಶವನ್ನು ನಾವು ಸೃಷ್ಟಿಸಬಾರದು
> **ರಾಘವ್ ಚಡ್ಡಾ**, ಎಎಪಿ ಸಂಸದ

ಚಡ್ಡಾ ವಿರೋಧ: 'ರಾಷ್ಟ್ರೀಯ ನ್ಯಾಯಾಂಗ ಆಯೋಗದ ವಿಚಾರವು 1993, 1998 ಮತ್ತು 2016ರಲ್ಲಿ ವಿಸ್ತೃತ ಸುಪ್ರೀಂ ಕೋರ್ಟ್‌ನ ಪರಿಶೀಲನೆಗೆ ಒಳಪಟ್ಟಿತ್ತು. ನ್ಯಾಯಾಂಗದ ಸ್ವಾತಂತ್ರ್ಯವನ್ನು ಗಮನದಲ್ಲಿಟ್ಟುಕೊಂಡು ಸುಪ್ರೀಂ ಕೋರ್ಟ್ ಈ ಮೂರೂ ಬಾರಿಯೂ ಆಯೋಗದ ರಚನೆ ಪ್ರಸ್ತಾವವನ್ನು ವಜಾ ಮಾಡಿತ್ತು' ಎಂದು ಆಮ್ ಆದ್ಮಿ ಪಕ್ಷದ ಸದಸ್ಯ ರಾಘವ್ ಚಡ್ಡಾ ಹೇಳಿದರು.

'ಸಾಂವಿಧಾನಿಕವಾಗಿ ಸಾಧುವಲ್ಲದ ವಿಚಾರದ ಬಗ್ಗೆ ಚರ್ಚೆ ನಡೆಸುತ್ತಿದ್ದೇವೆ. ನ್ಯಾಯಮೂರ್ತಿಗಳ ನೇಮಕದ ಕೊಲಿಜಿಯಂ ವ್ಯವಸ್ಥೆ ಉತ್ತಮವಾಗಿಯೇ ಕೆಲಸ ಮಾಡುತ್ತಿದೆ' ಎಂದರು.

ಸಹಕಾರ ಸಂಘಗಳ ತಿದ್ದುಪಡಿ ಮಸೂದೆ: ಸ್ಥಾಯಿ ಸಮಿತಿಗೆ ಒಪ್ಪಿಸಲು ಶಾ ಭರವಸೆ?

ನವದೆಹಲಿ (ಪಿಟಿಐ): ಸಹಕಾರ ಕ್ಷೇತ್ರದಲ್ಲಿ ಪಾರದರ್ಶಕತೆ ಮತ್ತು ಉತ್ತರದಾಯಿತ್ವ ತರುವ ಉದ್ದೇಶದ ವಿವಿಧ ರಾಜ್ಯಗಳ ಸಹಕಾರ ಸಂಘಗಳ (ತಿದ್ದುಪಡಿ) ಮಸೂದೆಯನ್ನು ಪರಿಶೀಲನೆಗಾಗಿ ಸಂಸದೀಯ ಸ್ಥಾಯಿ ಸಮಿತಿಗೆ ಒಪ್ಪಿಸುವುದಾಗಿ ಗೃಹ ಸಚಿವ ಅಮಿತ್ ಶಾ ಅವರು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಭರವಸೆ ನೀಡಿದ್ದಾರೆ ಎಂದು ಕಾಂಗ್ರೆಸ್ ಹೇಳಿದೆ.

ಸುದ್ದಿಗಾರರೊಂದಿಗೆ ಮಾತನಾಡಿದ ರಾಜ್ಯಸಭೆಯ ವಿರೋಧ ಪಕ್ಷದ ಮುಖ್ಯ ಸಚೇತಕ ಜೈರಾಮ್ ರಮೇಶ್, 'ಸಹಕಾರ ಸಚಿವಾಲಯದ ಉಸ್ತುವಾರಿಯೂ ಆಗಿರುವ ಶಾ ಅವರಿಗೆ ಶುಕ್ರವಾರ ಬೆಳಿಗ್ಗೆ ಕರೆ ಮಾಡಿ ಪ್ರತಿಪಕ್ಷಗಳ ಬೇಡಿಕೆಯನ್ನು ಮುಂದಿಟ್ಟಿದ್ದಾರೆ' ಎಂದು ಹೇಳಿದರು.

ವಿರೋಧ ಪಕ್ಷಗಳ ಪ್ರತಿಭಟನೆಯ ನಡುವೆ ಬುಧವಾರ ಲೋಕಸಭೆಯಲ್ಲಿ ಮಂಡಿಸಲಾದ ಮಸೂದೆಯನ್ನು ಗೃಹ ಸಚಿವಾಲಯದ ವ್ಯವಹಾರಗಳನ್ನು ಪರಿಶೀಲಿಸುವ ಸಂಸದೀಯ ಸ್ಥಾಯಿ ಸಮಿತಿಗೆ ಕಳುಹಿಸಲಾಗುವುದೆಂದು ಶಾ ಭರವಸೆ ನೀಡಿದರು ಎಂದು ರಮೇಶ್ ಹೇಳಿದರು.

ಕಾಂಗ್ರೆಸ್ ಸದಸ್ಯ ಮನೀಶ್ ತಿವಾರಿ ಅವರು ಮಸೂದೆ ಹಿಂಪಡೆಯುವಂತೆ ಒತ್ತಾಯಿಸಿದರು.

ಬುಧವಾರ ಮಸೂದೆ ಮಂಡಿಸಿದಾಗ ವಿರೋಧ ಪಕ್ಷಗಳಿಂದ ವಿರೋಧ ವ್ಯಕ್ತವಾಗಿತ್ತು. ಈ ಮಸೂದೆ ರಾಜ್ಯ ಸರ್ಕಾರಗಳ ಹಕ್ಕುಗಳನ್ನು ಕಸಿದುಕೊಳ್ಳುವ ಮತ್ತು ಒಕ್ಕೂಟ ವ್ಯವಸ್ಥೆಗೆ ವಿರುದ್ಧವಾಗಿದೆ ಎಂದು ಆರೋಪಿಸಿದ ವಿರೋಧ ಪಕ್ಷಗಳ ಸಂಸದರು, ಮಂಡನೆಗೂ ಮೊದಲು ಮಸೂದೆಯನ್ನು ಸ್ಥಾಯಿ ಸಮಿತಿಯ ಪರಿಶೀಲನೆಗೆ ಕಳುಹಿಸಬೇಕೆಂದು ಪಟ್ಟು ಹಿಡಿದಿದ್ದರು.

ಈ ಮಸೂದೆಯಿಂದ ಸಹಕಾರಿ ವಲಯದ ಆಡಳಿತ ಬಲಪಡಿಸಲು, ಚುನಾವಣಾ ಪ್ರಕ್ರಿಯೆ ಸುಧಾರಿಸಲು, ಮೇಲ್ವಿಚಾರಣಾ ಕಾರ್ಯ ವಿಧಾನ ಸುಧಾರಣೆಗೆ ನೆರವಾಗಲಿದೆ. ವಿವಿಧ ರಾಜ್ಯಗಳ ಸಹಕಾರ ಸಂಘಗಳಿಗೆ ನಡೆಸುವ ವ್ಯವಹಾರಗಳನ್ನು ಇದು ಸರಳಗೊಳಿಸುವ ಖಾತ್ರಿ ಇದೆ.

ಕರ್ನಾಟಕ ಸರಕಾರ
ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಕಲಬುರಗಿ
"ಅಭಿವೃದ್ಧಿ ಭವನ" ಐವಾನ–ಎ–ಶಾಹಿ, ಕಲಬುರಗಿ–585102
ದೂರವಾಣಿ : (08472) – 256767, 239556, 255564, ಫ್ಯಾಕ್ಸ್ : (08472) 227527
E-mail : hkadbgulb@gmail.com, Website : hkrdb.kar.nic.in

ಸಂಖ್ಯೆ: KKRDB/TECH/PMC/ 2022-23/ ದಿನಾಂಕ: 09–12–2022

ಅಲ್ಪಾವಧಿ ಟೆಂಡರ ಪ್ರಕಟಣೆ

1) ಕಾಮಗಾರಿಯ ಹೆಸರು: **"Providing Project Management Consultancy (PMC) services for developmental projects funded by KKRDB in Kalaburagi and Yadgir districts" (LOT-1),** 2) ಲೆಕ್ಕ ಶೀರ್ಷಿಕೆ: KKRDB ನಿಧಿ, 3) ಗುತ್ತಿಗೆದಾರರ ಅರ್ಹತೆ: ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನ ದಸ್ತಾವೇಜಿನಲ್ಲಿ, 4) ಟೆಂಡರ್ ದಸ್ತಾವೇಜನ್ನು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಡೌನ್‌ಲೋಡ್ ಮಾಡಿಕೋಳ್ಳುವ ಪ್ರಾರಂಭ ದಿನಾಂಕ : **09–12–2022 ಬೆಳಿಗ್ಗೆ 11.00ಕ್ಕೆ,** 5) ಕ್ಯಾರೀಸ್ ಸಲ್ಲಿಸುವ ದಿನಾಂಕ: **19–12–2022 ಬೆಳಿಗ್ಗೆ 11.30ಕ್ಕೆ,** 6) ಪ್ರಿ–ಬಿಡ್ ಸಭೆ ದಿನಾಂಕ (online): **20–12–2022 ಬೆಳಿಗ್ಗೆ 11.30ಕ್ಕೆ,** 7) ಟೆಂಡರ್ ಫಾರಂ ಸಲ್ಲಿಸುವ ಅಂತಿಮ ದಿನಾಂಕ: **22–12–2022 ಮಧ್ಯಾಹ್ನ 4.00ರ ವರೆಗೆ,** 8) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **23–12–2022 ಮಧ್ಯಾಹ್ನ 4.30ಕ್ಕೆ,** 9) ಆರ್ಥಿಕ ಬಿಡ್ ತೆರೆಯುವ ದಿನಾಂಕ : **26–12–2022 ಬೆಳಿಗ್ಗೆ 11.00ಕ್ಕೆ,** 10) ಟೆಂಡರ್ ಅರ್ಜಿ ಬೆಲೆ: ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಇದ್ದಂತೆ, 11) ಇ.ಎಂ.ಡಿ.ಮೊತ್ತ: ರೂ. 2,00,000/–, 12) ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ವಿಳಾಸ: https://eproc.karnataka.gov.in ಅಥವಾ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ, ಐವಾನ್–ಇ–ಶಾಹಿ, ಕಲಬರಗಿ ರಲ್ಲಿ ಸಂಪರ್ಕಿಸಬಹುದು, 13) ಅಂತರ್‌ಜಾಲ ತಾಣದ ವಿಳಾಸ: https://eproc.karnataka.gov.in, 14) ಬದಲಾವಣೆಗಾಗಿ ಸಂಪರ್ಕಿಸುವ ಬಗ್ಗೆ: ಯಾವುದೇ ಬದಲಾವಣೆ ಹಾಗು ಮಾರ್ಪಾಡುಗಳಿಗಾಗಿ https://eproc.karnataka.gov.in ಕ್ಕೆ ಸಂಪರ್ಕಿಸಬಹುದು

ಸಹಿ/– ಉಪ ಕಾರ್ಯದರ್ಶಿಗಳು
ಕ.ಕ.ಪ್ರ.ಅ.ಮಂಡಳಿ, ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/944/ಎಂ.ಸಿ.&ಎ/2022–23

ಆಸ್ತಿಹಕ್ಕು: ಬುಡಕಟ್ಟು ಮಹಿಳೆಯ ಹಕ್ಕಿನ ನಿರಾಕರಣೆ ಸಲ್ಲ– 'ಸುಪ್ರೀಂ'

ನವದೆಹಲಿ (ಪಿಟಿಐ): ಪಿತ್ರಾರ್ಜಿತ ಆಸ್ತಿ ಮೇಲೆ ಬುಡಕಟ್ಟು ಪುರುಷನಿಗೆ ಇರುವಷ್ಟೇ ಹಕ್ಕು ಬುಡಕಟ್ಟು ಮಹಿಳೆಗೂ ಇದೆ. ಆದ್ದರಿಂದ ಪರಿಶಿಷ್ಟ ಪಂಗಡಕ್ಕೂ ಅನ್ವಯವಾಗುವಂತೆ ಹಿಂದೂ ಉತ್ತರಾಧಿಕಾರಿ ಕಾಯ್ದೆಗೆ ತಿದ್ದುಪಡಿ ತರುವ ಕುರಿತು ಪರಿಶೀಲನೆ ನಡೆಸುವಂತೆ ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಶುಕ್ರವಾರ ಹೇಳಿತು.

'ಬುಡಕಟ್ಟು ಅಲ್ಲದ ಮಹಿಳೆಗೆ ಆಸ್ತಿಯ ಹಕ್ಕಿದೆ. ಹೀಗಿರುವಾಗ ಬುಡಕಟ್ಟು ಮಹಿಳೆಗೆ ಮಾತ್ರ ಈ ಹಕ್ಕನ್ನು ನಿರಾಕರಿಸುವುದಕ್ಕೆ ಯಾವ ಕಾರಣವೂ ಇಲ್ಲ. ತಮ್ಮ ಜೊತೆಗೆ ಆಸ್ತಿ ಹಕ್ಕನ್ನು ಹಂಚಿಕೊಂಡಿದ್ದ ವ್ಯಕ್ತಿಯು ಮೃತಪಟ್ಟಾಗ ಆತನ ಪಾಲಿನ ಆಸ್ತಿಯ ಹಕ್ಕನ್ನು ಬುಡಕಟ್ಟು ಮಹಿಳೆಗೆ ನೀಡದಿರುವುದನ್ನು ಸಮರ್ಥಿಸಿಕೊಳ್ಳಲು ಸಾಧ್ಯವಿಲ್ಲ' ಎಂದು ನ್ಯಾಯಮೂರ್ತಿಗಳಾದ ಎಂ.ಆರ್. ಶಾ ಮತ್ತು ಕೃಷ್ಣ ಮುರಾರಿ ಅವರಿದ್ದ ಪೀಠವು ಅಭಿಪ್ರಾಯಪಟ್ಟಿತು.

> **ಭಾರತದ ಸಂವಿಧಾನಕ್ಕೆ 70 ವರ್ಷ ಸಂದರೂ, ಬುಡಕಟ್ಟು ಮಹಿಳೆಯೊಬ್ಬರಿಗೆ ಸಮಾನತೆಯ ಹಕ್ಕನ್ನು ನಿರಾಕರಿಸಲಾಗುತ್ತಿದೆ ಎಂದರೆ ಈ ಕುರಿತು ಕ್ರಮಕೈಗೊಳ್ಳಲು ಇದು ಸಕಾಲ**
> **ಸುಪ್ರೀಂ ಕೋರ್ಟ್**

'ಸಂವಿಧಾನದ ವಿಧಿ 14 ಮತ್ತು 21ರಲ್ಲಿ ನೀಡಲಾಗಿರುವ ಸಮಾನತೆಯ ಹಕ್ಕನ್ನು ಪರಿಶಿಷ್ಟ ಪಂಗಡದವರಿಗೂ ಅನ್ವಯವಾಗುವಂತೆ ಹಿಂದೂ ಉತ್ತರಾಧಿಕಾರ ಕಾಯ್ದೆಗೆ ತಿದ್ದುಪಡಿ ತರುವ ಕುರಿತು ಕೇಂದ್ರ ಸರ್ಕಾರವು ಕಾರ್ಯೋನ್ಮುಖವಾಗಲಿದೆ ಎಂದು ನಾವು ನಂಬುತ್ತೇವೆ' ಎಂದಿತು.

ಪಿತ್ರಾರ್ಜಿತ ಆಸ್ತಿಯಲ್ಲಿ ಬುಡಕಟ್ಟು ಮಹಿಳೆಗೆ ಪುರುಷನಂತೆ ಸಮಾನ ಹಕ್ಕಿದೆಯೇ ಎನ್ನುವ ಕುರಿತು ಸಲ್ಲಿಸಲಾಗಿದ್ದ ಅರ್ಜಿಯ ವಿಚಾರಣೆ ವೇಳೆ ಸುಪ್ರೀಂ ಕೋರ್ಟ್ ಈ ರೀತಿ ಅಭಿಪ್ರಾಯಪಟ್ಟಿದೆ. ಹಿಂದೂ ಉತ್ತರಾಧಿಕಾರಿ ಕಾಯ್ದೆಯ ಸೆಕ್ಷನ್ 2(2)ರಲ್ಲಿ ಪ್ರಕಾರ, ಈ ಕಾಯ್ದೆಯು ಪರಿಶಿಷ್ಟ ಪಂಗಡವರಿಗೆ ಅನ್ವಯವಾಗುವುದಿಲ್ಲ. ಈ ಕಾರಣ ನೀಡಿ, ಸುಪ್ರೀಂ ಕೋರ್ಟ್ ಈ ಅರ್ಜಿಯನ್ನು ವಜಾ ಮಾಡಿತು.

ವಿದ್ಯಾರ್ಥಿ ವೇತನ ರದ್ದು: ಆಕ್ಷೇಪ

ನವದೆಹಲಿ: ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಅಲ್ಪಸಂಖ್ಯಾತ ಮತ್ತು ಹಿಂದುಳಿದ ವರ್ಗಗಳಿಗೆ ಸೇರಿದ ಮೆಟ್ರಿಕ್‌ಪೂರ್ವ ವಿದ್ಯಾರ್ಥಿಗಳ ವಿದ್ಯಾರ್ಥಿವೇತನವನ್ನು ರದ್ದುಗೊಳಿಸಿರುವ ಕೇಂದ್ರ ಸರ್ಕಾರದ ಕ್ರಮವನ್ನು ರಾಜ್ಯಸಭಾ ಸದಸ್ಯ ಎಲ್. ಹನುಮಂತಯ್ಯ ಖಂಡಿಸಿದರು.

ರಾಜ್ಯಸಭೆಯಲ್ಲಿ ಶುಕ್ರವಾರ ಈ ವಿಷಯ ಪ್ರಸ್ತಾಪಿಸಿದ ಅವರು, 'ಕೇಂದ್ರ ಸರ್ಕಾರದ ಈ ಆದೇಶದಿಂದ ಈ ಸಮುದಾಯಗಳ ವಿದ್ಯಾರ್ಥಿಗಳಿಗೆ ಅನ್ಯಾಯವಾಗಲಿದೆ. ಇದರಿಂದ ಶಾಲೆಯಿಂದ ಹೊರಕ್ಕೆ ಉಳಿಯುವ ಮಕ್ಕಳ ಸಂಖ್ಯೆ ಇನ್ನಷ್ಟು ಹೆಚ್ಚಾಗಲಿದೆ. ಈ ಸಮುದಾಯಗಳ ವಿದ್ಯಾರ್ಥಿಗಳು ಶಿಕ್ಷಣ ಪಡೆಯಲು ವಿದ್ಯಾರ್ಥಿ ವೇತನದ ಮೂಲಕ ಉತ್ತೇಜನ ನೀಡುವುದು ಮುಖ್ಯ. ಕೇಂದ್ರ ಸರ್ಕಾರ ಕೂಡಲೇ ಆದೇಶವನ್ನು ವಾಪಸ್ ಪಡೆಯಬೇಕು' ಎಂದು ಆಗ್ರಹಿಸಿದರು.

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ
ನಂ. 16 ಸಿ–1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ,
ಬೆಂಗಳೂರು–560052. ಫೋನ್: 080–22268677/78/79 ಫ್ಯಾಕ್ಸ್: 080–22268667
ಇ–ಮೇಲ್: kerc-ka@nic.in ವೆಬ್‌ಸೈಟ್: https://kerc.karnataka.gov.in

ಸಂಖ್ಯೆ:ಕವಿನಿಆ/17/1008/ಸಿ.ಒ.ಎಸ್–ಆರ್.ಒ.ಇ/ಡಿಡಿಡಿ/22–23/1931, ಬೆಂಗಳೂರು ದಿನಾಂಕ: 09–12–2022

ಸೂಚನೆ

ವಿಷಯ: ಪರಿಷ್ಕರಿಸಲಾದ ಕರಡು ಕರ್ನಾಟಕ ರಾಜ್ಯದಲ್ಲಿನ ವಿತರಣಾ ಪರವಾನಿಗೆದಾರರ ವಿದ್ಯುಚ್ಛಕ್ತಿ ಸರಬರಾಜು ಷರತ್ತುಗಳು (ಸಿಓಎಸ್) (ಹನ್ನೊಂದನೇ ತಿದ್ದುಪಡಿ), 2022 ಹಾಗೂ ಪರಿಷ್ಕರಿಸಲಾದ ಕರಡು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ವಿದ್ಯುಚ್ಛಕ್ತಿ ಸರಬರಾಜಿಗಾಗಿ ವೆಚ್ಚದ ವಸೂಲಿ) (ಹನ್ನೆರಡನೇ ತಿದ್ದುಪಡಿ), 2022.

ಮೇಲ್ಕಂಡ ವಿಷಯದಲ್ಲಿ ಪ್ರಸ್ತಾಪಿಸಿರುವ ಷರತ್ತುಗಳ ಕರಡು ತಿದ್ದುಪಡಿಗಳನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ದಿನಾಂಕ: **24–11–2022ರಂದು** ಪ್ರಕಟಗೊಳಿಸಲಾಗಿದ್ದು, ಸದರಿ ಪ್ರತಿಯನ್ನು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ವೆಬ್‌ಸೈಟ್: **www.kerc.karnataka.gov.in** ನಲ್ಲಿ ಲಭ್ಯವಿರಿಸಲಾಗಿದೆ.

ಆಯೋಗವು ದಿನಾಂಕ: **20–12–2022 ರಂದು ಬೆಳಿಗ್ಗೆ 11.00 ಘಂಟೆಗೆ ಆಯೋಗದ ನ್ಯಾಯಾಂಗ ಸಭಾಂಗಣದಲ್ಲಿ** ಸಾರ್ವಜನಿಕ ವಿಚಾರಣೆಯನ್ನು ಏರ್ಪಡಿಸಿದ್ದು, ಆಸಕ್ತರು ಈ ವಿಚಾರಣೆಯಲ್ಲಿ ಭಾಗವಹಿಸಿ ಆಯೋಗದ ಮುಂದೆ ಖುದ್ದಾಗಿ ಹಾಜರಾಗಬಹುದು ಮತ್ತು ಮೌಖಿಕ ಸಲ್ಲಿಕೆಗಳನ್ನು ಮಾಡಬಹುದು.

ಸಹಿ/– ಕಾರ್ಯದರ್ಶಿ
ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಪರವಾಗಿ
ವಾಸಾಸಂಇ/ವಾ.ಪ್ರ/3463/2022–23

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ ಕೊಪ್ಪಳ.
ಸಂ:ಕಾನಿಇಂ:ಲೋಇ:ವಿಕೊ:KW–3:ಟೆಂ:2022–23:3426 ದಿನಾಂಕ:09–12–2022

–: ಅಲ್ಪಾವಧಿ ಟೆಂಡರ್ ಪ್ರಕಟಣೆ :–

2022–23ನೇ ಸಾಲಿನ ಲೆಕ್ಕ ಶೀರ್ಷಿಕೆ: ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಬೃಹತ್ (ಮ್ಯಾಕ್ರೋ) ಯೋಜನೆ ಅಡಿಯಲಿಅಡಿಯಲ್ಲಿ ಮಂಜೂರಾದ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 1999–2000ರ ಪ್ರಕಾರ ಪಾರದರ್ಶಕತೆ ಆ್ಯಕ್ಟ 2000ರ ನಿಯಮದಂತೆ, ಸ್ಟ್ಯಾಂಡರ್ಡ ಬಿಡ್ ಡಾಕ್ಯೂಮೆಂಟ್ KW-3ರ ನಿಯಮಗಳನ್ವಯ ಅರ್ಹ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರಗಳನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು, ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ http://eproc.karnataka.gov.in. ಮುಖಾಂತರ ಭಾಗವಹಿಸಬಹುದು. **ಕಾಮಗಾರಿಗಳ ಪ್ಯಾಕೇಜ್** : 1 ರಿಂದ 26 (ಒಟ್ಟು 26 ಕಾಮಗಾರಿಗಳು) ಟೆಂಡರ್‌ಗಳನ್ನು ಸ್ವೀಕರಿಸುವ ಅಂತಿಮ ದಿನಾಂಕ: **26–12–2022** ಸಮಯ 16.00 ಗಂಟೆ, ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **27–12–2022** ಸಮಯ 16.30 ಗಂಟೆ ಮತ್ತು ಅಂದಾಜು ಮೊತ್ತ ಗರಿಷ್ಠ ರೂ. 90.00 ಲಕ್ಷಗಳು, ಕನಿಷ್ಟ ರೂ. 60.00 ಲಕ್ಷಗಳು ಇರುತ್ತದೆ. ಈ ಟೆಂಡರ್ ದಾಖಲೆಗಳನ್ನು ಸದರಿ ವೆಬ್‌ಸೈಟ್‌ನಲ್ಲಿಯ ದಾಖಲೆಯಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ, ಇ.ಎಂ.ಡಿ., ಟೆಂಡರ್ ಪ್ರೊಸೆಸಿಂಗ್ ಶುಲ್ಕ, ಕಾಮಗಾರಿ ಪೂರ್ಣಗೊಳಿಸಲು ನಿಗದಿತ ಕಾಲಾವಧಿ, ಪ್ರೀಬಿಡ್ ಮೀಟಿಂಗ್ ದಿನಾಂಕ, ಟೆಂಡರ್ ಆಕ್ಷೇಪಣೆ/ಸ್ಪಷ್ಟೀಕರಣ ಹಾಗೂ ಇತ್ಯಾದಿಗಳಿಗಾಗಿ ಹೆಚ್ಚಿನ ಮಾಹಿತಿಗಳನ್ನು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನೋಡಿಕೊಳ್ಳುವುದು / ಕೆಲಸದ ವೇಳೆಯಲ್ಲಿ ಈ ಕಛೇರಿಯಿಂದ ಪಡೆಯಬಹುದು.

ಸಹಿ/–ಕಾರ್ಯನಿರ್ವಾಹಕ ಇಂಜನೀಯರು, ಲೋ.ಇ ವಿಭಾಗ, ಕೊಪ್ಪಳ
ಡಿಐಪಿಆರ್/ಕೊಪ್ಪಳ/494/ಎಂಸಿಎ/2022–23

ಪುದುಚೇರಿಯಲ್ಲಿ ಕಡಲ್ಕೊರೆತ • ಮನೆಗಳಿಗೆ ಹಾನಿ

ಮಾಂಡೂಸ್: ತಮಿಳುನಾಡಿನಲ್ಲಿ ಭಾರಿ ಮಳೆ

ಚೆನ್ನೈ (ಪಿಟಿಐ): ಬಂಗಾಳಕೊಲ್ಲಿಯಲ್ಲಿ ಕಾಣಿಸಿಕೊಂಡಿರುವ 'ಮಾಂಡೂಸ್' ಚಂಡಮಾರುತದಿಂದಾಗಿ ತಮಿಳುನಾಡಿನ ಉತ್ತರ ಕರಾವಳಿಯಲ್ಲಿ ಸಾಧಾರಣ ಮತ್ತು ಕೆಲವು ಭಾಗಗಳಲ್ಲಿ ಭಾರಿ ಮಳೆ ಸುರಿಸಿದೆ. ರಾಜ್ಯದ ಕರಾವಳಿಗೆ ಮತ್ತಷ್ಟು ಹತ್ತಿರ ಚಲಿಸುತ್ತಿರುವ 'ಮಾಂಡೂಸ್' ಶನಿವಾರದ ನಸುಕಿನೊಳಗೆ ಕರಾವಳಿ ದಾಟಲಿದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಶುಕ್ರವಾರ ತಿಳಿಸಿದೆ.

ತಮಿಳುನಾಡಿನ ಚೆಂಗಲ್‌ಪೇಟೆ ಮತ್ತು ನಾಗಪಟ್ಟಣಂ ಸೇರಿ ಕರಾವಳಿ ಪ್ರದೇಶದಲ್ಲಿ 24 ತಾಸುಗಳಲ್ಲಿ ದಾಖಲೆಯ ಮಳೆಯಾಗಿದೆ. ಕನಿಷ್ಠ 3 ಸೆ.ಮೀ.ಯಿಂದ 7 ಸೆ.ಮೀ. ವರೆಗೆ ಮಳೆ ಸುರಿದಿದೆ. ಕೊಡೈಕೆನಾಲ್‌ನಲ್ಲಿ 5 ಸೆಂ.ಮೀ ಮಳೆ ದಾಖಲಾಗಿದೆ. ಚಂಡಮಾರುತ ಬಾಧಿತ ಪ್ರದೇಶಗಳ ಸಂತ್ರಸ್ತರಿಗೆ ಪರಿಹಾರ ಕೇಂದ್ರಗಳಲ್ಲಿ ಆಶ್ರಯ ಕಲ್ಪಿಸಲಾಗಿದೆ.

ತಮಿಳುನಾಡಿನ ಉತ್ತರ ಒಳ ನಾಡು, ಪುದುಚೇರಿ, ರಾಯಲಸೀಮಾ ಮತ್ತು ದಕ್ಷಿಣ ಆಂಧ್ರಪ್ರದೇಶದ ಪಕ್ಕದ ಭಾಗದಲ್ಲಿ ಶನಿವಾರ ಭಾರಿ ಮಳೆಯ ಮುನ್ಸೂಚನೆ ಇದೆ. ರಾಜ್ಯದ ಕರಾವಳಿ ಮತ್ತು ಪುದುಚೇರಿಯಲ್ಲಿ ಶನಿವಾರವೂ ಶಾಲಾ ಕಾಲೇಜುಗಳಿಗೆ ಪ್ರಾದೇಶಿಕ ಆಡಳಿತ ರಜೆ ಘೋಷಿಸಿದೆ.

ವಾಯುವ್ಯ ದಿಕ್ಕಿನತ್ತ ಚಲಿಸುತ್ತಿರುವ ಚಂಡಮಾರುತವು, ಮಹಾಬಲಿಪುರಂ, ಪುದುಚೇರಿ, ಕಾರೈಕಲ್ ದಕ್ಷಿಣ ಆಂಧ್ರಪ್ರದೇಶದ ಕರಾವಳಿ, ಶ್ರೀಹರಿಕೋಟಾದಲ್ಲಿ ಮಳೆ ತರಲಿದೆ. ಚಂಡಮಾರುತದ ಮೇಲೆ ಡಾಪ್ಲರ್ ವೆದರ್ ರೆಡಾರ್‌ಗಳ ಮೂಲಕ ನಿಗಾವಹಿಸಲಾಗಿದೆ.

24 ತಾಸುಗಳಲ್ಲಿ ಚಂಡಮಾರುತ ದುರ್ಬಲವಾಗಲಿದೆ ಎಂದು ಐಎಂಡಿ ಹೇಳಿದೆ.

ಚೆಂಗಲ್‌ಪೇಟೆ, ವಿಲ್ಲುಪುರಂ ಮತ್ತು ಕಾಂಚೀಪುರಂ ಜಿಲ್ಲೆಗಳಲ್ಲಿ ರೆಡ್ ಅಲರ್ಟ್ ಘೋಷಿಸಲಾಗಿದೆ. ಕಾವೇರಿ ಕಣಿವೆ ಸೇರಿ ಕರಾವಳಿಯಲ್ಲಿ ರಕ್ಷಣಾ ಕಾರ್ಯಕ್ಕಾಗಿ ಎನ್‌ಡಿಆರ್‌ಎಫ್ ಮತ್ತು ಎಸ್‌ಟಿಆರ್‌ಎಫ್ ಒಳಗೊಂಡ ವಿಪತ್ತು ಸ್ಪಂದನಾ ಪಡೆಗಳನ್ನು ತಮಿಳುನಾಡು ಸರ್ಕಾರ ನಿಯೋಜಿಸಿದೆ.

ಚಂಡಮಾರುತದಿಂದಾಗಿ ಶುಕ್ರವಾರ ಚೆನ್ನೈನಿಂದ ಹೊರಡಬೇಕಿದ್ದ 4 ವಿಮಾನಗಳ ಸಂಚಾರ ರದ್ದುಪಡಿಸಲಾಯಿತು. ಮಧ್ಯರಾತ್ರಿವರೆಗೆ ಒಟ್ಟು 13 ವಿಮಾನಗಳ ಸಂಚಾರ ರಾಜ್ಯದಲ್ಲಿ ರದ್ದುಪಡಿಸಲಾಗಿತ್ತು. ಮೀನುಗಾರರಿಗೆ ಸಮುದ್ರಕ್ಕೆ ಇಳಿಯದಂತೆ ಕಟ್ಟೆಚ್ಚರ ನೀಡಲಾಗಿದೆ.

ಪುದುಚೇರಿಯಲ್ಲಿ ಶುಕ್ರವಾರ ಮಾಂಡೂಸ್ ಚಂಡಮಾರುತದಿಂದ ಅಲೆಗಳ ಅಬ್ಬರಕ್ಕೆ ಕಡಲ್ಕೊರೆತ ಉಂಟಾಗಿದ್ದ, ತೀರದ ಮನೆಗಳು ಕೊಚ್ಚಿಹೋಗಿವೆ –ಪಿಟಿಐ ಚಿತ್ರ

ಚಂಡಮಾರುತಕ್ಕೆ ಅರೇಬಿಕ್ ಹೆಸರು

'ಮಾಂಡೂಸ್' ಅರೇಬಿಕ್ ಮೂಲದ ಪದ. ಮಾಂಡೂಸ್ ಎಂದರೆ 'ಟ್ರೆಷರ್ ಬಾಕ್ಸ್ (ಖಜಾನೆ ಪೆಟ್ಟಿಗೆ)' ಎನ್ನುವ ಅರ್ಥವಿದೆ. 'ಮ್ಯಾನ್‌ಡೌಸ್' ಎಂದೂ ಉಚ್ಚರಿಸಲಾಗುತ್ತದೆ. ಇದು ಬಂಗಾಳಕೊಲ್ಲಿಯಲ್ಲಿ ರೂಪುಗೊಂಡು ನಿಧಾನವಾಗಿ ಚಲಿಸುವ ಮತ್ತು ಬಹಳಷ್ಟು ತೇವಾಂಶ ಹೀರಿಕೊಳ್ಳುವ ಈ ಚಂಡಮಾರುತಕ್ಕೆ 'ಮಾಂಡೂಸ್' ಹೆಸರನ್ನು ಅರಬ್ ಸಂಯುಕ್ತ ಸಂಸ್ಥಾನವು (ಯುಎಇ) ಸೂಚಿಸಿದೆ.

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜನೀಯರಿಂಗ್ ವಿಭಾಗ, ಬೆಳಗಾವಿ
ಕ್ರಸಂ.:ಪಂರಾಇಂ/ವಿಬೆ/ಪಿಬಿ–7&1/ಟೆಂಡರ್–23/2022–23/ ದಿನಾಂಕ: 10–12–2022

ಗುತ್ತಿಗೆ ಆಹ್ವಾನ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್)

ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜನೀಯರಿಂಗ್ ವಿಭಾಗ, ಬೆಳಗಾವಿ ಅಡಿಯಲ್ಲಿ ಐಟಂವಾರು ಗುತ್ತಿಗೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೇದಿಕೆ ಮೂಲಕ ಪಂಚಾಯತ್ ರಾಜ್ ಇಂಜನೀಯರಿಂಗ್ ಇಲಾಖೆಯ ಚಾಲ್ತಿ ನೋಂದಾಯಿತ ಗುತ್ತಿಗೆದಾರರಿಗಾಗಿ ಸ್ಟ್ಯಾಂಡರ್ಡ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–1,2,3 ರಲ್ಲಿ ಕಾಮಗಾರಿಗಳಿಗೆ ಟೆಂಡರ್ ಗುತ್ತಿಗೆಯನ್ನು ಕರೆಯಲಾಗಿದ್ದು ಗರಿಷ್ಠ ಅಂದಾಜು ಮೊತ್ತ ರೂ. 52.00 ಲಕ್ಷ ಹಾಗೂ ಅದರಂತೆ ಗರಿಷ್ಠ ಮುಂಗಡ ಠೇವಣಿ ಮೊತ್ತ ಅನುಕ್ರಮವಾಗಿ ರೂ. 1.30 ಲಕ್ಷ ಆತರುತ್ತದೆ. ಆಕ್ಷೇಪಣೆಗಳಿದ್ದಲ್ಲಿ ಖುದ್ದಾಗಿ ಕಚೇರಿಗೆ ಹಾಜರಾಗಿ ಸಲ್ಲಿಸುವ ಕೊನೆಯ ದಿನಾಂಕ: 09.12.2022 ಸಂಜೆ 17.28 ರೊಳಗಾಗಿ, ಗುತ್ತಿಗೆದಾರರಿಂದ ಅರ್ಜಿಗಳನ್ನು ಆನ್ ಲೈನ್ ಮೂಲಕ ಮನವಿ ಮಾಡಿಕೊಳ್ಳುವ ಕೊನೆಯ ದಿನಾಂಕ: 13.12.2022 ಸಂಜೆ 17.30 ಗಂಟೆಯವರೆಗೆ ಹಾಗೂ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 15.12.2022 ರಂದು 11.00 ಗಂಟೆಗೆ ಹಾಗೂ ಆರ್ಥಿಕ ಬಿಡ್ ತೆರೆಯುವ ದಿನಾಂಕ: 15.12.2022 ರಂದು 11.30 ಗಂಟೆಗೆ ಇರುತ್ತದೆ. ಪರಿಷ್ಕೃತ ವೇಳಾ ಪಟ್ಟಿ/ ತಿದ್ದುಪಡಿಗಳು/ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ ಹಾಗೂ ಅಂತರ್ ಜಾಲದ ಮೂಲಕ ವೆಬ್ ಸೈಟ್ ವಿಳಾಸ www.eproc.karnataka.gov.in ರಲ್ಲಿ ಪಡೆಯಬಹುದು.

ಸಹಿ/–
ಕಾರ್ಯನಿರ್ವಾಹಕ ಅಭಿಯಂತರರು,
ಪಂ.ರಾ.ಇಂ. ವಿಭಾಗ, ಬೆಳಗಾವಿ
DIPO/RO No. 1338/2022-23

ಕರ್ನಾಟಕ ಸರ್ಕಾರ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ದಾವಣಗೆರೆ.
ಸಂ:ಕಾಇಂ:ಗ್ರಾ.ಕು.ನೀ&ನೈವಿ:ದಾ:ಸ.ಇಂ–2/ಎಂವಿಎಸ್/ಓ&ಎಂ/ಟೆಂ/1107 ದಿ:06.12.2022

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

2022–23ನೇ ಸಾಲಿನಲ್ಲಿ ಬಹುಗ್ರಾಮ ವಾರ್ಷಿಕ ನಿರ್ವಹಣೆ ಯೋಜನೆಯಡಿ ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲ್ಲೂಕಿಗೆ ಅನುಮೋದನೆಯಾದ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆ ಕಾಮಗಾರಿ (ವಾರ್ಷಿಕ ನಿರ್ವಹಣೆ) ಇ–ಪ್ರೊಕ್ಯೂರ್‌ಮೆಂಟ್‌ಪೋರ್ಟ್‌ಲ್ ಮುಖಾಂತರ ಟೆಂಡರ್ ಪ್ರಕಟಣೆಯನ್ನು ಕರ್ನಾಟಕ ರಾಜ್ಯಪಾಲರ ಪರವಾಗಿ ನೋಂದಾಯಿತ ಅರ್ಹ ಹಾಗೂ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಇಲಾಖಾ ನಿಯಮಾವಳಿಯ ಮೇರೆಗೆ ಐಟಂವಾರು ಟೆಂಡರ್‌ಗಳನ್ನು ಕೆಡ್ಲ್ಯೂ ನಮೂನೆಯಲ್ಲಿ ಆಹ್ವಾನಿಸಲಾಗಿದೆ. ಭರ್ತಿ ಮಾಡಿದ ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟ್‌ಲ್ ಮುಖಾಂತರ ಸಲ್ಲಿಸುವ ಕಡೇ ದಿನಾಂಕ: 21.12.2022ರ ಸಂಜೆ 4.00ರ ವರೆಗೆ. ಹೆಚ್ಚಿನ ವಿವರಗಳಿಗೆ ಈ ಕಛೇರಿಯ ದೂರವಾಣಿ ಸಂಖ್ಯೆ:08192–262126 ಅಥವಾ www.eproc.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ. ಕಾಮಗಾರಿಯ ವಿವರ:– (1) Operation and Maintenance of Multi village water supply scheme to Channeshpura and other 18 villages in Channagiri Taluk, Davangere District. ಟೆಂಡರ್‌ನ ಅಂದಾಜು ಮೊತ್ತ:– 87.92 ಲಕ್ಷ. (2) Operation and Maintenance of Multi village water supply scheme to Tavarekere and other 26 villages in Channagiri Taluk, Davangere District. ಟೆಂಡರ್‌ನ ಅಂದಾಜು ಮೊತ್ತ:– 99.36 ಲಕ್ಷ. ಯಾವುದೇ ಕಾರಣವನ್ನು ನೀಡದೇ ಟೆಂಡರ್ ಕಾಮಗಾರಿಗಳನ್ನು ಮುಂದೂಡುವ, ಅಂಗೀಕರಿಸುವ ಮತ್ತು ತಿರಸ್ಕರಿಸುವ ಅಧಿಕಾರವನ್ನು ಕೆಳಗೆ ಸಹಿ ಮಾಡಿರುವವರು ಅಧಿಕಾರವನ್ನು ಕಾಯ್ದಿರಿಸಿಕೊಳ್ಳಲಾಗಿದೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಗ್ರಾ.ಕು.ನೀ ಮತ್ತು ನೈ ವಿಭಾಗ, ದಾವಣಗೆರೆ.
ವಾಸಾಇ/ಡಿವಿಜಿ/666/ಎಂಸಿಎ/2022–23

ಧಾರ್ಮಿಕ ಮೆರವಣಿಗೆ: ಪಿಐಎಲ್ ವಜಾ

ನವದೆಹಲಿ (ಪಿಟಿಐ): ಧಾರ್ಮಿಕ ಮೆರವಣಿಗೆಗಳ ನಿಯಂತ್ರಣಕ್ಕೆ ಮಾರ್ಗಸೂಚಿ ರೂಪಿಸುವಂತೆ ಕೋರಿ ಸ್ವಯಂ ಸೇವಾ ಸಂಸ್ಥೆ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಸುಪ್ರೀಂ ಕೋರ್ಟ್ ಶುಕ್ರವಾರ ವಜಾಗೊಳಿಸಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಮತ್ತು ನ್ಯಾಯಮೂರ್ತಿ ಪಿ.ಎಸ್.ನರಸಿಂಹ ಅವರ ಪೀಠವು, 'ಸಿಟಿಜನ್ಸ್ ಫಾರ್ ಜಸ್ಟೀಸ್ ಅಂಡ್ ಪೀಸ್' ಎಂಬ ಎನ್‌ಜಿಒ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಪುರಸ್ಕರಿಸಲು ನಿರಾಕರಿಸಿತು.

'ಕಾನೂನು ಮತ್ತು ಸುವ್ಯವಸ್ಥೆಯು ರಾಜ್ಯದ ವಿಷಯವಾಗಿದೆ. ಕಾಶ್ಮೀರದಿಂದ ಕನ್ಯಾಕುಮಾರಿವರೆಗಿನ ಸಮಸ್ಯೆಗಳು ವಿಭಿನ್ನವಾಗಿವೆ. ನ್ಯಾಯಾಲಯವು ಇದನ್ನು ಹೇಗೆ ಮೇಲ್ವಿಚಾರಣೆ ಮಾಡುತ್ತದೆ' ಎಂದು ಪೀಠ ಪ್ರಶ್ನಿಸಿದೆ.

ಎನ್‌ಜಿಒ ಪರ ಹಾಜರಾದ ಹಿರಿಯ ವಕೀಲ ಸಿ.ಯು.ಸಿಂಗ್, ಮೆರವಣಿಗೆಗಳಿಗೆ ಅನುಮತಿ ನೀಡುವ ಮಾರ್ಗಸೂಚಿಗಳಿವೆ. ಆದರೆ, ಅವುಗಳನ್ನು ಕಾರ್ಯಗತಗೊಳಿಸಿಲ್ಲ. ಧಾರ್ಮಿಕ ಹಬ್ಬಗಳ ಸಮಯದಲ್ಲಿ ಖಡ್ಗಗಳು, ಬಂದೂಕುಗಳೊಂದಿಗೆ ಮೆರವಣಿಗೆ ನಡೆಸಲಾಗುತ್ತದೆ ಎಂದು ಹೇಳಿದರು.

'ಧಾರ್ಮಿಕ ಹಬ್ಬಗಳು ಗಲಭೆಯ ಸಮಯ ಎಂದು ನಾವು ಏಕೆ ಬಿಂಬಿಸಬೇಕು? ಮಹಾರಾಷ್ಟ್ರದಲ್ಲಿ ಗಣೇಶ ಪೂಜೆ ವೇಳೆ ಲಕ್ಷಾಂತರ ಜನರು ಸೇರುತ್ತಾರೆ. ಆದರೆ, ಯಾವುದೇ ಗಲಭೆಗಳು ನಡೆಯುವುದಿಲ್ಲ' ಎಂದು ಸಿಜೆಐ ಅಭಿಪ್ರಾಯಪಟ್ಟರು.

'ಯುವತಿಯರ ಮದುವೆ ವಯಸ್ಸು ಧರ್ಮಾತೀತವಾಗಿರಲಿ'

ನವದೆಹಲಿ: ಧರ್ಮಾತೀತವಾಗಿ ಎಲ್ಲ ಸಮುದಾಯಗಳ ಯುವತಿಯರ ವಿವಾಹ ವಯಸ್ಸನ್ನು 18 ವರ್ಷಕ್ಕೆ ನಿಗದಿಪಡಿಸುವಂತೆ ರಾಷ್ಟ್ರೀಯ ಮಹಿಳಾ ಆಯೋಗ ಸಲ್ಲಿಸಿರುವ ಅರ್ಜಿ ಆಲಿಸಿದ ಸುಪ್ರೀಂ ಕೋರ್ಟ್, ಈ ಬಗ್ಗೆ ಪ್ರತಿಕ್ರಿಯೆ ಸಲ್ಲಿಸುವಂತೆ ಕೇಂದ್ರ ಸರ್ಕಾರಕ್ಕೆ ಶುಕ್ರವಾರ ನೋಟಿಸ್ ಜಾರಿ ಮಾಡಿತು.

ಮುಸ್ಲಿಂ ಹುಡುಗಿಯರ ಮದುವೆಯ ವಯಸ್ಸನ್ನು ಹೆಚ್ಚಿಸಬೇಕೆಂದೂ ರಾಷ್ಟ್ರೀಯ ಮಹಿಳಾ ಆಯೋಗದ ವಕೀಲ ನಿತಿನ್ ಸಲುಜಾ ಅವರ ಮೂಲಕ ಸಲ್ಲಿಸಿರುವ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರ ನೇತೃತ್ವದ ಪೀಠ ವಿಚಾರಣೆ ನಡೆಸಿತು.

ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ (ಪೋಕ್ಸೊ) ಕಾಯ್ದೆ, ಐಪಿಸಿ ಮತ್ತು ಮಕ್ಕಳ ವಿವಾಹ ನಿಷೇಧ (ಪಿಸಿಎಂ) ಕಾಯ್ದೆಯನ್ನು ಧರ್ಮ ಅಥವಾ ವೈಯಕ್ತಿಕ ಕಾನೂನುಗಳನ್ನು ಲೆಕ್ಕಿಸದೆ ಎಲ್ಲರಿಗೂ ಸಮಾನವಾಗಿ ಅನ್ವಯಿಸಲು ನಿರ್ದೇಶನ ನೀಡಬೇಕು. ಸಂವಿಧಾನದ 14, 15 ಮತ್ತು 21ನೇ ವಿಧಿಗಳಡಿ ಖಾತರಿಪಡಿಸಿದ ಮೂಲಭೂತ ಹಕ್ಕುಗಳನ್ನು ಮುಸ್ಲಿಂ ಮಹಿಳೆಯರು, ಬಾಲಕಿಯರಿಗೂ ಅನ್ವಯಿಸಿ, ಎತ್ತಿಹಿಡಿಯಬೇಕೆಂದು ಅರ್ಜಿಯಲ್ಲಿ ಕೋರಲಾಗಿದೆ.

ಮುಸ್ಲಿಂ ವೈಯಕ್ತಿಕ ಕಾನೂನು ಗಳ ಅನುಸಾರ 16 ವರ್ಷದ ಬಾಲಕಿಯ ಮದುವೆ ಮಾನ್ಯಗೊಳಿಸಿ ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ ಇತ್ತೀಚೆಗೆ ನೀಡಿದ ತೀರ್ಪಿನ ಸಿಂಧುತ್ವವನ್ನು ಮಕ್ಕಳ ಹಕ್ಕುಗಳ ಸಂರಕ್ಷಣೆಯ ರಾಷ್ಟ್ರೀಯ ಆಯೋಗವು ಈ ಹಿಂದೆ ಪ್ರತ್ಯೇಕವಾಗಿ ಪ್ರಶ್ನಿಸಿತ್ತು.

ಜಿಲ್ಲಾ ಪಂಚಾಯತ್ ತುಮಕೂರು,
ಕಾರ್ಯಪಾಲಕ ಅಭಿಯಂತರವರ ಕಚೇರಿ,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ತುಮಕೂರು ವಿಭಾಗ.
ದೂ:0816-2252937
ಸಂಖ್ಯೆ: 31/ಕಾಪಾಅ/ಗ್ರಾ.ಕು.ನೀ.ನೈ ವಿ/ತುಮ/ಟೆಂಡರ್/AE-1/2716/2022–23
ದಿನಾಂಕ: 06.11.2022

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 31/2022–23
(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ, ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ ಮತ್ತು ನೈರ್ಮಲ್ಯ ವಿಭಾಗ, ತುಮಕೂರು ಇವರು 2022–23 ನೇ ಸಾಲಿಗೆ ಏಕ–ಲಕೋಟೆ ಮತ್ತು ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರನ್ನು ಸೂಕ್ತ ನೊಂದಾಯಿತ ಗುತ್ತಿಗೆದಾರರಿಂದ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಟೆಂಡರ್‌ನ ವಿವರ ಈ ಕೆಳಕಂಡಂತಿರುತ್ತದೆ. ತುಮಕೂರು ಜಿಲ್ಲೆ ವ್ಯಾಪ್ತಿಯಲ್ಲಿ ಜಲ ಜೀವನ್ ಮಿಷನ್ ಯೋಜನೆಯಡಿ ಅನುಮೋದನೆಗೊಂಡಿರುವ ತುಮಕೂರು ಮತ್ತು ತಿಪಟೂರು ತಾಲ್ಲೂಕಿನ ಕಾಮಗಾರಿಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ (https://www.eproc.karnataka.gov.in) ಬಿಡ್ ಸಲ್ಲಿಸಬಹುದು ಹೆಚ್ಚಿನ ಮಾಹಿತಿಗಾಗಿ ಈ ಕೆಳಗೆ ಸಹಿ ಮಾಡಿರುವವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು. ಅ) ಕನಿಷ್ಠ ಕಾಮಗಾರಿ ಮೊತ್ತ ರೂ.8.29 ಲಕ್ಷಗಳು, ಇ.ಎಂ.ಡಿ ಮೊತ್ತ ರೂ.20725/– ಗಳು ಹಾಗೂ ಆ) ಗರಿಷ್ಟ ಮೊತ್ತ ರೂ 82.68 ಲಕ್ಷಗಳು, ಇ.ಎಂ.ಡಿ ಮೊತ್ತ ರೂ 165360/– ಗಳು (1) ಭರ್ತಿಮಾಡಿದ ಟೆಂಡರ್‌ನ್ನು ಸಲ್ಲಿಸುವ ಅಂತಿಮ ದಿನಾಂಕ : **16.12.2022** ಸಂಜೆ 5:00 ಘಂಟೆ ವರೆಗೆ (2) ಪೂರ್ವಭಾವಿ ಸಭೆ (KW–3 ಕಾಮಗಾರಿಗಳಿಗೆ) ದಿನಾಂಕ: **12.12.2022** ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ&ನೈರ್ಮಲ್ಯ ವಿಭಾಗ ತುಮಕೂರು (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **17.12.2022** ಸಂಜೆ 05.30 ಘಂಟೆಯ ನಂತರ (4) ಆರ್ಥಿಕ ಬಿಡ್ ತೆರೆಯುವ ದಿನಾಂಕ: **22.12.2022** ಬೆಳಿಗ್ಗೆ 11.00 ಘಂಟೆಯ ನಂತರ.

ಸಹಿ/– ಕಾರ್ಯಪಾಲಕ ಅಭಿಯಂತರರು
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ,
ತುಮಕೂರು ವಿಭಾಗ, ತುಮಕೂರು
DIPR/TMK/754/MCA/2022-23

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್–ಬೆಂಗಳೂರು ಗ್ರಾಮಾಂತರ ಜಿಲ್ಲೆ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಕೊಠಡಿ ಸಂಖ್ಯೆ: 207, 2ನೇ ಮಹಡಿ, ಬೀರಸಂದ್ರ ಗ್ರಾಮ, ವಿಶ್ವನಾಥಪುರ ಅಂಚೆ, ಕುಂದಾಣ ಹೋಬಳಿ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ – 562110 ದೂ: 080–29787452
e-mail: dhobengalururural-hfws@karnataka.gov.in

ಸಂಖ್ಯೆ: DSO (BR)/NFDS/PROC/01/2022-23 ದಿನಾಂಕ: 08/12/2022

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)
ದ್ವಿ ಲಕೋಟೆ ಪದ್ಧತಿ

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಅಧೀನದಡಿ ಬರುವ ಆರೋಗ್ಯ ಉಪಕೇಂದ್ರಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ರಾಸಾಯನಿಕಗಳು, ತಪಸಣಾ ಕಿಟ್‌ಗಳು ಹಾಗೂ Consumable ಗಳನ್ನು ಸರಬರಾಜು ಮಾಡುವ ಕುರಿತಂತೆ ರೂ.70.64 ಲಕ್ಷಗಳು ರಾಷ್ಟ್ರೀಯ ಆರೋಗ್ಯ ಅಭಿಯಾನದ NFDS ಕಾರ್ಯಕ್ರಮದ 15ನೇ ಹಣಕಾಸು ಆಯೋಗದ ಲೆಕ್ಕ ಶೀರ್ಷಿಕೆಯಡಿ ಅನುಮೋದನೆಯಾಗಿದ್ದು, ದ್ವಿ–ಲಕೋಟೆ ಪದ್ಧತಿಯಲ್ಲಿ 'E-Procurement' ಮೂಲಕ ಟೆಂಡರ್ ಆಹ್ವಾನಿಸಲಾಗಿದ್ದು, ಆಸಕ್ತರು http://www.eproc.karnataka.gov.in ವೆಬ್‌ಸೈಟ್‌ನ ಮೂಲಕ ಡೌನ್‌ಲೋಡ್ ಮಾಡಿಕೊಂಡು ಆನ್‌ಲೈನ್ ಮೂಲಕ ಟೆಂಡರ್ ಸಲ್ಲಿಸಬಹುದು.

ಕ್ರ.ಸಂ: **1)** ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಫಾರಂಗಳನ್ನು ಡೌನ್‌ಲೋಡ್ ಮಾಡಿಕೊಂಡು ಆನ್‌ಲೈನ್ ಮೂಲಕ ಸಲ್ಲಿಸಲು ಪ್ರಾರಂಭದ ದಿನಾಂಕ: 09–12–2022, ಸಮಯ ಬೆಳಗ್ಗೆ 11:30. **2)** ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಫಾರಂಗಳನ್ನು ಡೌನ್‌ಲೋಡ್ ಮಾಡಿಕೊಂಡು ಆನ್‌ಲೈನ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ: 07–01–2023, ಸಮಯ ಸಂಜೆ: 05:30 **3)** ಟೆಂಡರ್‌ನ ಅಂದಾಜು ಮೊತ್ತ: ರೂ. 70.64 ಲಕ್ಷಗಳು. **4)** ಇ.ಎಂ.ಡಿ. ಹಣ: ರೂ. 1,41,280/– **5)** ಟೆಂಡರ್ ಅನ್ನು ತೆರೆಯುವ ದಿನಾಂಕ: ಅ) ತಾಂತ್ರಿಕ ಬಿಡ್: 09–01–2023, ಸಮಯ ಬೆಳಗ್ಗೆ 11:00 ಗಂಟೆ. ಆ) ಆರ್ಥಿಕ ಬಿಡ್: ಯಶಸ್ವಿ ತಾಂತ್ರಿಕ ಟೆಂಡರ್‌ದಾರರಿಗೆ ತಿಳಿಸಲಾಗುವುದು. **6)** Sample Submission ಸಲ್ಲಿಸಲು ಕೊನೆಯ ದಿನಾಂಕ: 06–01–2023, ಸಮಯ ಸಂಜೆ 4.00 ಗಂಟೆ. **7)** ಟೆಂಡರ್ ತೆರೆಯುವ ಸ್ಥಳ (Online Bid Opening): ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ, #207, 2ನೇ ಮಹಡಿ, ಜಿಲ್ಲಾಡಳಿತ ಭವನ, ಬೀರಸಂದ್ರ ಗ್ರಾಮ, ಕುಂದಾಣ ಹೋಬಳಿ, ದೇವನಹಳ್ಳಿ ತಾಲ್ಲೂಕು

ಹೆಚ್ಚಿನ ವಿವರಗಳಿಗೆ www.eproc.karnataka.gov.in ಮೂಲಕ ಮಾಹಿತಿ ಪಡೆಯಬಹುದು.

ಸಹಿ/–
ಜಿಲ್ಲಾ ಆರೋಗ್ಯ ಮತ್ತು ಕು.ಕ. ಅಧಿಕಾರಿ
ಬೆಂಗಳೂರು ಗ್ರಾಮಾಂತರ ಜಿಲ್ಲೆ
DIPR/CP/3458/GREENFMC/2022-23

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

❦ ಸುಭಾಷಿತ ❦

ಮನಸ್ಸಿನ ವಿಕಾಸವು ಮಾನವನ ಅಸ್ತಿತ್ವದ ಅಂತಿಮ ಗುರಿಯಾಗಿರಬೇಕು.

-ಡಾ. ಬಿ.ಆರ್.ಅಂಬೇಡ್ಕರ್

ರೆಪೊ ಹೆಚ್ಚಳ ನಿರೀಕ್ಷಿತ ಬೆಲೆ ಸ್ಥಿರತೆ ಈಗಿನ ಆದ್ಯತೆ

ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಹಣಕಾಸು ನೀತಿ ಸಮಿತಿಯು (ಎಂಪಿಸಿ), ಬ್ಯಾಂಕ್‌ಗಳಿಗೆ ಆರ್‌ಬಿಐ ನೀಡುವ ಸಾಲದ ಮೇಲಿನ ಬಡ್ಡಿಯ ದರವನ್ನು ಹೆಚ್ಚಿಸುವ ತೀರ್ಮಾನ ಕೈಗೊಂಡಿರುವುದು ಅನಿರೀಕ್ಷಿತ ಅಲ್ಲ. ಎಂಪಿಸಿ ಸಭೆಯು ರೆಪೊ ದರವನ್ನು ಶೇಕಡ 0.35ರಷ್ಟು ಹೆಚ್ಚಿಸುವ ತೀರ್ಮಾನ ಕೈಗೊಂಡಿದೆ. ಈ ಹೆಚ್ಚಳದ ನಂತರದಲ್ಲಿ ರೆಪೊ ದರವು ಶೇ 6.25ಕ್ಕೆ ತಲುಪಿದೆ. ರೆಪೊ ದರವು ಈ ಮಟ್ಟದಲ್ಲಿ ಇದ್ದಿದ್ದು 2019ರ ಮಾರ್ಚ್‌ನಲ್ಲಿ. ಚಿಲ್ಲರೆ ಹಣದುಬ್ಬರ ದರವು ಈಗಲೂ ಒಂದು ಸವಾಲಾಗಿಯೇ ಉಳಿದುಕೊಂಡಿದೆ ಹಾಗೂ ಈ ಸವಾಲನ್ನು ಎದುರಿಸಬೇಕಿದೆ ಎಂಬುದನ್ನು ಎಂಪಿಸಿ ತೀರ್ಮಾನವು ಹೇಳುತ್ತಿದೆ. ಎಂಪಿಸಿಯ ಆರು ಮಂದಿ ಸದಸ್ಯರ ಪೈಕಿ ಐದು ಮಂದಿ ದರ ಏರಿಕೆಯ ಪರವಾಗಿ ಹಾಗೂ ಒಬ್ಬ ಸದಸ್ಯ ದರ ಏರಿಕೆಯ ವಿರುದ್ಧವಾಗಿ ಮತ ಚಲಾಯಿಸಿದ್ದಾರೆ. ಜಯಂತ ವರ್ಮ ಅವರು ರೆಪೊ ಏರಿಕೆಯ ವಿರುದ್ಧವಾಗಿ ಮತ ಚಲಾಯಿಸಿದ್ದಾರೆ. ಹೊಂದಾಣಿಕೆಯ ಹಣಕಾಸು ನೀತಿಯನ್ನು ಹಿಂಪಡೆಯುವುದರ ಪರವಾಗಿ ಎಂಪಿಸಿ ಬಹುಮತದ ನಿರ್ಧಾರ ಕೈಗೊಂಡಿದೆ. ಈ ತೀರ್ಮಾನಗಳು, ಹಣದುಬ್ಬರವು ಆರ್‌ಬಿಐ ಪಾಲಿಗೆ ಕಳವಳ ಮೂಡಿಸುವ ಸಮಸ್ಯೆಯಾಗಿ ಈಗಲೂ ಮುಂದುವರಿದಿದೆ ಎಂಬುದನ್ನು ಹೇಳುತ್ತಿವೆ. ಈಗ ರೆಪೊ ದರವನ್ನು ಹೆಚ್ಚಿಸುವ ವೇಗವು ಕಡಿಮೆ ಆಗಿದೆ. ಹಿಂದೆ ರೆಪೊ ದರವನ್ನು ಸತತವಾಗಿ ಮೂರು ಬಾರಿ ಶೇ 0.50ರಷ್ಟು ಹೆಚ್ಚಿಸಲಾಗಿತ್ತು. ಈಗ ಹೆಚ್ಚಳದ ಪ್ರಮಾಣ ಕಡಿಮೆ ಆಗಿದ್ದರೂ, ದರ ಹೆಚ್ಚಳ ಇಲ್ಲಿಗೇ ಕೊನೆಯಾಗಿಲ್ಲ ಎಂಬ ಸೂಚನೆಗಳು ಇವೆ.

ಚಿಲ್ಲರೆ ಹಣದುಬ್ಬರದ ದರವು ಈಗಲೂ ಒಂದು ಸವಾಲಾಗಿಯೇ ಉಳಿದುಕೊಂಡಿದ್ದು, ಈ ಸವಾಲನ್ನು ಎದುರಿಸಬೇಕಿದೆ ಎಂಬುದನ್ನು ರೆಪೊ ದರ ಹೆಚ್ಚಳದ ತೀರ್ಮಾನವು ಹೇಳುತ್ತಿದೆ

ಪ್ರಸಕ್ತ ತ್ರೈಮಾಸಿಕದಲ್ಲಿ ಚಿಲ್ಲರೆ ಹಣದುಬ್ಬರದ ಪ್ರಮಾಣವು ಶೇ 6.6ರಷ್ಟು ಇರಲಿದೆ ಎಂದು ಆರ್‌ಬಿಐ ಅಂದಾಜಿಸಿದೆ. ಮುಂದಿನ ತ್ರೈಮಾಸಿಕದಲ್ಲಿ (ಜನವರಿಯಿಂದ ಮಾರ್ಚ್‌ವರೆಗಿನ ಅವಧಿ) ಹಣದುಬ್ಬರದ ಪ್ರಮಾಣವು ಶೇ 5.9ಕ್ಕೆ ಇಳಿಕೆ ಆಗಲಿದೆ ಎಂದು ಅಂದಾಜು ಮಾಡಲಾಗಿದೆ. ಅಂದರೆ, ಪ್ರಸಕ್ತ ಹಣಕಾಸು ವರ್ಷದಲ್ಲಿ ಹಣದುಬ್ಬರದ ಪ್ರಮಾಣವು ಶೇ 6.7ರ ಮಟ್ಟದಲ್ಲಿ ಇರಲಿದೆ. ಇದು ಆರ್‌ಬಿಐ ನಿಗದಿ ಮಾಡಿರುವ ಗರಿಷ್ಠ ಮಿತಿಗಿಂತಲೂ ಹೆಚ್ಚು. ಅಕ್ಟೋಬರ್ ತಿಂಗಳನ್ನು ಪರಿಗಣಿಸಿದರೆ, ಚಿಲ್ಲರೆ ಹಣದುಬ್ಬರ ದರವು ಸತತವಾಗಿ 10 ತಿಂಗಳ ಅವಧಿಗೆ ಶೇ 6ಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಉಳಿದಿದೆ. ಅಕ್ಟೋಬರ್‌ನಲ್ಲಿ ಹಣದುಬ್ಬರ ತಗ್ಗುವಂತೆ ಕಂಡರೂ, ಅದು ಆಹಾರ ವಸ್ತುಗಳ ಹಣದುಬ್ಬರ ತಗ್ಗಿದ್ದರ ಕಾರಣದಿಂದಾಗಿತ್ತು. 'ಹಣದುಬ್ಬರದ ವಿರುದ್ಧದ ಸಮರವು ಇನ್ನೂ ಕೊನೆಗೊಂಡಿಲ್ಲ' ಎಂದು ಎಂಪಿಸಿ ಹೇಳಿಕೆಯಲ್ಲಿ ತಿಳಿಸಲಾಗಿದೆ. ಮುಂದಿನ ಹಣಕಾಸು ವರ್ಷದ ಮೊದಲಾರ್ಧದಲ್ಲಿ ಹಣದುಬ್ಬರವು ಶೇ 5.2ಕ್ಕೆ ಇಳಿಕೆಯಾಗಬಹುದು ಎಂದು ಆರ್‌ಬಿಐ ಅಂದಾಜಿಸಿದೆ. ಆದರೆ ಈ ಮಟ್ಟವು ಕೂಡ ಕಡಿಮೆಯೇನೂ ಅಲ್ಲ. ವಾಸ್ತವದಲ್ಲಿ ಹಣದುಬ್ಬರದ ಪ್ರಮಾಣವನ್ನು ಶೇ 4ರಲ್ಲಿ ಮಿತಿಗೊಳಿಸಬೇಕು. ಶೇ 6 ಅದರ ಗರಿಷ್ಠ ಮಿತಿ ಮಾತ್ರ. ಆರ್‌ಬಿಐ ತಾನು ಈಗ ತಳೆದಿರುವ ನಿಲುವನ್ನು ಮರುಪರಿಶೀಲಿಸುವ ಮೊದಲು ಹಣದುಬ್ಬರವು ಕಡಿಮೆ ಮಟ್ಟದಲ್ಲಿ ಸ್ಥಿರವಾಗುವುದನ್ನು ಬಯಸಬಹುದು.

ಕೇಂದ್ರೀಯ ಬ್ಯಾಂಕ್ ಭಾರತದ ಆರ್ಥಿಕ ಬೆಳವಣಿಗೆ ದರದ ಅಂದಾಜನ್ನು ಈ ಆರ್ಥಿಕ ವರ್ಷಕ್ಕೆ ಶೇ 6.8ಕ್ಕೆ ಇಳಿಕೆ ಮಾಡಿದೆ. ಸೆಪ್ಟೆಂಬರ್‌ನಲ್ಲಿ ಮಾಡಿದ್ದ ಅಂದಾಜಿನ ಪ್ರಕಾರ ಅದು ಶೇ 7 ಆಗಿತ್ತು. ಅದಕ್ಕೂ ಮೊದಲು, ಅಂದರೆ ಆಗಸ್ಟ್‌ನಲ್ಲಿ ಬೆಳವಣಿಗೆ ಅಂದಾಜನ್ನು ಶೇ 7.2ಕ್ಕೆ ಇರಿಸಿತ್ತು. ಬೆಳವಣಿಗೆ ದರದ ಮರು ಅಂದಾಜುಗಳಿಗೆ ಕಾರಣ ಜಾಗತಿಕ ಮಟ್ಟದಲ್ಲಿನ ಕೆಲವು ಬಿಕ್ಕಟ್ಟುಗಳು ದೀರ್ಘಾವಧಿಗೆ ಮುಂದುವರಿಯುತ್ತಿರುವುದು, ಜಾಗತಿಕ ಹಣಕಾಸಿನ ಸ್ಥಿತಿ ಬಿಗಿಯಾಗುತ್ತಿರುವುದು ಮತ್ತು ವಿದೇಶಗಳಿಂದ ಬೇಡಿಕೆ ಕಡಿಮೆ ಆಗುತ್ತಿರುವುದು ಎಂದು ಆರ್‌ಬಿಐ ಹೇಳಿದೆ. ಈಗ ದೇಶದಲ್ಲಿ ಹಣಕಾಸು ನೀತಿಯನ್ನು ಬಿಗಿಗೊಳಿಸುತ್ತಿರುವುದರಿಂದಾಗಿ ಬೆಳವಣಿಗೆ ಮೇಲೆ ಪರಿಣಾಮ ಉಂಟಾಗಬಹುದು. ಹೀಗಿದ್ದರೂ, ಆರ್‌ಬಿಐ ಗಮನವು ಈಗ ವ್ಯವಸ್ಥೆಯಲ್ಲಿ ಬೆಲೆ ಸ್ಥಿರತೆಯನ್ನು ಕಾಯ್ದುಕೊಳ್ಳುವುದರ ಮೇಲೆ ಇದೆ. ಏಕೆಂದರೆ, ಹಣದುಬ್ಬರವು ಮಂದಗತಿಯ ಬೆಳವಣಿಗೆಗಿಂತಲೂ ಹೆಚ್ಚಿನ ಅಪಾಯವನ್ನು ಆರ್ಥಿಕ ವ್ಯವಸ್ಥೆಗೆ ತಂದೊಡ್ಡುತ್ತದೆ.

ದಿನದ ಟ್ವೀಟ್

ದೃಢವಾದ ಕ್ರಮವಿರಲಿ

ಕಡಲ ಕೊರೆತ ಮತ್ತು ಜಾಗತಿಕ ತಾಪಮಾನದ ಬಗ್ಗೆ ಸಂಸತ್ತಿನಲ್ಲಿ ಪ್ರಸ್ತಾಪಿಸಿದೆ. ಬೇರೆ ಯಾವುದೇ ಕಾರಣಕ್ಕಾಗಿ ಒಂದೇ ಒಂದು ಇಂಚು ಭೂಮಿಯನ್ನು ಕಳೆದುಕೊಂಡರೂ ನಾವು ಅದನ್ನು ಗಂಭೀರವಾಗಿ ಪರಿಗಣಿಸುತ್ತೇವೆ, ಆದರೆ ಪ್ರಾಕೃತಿಕ ಕಾರಣಗಳಿಂದ ಹೆಕ್ಟೇರ್‌ಗಟ್ಟಲೆ ಜಾಗ ನಾಶವಾದರೂ ಉದಾಸೀನ ತೋರುತ್ತೇವೆ. ಕರಾವಳಿ ಪ್ರದೇಶಗಳನ್ನು ಸಂರಕ್ಷಿಸಲು ಸರ್ಕಾರ ದೃಢವಾದ ಕ್ರಮಗಳನ್ನು ತೆಗೆದುಕೊಳ್ಳಬೇಕು.

ಜಾನ್ ಬ್ರಿಟ್ಟಾಸ್, ರಾಜ್ಯಸಭಾ ಸದಸ್ಯ

ಕಿಡಿನುಡಿ

ನವಜೀವನ್ ಎಕ್ಸ್‌ಪ್ರೆಸ್ ರೈಲಿನಲ್ಲಿ ನಿನ್ನೆ ಸ್ವಚ್ಛತೆಯ ತಪಾಸಣೆ ನಡೆಸಿದೆ- ಜನರಲ್ ಬೋಗಿಯಲ್ಲಿ ಬೀಡಿಗಳು ಮತ್ತು ಗುಟ್ಕಾದಿಂದ ವಾಶ್‌ಬೇಸಿನ್ ಕಟ್ಟಿಕೊಂಡಿತ್ತು; ಬಯೊ-ಟಾಯ್ಲೆಟ್‌ನಲ್ಲಿ ಯಾರೋ ಟಿಶ್ಯೂ ರೋಲ್ ಅನ್ನು ರಾಶಿ ಹಾಕಿದ್ದರು. ಕಸದ ಬುಟ್ಟಿಗಳು ಇದ್ದವಾದರೂ ಕಿತ್ತಳೆಹಣ್ಣು ಮತ್ತು ಕಡಲೆಕಾಯಿಯ ಸಿಪ್ಪೆಗಳನ್ನು ಆಸನಗಳ ಕೆಳಗೆ ಎಸೆಯಲಾಗಿತ್ತು!

ಅನಂತ್ ರೂಪನಗುಡಿ, ರೈಲ್ವೆ ಅಧಿಕಾರಿ

25 ವರ್ಷಗಳ ಹಿಂದೆ

ಬುಧವಾರ, 10-12-1997

● **ಶಿವರಾಮ ಕಾರಂತ ಇನ್ನು ಇತಿಹಾಸ**

ಉಡುಪಿ, ಡಿ. 9– ಕನ್ನಡ ನಾಡು ಕಂಡ ಮೇರು ಸಾಹಿತಿ, ನಡೆದಾಡುವ ವಿಶ್ವಕೋಶ ಎಂದೇ ಜನಾನುರಾಗಿಯಾಗಿದ್ದ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಲೇಖಕ ಡಾ. ಕೋಟ ಶಿವರಾಮ ಕಾರಂತ (96) ಇಂದು ಬೆಳಿಗ್ಗೆ 11.35ರ ವೇಳೆಗೆ ಚಿರನಿದ್ರೆಯಲ್ಲಿ ಮುಳುಗುವುದರೊಂದಿಗೆ ಇತಿಹಾಸದ ಭಾಗವಾದರು.

ಇಂದು ಮುಂಜಾನೆಯಿಂದಲೇ ಬಳಲಿದಂತೆ ಕಾಣುತ್ತಿದ್ದ ಕಾರಂತರು ವೈದ್ಯರ ಸತತ ಪ್ರಯತ್ನ ಸಾಗಿದ್ದಂತೆಯೇ ಎಲ್ಲರೂ ನೋಡುನೋಡುತ್ತಿದ್ದಂತೆಯೇ ಕೊನೆಯುಸಿರೆಳೆದರು.

ಕಾರಂತರ ಅಂತಿಮ ಕ್ರಿಯೆ ನಾಳೆ ಬೆಳಿಗ್ಗೆ ಹತ್ತು ಗಂಟೆಗೆ ಕೋಟದಲ್ಲಿ ಅವರ ಮನೆಯ ತೆಂಗಿನ ತೋಟದಲ್ಲಿ ನಡೆಯಲಿದೆ. ಈ ಹಿನ್ನೆಲೆಯಲ್ಲಿ ನಾಳೆ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ರಜೆ ಘೋಷಿಸಲಾಗಿದೆ.

● **ಸಾಹಿತ್ಯ ಸಮ್ಮೇಳನ: ಬದಲಾವಣೆ ಇಲ್ಲ**

ಮಂಗಳೂರು, ಡಿ. 9– ಮಂಗಳೂರಿನಲ್ಲಿ ಗುರುವಾರದಿಂದ ಆರಂಭವಾಗಲಿರುವ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಯಾವುದೇ ಬದಲಾವಣೆ ಇಲ್ಲ. ಈ ಮೊದಲೇ ನಿಗದಿಯಾದಂತೆ ಅಬಾಧಿತವಾಗಿ ನಡೆಯಲಿದೆ.

ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಸಾ.ಶಿ. ಮರುಳಯ್ಯ ಮತ್ತು ಸ್ವಾಗತ ಸಮಿತಿಯ ಗೌರವಾಧ್ಯಕ್ಷ ಡಾ. ವೀರೇಂದ್ರ ಹೆಗ್ಗಡೆ ಅವರ ನೇತೃತ್ವದಲ್ಲಿ ನಡೆದ ಎಲ್ಲ ಉಪ ಸಮಿತಿಗಳ ಸಭೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಯಿತು ಎಂದು ಸಮಿತಿಯ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

50 ವರ್ಷಗಳ ಹಿಂದೆ

ಭಾನುವಾರ, 10-12-1972

● **ಭಾರಿ ಮಳೆ ಪರಿಣಾಮ ಭತ್ತದ ಗದ್ದೆ ನೀರಿನಲ್ಲಿ: ಕೊಯ್ಲಿಗೆ ತೊಂದರೆ**

ಕೊಳ್ಳೇಗಾಲ, ಡಿ. 9– ಕೊಳ್ಳೇಗಾಲ ತಾಲ್ಲೂಕಿನಲ್ಲಿ ಕಳೆದ ಮೂರು ದಿನಗಳಿಂದ ಭಾರಿ ಮಳೆ ಬೀಳುತ್ತಿದ್ದು, ಗುಂಡ್ಲು ಹಾಗೂ ಸುವರ್ಣಾವತಿ ಹೊಳೆಗಳು ತುಂಬು ಪ್ರವಾಹದಿಂದ ಹರಿಯುತ್ತಿವೆ.

ಕೊಯ್ಲಿಗೆ ಬಂದಿದ್ದ ಸಾವಿರಾರು ಎಕರೆ ಭತ್ತದ ಗದ್ದೆಗಳು ಆರು ಅಡಿಗಳಷ್ಟು ನೀರಿನಲ್ಲಿ ನಿಂತಿವೆ.

ರೈತರಿಗೆ 'ಕೈಗೆ ಬಂದ ತುತ್ತು ಬಾಯಿಗಿಲ್ಲ' ಎಂಬ ಪರಿಸ್ಥಿತಿ ಉಂಟಾಗಿದೆ. ಎಲ್ಲ ರಸ್ತೆಗಳೂ ನೀರಿನಲ್ಲಿ ಮುಳುಗಿವೆ.

ಮೈಸೂರು ಮತ್ತು ಕೊಯಮತ್ತೂರುಗಳಿಂದ ಬರುವ ಬಸ್ಸುಗಳು ನಿಂತುಹೋಗಿವೆ. ಬೆಂಗಳೂರಿಗೆ ಅತಿ ಪ್ರಯಾಸದಿಂದ ಬಸ್ಸುಗಳನ್ನು ಓಡಿಸಲಾಗುತ್ತಿದೆ.

● **ಸರ್ಕಾರದಿಂದಲೇ ಸಗಟು ವ್ಯಾಪಾರ: ಗುರಿ ಸಾಧನೆಗೆ ಮುಖ್ಯಮಂತ್ರಿಗಳಿಗೆ ಕರೆ**

ನವದೆಹಲಿ, ಡಿ. 9– ಅಗತ್ಯವಾದರೆ ಶಾಸನಗಳನ್ನಾದರೂ ಮಾಡಿ ನಿಗದಿತ ಬೆಲೆಗಳಲ್ಲಿ ಧಾನ್ಯವನ್ನು ಸಂಗ್ರಹಿಸಿ, ಆಹಾರ ಧಾನ್ಯಗಳ ಸಗಟು ವ್ಯಾಪಾರವನ್ನು ಸರ್ಕಾರ ವಹಿಸಿಕೊಳ್ಳುವ ಕಾಂಗ್ರೆಸ್ ಗುರಿಯನ್ನು ಸಾಧಿಸಲು ಪಕ್ಷದ ಮುಖ್ಯಮಂತ್ರಿಗಳಿಗೆ ತಿಳಿಸಲಾಗಿದೆ.

ಪಕ್ಷದ ನಿರ್ಧಾರವನ್ನು ಕಾರ್ಯಗತಗೊಳಿಸಲು ಎಲ್ಲ ಪ್ರಯತ್ನ ನಡೆಸುವುದಾಗಿ ಮುಖ್ಯಮಂತ್ರಿಗಳು ಹೈಕಮಾಂಡ್‌ಗೆ ಭರವಸೆ ಕೊಟ್ಟಿದ್ದಾರೆಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಚಂದ್ರಜಿತ್ ಯಾದವ್ ಅವರು ಪತ್ರಕರ್ತರಿಗೆ ತಿಳಿಸಿದರು.

ಎನ್‌ಡಿಟಿವಿ ವಿದ್ಯಮಾನದಲ್ಲಿ ಬರಿಗಣ್ಣಿಗೆ ಕಾಣುವುದಕ್ಕಿಂತ ಮಿಗಿಲಾದುದು ಬೇರೆ ಏನಾದರೂ ಇದೆಯೇ?

ಯಾರಿಗೂ ಇರದ ಸವಾಲು ಮುಕ್ತ ಮಾಧ್ಯಮಕ್ಕಿದೆ



ವಿಶ್ಲೇಷಣೆ

ಕ್ಯಾಪ್ಟನ್ ಜಿ.ಆರ್.ಗೋಪಿನಾಥ್

ಎನ್‌ಡಿಟಿವಿ ಪ್ರವರ್ತಕ ಕಂಪನಿಗೆ ಪ್ರಣಯ್ ರಾಯ್ ಹಾಗೂ ರಾಧಿಕಾ ರಾಯ್ ರಾಜೀನಾಮೆ ಸಲ್ಲಿಸಿರುವುದು ಸ್ವತಂತ್ರ ಟಿ.ವಿ. ವಾಹಿನಿಯೊಂದರ ಅಂತ್ಯವೇ? ಇದು ಸಂಭಾವಿತ ಚರ್ಚೆಗಳ ಕೊನೆಯೇ? ಎನ್‌ಡಿಟಿವಿ ಸಂಸ್ಥಾಪಕ ಪ್ರಣಯ್ ಅವರು ಯಾವಾಗಲೂ ಶಾಂತಚಿತ್ತರಾಗಿ ಇರುತ್ತಿದ್ದರು. ಚರ್ಚೆ ಕಾವೇರಿದ್ದರೂ ಅವರು ಮಾತ್ರ ಸಂಯಮದಿಂದ ಇರುತ್ತಿದ್ದರು. ಬಲ ಹಾಗೂ ಎಡ ಪಂಥಗಳಿಗೆ ಸೇರಿದ, ತೀಕ್ಷ್ಣ ನಿಲುವುಗಳನ್ನು ಹೊಂದಿದ್ದ ಅತಿಥಿಗಳೂ ಪ್ರಣಯ್ ಅವರೆದುರು ಶಾಂತರಾಗುತ್ತಿದ್ದರು. ಏಕೆಂದರೆ ಪ್ರಣಯ್ ಅವರು ತಮ್ಮಲ್ಲಿ ಚರ್ಚೆಯಲ್ಲಿ ಪಾಲ್ಗೊಳ್ಳುವ ಅತಿಥಿಗಳನ್ನು ಮೂರ್ಖರೆಂಬ ರೀತಿಯಲ್ಲಿ ಕಾಣುತ್ತಿರಲಿಲ್ಲ.

ಈ ಮಾತನ್ನು ನಾವು ಇತರ ನಿರೂಪಕರ ಬಗ್ಗೆಯೂ ಹೇಳಬಹುದೇ? ಅವರಲ್ಲಿ ಹಲವರು ಎಲ್ಲ ಅತಿಥಿಗಳ ಅಭಿಪ್ರಾಯ ಕೇಳುವ ಬದಲು, ಅವರ ಅಭಿಪ್ರಾಯವು ತಮ್ಮ ಅಭಿಪ್ರಾಯಕ್ಕೆ ವಿರುದ್ಧವಾಗಿದ್ದರೆ ಅವರನ್ನು ಗದರಿಸಲು ಆರಂಭಿಸುತ್ತಾರೆ! ಎನ್‌ಡಿಟಿವಿ ವಾಹಿನಿಯಲ್ಲಿ ಪ್ರಣಯ್ ಅವರಿಗಿಂತ ಕಿರಿಯರಾಗಿದ್ದ ಹಲವರು ಬಿಜೆಪಿ ವಕ್ತಾರರ ಎದುರು ವಾದಕ್ಕೆ ನಿಂತಿದ್ದು, ಚರ್ಚೆಯ ನಡುವೆಯೇ ಬಿಜೆಪಿ ವಕ್ತಾರರು ಹೊರನಡೆದಿದ್ದು ಆಗಿದೆ.

ಆರ್ಥಿಕ ನೀತಿಗಳು, ಅಲ್ಪಸಂಖ್ಯಾತರಿಗೆ ಆದ ಅನ್ಯಾಯ ಅಥವಾ ಆಡಳಿತದಲ್ಲಿನ ಲೋಪಗಳ ವಿಚಾರದಲ್ಲಿ ಎನ್‌ಡಿಟಿವಿ ನಿರೂಪಕರು ಬಿಜೆಪಿ ನೇತೃತ್ವದ ಸರ್ಕಾರದ ನೀತಿಗಳನ್ನು ಬಹಿರಂಗವಾಗಿ ಪ್ರಶ್ನಿಸುತ್ತಿದ್ದರು. ಎನ್‌ಡಿಟಿವಿ ಹಿಂದಿ ವಾಹಿನಿಯ ನಿರೂಪಕರಾಗಿದ್ದ, ಮ್ಯಾಗ್ಸೆಸೆ ಪ್ರಶಸ್ತಿ ಪುರಸ್ಕೃತ ರವೀಶ್ ಕುಮಾರ್ ಅವರು ಹಿಂದಿ ನೆಲದಲ್ಲಿ ಬೆಂಬಲಿಗರ ಸಮೂಹವನ್ನು ಹೊಂದಿದ್ದಾರೆ. ಅಧಿಕಾರದಲ್ಲಿರುವ ಪಕ್ಷ ಯಾವುದೇ ಆಗಲಿ, ಮುಕ್ತ ಮಾಧ್ಯಮವು ಅಧಿಕಾರಸ್ಥರು ತಪ್ಪು ಮಾಡದಂತೆ ಕಾಳಜಿ ವಹಿಸುವ ಕಾವಲು ನಾಯಿಯಂತೆ ಇರಬೇಕು. ಬಿಜೆಪಿ ಬೆಂಬಲಿಗರು ಎನ್‌ಡಿಟಿವಿ ಮತ್ತು ಪ್ರಣಯ್ ಅವರನ್ನು ಮೋದಿ ವಿರೋಧಿ ಹಾಗೂ ಕಾಂಗ್ರೆಸ್ ಪರವೆಂಬಂತೆ ಕಾಣುತ್ತಾರೆ. ರೋಮನ್ ಸಾಮ್ರಾಟ ಸೀಸರನ ಪತ್ನಿಯಂತೆಯೇ ಪತ್ರಕರ್ತರು ಕೂಡ ಸಂಶಯಗಳಿಗೆ ಅತೀತರಾಗಿರಬೇಕು. ಪತ್ರಕರ್ತ ಆಡಳಿತ ಪಕ್ಷವನ್ನು ಟೀಕಿಸಿದ ತಕ್ಷಣ, ಆತ ವಿರೋಧ ಪಕ್ಷಗಳ ಹಿತಾಸಕ್ತಿಗೆ ಪೂರಕವಾಗಿ ಕೆಲಸ ಮಾಡುತ್ತಿದ್ದಾನೆ ಎಂಬಂತೆ ಕಾಣಲಾಗುತ್ತದೆ. ಯುಪಿಎ ಆಡಳಿತದ ಅವಧಿಯಲ್ಲಿ ಕಾಂಗ್ರೆಸ್ ಬಗ್ಗೆ ಮೃದು ಧೋರಣೆ ಹೊಂದಿದ್ದ ಆರೋಪವನ್ನು ನಿರಾಕರಿಸಲು ಎನ್‌ಡಿಟಿವಿಗೆ ಸಾಧ್ಯವಾಗಲಿಕ್ಕಿಲ್ಲ.

ಆರೋಪಗಳು ಏನೇ ಇದ್ದರೂ, ಪ್ರಣಯ್ ಅವರು ಟಿ.ವಿ. ವಾಹಿನಿಗಳ ವರದಿಗಾರಿಕೆಯಲ್ಲಿ, ಚುನಾವಣೆಗಳ ಫಲಿತಾಂಶ ಅಂದಾಜಿಸುವುದರಲ್ಲಿ ಕ್ರಾಂತಿಯನ್ನು ತಂದವರು.

ರಾಯ್ ಅವರ ಕಂಪನಿಯು ರಿಲಯನ್ಸ್ ಇಂಡಸ್ಟ್ರೀಸ್‌ಗೆ ಸೇರಿದ್ದ ಕಂಪನಿಯೊಂದರಿಂದ ಹಿಂದೆ ಸಾಲ ಪಡೆಯುವಾಗ ಷೇರುಗಳನ್ನು ಅಡ ಇರಿಸಿತ್ತು. ಅಡ ಇರಿಸಿದ್ದ ಷೇರುಗಳನ್ನು ಗೌತಮ್ ಅದಾನಿ ಸ್ವಾಧೀನಕ್ಕೆ ತೆಗೆದುಕೊಂಡರು. ಮುಕ್ತ ಮಾರುಕಟ್ಟೆಯಿಂದ ಇನ್ನಷ್ಟು ಷೇರುಗಳನ್ನು ಖರೀದಿಸಿದರು. ಷೇರುಗಳು ಒಂದು ಕಂಪನಿಯಿಂದ ಇನ್ನೊಂದು ಕಂಪನಿಗೆ ಹಸ್ತಾಂತರವಾಗುವುದಕ್ಕೆ ಇಷ್ಟೊಂದು ಸದ್ದು ಏಕೆ ಎಂಬ ಕುತೂಹಲ ಉಂಟಾಗಬಹುದು. ಮುಕ್ತ ಮಾಧ್ಯಮವನ್ನು ಆರಾಧಿಸುವ ಉದಾರವಾದಿಗಳಿಂದ ಶೋಕಸಂದೇಶ ಏಕೆ? ಖ್ಯಾತ ಪತ್ರಕರ್ತರೊಬ್ಬರು, 'ಮುಕೇಶ್ ಅಂಬಾನಿ ಅವರ ಕೈಯಲ್ಲಿ ಎನ್‌ಡಿಟಿವಿ ಮುಕ್ತವಾಗಿತ್ತು ಎಂದಾದರೆ, ಗೌತಮ್ ಅದಾನಿ ಅದನ್ನು ಖರೀದಿಸಿದಾಗ ಈ ಶ್ರದ್ಧಾಂಜಲಿ ಏಕೆ? ಟಿ.ವಿ.ಗಳು ಆದಾಯ ಪಡೆಯುವ ಮಾದರಿಯು ಹಾಳಾಗಿದೆ ಎಂಬುದೇ ದೊಡ್ಡ ಸಮಸ್ಯೆ' ಎಂದು ಟ್ವೀಟ್ ಮಾಡಿದ್ದರು.

ಇಲ್ಲಿ ಒಂದು ವ್ಯತ್ಯಾಸವಿದೆ. ಅಡ ಇರಿಸಿದ್ದ ಷೇರುಗಳನ್ನು ರಿಲಯನ್ಸ್ ಕೂಡ ಸ್ವಾಧೀನಕ್ಕೆ ತೆಗೆದುಕೊಳ್ಳಬಹುದಿತ್ತು. ಆದರೆ ಅವರು ಹಾಗೆ ಮಾಡಲಿಲ್ಲ. ಇಲ್ಲಿ ಬರಿಗಣ್ಣಿಗೆ ಕಾಣುವುದಕ್ಕಿಂತ ಮಿಗಿಲಾದುದು ಬೇರೆ ಏನಾದರೂ ಇದೆಯೇ? ರಿಲಯನ್ಸ್ ಬಳಿ ಸಿಎನ್‌ಎನ್-ಐಬಿಎನ್, ಸಿಎನ್‌ಬಿಸಿ, ಈ ಟಿವಿ ಸಮೂಹ, ಮನಿ ಕಂಟ್ರೋಲ್ ಮತ್ತು ಇತರ ಕೆಲವು ಮಾಧ್ಯಮ ಕಂಪನಿಗಳು ಇವೆ. ಅವು ಸರ್ಕಾರ ಹಾಗೂ ಬಲಪಂಥದ ಪರ ಇರುವುದು ಸ್ಪಷ್ಟ. ರಿಲಯನ್ಸ್ ಕಂಪನಿಯು ಎನ್‌ಡಿಟಿವಿ ಕಡೆಯಿಂದ ಹಣ ವಾಪಸ್ ಕೇಳದೆ, ಬಿಜೆಪಿಯನ್ನು ಟೀಕಿಸುತ್ತ, ವಿರೋಧ ಪಕ್ಷಗಳ ಬಗ್ಗೆ ಮೃದು ಧೋರಣೆ ಅನುಸರಿಸಲು ಪ್ರಣಯ್ ಅವರನ್ನು ಮುಕ್ತವಾಗಿ ಬಿಡುತ್ತದೆ ಎಂದಾದರೆ ಅದು ಶಕ್ತಿಶಾಲಿ ಕಾರ್ಪೊರೇಟ್ ಸಂಸ್ಥೆಯೊಂದರ ದೀರ್ಘಾವಧಿಯ ಜಾಣ ಕಾರ್ಯತಂತ್ರ ಎನ್ನಬೇಕಾಗುತ್ತದೆ. ವಿರೋಧ ಪಕ್ಷವು ಮುಂದೊಂದು ದಿನ ಅಧಿಕಾರ ಹಿಡಿಯುವ ಕಾಲಕ್ಕಾಗಿ ಮಾಡಿಕೊಳ್ಳುವ ವಿಮೆ ಇದ್ದಂತೆ ಅದು. ದೇಶದ ಬೃಹತ್ ಕಂಪನಿಗಳು ಒಂದಕ್ಕಿಂತ ಹೆಚ್ಚು ಕುದುರೆಗಳ ಮೇಲೆ ಜೂಜು ಕಟ್ಟುತ್ತವೆ. ಅಂತಿಮವಾಗಿ, ಅವುಗಳ ನಿಷ್ಠೆ ಇರುವುದು ತಮ್ಮ ಸಾಮ್ರಾಜ್ಯದ ಮೇಲೆಯೇ ವಿನಾ ಅಧಿಕಾರದಲ್ಲಿರುವ ವ್ಯಕ್ತಿ ಅಥವಾ ಪಕ್ಷಕ್ಕೆ ಅಲ್ಲ.

ಗೌತಮ್ ಅದಾನಿ ಅವರು ನೇಮಿಸುವ ಆಡಳಿತ ಮಂಡಳಿಯು ಆಡಳಿತ ಪಕ್ಷಕ್ಕೆ ಅನುಗುಣವಾಗಿ ಕೆಲಸ ಮಾಡಲಿದೆಯೇ ಅಥವಾ ನಿಷ್ಪಕ್ಷಪಾತ ನಿಲುವು ತಾಳುವುದೇ? ಕಾಲವೇ ಇದಕ್ಕೆ ಉತ್ತರ ಹೇಳುತ್ತದೆ. ಮುಕ್ತ ಮಾಧ್ಯಮವು ಅಧಿಕಾರದಲ್ಲಿ ಇರುವವರನ್ನೂ ವಿರೋಧ ಪಕ್ಷದಲ್ಲಿ ಇರುವವರನ್ನೂ ಕಾಯುತ್ತದೆ. ಎನ್‌ಡಿಟಿವಿ ವಿದ್ಯಮಾನದಲ್ಲಿ ಹಲವು ಪ್ರಶ್ನೆಗಳು ಇವೆ. ಪತ್ರಿಕಾ ಸ್ವಾತಂತ್ರ್ಯವನ್ನು ಎತ್ತಿಹಿಡಿಯುವ ಉತ್ಸಾಹದಿಂದ ಮಾಧ್ಯಮ ಕಂಪನಿ ಆರಂಭಿಸುವವರು ಅದು ಆರ್ಥಿಕವಾಗಿ ಕುಸಿಯದಂತೆ ಹಾಗೂ ಬೇರೊಬ್ಬರ ಕೈವಶ ಆಗದಂತೆ ಹೇಗೆ ನೋಡಿಕೊಳ್ಳುತ್ತಾರೆ? ಟಿ.ವಿ., ಇಂಟರ್ನೆಟ್ ಹಾಗೂ ಮುದ್ರಣ ಕ್ಷೇತ್ರದಲ್ಲಿ ಹಲವು ಸಂಸ್ಥೆಗಳು ಹುಟ್ಟಿಕೊಂಡಿವೆ. ಕೆಲವನ್ನು ಹೊರತುಪಡಿಸಿದರೆ ಹೆಚ್ಚಿನವು ಅಧಿಕಾರದಲ್ಲಿ ಇರುವವರನ್ನು ಹೊಗಳುತ್ತಿರುತ್ತವೆ. ಅಧಿಕಾರ ಕೈಬದಲಾದಾಗ ಇವೂ ತಮ್ಮ ಸೈದ್ಧಾಂತಿಕ ನಿಲುವು ಬದಲಿಸುತ್ತವೆ. ಇವು ನಿಷ್ಪಕ್ಷಪಾತ ಮಾಧ್ಯಮ ಸಂಸ್ಥೆಗಳು ಹಾಗೂ ವ್ಯಕ್ತಿಗಳಿಗೆ ದೊಡ್ಡ ಅಪಾಯ.



ಕೃತಘ್ನರ ಜಗತ್ತಿನಲ್ಲಿ ಬಾಳಲು ಧೈರ್ಯ ಹಾಗೂ ದೇಶಭಕ್ತಿ ಮಾತ್ರವೇ ಸಾಕಾಗದು. ಯಾವುದೇ ಕಂಪನಿಯಂತೆ ಮಾಧ್ಯಮ ಸಂಸ್ಥೆ ಕೂಡ ತನ್ನ ಹಣಕಾಸಿನ ಸ್ಥಿತಿಯನ್ನು ಚೆನ್ನಾಗಿ ಇಟ್ಟುಕೊಳ್ಳಬೇಕು. ಅನ್ಯಾಯದ ವಿರುದ್ಧ ಧೈರ್ಯವಾಗಿ ಮಾತನಾಡುವ ಮಾಧ್ಯಮ ಸಂಸ್ಥೆಯು ಇತರ ಸಂಸ್ಥೆಗಳಿಗೆ ಇರದ ಅಪಾಯಗಳನ್ನು ಎದುರಿಸಬೇಕಾಗುತ್ತದೆ. ಇಂತಹ ಸಂಸ್ಥೆಗಳು ಕಿರುಕುಳ, ಹಿಂಸೆ, ಸರ್ಕಾರಿ ಜಾಹೀರಾತು ಸ್ಥಗಿತದಂತಹ ಅಪಾಯಗಳನ್ನು ಎದುರಿಸುತ್ತಿರುತ್ತವೆ.

ಮಾಧ್ಯಮ ಸಂಸ್ಥೆಗಳಿಗೆ ಇರುವ ಮುಖ್ಯ ಆದಾಯ ಮೂಲ ಎರಡು– ಜಾಹೀರಾತುಗಳು ಹಾಗೂ ಚಂದಾದಾರರು ಕೊಡುವ ಹಣ. ತೀವ್ರ ಸ್ಪರ್ಧೆಯನ್ನು ಕಾಣುವ ಯಾವುದೇ ಉದ್ಯಮ ಕ್ಷೇತ್ರದಲ್ಲಿರುವಂತೆ ಇಲ್ಲಿಯೂ ಸವಾಲುಗಳಿವೆ. ವಸ್ತುನಿಷ್ಠ ವರದಿಗಾರಿಕೆಗಾಗಿ ವಿಶ್ವಾಸಾರ್ಹ ಬ್ರ್ಯಾಂಡ್ ಕಟ್ಟುವುದು, ವರದಿಗಾರಿಕೆಯಲ್ಲಿ ಅತ್ಯುತ್ತಮ ಮಟ್ಟ ತಲುಪುವುದು, ಹೊಸ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವುದು, ಹೊಸತನವನ್ನು ನಿರಂತರವಾಗಿ ಅರಸುತ್ತಿರುವುದು ಯಶಸ್ಸಿಗೆ ಮೆಟ್ಟಿಲುಗಳು. ಇವೆಲ್ಲ ಸುಲಭದ ಕೆಲಸವಲ್ಲ. ಆಡಳಿತದಲ್ಲಿ ಇರುವವರನ್ನು ಮೆಚ್ಚಿಸಲು ಹೆಚ್ಚಿನವರು ಪ್ರಯತ್ನಿಸುತ್ತಿರುವ ಭಾರತದ ಟಿ.ವಿ. ಉದ್ಯಮ ಕ್ಷೇತ್ರದಲ್ಲಿ, ನಿರ್ಭೀತ ವರದಿಗಾರಿಕೆಯ ಮೂಲಕ ವಿಶ್ವಾಸಾರ್ಹತೆ ಗಳಿಸುವುದು ಹಾಗೂ ಪಕ್ಷಪಾತ ಧೋರಣೆಯಿಂದ ದೂರವಿರುವುದು ವೀಕ್ಷಕರನ್ನು, ಓದುಗರನ್ನು ಮತ್ತು ಹೆಚ್ಚಿನ ಆದಾಯವನ್ನು ಗಳಿಸಲು ಇರುವ ಮಾರ್ಗ. ತಲ್ಲಣಗಳಿಂದ ಕೂಡಿದ್ದ ಡೊನಾಲ್ಡ್ ಟ್ರಂಪ್ ಆಡಳಿತಾವಧಿಯಲ್ಲಿನ ನಿರ್ಭೀತ ವರದಿಗಾರಿಕೆಯ ಮೂಲಕ ಲಾಭದ ಹಳಿಗೆ ಬಂದ 'ನ್ಯೂಯಾರ್ಕ್ ಟೈಮ್ಸ್'ನ ಯಶಸ್ಸು ಹಾಗೂ ಭಾರತದ ಕೆಲವು ಸಣ್ಣ ಮಾಧ್ಯಮ ಸಂಸ್ಥೆಗಳು ಕಂಡುಕೊಂಡಿರುವ ಯಶಸ್ಸು ಇಲ್ಲಿ ಒಂದು ಉದಾಹರಣೆ ಆಗಬಹುದು.

ಇಲ್ಲಿ ಹಲವು ಸವಾಲುಗಳೂ ಇವೆ. ಆದರೆ, ಮಾಧ್ಯಮಗಳ ಮೂಲಕ ಸತ್ಯವನ್ನು ಹೇಳುವ ವೃತ್ತಿಯನ್ನು ಆಯ್ಕೆ ಮಾಡಿಕೊಂಡಿರುವವರು ಸಮಾಜದಿಂದ ಎಲ್ಲ ಬಗೆಯ ಗೌರವಗಳಿಗೆ ಅರ್ಹರು. ಏಕೆಂದರೆ ಅವರು ಕಾಪಾಡಲು ಮುಂದಾಗುವುದು ಸಮಾಜವನ್ನೇ. ನಿಷ್ಪಕ್ಷಪಾತ ಪತ್ರಿಕಾವೃತ್ತಿಗೆ ಇರುವ ಬೆಲೆಕಟ್ಟಲಾಗದ ಮೌಲ್ಯದ ಬಗ್ಗೆ ಜನರಲ್ಲಿ ಅರಿವು ಮೂಡಿಸುವುದು ಸುಲಭದ ಕೆಲಸವಲ್ಲ. ಸುಳ್ಳು ಸುದ್ದಿಗಳ ಅಪಾಯ, ಸತ್ಯ ಹಾಗೂ ಸುಳ್ಳನ್ನು ಬೇರೆ ಮಾಡಿ ನೋಡಬೇಕಿರುವ ಅಗತ್ಯದ ಬಗ್ಗೆ ಅರಿವು ಮೂಡಿಸುವುದು ಕೂಡ ಸುಲಭವಲ್ಲ. 'ನಿಷ್ಠೆ ಯಾವತ್ತಿಗೂ ಇರಬೇಕಾದುದು ದೇಶಕ್ಕೆ. ಸರ್ಕಾರಕ್ಕೆ ನಿಷ್ಠೆ ತೋರಬೇಕಿರುವುದು ಅದು ಅರ್ಹವಾಗಿದ್ದಾಗ ಮಾತ್ರ' ಎಂದು ಮಾರ್ಕ್ ಟ್ವೇನ್ ಹೇಳಿದ್ದ ಮಾತುಗಳು ನಮಗೆ ಪಾಠವಾಗಬಹುದು.

ಚುರುಮುರಿ

ಚಿಪ್ಪು ಚಿಪ್ಪೆಂದರೆ...

● ಬಿ.ಎನ್.ಮಲ್ಲೇಶ್

'ಗುರೂ... ತಲೆ ಚಿಪ್ಪೊಳಗೆ ಮಿದುಳು ಇರೋದು ಗೊತ್ತು. ಆದ್ರೆ ಮಿದುಳಿಗೇ ಚಿಪ್ಪು ಅಳವಡಿಸ್ತೀನಿ ಅಂತ ಅದ್ಯಾರೋ ಎಲಾನ್ ಮಸ್ಕ್ ಅನ್ನೋ ಉದ್ಯಮಿ ಹೊಂಟಾನಂತೆ, ಅದೆಂಗೆ?' ತೆಪರೇಸಿಗೆ ಗುಡ್ಡೆ ಕೇಳಿದ.

'ನಿನ್ತೆಲಿ, ಚಿಪ್ಪು ಅಂದ್ರೆ ತಲೆ ಚಿಪ್ಪು, ತೆಂಗಿನ ಚಿಪ್ಪು ಅಲ್ಲ. ಅದು ಚಿಪ್ ಅಂತ. ಸಿಮ್ ಕಾರ್ಡ್ ತರ ಇತೇಟು ಇರುತ್ತೆ. ಅದನ್ನ ಮಿದುಳಿಗೆ ಅಳವಡಿಸೋದು' ತೆಪರೇಸಿ ವಿವರಿಸಿದ.

'ಅಂದ್ರೆ ತೆಲಿ ಆಪರೇಷನ್ ಮಾಡಿ ಅದನ್ನ ಮಿದುಳಿಗೆ ಸಿಗಿಸ್ತಾರಾ?'

'ಮತ್ತೆ ಏನಂತ ಮಾಡಿದಿ? ತೆಲಿ ಒಡೆದು ಸೇರಿಸ್ತಾರೆ...'

'ಆ ಚಿಪ್‌ನಲ್ಲಿ ಏನಿರುತ್ತೆ?' ದುಬ್ಬೀರನಿಗೆ ಕುತೂಹಲ.

'ಅದ್ರಲ್ಲಿ ನಿಂಗೆ ಏನ್ ಬೇಕು ಎಲ್ಲ ಇರುತ್ತೆ. ಪುಸ್ತಕ, ಫೈಲು ಏನೂ ಬೇಡ, ಎಲ್ಲ ಪಟ್ ಅಂತ ಅಲ್ಲೇ ಸಿಕ್ಕಿಬಿಡುತ್ತೆ...'

'ಅಂದ್ರೆ ಪರೀಕ್ಷೇಲಿ ಕಾಪಿ ಹೊಡಿಬೋದಾ? ಸಬ್ ಇನ್‌ಸ್ಪೆಕ್ಟರ್ ಪರೀಕ್ಷೆ, ಬ್ಯಾಂಕ್ ಪರೀಕ್ಷೇಲಿ ಟಾಪ್ ಬರಬೋದಾ?'

'ಬರಬೋದು, ಡಿಗ್ರಿ, ಪಿಎಚ್‌ಡಿ ಎಲ್ಲ ಓದದೇ ಬರೆದು ತಗಾಬೋದು...'

ಅಲ್ಲೀತನಕ ಏನೂ ಮಾತಾಡದೆ ಕೂತಿದ್ದ ಕಡೇಮನಿ ಕೊಟ್ರೇಶಿ 'ನಿಮಗೆ ಮಾಡಾಕೆ ಕೆಲ್ಸ ಇಲ್ಲ' ಅಂದ.

'ಯಾಕಲೆ, ಹೆಂಗೈತಿ ಮೈಯಾಗೆ?' ಗುಡ್ಡೆಗೆ ಸಿಟ್ಟು ಬಂತು.

'ಮತ್ತೇನಲೆ, ಜುಜುಬಿ ಡಿಗ್ರಿ, ಪಿಎಚ್‌ಡಿ ತಗಳ್ಳಾಕೆ ತೆಲಿ ಒಡೆಸ್ಕಂಡು ಚಿಪ್ ಸಿಗಿಸ್ಕಾಬೇಕಾ? ದುಡ್ಡು ಬಿಸಾಕಿದ್ರೆ ಇಲ್ಲೇ ಬೆಂಗಳೂರಲ್ಲೇ ಎಲ್ಲ ಸಿಗ್ತಾವೆ, ಪೊಲೀಸ್ ಕೇಸ್ ಆಗೇತಿ, ಪೇಪರ್ ನೋಡಿಲ್ಲಾ?'

'ಹೌದಾ? ಅಲ್ಲಿ ಎಲ್ಲ ಯೂನಿವರ್ಸಿಟಿ ಡಿಗ್ರಿ ಸಿಗ್ತಿತ್ತಾ?'

'ಸಿಗ್ತಿತ್ತು ಕಣಲೆ, ಡೂಪ್ಲಿಕೇಟ್ ಅಂತ ಗೊತ್ತಾಗದೇ ಇಲ್ಲ'.

'ಓ... ಅಂದ್ರೆ ಇದು ಎಚ್‌ಎಸ್ ಯೂನಿವರ್ಸಿಟಿ ಅನ್ನು'.

'ಅಂದ್ರೇ?'

'ಹೋಲ್‌ಸೇಲ್ ಯೂನಿವರ್ಸಿಟಿ!'

ಗುಡ್ಡೆ ಮಾತಿಗೆ ಎಲ್ಲರೂ ಗೊಳ್ಳಂತ ನಕ್ಕರು.

ಸಂಗತ

ಕಲಿಕೆ ಎಂಬುದು ಹಬ್ಬ!

ಸರ್ಕಾರಿ ಶಾಲೆಯ ಮಕ್ಕಳಿಗಾಗಿ ಆಯೋಜಿಸಲಿರುವ 'ಕಲಿಕಾ ಹಬ್ಬ'ವು ಕಲಿಕೆಯ ಸಂಭ್ರಮವನ್ನು ಸಮುದಾಯದ ಕಣ್ಣೆದುರು ಹಿಡಿಯುವ ಪ್ರಯತ್ನವಾಗಿದೆ

● ಉದಯ ಗಾಂವಕಾರ

ಶಿಕ್ಷಣ ಇಲಾಖೆಯ 'ಸಮಗ್ರ ಶಿಕ್ಷಣ- ಕರ್ನಾಟಕ' ಯೋಜನಾ ವಿಭಾಗವು ದೇಶದಲ್ಲೇ ಅತ್ಯಂತ ದೊಡ್ಡ ಕಲಿಕಾ ಹಬ್ಬವನ್ನು ಹಮ್ಮಿಕೊಂಡಿದೆ. ಜನವರಿ-ಫೆಬ್ರುವರಿ ತಿಂಗಳಿನಲ್ಲಿ ರಾಜ್ಯದ 4,103 ಸ್ಥಳಗಳಲ್ಲಿ ಕ್ಲಸ್ಟರ್ ಮಟ್ಟದ ಕಲಿಕಾ ಹಬ್ಬಗಳು ನಡೆಯಲಿವೆ. ಸರ್ಕಾರಿ ಶಾಲೆಯ ನಾಲ್ಕರಿಂದ ಒಂಬತ್ತನೇ ತರಗತಿಯವರೆಗಿನ ಮಕ್ಕಳು ಈ ಹಬ್ಬದಲ್ಲಿ ಭಾಗವಹಿಸಲಿದ್ದಾರೆ. ಕಲಿಕೆಯು ಅನುಭವಕೇಂದ್ರಿತ ಆಗಿರಬೇಕು ಎಂಬ ಮಾತು ಹಲವಾರು ವರ್ಷಗಳಿಂದ ಕೇಳಿ ಬರುತ್ತಿದೆ. ಆದರೆ, ಈ ಆಶಯವು ತರಗತಿ ಕೋಣೆಯ ವಾಸ್ತವವಾಗಿ ಬದಲಾಗಿರಲಿಲ್ಲ. ಕೋವಿಡ್ ನಂತರ ಶಾಲೆಗಳು ಆರಂಭವಾದಾಗ ಕಲಿಕಾ ವಿಧಾನಗಳನ್ನು ಅನುಭವಕೇಂದ್ರಿತ ಆಗಿಸುವ ಪ್ರಯತ್ನ ನಡೆಯಿತು. ಕರ್ನಾಟಕದಲ್ಲಿ ಸ್ವಕಲಿಕೆ ಮಾದರಿಯ 'ಕಲಿಕಾ ಚೇತರಿಕೆ' ಎಂಬ ಕಾರ್ಯಕ್ರಮ ಆರಂಭವಾಯಿತು.

ಇಂಥದ್ದೊಂದು ಭಿನ್ನ ದಾರಿಗೆ ಹೊರಳುವುದು ಅಷ್ಟು ಸುಲಭವಲ್ಲ. ಈ ಪ್ರಯತ್ನಕ್ಕೆ ಶಿಕ್ಷಣದ ಎಲ್ಲ ಭಾಗೀದಾರರ ಬೆಂಬಲ ಅವಶ್ಯಕ. ಅದಕ್ಕಿಂತ ಹೆಚ್ಚಾಗಿ, ಸಾಂಪ್ರದಾಯಿಕ ಬಾಯಿಪಾಠದ ವಿಧಾನಗಳೇ ಕಲಿಯುವಿಕೆಯ ಏಕೈಕ ದಾರಿ ಎಂಬ ಜನಪ್ರಿಯ ಗ್ರಹಿಕೆಯನ್ನು ಮುರಿದು ರಚನಾತ್ಮಕ ತರಗತಿಗಳನ್ನು ರೂಪಿಸಲು ಜನಾಭಿಪ್ರಾಯವೂ ಮುಖ್ಯ. ಕಲಿಕೆಯ ಹಬ್ಬವು ಕಲಿಕೆಯ ಸಂಭ್ರಮವನ್ನು ಸಮುದಾಯದ ಕಣ್ಣೆದುರು ಹಿಡಿಯುವ ಮಹತ್ವದ ಪ್ರಯತ್ನ.

ಮಗು ತನ್ನ ಬಾಲ್ಯವನ್ನು ಸಂಭ್ರಮಿಸಬೇಕೆಂದರೆ ಕಲಿಕೆಯು ಹಬ್ಬವಾಗಬೇಕು. ಅಪರಿಮಿತ ಸ್ವಾತಂತ್ರ್ಯ ಮತ್ತು ಸಂತೋಷ ಮಾತ್ರ ಮಗುವಿಗೆ ಹಬ್ಬದ ಸಡಗರವನ್ನು ಉಂಟುಮಾಡಬಲ್ಲದು. ತನ್ನದೇ ಲೋಕವೊಂದನ್ನು ವಿಸ್ತರಿಸಿಕೊಳ್ಳುತ್ತಾ ಮಗು ಎಲ್ಲ ಸೀಮೆಗಳನ್ನು ಉಲ್ಲಂಘಿಸಿ ವಿಶ್ವಮಾನವನಾಗಲು ಇಂತಹ ಸಡಗರ ಅನಿವಾರ್ಯ ಕೂಡಾ. ಮುರಿದು ಕಟ್ಟುವ ಕಲೆಗಾರಿಕೆಗೆ ಪ್ರಶ್ನೆ, ವೀಕ್ಷಣೆ, ಪ್ರಯೋಗಗಳೇ ಚೈತನ್ಯವನ್ನು ಒದಗಿಸುತ್ತವೆ.

ನಾವು ಏಕಾಂಗಿಯಾಗಿ ಬದುಕಲಾರೆವು. ಕಲಿಯಲಾರೆವು ಕೂಡಾ. ಅನುಭವಾತ್ಮಕ ಕಲಿಕೆ ಎನ್ನುವುದು ಒಡನಾಟದ ಕಲಿಕೆಯೂ ಹೌದು. ಸಹಬಾಳ್ವೆ, ಸಹೋದರತೆಯಂತಹ ಸಾಂವಿಧಾನಿಕ ಆಶಯಗಳನ್ನು ಕಲಿಕೆಯ ಪರಿಸರ ಮತ್ತು ವಿಧಾನಗಳು ಒಳಗೊಂಡಿರಬೇಕು. ಪೂರ್ವಗ್ರಹಗಳಿಂದ ಮುಕ್ತವಾದ ವಸ್ತುನಿಷ್ಠತೆ, ವಿಮರ್ಶಾತ್ಮಕ ಚಿಂತನೆಗಳು ಮತ್ತು ನಿರಂಕುಶಮತಿತ್ವವನ್ನು ಕಲಿಕೆಯ ಅನುಭವಗಳು ಒದಗಿಸಬೇಕು.

ತರಗತಿ ಕೋಣೆಯು ಸ್ಮರಣೆ ಆಧಾರಿತ ಕಲಿಕಾ ವಿಧಾನಗಳಿಂದ ಹೊರಬರಲು ಕಲಿಕೆಯ ಕುರಿತಾದ ಸಮಾಜದ ದೃಷ್ಟಿಕೋನದಲ್ಲೇ ಬದಲಾವಣೆ ಆಗಬೇಕಿದೆ. ಕಲಿಕಾ ಹಬ್ಬವು ಕಲಿಕೆಯ ವಿಧಾನ, ಕಲಿಕೆಯ ಫಲಗಳ ಕುರಿತು ಸಾರ್ವಜನಿಕ ಚರ್ಚೆಯನ್ನು ಉಂಟುಮಾಡಬಲ್ಲ ಸಾಮಾಜಿಕ ವೇದಿಕೆಯೂ ಆಗಬೇಕು. ನಾಟಕ, ಚರ್ಚೆ, ಸಂವಾದ, ಯೋಜನೆ, ಪ್ರಯೋಗದಂತಹ ಒಡನಾಟದ ಚಟುವಟಿಕೆಗಳು ಕಲಿಕೆಯಲ್ಲಿ ವಿದ್ಯಾರ್ಥಿಗಳ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸುತ್ತವೆ. ಪ್ರಶ್ನೆಗಳನ್ನು ಕೇಳುವ ಮಕ್ಕಳು ಯೋಚಿಸಬಲ್ಲರು ಕೂಡಾ. ಮಗು ತನ್ನ ಇಂದ್ರಿಯಗಳ ಮೂಲಕ ಪಡೆದ ಅನುಭವಗಳನ್ನು ವಿಶ್ಲೇಷಣೆಯ ನಿಕಷಕ್ಕೆ ಒಡ್ಡಿ ತೀರ್ಮಾನ ತೆಗೆದುಕೊಳ್ಳುವಂತಹ ಕಲಿಕೆಯ ಪರಿಸರವನ್ನು ರೂಪಿಸುವ ಹೊಣೆ ನಮ್ಮದು. ಶಾಲೆಯು ಮಕ್ಕಳ ಕುತೂಹಲವನ್ನು ತಣಿಸುವ ಸ್ಥಳವಾದಾಗಷ್ಟೇ ಕಲಿಕೆಯ ಸ್ಥಳವಾಗಬಲ್ಲದು. ಇವೆಲ್ಲವೂ ಸಾಧ್ಯವಾಗಬೇಕಾದರೆ, ಮಗುವಿನ ಸ್ವತಂತ್ರ ಚಿಂತನಾ ಸಾಮರ್ಥ್ಯ, ವಿಮರ್ಶಾತ್ಮಕ ದೃಷ್ಟಿಕೋನ, ಪ್ರಯೋಗಶೀಲತೆಯಂತಹ ಮೇಲ್ಮಟ್ಟದ ಕೌಶಲ ಮೌಲ್ಯಮಾಪನದಿಂದ ಗುರುತಿಸಲ್ಪಡಬೇಕು.

ಮಕ್ಕಳ ಭಾಗವಹಿಸುವಿಕೆಯನ್ನು ಕಡಿಮೆ ಮಾಡುವ ಯಾವ ವಿಧಾನವೂ ಪ್ರಜಾಸತ್ತಾತ್ಮಕ ತರಗತಿ ಪರಿಸರವನ್ನು ರೂಪಿಸದು. ಅಂತಹ ತರಗತಿ ಕೋಣೆಯಲ್ಲಿ ವೈಜ್ಞಾನಿಕ ಮನೋಧರ್ಮವಾಗಲೀ ಅದರ ಪ್ರಕಟರೂಪಗಳಾದ ತಾರ್ಕಿಕ ಚಿಂತನೆ, ಸಹನೆ, ಭಿನ್ನಾಭಿಪ್ರಾಯಗಳನ್ನು ಆಲಿಸುವ, ಗೌರವಿಸುವ ಸ್ವಭಾವ, ಪೂರ್ವಗ್ರಹಗಳಿಂದ ಮುಕ್ತವಾದ ಚಿಂತನಾಕ್ರಮ, ಒಳಗೊಳ್ಳುವಿಕೆಯಾಗಲೀ ಸಾಧ್ಯವಿಲ್ಲ.

ಕಲಿಕಾ ಹಬ್ಬದ ಚಟುವಟಿಕೆಗಳನ್ನು ಆಡು- ಹಾಡು, ಕಾಗದ- ಕತ್ತರಿ, ಊರು ತಿಳಿಯೋಣ, ಮಾಡು- ಆಡು ಎಂಬ ಗುಂಪುಗಳಲ್ಲಿ ವಿನ್ಯಾಸಗೊಳಿಸಲಾಗಿದೆ. ಈ ಎಲ್ಲ ಚಟುವಟಿಕೆಗಳನ್ನೂ ಮಕ್ಕಳು ಖುಷಿಯಿಂದ ಪಾಲ್ಗೊಳ್ಳುವಂತೆ ರೂಪಿಸಲಾಗಿದೆ.

ವಿದ್ಯಾರ್ಥಿಗಳು ತಮ್ಮ ತಮ್ಮಲ್ಲಿ ಚರ್ಚಿಸಿ, ತಾರ್ಕಿಕವಾಗಿ ಆಲೋಚಿಸಿ ಸಮಸ್ಯೆಗಳಿಗೆ ಸೂಕ್ತ ಪರಿಹಾರ ಮಾರ್ಗಗಳನ್ನು ಕಂಡುಕೊಳ್ಳುತ್ತಾರೆ. ಶಿಕ್ಷಕರು ಇದನ್ನು ಉತ್ತೇಜಿಸುತ್ತಾರೆ. ವಿದ್ಯಾರ್ಥಿಗಳಿಗೆ ತಮ್ಮ ಅಭಿಪ್ರಾಯಗಳನ್ನು ಹೇಳಲು ಮುಕ್ತ ಅವಕಾಶವಿರುತ್ತದೆ. ಪ್ರಶ್ನೆಗಳು, ಪ್ರಯೋಗಗಳು, ಅವಲೋಕನ, ಯೋಜನೆಯಂತಹ ವಿಧಾನಗಳ ಮೂಲಕ ಪಡೆದುಕೊಂಡ ದತ್ತಾಂಶಗಳನ್ನು ಪರಿಶೀಲಿಸಿ, ಮೌಲ್ಯೀಕರಿಸಿ ಸ್ವಯಂ ನಿರ್ಧಾರಗಳನ್ನು ತೆಗೆದುಕೊಳ್ಳಲು ಶಿಕ್ಷಕರು ಅನುಕೂಲ ಕಲ್ಪಿಸುತ್ತಾರೆ. ಇದೆಲ್ಲದರ ಜೊತೆಗೆ, ಮಗುವು ತಂಡವಾಗಿ ಕಾರ್ಯನಿರ್ವಹಿಸುವ ಸಾಮಾಜಿಕ ಕೌಶಲವನ್ನು ಗಳಿಸಿಕೊಳ್ಳುತ್ತದೆ.

ಮಗುವೇ ಕಲಿಕೆಯ ಸಂದರ್ಭಗಳನ್ನು ಸೃಷ್ಟಿಸುವ, ನಿಭಾಯಿಸುವ ಮತ್ತು ಈ ಪ್ರಕ್ರಿಯೆಯಲ್ಲಿ ದೊರೆತ ಅನುಭವಗಳ ಮೂಲಕ ತನ್ನದೇ ಜ್ಞಾನ ಸೃಷ್ಟಿಯಲ್ಲಿ ತೊಡಗುವ ಕ್ಲಾಸ್ ರೂಮುಗಳನ್ನು ನಿಜವಾಗಿಸಲು ಇಂತಹ ಹಬ್ಬಗಳು ಅಗತ್ಯ. ಕಲಿಕೆಯ ಹಬ್ಬವು ಘಟನೆಯಾಗದೆ ನಿತ್ಯದ ಬದುಕಾಗಲಿ!

ಲೇಖಕ: ಶಿಕ್ಷಕ, ಸರ್ಕಾರಿ ಪ್ರೌಢಶಾಲೆ, ಸಿದ್ಧಾಪುರ, ಉಡುಪಿ ಜಿಲ್ಲೆ

ವಾಚಕರ ವಾಣಿ

ಗುಜರಾತ್ ಕನ್ನಡಿಯಲ್ಲಿ ಕರ್ನಾಟಕ ಕಾಣದು!

ಗುಜರಾತ್ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಗಳಿಸಿರುವ ಭಾರಿ ಗೆಲುವಿನಿಂದ ಹುಮ್ಮಸ್ಸು ಹೆಚ್ಚಿಸಿಕೊಂಡಿರುವ ನಮ್ಮ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು, ಆ ಫಲಿತಾಂಶವು ಇಲ್ಲಿ ಪಕ್ಷಕ್ಕೆ ಉತ್ತೇಜನಕಾರಿ ಎಂದು ಭಾವಿಸಿದಂತಿದೆ. ಹಾಗಾಗಿ, ರಾಜ್ಯ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿಯ ಗೆಲುವಿನ ಕನಸನ್ನು ಅವರು ಈಗಲೇ ಕಾಣುತ್ತಿರುವಂತಿದೆ! ಕನಸು ಸುಂದರವಾಗಿಯೇನೋ ಇರುತ್ತದೆ. ಆದರೆ ಎಷ್ಟೆಂದರೂ ಅದು ಕನಸು ಎನ್ನುವುದನ್ನು ಮರೆಯಬಾರದಷ್ಟೆ. ಹೀಗಾಗಿ, ಗುಜರಾತಿನ ಕನ್ನಡಿಯಲ್ಲಿ ಕರ್ನಾಟಕವನ್ನು ಕಾಣುವುದು ಬೇಡ. ಅಲ್ಲಿ, ಬಿಜೆಪಿಗೆ ಆರು ಅವಧಿಗಳಿಂದ ಅಬಾಧಿತವಾಗಿ ಆಡಳಿತ ನಡೆಸಿದ ಅನುಭವವಿದೆ. ಆ ರಾಜ್ಯದ ಬಹುತೇಕರು ಈ ಪಕ್ಷವನ್ನು ಒಪ್ಪಿಕೊಂಡಿದ್ದಾರೆ.

ಕರ್ನಾಟಕದಲ್ಲಿ ಬಿಜೆಪಿಯು ಗುಜರಾತಿನಲ್ಲಿ ಇರುವಷ್ಟು ಪ್ರಭಾವಿಯಲ್ಲ. ಇಲ್ಲಿನ ಆಡಳಿತದ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸುವ ಹುಮ್ಮಸ್ಸು ಜನರಿಗೆ ಇದೆ ಎಂದು ಹೇಳುವುದು ಸಾಹಸದ ಮಾತಾದೀತು! ದಿನಬೆಳಗಾದರೆ ಹಗರಣಗಳ ಸುದ್ದಿಗಳು, ಆರೋಪ- ಪ್ರತ್ಯಾರೋಪಗಳ ನಡುವೆ ಯಾರು ಸರಿ, ಯಾರು ತಪ್ಪು ಎಂಬ ಗೊಂದಲ ಜನರಿಗೆ. ಗುಜರಾತಿನಲ್ಲಿ ಬಿಜೆಪಿಯು ಚುನಾವಣೆಗೆ ಟಿಕೆಟ್ ನೀಡುವಾಗ, ಜನರ ನಿರೀಕ್ಷೆಗೆ ತಕ್ಕಂತೆ ಇರಲಿಲ್ಲ ಎಂಬ ಕಾರಣಕ್ಕಾಗಿ ನಲವತ್ತಕ್ಕೂ ಹೆಚ್ಚು ಮಂದಿ ಹಾಲಿ ಶಾಸಕರನ್ನು ಮುಲಾಜಿಲ್ಲದೆ ಕೈಬಿಟ್ಟಿತು. ಕರ್ನಾಟಕದಲ್ಲಿ ಇದೇ ಮಾನದಂಡದಿಂದ ಅಳೆದರೆ, ಬಿಜೆಪಿಯ ಶಾಸಕರಲ್ಲಿ ತೇಲುವವರು ಎಷ್ಟು, ಮುಳುಗುವವರು ಎಷ್ಟು? ಮುಳುಗುವ ಶಾಸಕರನ್ನು, ಅಧಿಕಾರಕ್ಕಾಗಿ ವಲಸೆ ಬಂದವರನ್ನು, ಕ್ರಿಮಿನಲ್ ಅಪರಾಧ ಹೊತ್ತವರನ್ನು, ಮಿಕ್ಕಂತೆ 70 ವಯಸ್ಸು ದಾಟಿದವರನ್ನು ಬಿಜೆಪಿಯ ವರಿಷ್ಠರು ನಿರ್ದಾಕ್ಷಿಣ್ಯವಾಗಿ ಪಕ್ಕಕ್ಕೆ ಸರಿಸಿ, ಪಕ್ಷದಲ್ಲಿ ಮೊದಲಿನಿಂದ ದುಡಿಯುತ್ತಿರುವ ಯುವಪೀಳಿಗೆಗೆ ಅವಕಾಶ ಮಾಡಿಕೊಡುವರೇ? ಇಂತಹ ಪ್ರಶ್ನೆಗಳಿಗೆ ಕರ್ನಾಟಕದ ಬಿಜೆಪಿ ಘಟಕ ಎಷ್ಟು ಬೇಗ ಸರಿಯಾದ ಉತ್ತರ ಕಂಡುಕೊಳ್ಳುವುದೋ ಅಷ್ಟು ಕ್ಷೇಮ ಆ ಪಕ್ಷಕ್ಕೆ.

ಸಾಮಗ ದತ್ತಾತ್ರಿ, ಬೆಂಗಳೂರು

ಮಕ್ಕಳ ಬೆಳವಣಿಗೆಗೆ ತಕ್ಕಂತಿರಲಿ ಸ್ಪಂದನೆ

ಮಕ್ಕಳ ಬೆಳವಣಿಗೆಯಲ್ಲಿ ಪೋಷಕರ ಪಾತ್ರ ಮಹತ್ವವಾದುದು ಎಂಬ ಸದಾಶಿವ ಸೊರಟೂರು ಅವರ ಅಭಿಪ್ರಾಯ (ಸಂಗತ, ಡಿ. 6) ಸರಿಯಾಗಿದೆ. ಇಷ್ಟಪಡುವ ಬಟ್ಟೆ, ರುಚಿಯಾದ ಊಟ, ವಸತಿ ಸೌಲಭ್ಯ ಕಲ್ಪಿಸುವುದರಿಂದ, ಬೇಕಾದ ವಸ್ತುಗಳನ್ನು ಕೊಡಿಸುವುದರಿಂದ ಅಥವಾ ಒಳ್ಳೆಯ ಶಾಲೆಗೆ ಕಳಿಸುವುದರಿಂದ ಮಾತ್ರವೇ ಮಕ್ಕಳು ಉತ್ತಮವಾಗಿ ಬೆಳೆಯುವುದಿಲ್ಲ. ಒಳ್ಳೆಯ ಸಂಸ್ಕೃತಿ ಮತ್ತು ಸಂಸ್ಕಾರ ಕಲಿಸುವುದರ ಜೊತೆಗೆ ಮಗುವಿನ ದೈಹಿಕ, ಮಾನಸಿಕ, ಭಾವನಾತ್ಮಕ ಹಾಗೂ ಲೈಂಗಿಕ ಬದಲಾವಣೆಗಳನ್ನು ಪೋಷಕರು ತಿಳಿದುಕೊಂಡು, ಅದಕ್ಕೆ ಅನುಗುಣವಾಗಿ ಅವರನ್ನು ಬೆಳೆಸಬೇಕು.

ಶಾಲೆಯಲ್ಲಿ ಶಿಕ್ಷಕರು ಕಾಳಜಿ ವಹಿಸಿದರೂ ಈ ವಿಷಯದಲ್ಲಿ ಪೋಷಕರ ಜವಾಬ್ದಾರಿಯೇ ಹೆಚ್ಚು ಎಂಬುದನ್ನು ಮರೆಯಬಾರದು.

ಬಸಪ್ಪ ಎಸ್. ಮುಳ್ಳೂರ, ಹಲಗತ್ತಿ, ಬೆಳಗಾವಿ

ಹಳ್ಳಿಗಳ ವಿನಿಮಯ: ಚರ್ಚೆ ನಡೆಯಲಿ

ಕರ್ನಾಟಕ– ಮಹಾರಾಷ್ಟ್ರ ಗಡಿ ಸಮಸ್ಯೆ ದಿನದಿಂದ ದಿನಕ್ಕೆ ವಿಷಮಿಸಿ, ಉಭಯ ರಾಜ್ಯಗಳ ನಡುವಿನ ಸೌಹಾರ್ದ ಸಂಬಂಧಕ್ಕೆ ಧಕ್ಕೆ ಉಂಟು ಮಾಡುತ್ತಿದೆ. ಇದರ ವಿಪರೀತ ಪರಿಣಾಮವನ್ನು ಎರಡೂ ಕಡೆಯ ಗಡಿ ಭಾಗಗಳ ಜನ ಅನುಭವಿಸಬೇಕಾಗುತ್ತದೆ. ಹಲವು ದಶಕಗಳಿಂದಲೂ ಆಗಾಗ ಸಮಸ್ಯೆ ಉಲ್ಬಣಿಸಿ ಜನ ತೊಂದರೆಯನ್ನು ಅನುಭವಿಸುತ್ತಲೇ ಬಂದಿದ್ದಾರೆ.

ಗಡಿ ಸಮಸ್ಯೆಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟಿನಲ್ಲಿ ಮಹಾರಾಷ್ಟ್ರ ದಾಖಲಿಸಿರುವ ವ್ಯಾಜ್ಯ ಬಗೆಹರಿಯಲು ವರ್ಷಗಳೇ ಉರುಳಬಹುದು. ಮಹಾರಾಷ್ಟ್ರದ ಗಡಿ ಭಾಗದಲ್ಲಿ ಕನ್ನಡಿಗರ ಪ್ರಾಬಲ್ಯವಿರುವ ಕೆಲವು ಹಳ್ಳಿಗಳು ಕರ್ನಾಟಕಕ್ಕೆ ಸೇರಲು ದೃಢ ನಿಲುವು ಹೊಂದಿ, ಮುಖ್ಯಮಂತ್ರಿ ಅವರನ್ನು ಭೇಟಿಯಾಗಲು ಆಸಕ್ತಿ ತೋರಿವೆ. ಹಾಗೆಯೇ ಮರಾಠಿ ಪ್ರಾಬಲ್ಯವಿರುವ ನಮ್ಮ ಗಡಿಭಾಗದ ಹಳ್ಳಿಗಳು ಮಹಾರಾಷ್ಟ್ರವನ್ನು ಸೇರಲು ಈ ಹಿಂದೆ ಒಲವು ತೋರಿಸಿವೆ. ಮಹಾಜನ್ ವರದಿಯಲ್ಲೂ ಎರಡು ರಾಜ್ಯಗಳ ಮಧ್ಯೆ ಹಳ್ಳಿಗಳ ಹೊಂದಾಣಿಕೆಯ ಪ್ರಸ್ತಾಪ ಇದ್ದೇ ಇದೆ. ಆದ್ದರಿಂದ ಬೆಳಗಾವಿ ಕುರಿತು ಯಾವುದೇ ಹಕ್ಕನ್ನು ಮಹಾರಾಷ್ಟ್ರ ಪ್ರತಿಪಾದಿಸದೇ ಇರಲು ಒಪ್ಪಿದಲ್ಲಿ, ಉಭಯ ರಾಜ್ಯಗಳು ಚರ್ಚೆಗೆ ಮುಂದಾಗಿ, ಹಳ್ಳಿಗಳ ಪರಸ್ಪರ ಹೊಂದಾಣಿಕೆ ಅಥವಾ ವಿನಿಮಯ ಕುರಿತು ಮಾತುಕತೆ ಆರಂಭಿಸಬಹುದು.

ವೆಂಕಟೇಶ ಮಾಚಕನೂರ, ಧಾರವಾಡ

ಪೋಷಕರಿಗೆ ಆಪ್ತ ಸಲಹೆ, ಮಕ್ಕಳಿಗೆ ಸೂಕ್ತ ಸಲಹೆ

ಹದಿಹರೆಯದವರ ಭಾವನಾತ್ಮಕ ಸಂಕಷ್ಟಗಳ ಬಗ್ಗೆ ಎಚ್.ಎಸ್.ಅನುಪಮಾ ಅವರು ಬಹು ಸಮಯೋಚಿತ ಲೇಖನ (ಪ್ರ.ವಾ., ಡಿ. 5) ಬರೆದಿದ್ದಾರೆ. ಈಗಿನ ಹದಿಹರೆಯದವರು ಬುದ್ಧಿವಂತಿಕೆ, ಸಾಹಸ, ಕಲಿಕೆಯಲ್ಲಿ ತುಂಬಾ ಮುಂದೆ ಇದ್ದಾರೆ. ಅವರ ಸೃಜನಶೀಲತೆ, ಪ್ರತಿಭೆ ಒಂದೆಡೆಯಾದರೆ, ಸಾಮಾಜಿಕ ಜಾಲತಾಣ ಮತ್ತು ಮೊಬೈಲ್ ಫೋನ್ ಬಳಕೆಯ ಗೀಳು ಅವರ ಮೇಲೆ ಬಹು ವ್ಯತಿರಿಕ್ತವಾದ ಪರಿಣಾಮಗಳನ್ನು ಬೀರುತ್ತಿದೆ.

ಮೊಬೈಲ್ ಫೋನ್ ಬಳಕೆಯ ವ್ಯಾಪ್ತಿ ಅಗಾಧ. ವಿದ್ಯುತ್ ಬಿಲ್, ಹಣ ಪಾವತಿ, ಬ್ಯಾಂಕ್ ವ್ಯವಹಾರ ಎಲ್ಲವನ್ನೂ ಮೊಬೈಲ್ ಸರಳವಾಗಿಸಿರುವುದು ಎಷ್ಟು ನಿಜವೋ ಮಕ್ಕಳು ಹಾಗೂ ಹದಿಹರೆಯದವರ ವಿಚಾರದಲ್ಲಿ ಅದು ಅವಘಡಗಳಿಗೂ ಕಾರಣವಾಗಿರುವುದು ಅಷ್ಟೇ ನಿಜ. ಇದಕ್ಕೆಲ್ಲಾ ಒಂದು ಪರಿಹಾರ ಹುಡುಕಬೇಕಾದ ಜರೂರು ಖಂಡಿತ ಇದೆ. ಶಿಕ್ಷಣ ಸಂಸ್ಥೆಗಳು, ಪೋಷಕರು ಈ ದಿಸೆಯಲ್ಲಿ ಚಿಂತನೆ ನಡೆಸಬೇಕಿದೆ. ಹರೆಯದ ಮಕ್ಕಳೊಂದಿಗೆ ಹೇಗೆ ವರ್ತಿಸಬೇಕು ಎಂಬ ಬಗ್ಗೆ ಪೋಷಕರಿಗೆ ಆಪ್ತ ಸಲಹೆ, ಹದಿಹರೆಯದವರ ಗೊಂದಲ, ಸಮಸ್ಯೆಗಳಿಗೆ ಸೂಕ್ತ ಸಲಹೆ ಹಾಗೂ ಮನೋಚಿಕಿತ್ಸೆಯ ಅಗತ್ಯವಿದೆ. ಪ್ರತೀ ಶಾಲೆಯಲ್ಲೂ ನುರಿತ ಆಪ್ತ ಸಲಹೆಗಾರರನ್ನು ನೇಮಕ ಮಾಡುವ ಕುರಿತು ಗಂಭೀರವಾಗಿ ಚಿಂತನೆ ನಡೆಸಬೇಕಿದೆ.

ರೇಷ್ಮಾ ಜಿ.ಎಂ., ಕೊಟ್ಟೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

‘ನ್ಯಾಯ’ದ ಗೋಜಲು ಮೀಸಲು ಹೆಚ್ಚಳದ ದಾರಿಗಳು

• ವೈ.ಗ. ಜಗದೀಶ್

ಮೀಸಲಾತಿ ಹೆಚ್ಚಳದ ನಿರ್ಧಾರ ಹೇಗಿದೆ ಎಂದರೆ, ರಚ್ಚೆ ಹಿಡಿದ ಮಕ್ಕಳಿಗೆ ಜಾತ್ರೆಯಲ್ಲಿ ಮರಗುದುರೆ ಹತ್ತಿಸಿ ರಮಿಸುವ ಕೆಲಸದಂತಿದೆ. ಇದು ಚುನಾವಣೆ ಜಾತ್ರೆ ಸಮಯ. ಇಲ್ಲಿ ನ್ಯಾಯಕ್ಕಿಂತ ಓಲೈಕೆಯ ರಾಜಕಾರಣವೇ ಕಾಣಿಸುತ್ತದೆ. ಕಾಂಗ್ರೆಸ್ ಅಧಿಕಾರದಲ್ಲಿದ್ದಾಗಲೂ ಅದನ್ನೇ ಮಾಡಿದೆ. ಸ್ಪರ್ಧಾತ್ಮಕ ಯುಗದಲ್ಲಿ ಜೀವಂತ ಕುದುರೆಯನ್ನು ಕೊಟ್ಟು, ಅದನ್ನು ಓಡಿಸುವ ಕಲೆಯನ್ನು ಕಲಿಸಬೇಕೇ ವಿನಃ ಕಳ್ಳ ಕುದುರೆಯನ್ನು ಕೊಟ್ಟು, ‘ರಾಜಕಾರಣ’ದ ಆಟದಲ್ಲಿ ತಲ್ಲೀನವಾಗುವಂತೆ ಮಾಡುವುದಲ್ಲ. ಒಳಮೀಸಲಾತಿ ನೀಡಿಕೆ ಹೀಗಾಗದಂತೆ ನೋಡಿಕೊಳ್ಳಬೇಕಾದ ಹೊಣೆ ಸರ್ಕಾರದ ಮೇಲಿದೆ

ಮೀಸಲಾತಿ ಚರ್ಚೆ 9

ಸ್ವಾತಂತ್ರ್ಯ ಬಂದು 75 ವರ್ಷಗಳು ಕಳೆದಿವೆ. 1950ರಲ್ಲಿ ನಾವೆಲ್ಲ ಒಪ್ಪಿಕೊಂಡ ನಮ್ಮ ಹೆಮ್ಮೆಯ ಸಂವಿಧಾನದ ಆಶಯಗಳು ಇನ್ನೂ ಪೂರ್ಣಪ್ರಮಾಣದಲ್ಲಿ ಅನುಷ್ಠಾನವಾಗಿಲ್ಲ. ‘...ಭಾರತದ ಎಲ್ಲಾ ಪ್ರಜೆಗಳಿಗೆ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯವನ್ನು; ಸ್ಥಾನಮಾನ ಮತ್ತು ಅವಕಾಶಗಳ ಸಮತೆಯನ್ನು ದೊರೆಯುವಂತೆ ಮಾಡುವುದಕ್ಕಾಗಿ... ಈ ಸಂವಿಧಾನವನ್ನು ನಮಗೆ ನಾವೇ ಅರ್ಪಿಸಿಕೊಂಡು, ಅಂಗೀಕರಿಸಿ, ಶಾಸನವಾಗಿ ವಿಧಿಸಿಕೊಂಡಿದ್ದೇವೆ’ ಎಂದು ಸಂವಿಧಾನದ ಮೂಲತತ್ವ, ಆಶಯಗಳನ್ನು ಸಾರಾಂಶರೂಪದಲ್ಲಿ ತಿಳಿಸುವ ಪ್ರಸ್ತಾವನೆಯಲ್ಲಿ ಪ್ರತಿಪಾದಿಸಲಾಗಿದೆ. ಭಾರತ ‘ವಿಶ್ವಗುರು’ ಎಂದು ಏರು ಧ್ವನಿಯಲ್ಲಿ ಕೊಚ್ಚಿಕೊಳ್ಳುತ್ತಿದ್ದರೂ ಹೀನ ಜಾತಿಪದ್ಧತಿಯ ಶ್ರೇಣೀಕರಣ, ಅಸ್ಪೃಶ್ಯತೆ ಆಚರಣೆ, ಜಾತಿ ಹೆಸರಿನ ದೌರ್ಜನ್ಯ ಇನ್ನೂ ಕೊನೆಯಾಗಿಲ್ಲ. ಅಸಮಾನತೆ ತಾಂಡವವಾಡುತ್ತಲೇ ಇದೆ. ಇಂತಹ ಹೊತ್ತಿನೊಳಗೆ ಅಸಮಾನತೆ ನಿವಾರಿಸಿ, ಸಂವಿಧಾನದ ಆಶಯವನ್ನು ಸಾಕಾರಗೊಳಿಸಲು ಮೀಸಲಾತಿ ಪ್ರಬಲ ಅಸ್ತ್ರ.

ಕರ್ನಾಟಕದಲ್ಲಿ ಪರಿಶಿಷ್ಟ ಜಾತಿಯ (ಪ.ಜಾ) 101, ಪರಿಶಿಷ್ಟ ಪಂಗಡದ (ಪ.ಪಂ) 53 ಸಮುದಾಯಗಳು ಮೀಸಲಾತಿ ಪಟ್ಟಿಯಲ್ಲಿವೆ. 1919ರಲ್ಲೇ ಮಿಲ್ಲರ್ ಸಮಿತಿ ವರದಿ ಆಧರಿಸಿ ಅಂದಿನ ನಾಲ್ವಡಿ ಕೃಷ್ಣರಾಜ ಒಡೆಯರ್ ಕ್ರಾಂತಿಕಾರಕವಾದ ಮೀಸಲಾತಿಯನ್ನು ಜಾರಿಗೆ ತಂದಿದ್ದರು. ಸರ್ಕಾರಗಳು ಕಾಲಕಾಲಕ್ಕೆ ಮೀಸಲಾತಿಯ ಸೌಲಭ್ಯವನ್ನು ವಿಸ್ತರಿಸುತ್ತಲೇ ಬಂದಿವೆ. ಆದರೆ, ಮೀಸಲಾತಿಯ ಪರಿಧಿಯೊಳಗೆ ಬರುವ ಹತ್ತೆಂಟು ಪ್ರಬಲ ಜಾತಿಗಳವರಿಗೆ ಅದರ ಸವಲತ್ತು ಸಿಕ್ಕಿದೆಯೇ ವಿನಃ, ಎಲ್ಲ ಜಾತಿಗಳಿಗೂ ಅದರ ಪ್ರಯೋಜನ ಸಿಕ್ಕಿಲ್ಲ. ಮೀಸಲಾತಿ ಹೋಗಲಿ, ಸರ್ಕಾರದಿಂದ ಸಿಗುವ ಸೌಲಭ್ಯದ ಬಗ್ಗೆ ಗೊತ್ತೇ ಇಲ್ಲದ ಸಮುದಾಯಗಳು ಕರ್ನಾಟಕದಲ್ಲಿವೆ. ಮೀಸಲಾತಿಯೊಳಗಿರುವ ಪ್ರಬಲ ಸಮುದಾಯದ ಕೆಲವು ಕುಟುಂಬಗಳಿಗೆ ಅದರ ಲಾಭ ದಕ್ಕಿದೆಯಾದರೂ ಬಹುಸಂಖ್ಯಾತರಿಗೆ ಅದರ ಫಲ ದೊರೆತಿಲ್ಲ. ಅಧಿಕಾರದ ಎಲ್ಲ ಸ್ತರಗಳಲ್ಲಿ ಗುರುತಿಸಿಕೊಳ್ಳಲು, ನೈಜವೆನ್ನಬಹುದಾದ ಸಾಮಾಜಿಕ ನ್ಯಾಯ ಪಡೆಯಲು ಸಾಧ್ಯವಾಗಿಲ್ಲ. ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ, ಸೌಲಭ್ಯದಿಂದ ವಂಚಿತರಾಗಿರುವವರಿಗೆ ಒಳಮೀಸಲಾತಿ ನೀಡುವಿಕೆ ಇನ್ನಷ್ಟೇ ಅನುಷ್ಠಾನವಾಗಬೇಕಿದೆ. ಹಾಗಾದಲ್ಲಿ ಮಾತ್ರ, ಸಂವಿಧಾನದ ಆಶಯಗಳು ಸಾಕಾರಗೊಳ್ಳುವುದು ಸಾಧ್ಯ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರವು ಪರಿಶಿಷ್ಟ ಜಾತಿ ಮತ್ತು ಪಂಗಡದವರ ಮೀಸಲಾತಿಯನ್ನು ಕ್ರಮವಾಗಿ ಶೇ 17 ಹಾಗೂ ಶೇ 7ರಷ್ಟಕ್ಕೆ ಹೆಚ್ಚಿಸುವ ಚಾರಿತ್ರಿಕ ತೀರ್ಮಾನವನ್ನು ತೆಗೆದುಕೊಂಡಿದೆ. ಸದ್ಯವೇ ಎದುರಾಗಲಿರುವ ವಿಧಾನಸಭೆ ಚುನಾವಣೆಯ ಮೇಲೆ ಕಣ್ಣಿಟ್ಟು ಈ ನಿರ್ಣಯವನ್ನು ಪ್ರಕಟಿಸಿದೆ ಎಂದು ಹೇಳಲು ಹಿಂಜರಿಕೆಯೇನೂ ಬೇಕಾಗಿಲ್ಲ. ಬಿಜೆಪಿ ಬೆನ್ನಿಗೆ ನಿಂತಿರುವ ವಾಲ್ಮೀಕಿ (ನಾಯಕ) ಸಮುದಾಯದವರು ಪರಿಶಿಷ್ಟ ಪಂಗಡದ ಮೀಸಲಾತಿಯನ್ನು ಹೆಚ್ಚಿಸುವಂತೆ ಸರ್ಕಾರದ ಮೇಲೆ ಒತ್ತಡ ಹೇರುತ್ತಲೇ ಇದ್ದರು. ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದ ಸ್ವಾಮೀಜಿ ಅನಿರ್ದಿಷ್ಟ ಕಾಲ ಧರಣಿ ನಡೆಸಿದ್ದರು. ಇದು ಸರ್ಕಾರಕ್ಕೆ ಇಕ್ಕಟ್ಟು ತಂದಿತ್ತು. ಈ ಒತ್ತಡದಲ್ಲಿ ಮೀಸಲಾತಿ ಹೆಚ್ಚಿಸುವ ತೀರ್ಮಾನವನ್ನು ಬೊಮ್ಮಾಯಿ ಸರ್ಕಾರ ಕೈಗೊಂಡಿತು. ಜತೆಗೆ, ಪರಿಶಿಷ್ಟ ಜಾತಿಯ ಮೀಸಲಾತಿ ಪ್ರಮಾಣವನ್ನು ಶೇ 2ರಷ್ಟು ಹೆಚ್ಚಿಸಿತು. ಪರಿಶಿಷ್ಟ ಜಾತಿಯವರ ಮೀಸಲಾತಿ ಪ್ರಮಾಣವನ್ನು ಹೆಚ್ಚಿಸಬೇಕು ಎಂಬ ಬೇಡಿಕೆ ಪ್ರಬಲವಾಗಿ ಇರಲಿಲ್ಲ. ಆದರೆ, ಇತ್ತೀಚಿನ ವರ್ಷಗಳಲ್ಲಿ ಬಿಜೆಪಿಯ ತೆಕ್ಕೆಗೆ ಸೇರಿದ್ದ ಎಡಗೈ ಸಮುದಾಯದವರು ಒಳ ಮೀಸಲಾತಿ ಕಲ್ಪಿಸಬೇಕು; ಅದಕ್ಕಾಗಿ ನ್ಯಾಯಮೂರ್ತಿ ಎ.ಜೆ. ಸದಾಶಿವ ಆಯೋಗದ ವರದಿ ಜಾರಿ ಮಾಡಬೇಕು ಎಂದು ಬೇಡಿಕೆ ಇಟ್ಟಿದ್ದರು. ಹೀಗೆ ಮಾಡುವ ಮುಖೇನ, ಪರಿಶಿಷ್ಟ ಜಾತಿಯವರನ್ನು ಓಲೈಸುವ ಕೆಲಸವನ್ನು ಸರ್ಕಾರ ಮಾಡಿತು. ರಾಜಕೀಯ ಪ್ರಾತಿನಿಧ್ಯದಲ್ಲಿ ಹೆಚ್ಚಿನ ಪಾಲು ಪಡೆದವರು ಲಂಬಾಣಿ, ಬೋವಿ ಹಾಗೂ ಪರಿಶಿಷ್ಟರಲ್ಲಿ ಬಲಗೈ ಸಮುದಾಯದವರು. ಹಿಂದುಳಿದಿರುವಿಕೆಯ ಆಧಾರದ ಮೇಲೆ ಒಳಮೀಸಲಾತಿ ಕೊಟ್ಟರೆ, ಇಲ್ಲಿಯವರೆಗೆ ಮೀಸಲಾತಿಯ ಬಹುಪಾಲನ್ನು ಪಡೆದವರ ಪಾಲು ಕಡಿಮೆಯಾಗುತ್ತದೆ. ಹೀಗಾಗಿ, ಆಳುವ ಪಕ್ಷ ಯಾವುದೇ ಇದ್ದರೂ ಒಳಮೀಸಲಾತಿಯ ಸುಡುಕೆಂಡಕ್ಕೆ ಕೈಹಾಕುವ ಧೈರ್ಯವನ್ನೇ ಮಾಡುವುದಿಲ್ಲ; ಚುನಾವಣೆ ಎದುರಿಗಿರುವಾಗ ರಾಜಕೀಯದ ಗುಣಾಕಾರ, ಭಾಗಾಕಾರದ ಲೆಕ್ಕವಷ್ಟೇ ರಾಜಕಾರಣಿಗಳಿಗೆ ಮುಖ್ಯವಾಗುತ್ತದೆ. ಒಳಮೀಸಲಾತಿಯ ವಿಷಯದಲ್ಲಿ ಹುತ್ತಕ್ಕೆ ಕೈಹಾಕುವ ಧೈರ್ಯವನ್ನು ಯಾರೂ ಮಾಡಿಲ್ಲ. ಚುನಾವಣೆ ಹತ್ತಿರ ಬರುತ್ತಿದ್ದಂತೆ ಬೊಮ್ಮಾಯಿ ಅವರು ಇಂತಹದೊಂದು ನಿರ್ಧಾರ ಕೈಗೊಂಡರೆ ಅಚ್ಚರಿಯಿಲ್ಲ.

ಮೀಸಲಾತಿ ಹೆಚ್ಚಳದ ನಿರ್ಧಾರ ಹೇಗಿದೆ ಎಂದರೆ, ರಚ್ಚೆ ಹಿಡಿದ ಮಕ್ಕಳಿಗೆ ಜಾತ್ರೆಯಲ್ಲಿ ಮರಗುದುರೆ ಹತ್ತಿಸಿ ರಮಿಸುವ ಕೆಲಸದಂತಿದೆ. ಇದು ಚುನಾವಣೆ ಜಾತ್ರೆ ಸಮಯ. ಇಲ್ಲಿ ನ್ಯಾಯಕ್ಕಿಂತ ಓಲೈಕೆಯ ರಾಜಕಾರಣವೇ ಕಾಣಿಸುತ್ತದೆ. ಕಾಂಗ್ರೆಸ್ ಅಧಿಕಾರದಲ್ಲಿದ್ದಾಗಲೂ ಅದನ್ನೇ ಮಾಡಿದೆ. ಸ್ಪರ್ಧಾತ್ಮಕ ಯುಗದಲ್ಲಿ ಜೀವಂತ ಕುದುರೆಯನ್ನು ಕೊಟ್ಟು, ಅದನ್ನು ಓಡಿಸುವ ಕಲೆಯನ್ನು ಕಲಿಸಬೇಕೇ ವಿನಃ ಕಳ್ಳ ಕುದುರೆಯನ್ನು ಕೊಟ್ಟು, ‘ರಾಜಕಾರಣ’ದ ಆಟದಲ್ಲಿ ತಲ್ಲೀನವಾಗುವಂತೆ ಮಾಡುವುದಲ್ಲ. ಒಳಮೀಸಲಾತಿ ನೀಡಿಕೆ ಹೀಗಾಗದಂತೆ ನೋಡಿಕೊಳ್ಳಬೇಕಾದ ಹೊಣೆ ಸರ್ಕಾರದ ಮೇಲಿದೆ.

ಪರಿಶಿಷ್ಟ ಜಾತಿ ಮತ್ತು ಪಂಗಡದ ಮೀಸಲಾತಿ ಹೆಚ್ಚಳ ಮಾಡುವ ಮುನ್ನ ನ್ಯಾ. ಎಚ್.ಎನ್. ನಾಗಮೋಹನದಾಸ್ ನೇತೃತ್ವದ ಆಯೋಗವನ್ನು ಸರ್ಕಾರ ರಚಿಸಿತ್ತು. ಅದರ ಶಿಫಾರಸಿನ ಆಧಾರದ ಮೇಲೆಯೇ ಮೀಸಲಾತಿ ಪ್ರಮಾಣ ಹೆಚ್ಚಿಸುವ ತೀರ್ಮಾನವನ್ನು ಸರ್ಕಾರ ಕೈಗೊಂಡಿದೆ. ಇದನ್ನು ಹೆಚ್ಚಿಸುವ ಮೊದಲು ವಿಧಾನಮಂಡಲದ ಅಧಿವೇಶನದಲ್ಲಿ ಮಂಡಿಸಿ, ಶಾಸನಾತ್ಮಕ ಅನುಮೋದನೆ ಪಡೆಯುವ ಉಸಾಬರಿಗೆ ಸರ್ಕಾರ ಹೋಗಿಲ್ಲ. ಹಾಗೆ ಮಾಡಿದಲ್ಲಿ, ವಿರೋಧ ಪಕ್ಷಗಳಿಗೂ ಇದರ ಪಾಲು ಸಿಗುತ್ತದೆ ಎಂದು ಅರಿತ ಬಿಜೆಪಿ ಸರ್ಕಾರ, ಸುಗ್ರೀವಾಜ್ಞೆ ಮೂಲಕ ಮೀಸಲಾತಿ ಹೆಚ್ಚಿಸುವ ಒಳಮಾರ್ಗ ಹಿಡಿಯಿತು. ಇದು ತನ್ನದೇ, ಕೊಡುಗೆ ಎಂದು ಬಿಂಬಿಸುವ ಲಾಭದ ಲೆಕ್ಕಾಚಾರ ಇದರ ಹಿಂದಿದೆ. ಮೀಸಲಾತಿಯನ್ನು ಹೇಗೆ ಕಲ್ಪಿಸಲಾಗುತ್ತದೆ? ಎಲ್ಲಿಂದ ಕಿತ್ತು ನೀಡಲಾಗುತ್ತದೆ? ಹೇಗೆ ಜಾರಿಯಾಗಲಿದೆ ಎಂಬ ನಿಖರ ಮಾಹಿತಿ ಸುಗ್ರೀವಾಜ್ಞೆಯಲ್ಲಿ ಇಲ್ಲ. ಸದ್ಯವೇ ಬೆಳಗಾವಿಯಲ್ಲಿ ನಡೆಯಲಿರುವ ಅಧಿವೇಶನದಲ್ಲಿ ಇದನ್ನು ಮಂಡಿಸಿ, ಅನುಮೋದನೆ ಪಡೆಯುವ ಇರಾದೆ ಸರ್ಕಾರಕ್ಕೆ ಇದ್ದಂತಿದೆ.



ಕರ್ನಾಟಕದ ಪರಿಶಿಷ್ಟ ಜಾತಿ/ಪಂಗಡದ ಜನಸಂಖ್ಯೆ

ಒಟ್ಟು	ಪರಿಶಿಷ್ಟ ಜಾತಿ	ಶೇ	ಪರಿಶಿಷ್ಟ ಪಂಗಡ	ಶೇ	ಒಟ್ಟು ಶೇ
2011ರ ಜನಗಣತಿ					
6,10,95,297	1,04,74,992	17.15	42,48,987	6.95	24.10
2020ರ ಅಂದಾಜು					
7,07,17,272	1,27,13,639	17.98	52,36,581	7.41	25.39

*ಕರ್ನಾಟಕ ಸರ್ಕಾರ, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ

‘ಮುಂದೆ ಸಮಸ್ಯೆಯಾದರೆ ಯಾರು ಹೊಣೆ?’

ಕೇಂದ್ರ ಹಾಗೂ ರಾಜ್ಯದಲ್ಲಿ ಬಿಜೆಪಿ ಸರ್ಕಾರವೇ ಅಧಿಕಾರದಲ್ಲಿರುವುದರಿಂದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಕ್ಕೆ ಮೀಸಲಾತಿ ಜಾರಿಗೆ ಸುಗ್ರೀವಾಜ್ಞೆಯ ಅಗತ್ಯವೇನಿತ್ತು? ರಾಜ್ಯದಿಂದ ಕೇಂದ್ರಕ್ಕೆ ಶಿಫಾರಸು ಮಾಡಿ ಸಂಸತ್‌ನಲ್ಲಿ ಮಂಡಿಸಬೇಕಿತ್ತು. ಆಗ ದೊಡ್ಡಮಟ್ಟದ ಚರ್ಚೆಯೂ ನಡೆಯುತಿತ್ತು. ರಾಷ್ಟ್ರಪತಿ ಅಂಕಿತ ಬಿದ್ದಿದ್ದರೆ ಮೀಸಲಾತಿ ನ್ಯಾಯಯುತವಾಗಿರುತ್ತಿತ್ತು. ಆ ಪ್ರಕ್ರಿಯೆಯೇ ನಡೆಯದೆ ಸುಗ್ರೀವಾಜ್ಞೆ ಮೂಲಕ ಜಾರಿ ಮಾಡಿ ಮುಂದೇನಾದರೂ ಸಮಸ್ಯೆಯಾದರೆ ಯಾರು ಹೊಣೆ? ಇದು ಸಾಂವಿಧಾನಿಕ ವಿಚಾರ, ಜೊತೆಗೆ ಸಮುದಾಯದ ಭವಿಷ್ಯದ ಪ್ರಶ್ನೆ ಕೂಡ. ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ಶೇ 10ರಷ್ಟು ಮೀಸಲಾತಿಯನ್ನು ವ್ಯವಸ್ಥಿತ ಪ್ರಕ್ರಿಯೆ ಮೂಲಕವೇ ಜಾರಿ ಮಾಡಿಲ್ಲವೇ? ವಿರೋಧವಿಲ್ಲದೇ ಜಾರಿಯಾಯಿತು. ಹಾಗೆಯೇ, ಎಸ್‌ಸಿ, ಎಸ್‌ಟಿ ಸಮುದಾಯದ ಮೀಸಲಾತಿ ಹೆಚ್ಚಳವನ್ನೂ ಇದೇ ಪ್ರಕ್ರಿಯೆಗೆ ಒಳಪಡಿಸಬೇಕಿತ್ತು. ರಾಜ್ಯ ಸರ್ಕಾರ ಇದರ ಮಹತ್ವ ಅರಿತು ಹೆಜ್ಜೆ ಇಡಬೇಕಿತ್ತು. ಕಾನೂನು ಜಾರಿಯೂ ವ್ಯವಸ್ಥಿತವಾಗಿ, ದೂರದೃಷ್ಟಿಯಿಂದ ಕೂಡಿರಬೇಕು. ಹಿಂದಿನ ಸರ್ಕಾರಗಳು ಇಂಥ ವಿಚಾರ ಬಂದಾಗ ವ್ಯವಸ್ಥಿತವಾಗಿ ಮಾಡಿದ್ದವು.

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಕ್ಕೆ ಈಗ ಕೊಟ್ಟಿರುವ ಮೀಸಲಾತಿಯೂ ಕಡಿಮೆ. ಮಠಾಧೀಶರು, ಸಮುದಾಯದ ಮುಖಂಡರು ತಿಂಗಳುಗಟ್ಟಲೇ ಪ್ರತಿಭಟನೆ ನಡೆಸಿದ್ದಾರೆ. ವಿಚಾರವಂತಿಕೆಯಿಂದ ನ್ಯಾಯಯುತ ಬೇಡಿಕೆಯನ್ನು ಸರ್ಕಾರದ ಗಮನಕ್ಕೆ ತಂದಿದ್ದು ಶೇ 2 ಹಾಗೂ ಶೇ 4ರಷ್ಟು ಮೀಸಲಾತಿಗಾಗಿಯೇ? ಸಮುದಾಯದ ಭವಿಷ್ಯದ ದೃಷ್ಟಿಯಿಂದ ಹೋರಾಟ ಮಾಡಿದರು. ನ್ಯಾಯ ಕೊಡುವುದೇ ಸರ್ಕಾರದ ಚಿಂತನೆಯಾಗಿದ್ದರೆ ಸಮುದಾಯದ ಜನಸಂಖ್ಯೆಯ ಅನುಪಾತ ನೋಡಬೇಕಿತ್ತು. ಸುಗ್ರೀವಾಜ್ಞೆ ಮೂಲಕ ಜಾರಿ ಮಾಡಿರುವುದರ ಬಗ್ಗೆಯೂ ಸಮುದಾಯದ ಮುಖಂಡರು, ಮಠಾಧೀಶರು ತಮ್ಮ ಅಭಿಪ್ರಾಯ ಹೇಳಬೇಕು.

ರೂಪಕಲಾ ಶಶಿಧರ್, ಶಾಸಕಿ,ಕೆಜಿಎಫ್

‘ರಾಜಕೀಯ ಗಿಮಿಕ್ ಅಲ್ಲ, ಬದ್ಧತೆ’

ಬಹಳ ವರ್ಷಗಳಿಂದ ಇದ್ದ ಬೇಡಿಕೆ ಈಡೇರಿಸುವ ಕೆಲಸವನ್ನು ರಾಜ್ಯ ಸರ್ಕಾರ ಮಾಡಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಈ ಸಮುದಾಯಗಳ ಬಗ್ಗೆ ಬದ್ಧತೆ ಇಟ್ಟುಕೊಂಡು ಈ ನಿರ್ಧಾರ ಕೈಗೊಂಡಿದ್ದಾರೆ. ಏಕಾಏಕಿ ಈ ನಿರ್ಧಾರ ಕೈಗೊಂಡಿಲ್ಲ. ಎಲ್ಲ ಆಯಾಮಗಳನ್ನೂ ಅವರು ಅವಲೋಕಿಸಿದ್ದಾರೆ. ಜಾರಿಗೊಳಿಸುವ ಮುನ್ನ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಶಾಸಕರ ಪ್ರತ್ಯೇಕ ಸಭೆ ಕರೆದು ಅಭಿಪ್ರಾಯಗಳನ್ನು ಪಡೆದರು. ಕಾನೂನಿನ ತೊಡಕು ಎದುರಾಗುವ ಬಗ್ಗೆ ಕೆಲವರು ಅನುಮಾನವನ್ನೂ ವ್ಯಕ್ತಪಡಿಸಿದರು. ಕೇಂದ್ರದಲ್ಲೂ ಬಿಜೆಪಿ ಸರ್ಕಾರವೇ ಇರುವುದರಿಂದ ಕಾನೂನಿನ ತೊಡಕು ನಿವಾರಿಸುವ ಕೆಲಸ ಮಾಡಲಾಗುವುದು ಎಂಬ ಭರವಸೆಯನ್ನು ಅವರು ನೀಡಿದರು. ಇದು ಒಂದೇ ರಾತ್ರಿಯಲ್ಲಿ ಆಗುವ ಕೆಲಸವಲ್ಲ, ಸಮಯ ಬೇಕಾಗುತ್ತದೆ. ಹೆಚ್ಚಿಸಿರುವ ಮೀಸಲಾತಿ ಪ್ರಮಾಣವನ್ನು ಕಾಪಾಡಬೇಕು ಎಂಬ ಇಚ್ಛಾಶಕ್ತಿ ಮುಖ್ಯಮಂತ್ರಿ ಅವರಿಗೆ ಇದೆ. ಆದ್ದರಿಂದ ಇದು ಚುನಾವಣೆ ಗಿಮಿಕ್ ಅಲ್ಲ, ಈ ಸಮುದಾಯಗಳ ಬಗ್ಗೆ ಅವರಿಗೆ ಇರುವ ಬದ್ಧತೆ.

ಬಿ.ಹರ್ಷವರ್ಧನ್, ನಂಜನಗೂಡು ಶಾಸಕ

ಅನುಷ್ಠಾನದ ಸಾಧ್ಯತೆಗಳು...

- ಮೀಸಲಾತಿಯನ್ನು ಪ್ರಶ್ನಿಸಿದ್ದ ಚಂಪಕನ್ ದೊರೈರಾಜನ್ ಪ್ರಕರಣದ ಬಳಿಕ 1951ರಲ್ಲಿ ಸಂವಿಧಾನಕ್ಕೆ ತಂದ ಮೊದಲ ತಿದ್ದುಪಡಿಯೇ ಮೀಸಲಾತಿಯ ಅನುಷ್ಠಾನದ ಮೈಲಿಗಲ್ಲು. ಅಂದಿನಿಂದ ಮೊನ್ನೆಯಷ್ಟೇ ಹೊರಬಂದ ಮುಂದುವರಿದ ಜಾತಿಗಳಲ್ಲಿರುವ ಆರ್ಥಿಕವಾಗಿ ದುರ್ಬಲ ವರ್ಗಗಳಿಗೆ (ಇಡಬ್ಲ್ಯುಎಸ್) ನೀಡಲಾದ ಶೇ 10ರ ಮೀಸಲಾತಿ ಕುರಿತ ತೀರ್ಪಿನ ಒಳ ಆಯಾಮಗಳು, ವಿಶ್ಲೇಷಣೆ, ಅಭಿಪ್ರಾಯ, ಒಕ್ಕಣಿಕೆ, ಸಂವಿಧಾನದ ವಿವಿಧ ವಿಧಿಗಳ ಉಲ್ಲೇಖಗಳನ್ನು ಪರಾಮರ್ಶಿಸಿದರೆ ಪ.ಜಾ ಮತ್ತು ಪ.ಪಂಗಳಿಗೆ ಹೆಚ್ಚಿಸಲಾದ ಮೀಸಲಾತಿಯ ಅನುಷ್ಠಾನ ಅಸಾಧ್ಯವೇನಲ್ಲ. ಸುಪ್ರೀಂ ಕೋರ್ಟ್‌ನ ವಿವಿಧ ತೀರ್ಪುಗಳಲ್ಲಿ ಮೀಸಲಾತಿ ಬಗೆಗಿನ ನಿಲುವು, ನಿರ್ದೇಶನಗಳು ನಮ್ಮನ್ನು ಕಗ್ಗತ್ತಲ ಕಾಡಿನೊಳಗೆ ಕರೆದೊಯ್ಯುತ್ತವೆ. ಕಗ್ಗಾಡಿನೊಳಗೂ ದಾರಿಗಳಿರುವಂತೆ, ಮೀಸಲಾತಿಯ ಅನುಷ್ಠಾನಕ್ಕೆ ಕಿರುದಾರಿಗಳೂ ಕಾಣಿಸಿಗುತ್ತವೆ. ಸಾಮಾಜಿಕ ನ್ಯಾಯ ಹಾಗೂ ಸಂವಿಧಾನದ ಮೂಲತತ್ವಗಳನ್ನೇ ಬದಿಗಿಟ್ಟು ಇಡಬ್ಲ್ಯುಎಸ್‌ಗೆ ನೀಡಿದ ಮೀಸಲಾತಿಗೆ ಸುಪ್ರೀಂ ಕೋರ್ಟ್ ಅಸ್ತು ಎಂದಿದೆ. ಈ ದಾರಿಯನ್ನೇ ಬೊಮ್ಮಾಯಿ ಸರ್ಕಾರ ಬಳಸಿಕೊಂಡಿದೆ.
- ಸಂವಿಧಾನಕ್ಕೆ 1951ರಲ್ಲಿ ತಿದ್ದುಪಡಿ ತಂದು ವಿಧಿ 31ಬಿ ಅನ್ನು ಸೇರಿಸಲಾಯಿತು. ಇದರ ಪ್ರಕಾರ ಪರಿಚ್ಛೇದ 9ರಲ್ಲಿ ಸೇರಿಸಲಾದ ಶಾಸನಗಳನ್ನು ನ್ಯಾಯಾಲಯದಲ್ಲಿ ಪ್ರಶ್ನಿಸುವಂತಿಲ್ಲ. ಈ ಪರಿಚ್ಛೇದದಡಿ ಸೇರ್ಪಡೆ ಮಾಡಿದ ಶಾಸನಗಳನ್ನು ಸಂವಿಧಾನ ನೀಡಿದ ಮೂಲಭೂತ ಹಕ್ಕುಗಳಿಗೆ ವಿರುದ್ಧ ಎಂಬ ಕಾರಣಕ್ಕೆ ಅನೂರ್ಜಿತಗೊಳಿಸಲಾಗದು. ಮೀಸಲಾತಿ ಹೆಚ್ಚಳ ಕುರಿತ ಮಸೂದೆಗೆ ಶಾಸನಸಭೆಗಳ ಅನುಮೋದನೆ ಪಡೆದು ಕಾಯ್ದೆ ರೂಪಿಸಿದರೆ ಅದು ನ್ಯಾಯಾಂಗದ ಪರಿಮಿತಿಯೊಳಗೆ ಬಾರದು ಎಂಬ ರಕ್ಷಣೆಯನ್ನು ಈ ತಿದ್ದುಪಡಿ ನೀಡಿದೆ.
- ಮಂಡಲ್ ವರದಿಯ ಶಿಫಾರಸುಗಳನ್ನು ಆಧರಿಸಿ ಕೇಂದ್ರ ಸರ್ಕಾರವು 1990ರಲ್ಲಿ ಹಿಂದುಳಿದ ವರ್ಗಗಳಿಗೆ ಶೇ 27ರಷ್ಟು ಮೀಸಲಾತಿಯನ್ನು ನೀಡಿತು. ಇದನ್ನು ಪ್ರಶ್ನಿಸಲಾದ ಇಂದ್ರಾ ಸಾಹ್ನಿ ಪ್ರಕರಣದಲ್ಲಿ ತೀರ್ಪು ನೀಡಿದ ಒಂಬತ್ತು ನ್ಯಾಯಮೂರ್ತಿಗಳಿದ್ದ ಸಂವಿಧಾನ ಪೀಠ ಒಟ್ಟು ಮೀಸಲಾತಿ ಶೇ 50ರಷ್ಟನ್ನು ಮೀರಬಾರದು ಎಂಬ ನಿಬಂಧನೆ ವಿಧಿಸಿದೆ. ಸಾಮಾಜಿಕ ನ್ಯಾಯ ಮತ್ತು ಮೀಸಲಾತಿ ಎಂದರೇನು ಎಂಬುದರ ವ್ಯಾಖ್ಯಾನವು ಈ ತೀರ್ಪಿನಲ್ಲಿ ಇದೆ (ಪ್ಯಾರಾ 250). ‘ಪ್ರಜೆಗಳಲ್ಲಿ ಹಿಂದುಳಿದ ವರ್ಗದವರನ್ನು ದೇಶದ ಇತರ ಜನರೊಂದಿಗೆ ಸಮಾನತೆಯ ಹಂತಕ್ಕೆ ಮೇಲೆ ತರುವುದಕ್ಕಾಗಿ, ತಾನು ಅವಶ್ಯವೆಂದು ಭಾವಿಸಿದಂಥ ಸಕಾರಾತ್ಮಕ ಕ್ರಮಗಳನ್ನು ಅಳವಡಿಸಿಕೊಳ್ಳುವ ಅವಕಾಶವನ್ನು ಸಂವಿಧಾನವು ಸರ್ಕಾರಕ್ಕೆ ನೀಡಿದೆ. ಈ ಹಿಂದೆ ಅರ್ಹತೆಯನ್ನು ಆಧರಿಸಿದ ಮುಕ್ತ ಆಯ್ಕೆಗಳಲ್ಲಿ ಸಮರ್ಥವಾಗಿ ಸ್ಪರ್ಧಿಸಲು ಸಾಮರ್ಥ್ಯವಿಲ್ಲದ ಕಾರಣ ಸರ್ಕಾರಿ ಉದ್ಯೋಗಗಳನ್ನು ಪಡೆದುಕೊಳ್ಳುವ ಅವಕಾಶದಿಂದ ಹಿಂದುಳಿದ ವರ್ಗದವರು ವಂಚಿತರಾಗಿದ್ದರು. ಹೀಗಾಗಿ ಉಳಿದವರನ್ನು ಹೊರತುಪಡಿಸಿ ಮತ್ತು ಅರ್ಹತೆಯ ಅಂಶಗಳನ್ನು ಪರಿಗಣಿಸದೆ ಪ.ಜಾ. ಮತ್ತು ಪ.ಪಂ.ಗಳವರಿಗೆ ಹಾಗೂ ಇತರ ಹಿಂದುಳಿದ ವರ್ಗದವರಿಗೆ ಶಿಕ್ಷಣದಲ್ಲಿ ಹಾಗೂ ಸರ್ಕಾರಿ ಉದ್ಯೋಗಗಳಲ್ಲಿ ಕೆಲವೊಂದು ಸ್ಥಾನಗಳನ್ನು ಮೀಸಲಾಗಿಡುವ ಮುಕ್ತ ಅವಕಾಶವನ್ನು ಸರ್ಕಾರವು ಹೊಂದಿರುತ್ತದೆ’ ಎಂದು ಪ್ರತಿಪಾದಿಸಿದೆ. ಈ ಅಂಶವನ್ನೇ ಮುಂದಿಟ್ಟುಕೊಂಡು, ಪ.ಜಾ ಮತ್ತು ಪ.ಪಂ ಸಮುದಾಯದ ಮೀಸಲಾತಿ ಹೆಚ್ಚಿಸುವ ಅಧಿಕಾರ ಸರ್ಕಾರಕ್ಕೆ ಇದೆ ಎಂದೂ ವಾದಿಸುವ ಅವಕಾಶ ಇದೆ.
- ಶೇ 50ರ ಮಿತಿ ಮೀರಬಾರದು ಎಂದು ಸುಪ್ರೀಂ ಕೋರ್ಟ್ ಹೇಳಿದ್ದರೂ ಇದಕ್ಕೆ ಸಮಂಜಸವಾದ ವಿವರಣೆಯನ್ನು ನೀಡಿಲ್ಲ. ‘ಸಕಾರಣ ಮಿತಿ’ ಎಂದಷ್ಟೇ ತೀರ್ಪು (ಪ್ಯಾರಾ 810) ಹೇಳಿದೆ. ‘ಶೇ 50ರಷ್ಟು ಎಂಬುದು ನಿಯಮವಾಗಿದ್ದರೂ ಈ ದೇಶ ಹಾಗೂ ಇಲ್ಲಿನ ಜನರ ಅಪಾರ ವೈವಿಧ್ಯತೆಯಲ್ಲಿ ಅಂತರ್ಗತವಾಗಿರುವ ಕೆಲವೊಂದು ಅಸಾಮಾನ್ಯ ಪರಿಸ್ಥಿತಿಗಳನ್ನು ಪರಿಶೀಲನೆಯಿಂದ ಹೊರಗಿಡುವ ಅಗತ್ಯವಿಲ್ಲ. ಬಹಳ ದೂರದ ಹಾಗೂ ಯಾವುದೋ ಮೂಲೆಗಳಲ್ಲಿ ನೆಲೆಸಿರುವಂಥ ಜನರು ರಾಷ್ಟ್ರೀಯ ಜೀವನದ ಮುಖ್ಯ ವಾಹಿನಿಯಿಂದ ಹೊರಗಿರುವ ಸಾಧ್ಯತೆ ಇದೆ. ಇವರಿಗೇ ಕೆಲವು ವಿಶಿಷ್ಟವಾದ ಪರಿಸ್ಥಿತಿಗಳಿರುವುದರಿಂದ ಇದನ್ನು ಸ್ವಲ್ಪ ಭಿನ್ನ ರೀತಿಯಲ್ಲಿ ಪರಿಶೀಲಿಸುವುದು ಅಗತ್ಯ. ಈ ಕಟ್ಟುನಿಟ್ಟಿನ ನಿಯಮದಲ್ಲಿ ಕೆಲವೊಂದು ಸಡಿಲಿಕೆಗಳನ್ನು ತರುವುದು ಅಗತ್ಯವಾಗಬಹುದು. ಹೀಗೆ ಮಾಡುವಾಗ ಬಹಳ ತೀವ್ರವಾದ ಎಚ್ಚರಿಕೆ ವಹಿಸಬೇಕು ಮತ್ತು ಇದನ್ನು ಒಂದು ವಿಶೇಷ ಸಂದರ್ಭವಾಗಿ ಪರಿಗಣಿಸಬೇಕು’ ಎಂದು ಹೇಳಿದೆ.
ಇದನ್ನು ವಿಸ್ತರಿಸುವುದಾದರೆ, ಸಮಾಜದ ಮುಖ್ಯವಾಹಿನಿಯಿಂದ ದೂರ ಉಳಿದಿರುವ ಸಮುದಾಯಗಳನ್ನು ಭಿನ್ನ ನೆಲೆಯಲ್ಲಿ ಪರಿಗಣಿಸಬೇಕಾಗಿರುವುದರಿಂದ ಶೇ 50ರ ಮಿತಿಯನ್ನು ಸಡಿಲಿಸಬಹುದು. ಅಗತ್ಯ ದತ್ತಾಂಶವನ್ನು ವಿಶ್ಲೇಷಿಸಿ, ಮಿತಿ ಸಡಿಲಗೊಳಿಸುವ ಅಗತ್ಯವನ್ನು ಮನಗಾಣಬೇಕು ಎಂದು ವಾದಿಸಲು ಸಾಧ್ಯವಿದೆ. ಕರ್ನಾಟಕದಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದ ಮೀಸಲಾತಿಯನ್ನು ನಿಗದಿ ಮಾಡುವಾಗ ಇದ್ದ ಜನಸಂಖ್ಯೆಗೂ, 2011ರ ಜನಗಣತಿಗೂ ಹಾಗೂ 2020ರಲ್ಲಿ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ಅಂದಾಜಿಸಿದ ದತ್ತಾಂಶವನ್ನು ಗಮನಿಸಿದರೆ ಈ ಸಮುದಾಯದ ಜನಸಂಖ್ಯೆ ಶೇ 25 ಅನ್ನು ದಾಟುತ್ತದೆ. ಸರ್ಕಾರದ ಸಮರ್ಥನೆಗೆ ಇದೊಂದು ದಾರಿಯೂ ಇದೆ.
- ಸಂವಿಧಾನಕ್ಕೆ 1951ರಲ್ಲಿ ತಂದ ತಿದ್ದುಪಡಿಯ ಪ್ರಕಾರ ಪರಿಚ್ಛೇದ 9ರಲ್ಲಿ ಸೇರಿಸಲಾದ ಶಾಸನಗಳನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಲಾಗದು. ಈ ವಿನಾಯಿತಿ ಬಳಸಿಕೊಂಡ ತಮಿಳುನಾಡು ಸರ್ಕಾರ, 1994ರಲ್ಲಿ ಮೀಸಲಾತಿಯ ಪ್ರಮಾಣವನ್ನು ಶೇ 69ಕ್ಕೆ ಏರಿಸಿದೆ. ಇದನ್ನು ಕೋರ್ಟ್‌ನಲ್ಲಿ ಪ್ರಶ್ನಿಸಲಾಗಿದ್ದರೂ ಈವರೆಗೂ ಇತ್ಯರ್ಥವಾಗಿಲ್ಲ. ರಾಜ್ಯ ಸರ್ಕಾರಕ್ಕೆ ಇದು ಸಹ ಪೂರಕವಾದ ಮಾರ್ಗವಾಗಿದೆ.
- ಐ.ಆರ್. ಕೋಹಿಲೊ ಪ್ರಕರಣದಲ್ಲಿ ತೀರ್ಪು ನೀಡಿದ ಸುಪ್ರೀಂ ಕೋರ್ಟ್, 1973ರ ಏಪ್ರಿಲ್ 23ರ ಬಳಿಕ 9ನೇ ಪರಿಚ್ಛೇದಕ್ಕೆ ಸೇರಿಸಿದ ಶಾಸನಗಳಲ್ಲಿ ಮೂಲಭೂತ ಹಕ್ಕುಗಳ ಉಲ್ಲಂಘನೆಯಾಗಿದ್ದರೆ ಅಥವಾ ಸಂವಿಧಾನದ ಮೂಲತತ್ವಗಳಿಗೆ ವಿರುದ್ಧವಾಗಿದ್ದರೆ ನ್ಯಾಯಾಂಗದ ಪರಾಮರ್ಶೆಗೆ ಒಳಪಡುತ್ತವೆ ಎಂದು ಹೇಳಿದೆ. 1973ರಲ್ಲಿ ಕೇಶವಾನಂದ ಭಾರತಿ ಮತ್ತು ಕೇರಳ ಸರ್ಕಾರದ ನಡುವಣ ಪ್ರಕರಣದಲ್ಲಿ, ತೀರ್ಪು ನೀಡಿದ ಸುಪ್ರೀಂ ಕೋರ್ಟ್ ಸಾಮಾಜಿಕ ನ್ಯಾಯವು ಸಂವಿಧಾನದ ಮೂಲ ತತ್ವಗಳಲ್ಲಿ ಒಂದು ಎಂದು ಹೇಳಿದೆ. ಪ.ಜಾ. ಮತ್ತು ಪ.ಪಂ.ಗಳಿಗೆ ನೀಡಿರುವ ಮೀಸಲಾತಿಯು ಸಾಮಾಜಿಕ ನ್ಯಾಯದ ಒಂದು ಭಾಗ. 1951ರಲ್ಲಿ ನೀಡಿರುವ ಮೀಸಲಾತಿಯ ಪ್ರಮಾಣವೇ ಈಗಲೂ ಮುಂದುವರಿಯುತ್ತಿದೆ. ಆ ಬಳಿಕ ಪ.ಜಾ ಮತ್ತು ಪ.ಪಂ.ಗಳ ಪಟ್ಟಿಗೆ ಇನ್ನಷ್ಟು ಜಾತಿಗಳನ್ನು ಸೇರಿಸಲಾಗಿದೆ. ಜನಸಂಖ್ಯೆ ಪ್ರಮಾಣವೂ ಹೆಚ್ಚಳವಾಗಿದೆ. ಸುದೀರ್ಘ ಅವಧಿ ಮೀಸಲಾತಿ ಕೊಟ್ಟರೂ ಅದು ತಲುಪಬೇಕಾದವರಿಗೆ ತಲುಪಿಯೇ ಇಲ್ಲ. ಹೀಗಾಗಿ, ಈ ಸಮುದಾಯದ ಶೈಕ್ಷಣಿಕ, ಉದ್ಯೋಗ, ಆರ್ಥಿಕ ಹಾಗೂ ಸಾಮಾಜಿಕ ಪರಿಸ್ಥಿತಿ ಗಮನಾರ್ಹವಾಗಿ ಸುಧಾರಣೆಯಾಗಿಲ್ಲ. ಹೀಗಿರುವಾಗ, ಮೀಸಲಾತಿ ಪ್ರಮಾಣದ ಹೆಚ್ಚಳವು, ಸಾಮಾಜಿಕ ನ್ಯಾಯದ ಅನುಷ್ಠಾನವಾಗುತ್ತದೆಯೇ ಹೊರತು ಮೂಲಭೂತ ಹಕ್ಕುಗಳ ಉಲ್ಲಂಘನೆ ಅಥವಾ ಸಂವಿಧಾನದ ಮೂಲ ತತ್ವಕ್ಕೆ ವಿರುದ್ಧವಾಗುವುದಿಲ್ಲ. ಹೆಚ್ಚಿಸಲಾದ ಮೀಸಲಾತಿ ಪ್ರಮಾಣವನ್ನು ಸಂರಕ್ಷಿಸಲು 9ನೇ ಪರಿಚ್ಛೇದದಲ್ಲಿ ಸೇರಿಸಿ, ನ್ಯಾಯದ ಮಾರ್ಗವನ್ನು ಎತ್ತಿ ಹಿಡಿಯುವ ಅವಕಾಶ ಸರ್ಕಾರಕ್ಕೆ ಇದ್ದೇ ಇದೆ.
- ಕೇಂದ್ರ ಸರ್ಕಾರವು 2019ರಲ್ಲಿ ಸಂವಿಧಾನಕ್ಕೆ 103ನೇ ತಿದ್ದುಪಡಿ ತಂದು ಇಡಬ್ಲ್ಯುಎಸ್‌ಗೆ ಶೇ 10ರ ಮೀಸಲಾತಿ ಒದಗಿಸಿದೆ. ಒಟ್ಟು ಮೀಸಲಾತಿ ಪ್ರಮಾಣ ಶೇ 50ರಷ್ಟನ್ನು ಮೀರಿ, ಶೇ 59.5ರಷ್ಟಕ್ಕೆ ತಲುಪಿದೆ. ಶೇ 50ರ ಮಿತಿಯನ್ನು ಅಗತ್ಯ ದತ್ತಾಂಶವನ್ನು ವಿಶ್ಲೇಷಿಸಿ ಸಡಿಲಗೊಳಿಸಬಹುದು ಎಂದು ಹೇಳಿತ್ತು. ಇಡಬ್ಲ್ಯುಎಸ್‌ಗೆ ಮೀಸಲಾತಿ ನೀಡುವಾಗ ದತ್ತಾಂಶವೂ ಇರಲಿಲ್ಲ. ಈ ಸಮುದಾಯ ರಾಷ್ಟ್ರೀಯ ಮುಖ್ಯವಾಹಿನಿಯಿಂದ ಹೊರಗೂ ಇರಲಿಲ್ಲ. ಹಾಗಿದ್ದರೂ ತಿದ್ದುಪಡಿಯನ್ನು ಕೋರ್ಟ್ ಎತ್ತಿ ಹಿಡಿದಿದೆ. ಈ ವಿಷಯದಲ್ಲಿ ಭಿನ್ನಮತದ ತೀರ್ಪು ನೀಡಿದ ನ್ಯಾಯಮೂರ್ತಿ ರವೀಂದ್ರ ಭಟ್ ಅವರು, ‘ಪರಿಶಿಷ್ಟ ಜಾತಿ, ಪಂಗಡ ಮತ್ತು ಒಬಿಸಿ ಮೀಸಲಾತಿಯು ‘ಉಚಿತ ಪಾಸ್’ ನೀಡುವ ರೀತಿಯದ್ದಲ್ಲ. ಅದು ನಷ್ಟ ಭರ್ತಿ ಮತ್ತು ಪರಿಹಾರ ರೂಪದ ವ್ಯವಸ್ಥೆಯಾಗಿದೆ’ ಎಂದಿದ್ದಾರೆ. ಇದು ಕೂಡ ಸರ್ಕಾರದ ನೆರವಿಗೆ ಬರಬಹುದು. ಕೇಂದ್ರ ಕೊಡಮಾಡಿರುವ ಇಡಬ್ಲ್ಯುಎಸ್ ಮೀಸಲಾತಿ ಹಾಗೂ ಸುಪ್ರೀಂ ಕೋರ್ಟ್ ತೀರ್ಪನ್ನೇ ಚಿಮ್ಮುಹಲಗೆಯಾಗಿ ಬಳಸುವ ಮೂಲಕ ಬಿಜೆಪಿ ಸರ್ಕಾರ ಪ.ಜಾ ಮತ್ತು ಪ.ಪಂ ಮೀಸಲಾತಿ ಹೆಚ್ಚಳದ ಪ್ರಮಾಣವನ್ನು ಸಮರ್ಥಿಸಿಕೊಳ್ಳಬಹುದು.

ಪದಬಂಧ 5164

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಮರ್ಯಾದೆಯಿರುವ ವಸ್ತುಸ್ಥಿತಿ (4)
3.ಮಧುರವಾಗಿರುವ ತುಟಿ (3)
4.ಬಿಡುವು ಈ ರೀತಿ ಬಂದಿದೆ (4)
6.ಒಗ್ಗಟ್ಟು ಇಲ್ಲಿ ಕಾಣುತ್ತಿದೆ (3)
8.ರಾತ್ರಿ ವೇಳೆ ಸಂಚರಿಸುವ ಕಳ್ಳ, ಪಿಶಾಚಿ ಇತ್ಯಾದಿ (4)
9.ಪದ ಮತ್ತು ಅದರರ್ಥವನ್ನು ವಿವರಿಸುವ ಪುಸ್ತಕ (4)
11.ಗಂಡು ಕುರಿ ಇಲ್ಲಿದೆ (3)
14.ಶ್ರೀರಾಮನ ನೆಚ್ಚಿನ ಬಂಟ (4)
16.ವ್ಯಾಜ್ಯಕ್ಕೊಂದು ಪರ್ಯಾಯ ಪದ (3)
17.ಮರದಲ್ಲಿರುವ ಹೆಬ್ಬಾಗಿಲು (4)

ಮೇಲಿಂದ ಕೆಳಕ್ಕೆ
1.ನೆತ್ತರು ಹರಿಸಿದಾಗಲೇ ವೈರಾಗ್ಯವುಳ್ಳವನು ಕಂಡಾನು! (3)
2.ವ್ಯಸನದಲ್ಲೇ ಹೊಸತನ್ನು ಹುಡುಕಿ! (2)
3.ಒಪ್ಪವಾಗಿ ಮರ್ಯಾದೆಯೊಡನಿರುವ ಶಂಕೆ! (4)
5.ನಾಸಿಕಕ್ಕೇರಿಸಿಕೊಳ್ಳುವ ತಂಬಾಕಿನ ಹುಡಿ (2)
6.ನಯನಾಜೂಕು ಇಲ್ಲದವನು (3)
7.ತಂದೆತಾಯಿ ಇರುವ ಊರು (3)
10.ಮಲಗುವ ಮನೆ (4)
12.ತೃಷೆ ಹೀಗೆ ಬಂದಿದೆ (2)
13.ಕೈ ಕೊನೆಗಿಟ್ಟರೆ ಮಿಶ್ರಣ ಕಂಡೀತು (3)
15.ಕತ್ತಲು ಇಲ್ಲಿ ಆವರಿಸಿದೆ (2)



5163ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ವಿಕಸನ 3.ಹಲುಬೆ 5.ಗಣಪ 7.ಉಸಿರು 8.ವಿರಹತಾಪ 11.ಸಾರಣೆ 12.ಮಜ್ಜಿಗೆ 15.ಗಹ್ವರ 16.ನಡುಪ್ರಾಯ

ಮೇಲಿಂದ ಕೆಳಕ್ಕೆ: 1.ವಿಯೋಗ 2.ನಳ್ಳಿ 3.ಹಗರು 4.ಬೆನ್ನುತಟ್ಟು 6.ಪಲ್ಲವಿ 7.ಉದಾಹರಣೆ 9.ಪರಮ 10.ಕವಾಡಿಗ 11.ಸಾವಿರ 13.ಗೆಳೆಯ 14.ಜ್ಞಾನ

ಸುಡೊಕು 5550

		4			1			3
	7					6		
5			8		9		4	7
		5	4			3		
	6			9			7	
3					8	5		9
4	1			8			3	
		2	7		4	9		1
7		9		3			2	

5549 ಸುಡೊಕು

2	4	8	3	7	1	5	6	9
9	5	6	4	8	2	3	7	1
7	3	1	9	5	6	2	8	4
6	9	4	1	3	8	7	5	2
5	7	2	6	4	9	1	3	8
8	1	3	7	2	5	9	4	6
3	6	7	2	1	4	8	9	5
4	2	5	8	9	3	6	1	7
1	8	9	5	6	7	4	2	3

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಶನಿವಾರ ಡಿಸೆಂಬರ್ 10, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶೀರ್ಷ ಕೃಷ್ಣ ದ್ವಿತೀಯ ಗಂ. 13-48 ನಕ್ಷತ್ರ: ಆದ್ರಾ ಗಂ. 17-42 ಯೋಗ: ಶುಕ್ಲ ಗಂ. 28-25, ಕರಣ: ಗರಜೆ ಗಂ. 13-48, ವೃಶ್ಚಿಕ ಮಾಸದ 23 ನೇ ದಿನ. ರಾಹುಕಾಲ : ಬೆಳಿಗ್ಗೆ 09-00 –10-30
ಸೂರ್ಯೋದಯ : 06-46 **ಸೂರ್ಯಾಸ್ತ :** 06-00
ಮುಸ್ಲಿಂ ದಿನಾಂಕ : 15 ಜುಮಾದುಲ್ಲಾವಲ್
ಅದೃಷ್ಟ ಸಂಖ್ಯೆ : 1, 5

ಮೇಷ: ಸಂದರ್ಭಕ್ಕೆ ಅನುಗುಣವಾಗಿ ವರ್ತಿಸುವ ಕಲೆಯನ್ನು ಕಲಿಯಬೇಕಾಗುವುದು. ನಿಮ್ಮ ಆರೋಗ್ಯದಲ್ಲಿ ಸ್ವಲ್ಪ ಮಟ್ಟಿಗೆ ಏರುಪೇರಾದರೂ ಕೂಡ ಆತಂಕಕ್ಕೆ ಕಾರಣವಾಗಬೇಕಿಲ್ಲ. ಆದಾಯ ಸ್ಥಿರವಾಗಿ ಇರುವುದು.

ವೃಷಭ: ತಂದೆಯ ಕನಸಾದ ಒಂದು ಹೊಸ ಯೋಜನೆ ನಿಮ್ಮಿಂದ ಪ್ರಾರಂಭಿಸಲ್ಪಡುವುದು. ದೈವ ಕಾರ್ಯಗಳನ್ನು ನೆರವೇರಿಸುವುದು ಉತ್ತಮ. ರಾಜಕೀಯ ನಡೆಯಲ್ಲಿ ಉತ್ತಮ ಭವಿಷ್ಯವಿದೆ. ವಾಹನ ಓಡಿಸುವಾಗ ಜಾಗ್ರತರಾಗಿರಿ.

ಮಿಥುನ: ಆಲಸ್ಯಕರವಾದ ದೇಹ ಸ್ಥಿತಿಯಿಂದ ಕೆಲಸ ಕಾರ್ಯ ವಿಳಂಬಗತಿಯಲ್ಲಿ ಸಾಗಲಿದೆ. ಆದರೂ ಉದ್ಯೋಗಕ್ಕೆ ಸಂಬಂಧಿಸಿದಂತೆ ಬಾಕಿ ಇರುವ ಕೆಲಸಗಳನ್ನು ಈ ದಿನದಲ್ಲಿ ಪೂರ್ತಿಗೊಳಿಸುವ ಪ್ರಯತ್ನ ಮಾಡಿ.

ಕರ್ಕಾಟಕ: ಕಾನೂನು ವಿದ್ಯಾರ್ಥಿಗಳು ವ್ಯಾಸಂಗದಲ್ಲಿ ಹೆಚ್ಚಿನ ಪ್ರಗತಿಯನ್ನು ಹೊಂದುವರು. ನೀವು ಪಾಲಿಸುತ್ತಿರುವ ತಂತ್ರಗಳು ಶೀಘ್ರ ಫಲ ಕೊಡಲಿವೆ. ವೃತ್ತಿಗೆ ಸಂಬಂಧಿಸಿದಂತೆ ಕೆಲವೊಂದು ಉಪಯುಕ್ತ ಮಾಹಿತಿ ಲಭಿಸುವುವು.

ಸಿಂಹ: ನೌಕರ ವರ್ಗದವರ ಕಠಿಣ ದುಡಿಮೆಗೆ ಸೂಕ್ತ ಪ್ರತಿಫಲ ದೊರೆಯುವುದು. ವೈವಾಹಿಕ ಜೀವನವು ಸುಗಮವಾಗಿ ನಡೆಯುವುದು. ಮಾತೃವರ್ಗದವರಿಂದ ಆಯಾಚಿತವಾಗಿ ನೆರವು ಸಿಕ್ಕಿ ಅನ್ಯರಲ್ಲಿನ ಋಣ ಪರಿಹಾರವಾಗಲಿದೆ.

ಕನ್ಯಾ: ಹಿರಿಯರ ಆರೋಗ್ಯವು ಸುಧಾರಣೆ ಹಂತದಲ್ಲಿರುವುದು. ಹಿಂದಿನ ದಿನಗಳ ಪರಿಶ್ರಮದ ಫಲವನ್ನು ಈ ದಿನ ಪಡೆಯುವ ಸಾಧ್ಯತೆ ಇದೆ. ಹೂಡಿಕೆಯ ವಿಚಾರದಲ್ಲಿ ಎಚ್ಚರಿಕೆಯಿಂದ ತೀರ್ಮಾನವನ್ನು ಕೈಗೊಳ್ಳುವುದು ಉತ್ತಮ.

ತುಲಾ: ಹಣಕಾಸಿನ ವ್ಯವಹಾರದಲ್ಲಿ ಪಾಲುದಾರಿಕೆ ಪಡೆಯುವ ಬಗ್ಗೆ ಯೋಚಿಸಲು ಸರಿಯಾದ ಸಮಯ. ಈ ದಿನ ರಾಜಕೀಯ ಗುರುವಿನ ನೆರವಿನಿಂದ ಮತ್ತು ಆರ್ಥಿಕ ಬಲದಿಂದ ನೆರವೇರುವುದು.

ವೃಶ್ಚಿಕ: ಹಿಂದೆ ಮಾಡಿದ ತಪ್ಪುಗಳು ಪುನರಾವರ್ತನೆಯಾಗದಂತೆ ಎಚ್ಚರ ವಹಿಸಿ. ಮಿತವ್ಯಯ ಸಾಧಿಸಲು ಪ್ರಯತ್ನಿಸಿ. ಸ್ವತ್ತು ವಿಚಾರ ದಲ್ಲಿ ಬಂಧುಗಳು ನೆರವಿಗೆ ಬರಲಿದ್ದು ತಂದೆಯವರ ಮಾತಿನಂತೆ ನಡೆಯಲು ಒಪ್ಪುವಿರಿ.

ಧನು: ಜಮೀನು ಅಥವಾ ನಿವೇಶನ ಖರೀದಿಸುವ ಯೋಜನೆ ಹಾಕಿಕೊಳ್ಳುವಿರಿ. ವಿದ್ಯಾರ್ಥಿಗಳಿಗೆ ಸರ್ವತೋಮುಖ ಅಭಿವೃದ್ಧಿ ಕಂಡುಬರುವುದು. ಕಾರ್ಮಿಕ ಜನರಿಗೆ ಆಡಳಿತ ವರ್ಗದವರಿಂದ ಅನುಕೂಲಗಳು ಉಂಟಾಗಲಿದೆ.

ಮಕರ: ಉತ್ತಮ ಸಂತಾನ ಪ್ರಾಪ್ತಿಯಾಗಲಿದ್ದು, ಸಂಸಾರದಲ್ಲಿ ಸಂತೃಪ್ತ ಜೀವನ ನಡೆಸುವಿರಿ. ಸಮಸ್ಯೆಗಳನ್ನು ನಾಜೂಕಾಗಿ ಬಗೆಹರಿಸಿಕೊಳ್ಳುವಿರಿ. ಆತ್ಮಸ್ಥೈರ್ಯ ಹೆಚ್ಚಾಗಿ ಕೆಲಸ ಕಾರ್ಯಗಳನ್ನು ಹುರುಪಿನಿಂದ ಸಾಗುವುದು.

ಕುಂಭ: ವಿದ್ವಾಂಸರೊಡನೆ ಕೆಲ ಹೊತ್ತು ಕಳೆಯುವ ಸಂಭವವಿರುವುದರ ಫಲವಾಗಿ ಸಂಶಯ ನಿವಾರಣೆಯಾಗುವುದರ ಜತೆಗೆ ಜ್ಞಾನಾರ್ಜನೆಯಾಗುವುದು. ಜಮೀನಿನ ಕೆಲಸಗಳು ಯಾವುದೇ ತೊಂದರೆ ಇಲ್ಲದೆ ನೆರವೇರಲಿವೆ.

ಮೀನ: ಜೀವನ ಶೈಲಿಯಲ್ಲಿ ಬದಲಾವಣೆಯನ್ನು ಬಯಸಿದರೆ ಕಾಯುವುದು ಅವಶ್ಯವಾಗುತ್ತದೆ. ರಸ್ತೆ ಕಾಮಗಾರಿ ಟೆಂಡರ್‌ನಂಥ ಉದ್ಯೋಗ ನಡೆಸುವವರಿಗೆ ಸರ್ಕಾರದಿಂದ ಗುತ್ತಿಗೆ ಪ್ರಾಪ್ತಿಯಾಗಬಹುದು.

ಷೇರುಪೇಟೆ ವಹಿವಾಟು 389



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,609
ಇಂದಿನ ಅಂತ್ಯ	18,496
▼	113
ದಿನದ ಕನಿಷ್ಠ	18,410

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು
1ನೇ ದರ್ಜೆ ₹16000-20000
2ನೇ ದರ್ಜೆ ₹12000-15000

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹535
12 ಮೊಟ್ಟೆಗೆ	₹70
ಮೈಸೂರು	
100 ಮೊಟ್ಟೆಗೆ	₹535

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1515 (1515)
ಸೋಯಾ (ರಿಫೈನ್ಡ್)	₹1235 (1230)
ಸೂರ್ಯಕಾಂತಿ (ರಿಫೈನ್ಡ್)	₹1360 (1380)
ಪಾಮೋಲಿನ್	₹932 (930)

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹140
ಆರ್‌ಎಸ್‌ಎಸ್-5	₹132
ಗುಡ್ ಲಾಟ್	₹125

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹1500-2200
ಮಧ್ಯಮ	₹1000-1500
ಸಣ್ಣ	₹500-1000

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹377-712
ದ್ವಿತಳಿ (ಬಿ.ವಿ)	₹444-821

ಮಾರಾಟದ ಒತ್ತಡ: ಇಳಿದ ಸೆನ್ಸೆಕ್ಸ್

ಷೇರುಪೇಟೆಗಳ ವಾರದ ವಹಿವಾಟು ನಕಾರಾತ್ಮಕ ಅಂತ್ಯ

ಮುಂಬೈ (ಪಿಟಿಐ): ಐ.ಟಿ. ಮತ್ತು ಇಂಧನ ವಲಯದ ಷೇರುಗಳು ಮಾರಾಟದ ಒತ್ತಡಕ್ಕೆ ಒಳಗಾಗಿದ್ದರಿಂದ ಶುಕ್ರವಾರದ ವಹಿವಾಟಿನಲ್ಲಿ ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 389 ಅಂಶ ಇಳಿಕೆ ಕಂಡಿತು.

ಕಚ್ಚಾ ತೈಲ ದರ ಏರಿಕೆ ಮತ್ತು ವಿದೇಶಿ ಬಂಡವಾಳ ಹೊರಹರಿವು ವಹಿವಾಟಿನ ಮೇಲೆ ಹೆಚ್ಚು ಪರಿಣಾಮ ಬೀರಿತು ಎಂದು ವರ್ತಕರು ಹೇಳಿದ್ದಾರೆ. ಬಿಎಸ್‌ಇ ಸೆನ್ಸೆಕ್ಸ್ ವಹಿವಾಟಿನ ಆರಂಭವು ಉತ್ತಮವಾಗಿತ್ತು. ಆ ಬಳಿಕ ಮಾರಾಟದ ಒತ್ತಡದಿಂದಾಗಿ 389 ಅಂಶ ಇಳಿಕೆ ಕಂಡು 62,181 ಅಂಶಗಳಿಗೆ ತಲುಪಿತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 113 ಅಂಶ ಇಳಿಕೆ ಕಂಡು 18,496 ಅಂಶಗಳಲ್ಲಿ ವಹಿವಾಟು ಅಂತ್ಯಗೊಳಿಸಿತು.

ಜಾಗತಿಕ ಆರ್ಥಿಕ ಹಿಂಜರಿತದ ಆತಂಕದಿಂದಾಗಿ ವಹಿವಾಟು ಇಳಿಕೆ ಕಾಣುವ ಸಾಧ್ಯತೆ ಎದುರಾಗಿದೆ. ಈ ಕಾರಣದಿಂದಾಗಿ ಐ.ಟಿ. ಕಂಪನಿಗಳ ಷೇರುಗಳು ನಷ್ಟ ಕಾಣುವಂತಾಯಿತು. ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳ ಷೇರುಗಳು ಸಹ ಅತಿಯಾದ ಮಾರಾಟದ ಒತ್ತಡಕ್ಕೆ ಒಳಗಾದವು ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ತಂತ್ರಜ್ಞಾನ ಕಂಪನಿಗಳ ಬೆಳವಣಿಗೆಯ ಮುನ್ನೋಟ ದುರ್ಬಲವಾಗಿದೆ. ಹೀಗಾಗಿ ಈ ಕಂಪನಿಗಳ ಷೇರುಗಳ ಮೌಲ್ಯ ಇಳಿಕೆಯು ಮುಂದುವರಿಯಲಿದೆ. ಸರಕುಗಳ ದರ ಕಡಿಮೆ ಆಗಿರುವುದು ಮತ್ತು ಬೇಡಿಕೆ ಸುಧಾರಿಸಿರುವುದರಿಂದ ಎಫ್‌ಎಂಸಿಜಿ ಷೇರುಗಳು ಉತ್ತಮ ವಹಿವಾಟು ನಡೆಸುವ ನಿರೀಕ್ಷೆ ಇದೆ ಎಂದು ಮೋತಿಲಾಲ್ ಓಸ್ವಾಲ್ ಸರ್ವೀಸಸ್‌ನ ಸಣ್ಣ ಹೂಡಿಕೆಗಳ ಸಂಶೋಧನಾ ಮುಖ್ಯಸ್ಥ ಸಿದ್ಧಾರ್ಥ್ ಖೇಮ್ಕಾ ತಿಳಿಸಿದ್ದಾರೆ.

ಬ್ರೆಂಟ್ ಕಚ್ಚಾ ತೈಲ ದರ ಶೇ 0.05ರಷ್ಟು ಹೆಚ್ಚಾಗಿ ಒಂದು ಬ್ಯಾರಲ್‌ಗೆ 76.19 ಡಾಲರ್‌ಗೆ ತಲುಪಿದೆ.

ರೂಪಾಯಿ ಮೌಲ್ಯ 10 ಪೈಸೆ ಹೆಚ್ಚಳ

ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ ಶುಕ್ರವಾರ 10 ಪೈಸೆ ಹೆಚ್ಚಾಗಿ ಒಂದು ಡಾಲರ್‌ಗೆ ₹82.28ರಂತೆ ವಿನಿಮಯಗೊಂಡಿತು.

ಕರೆನ್ಸಿ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಮೌಲ್ಯ ಇಳಿಕೆ ಕಂಡಿದ್ದರಿಂದ ರೂಪಾಯಿ ಮೌಲ್ಯ ಹೆಚ್ಚಾಯಿತು.

ದೇಶಿ ಷೇರುಪೇಟೆ ವಹಿವಾಟು ಇಳಿಕೆ ಮತ್ತು ವಿದೇಶಿ ಬಂಡವಾಳ ಹೊರಹರಿವು ಹೂಡಿಕೆ ಚಟುವಟಿಕೆ ಮೇಲೆ ಪರಿಣಾಮ ಬೀರಿತು ಮತ್ತು ಗಳಿಕೆಯನ್ನು ನಿಯಂತ್ರಿಸಿತು ಎಂದು ವರ್ತಕರು ಹೇಳಿದ್ದಾರೆ.

ಡಾಲರ್ ಎದುರು ರೂಪಾಯಿ ಮೌಲ್ಯವು ₹82.20ರಿಂದ ₹82.80ರ ಆಸುಪಾಸಿನಲ್ಲಿ ಇರುವ ನಿರೀಕ್ಷೆ ಇದೆ ಎಂದು ಮೋತಿಲಾಲ್ ಓಸ್ವಾಲ್ ಫೈನಾನ್ಶಿಯಲ್ ಸರ್ವೀಸಸ್‌ನ ವಿಶ್ಲೇಷಕ ಗೌರಾಂಗ್ ಸೋಮಯ್ಯ ಹೇಳಿದ್ದಾರೆ.

ನವೆಂಬರ್‌ನಲ್ಲಿ ₹14,205 ಕೋಟಿ ಹೂಡಿಕೆ

ಹಣಕಾಸು ಸೇವೆ: ವಿದೇಶಿ ಹೂಡಿಕೆದಾರರ ಆಕರ್ಷಣೆ

ನವದೆಹಲಿ (ಪಿಟಿಐ): ದೇಶದ ಹಣಕಾಸು ಸೇವೆಗಳ ವಲಯವು ವಿದೇಶಿ ಹೂಡಿಕೆದಾರರನ್ನು ಹೆಚ್ಚು ಆಕರ್ಷಿಸುತ್ತಿದೆ. ಈ ವಲಯದಲ್ಲಿ ನವೆಂಬರ್ ತಿಂಗಳಿನಲ್ಲಿ ವಿದೇಶಿ ಬಂಡವಾಳ ಹೂಡಿಕೆದಾರರಿಂದ (ಎಫ್‌ಪಿಐ) ₹ 14,205 ಕೋಟಿ ಬಂಡವಾಳ ಹೂಡಿಕೆ ಆಗಿದೆ.

ಸಾಲ ನೀಡಿಕೆ ಹೆಚ್ಚಾಗಿರುವುದು ಮತ್ತು ವಸೂಲಾಗದ ಸಾಲದ ಪ್ರಮಾಣವು ನಿರ್ವಹಿಸಬಹುದಾದ ಮಟ್ಟದಲ್ಲಿ ಇರುವುದೇ ಇಷ್ಟು ಬಂಡವಾಳ ಒಳಹರಿವಿಗೆ ಪ್ರಮುಖ ಕಾರಣಗಳಾಗಿವೆ. ಲಾಭ ಗಳಿಕೆಯ ಉದ್ದೇಶದಿಂದ ವಿದೇಶಿ ಹೂಡಿಕೆದಾರರು ಅಕ್ಟೋಬರ್‌ನಲ್ಲಿ ಹಣಕಾಸು ಸೇವಾ ಕಂಪನಿಗಳ ಷೇರುಗಳಿಂದ ₹ 4,686 ಕೋಟಿ ಬಂಡವಾಳ ಹಿಂದಕ್ಕೆ ಪಡೆದಿದ್ದರು.

ನ್ಯಾಷನಲ್ ಸೆಕ್ಯುರಿಟೀಸ್ ಡೆಪಾಸಿಟರಿ ಲಿಮಿಟೆಡ್‌ನಲ್ಲಿ (ಎನ್‌ಎಸ್‌ಡಿಎಲ್) ಇರುವ ಮಾಹಿತಿಯ ಪ್ರಕಾರ, ವಿದೇಶಿ

ಬಂಡವಾಳ ಹೂಡಿಕೆದಾರರು ನವೆಂಬರ್‌ನಲ್ಲಿ ದೇಶದ ಷೇರುಪೇಟೆಗಳಲ್ಲಿ ಒಟ್ಟಾರೆ ₹ 36,238 ಕೋಟಿ ಬಂಡವಾಳ ತೊಡಗಿಸಿದ್ದಾರೆ. ಇದರಲ್ಲಿ ಹಣಕಾಸು ಸೇವೆಗಳ ವಲಯವು ₹ 14,205 ಕೋಟಿ ಹೂಡಿಕೆಯನ್ನು ಆಕರ್ಷಿಸಿದೆ. ಇದು ಷೇರುಗಳಲ್ಲಿ ಆಗಿರುವ ಒಟ್ಟು ಹೂಡಿಕೆಯ ಶೇ 39ರಷ್ಟು ಪಾಲು.

ಹಣಕಾಸು ಸೇವೆಗಳ ವಲಯದ ನಿರ್ವಹಣಾ ಸಂಪತ್ತು ಮೌಲ್ಯವು ನವೆಂಬರ್ ತಿಂಗಳ ಅಂತ್ಯಕ್ಕೆ ₹ 16.13 ಲಕ್ಷ ಕೋಟಿ ಆಗಿದೆ.

ಕೆಲವು ವಲಯಗಳಲ್ಲಿ ವಿದೇಶಿ ಹೂಡಿಕೆ (₹ ಕೋಟಿಗಳಲ್ಲಿ)	
ಹಣಕಾಸು ಸೇವೆಗಳು	14,205
ಎಫ್‌ಎಂಸಿಜಿ	3,956
ಮಾಹಿತಿ ತಂತ್ರಜ್ಞಾನ	3,859
ಆಟೊ	3,051
ತೈಲ ಮತ್ತು ಅನಿಲ	2,774

ಗ್ರಾಹಕ ಬಳಕೆ ವಸ್ತುಗಳು ವಲಯದಿಂದ ₹ 1,275 ಕೋಟಿ ಬಂಡವಾಳ ಹೊರಹರಿವು ಆಗಿದೆ. ಅದೇ ರೀತಿ ವಿದ್ಯುತ್ ವಲಯದಿಂದ ₹ 1,100 ಕೋಟಿ ಮತ್ತು ದೂರಸಂಪರ್ಕ ವಲಯದಿಂದ ₹ 1,084 ಕೋಟಿ ಬಂಡವಾಳ ಹೊರಹರಿವು ಆಗಿದೆ.

ಸಾಲ ನೀಡಿಕೆಯು ಶೇ 17ರಷ್ಟು ಬೆಳವಣಿಗೆ ಕಂಡಿದೆ. ದಶಕದ ಕನಿಷ್ಠ ಮಟ್ಟದಲ್ಲಿ ಇದ್ದ ಕಾರ್ಪೊರೇಟ್ ಬಂಡವಾಳ ವೆಚ್ಚವು ಚೇತರಿಕೆ ಕಂಡುಕೊಳ್ಳುವ ಸೂಚನೆ ನೀಡಿದೆ ಎಂದು ಬಜಾಜ್ ಕ್ಯಾಪಿಟಲ್‌ನ ಅಧ್ಯಕ್ಷ ರಾಜೀವ್ ಬಜಾಜ್ ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

‘ಐಪಿಒ’ದಿಂದ ಹಿಂದೆ ಸರಿದ ಸ್ನ್ಯಾಪ್‌ಡೀಲ್ ಕಂಪನಿ

ನವದೆಹಲಿ (ಪಿಟಿಐ): ಸಾಫ್ಟ್‌ಬ್ಯಾಂಕ್ ಒಡೆತನದ ಇ–ಕಾಮರ್ಸ್ ಕಂಪನಿ ಸ್ನ್ಯಾಪ್‌ಡೀಲ್ ತನ್ನ ₹ 1,250 ಕೋಟಿ ಮೊತ್ತದ ಆರಂಭಿಕ ಸಾರ್ವಜನಿಕ ಕೊಡುಗೆಯನ್ನು (ಐಪಿಒ) ಕೈಬಿಟ್ಟಿರುವುದಾಗಿ ಶುಕ್ರವಾರ ಹೇಳಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ತಂತ್ರಜ್ಞಾನ ವಲಯದ ಷೇರುಗಳು ಮಾರಾಟದ ಒತ್ತಡದಲ್ಲಿ ಇರುವ ಬೆನ್ನಲ್ಲೇ, ಸ್ನ್ಯಾಪ್‌ಡೀಲ್ ಕಂಪನಿಯು ಐಪಿಒ ಕುರಿತಾದ ಕರಡು ದಾಖಲೆಪತ್ರಗಳನ್ನು (ಡಿಆರ್‌ಎಚ್‌ಪಿ) ಹಿಂದಕ್ಕೆ ಪಡೆಯಲು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಗೆ (ಸೆಬಿ) ಮನವಿ ಸಲ್ಲಿಸಿದೆ.

ಸದ್ಯದ ಮಾರುಕಟ್ಟೆ ಪರಿಸ್ಥಿತಿಯನ್ನು ಗಮನದಲ್ಲಿ ಇಟ್ಟುಕೊಂಡು ಡಿಆರ್‌ಎಚ್‌ಪಿ ಹಿಂದಕ್ಕೆ ಪಡೆಯಲು ಕಂಪನಿ ನಿರ್ಧರಿಸಿದೆ. ಮಾರುಕಟ್ಟೆ ಪರಿಸ್ಥಿತಿಗೆ ಅನುಗುಣವಾಗಿ ಬಂಡವಾಳದ ಬೆಳವಣಿಗೆಯ ಅಗತ್ಯದ ಆಧಾರದ ಮೇಲೆ ಮುಂಬರುವ ದಿನಗಳಲ್ಲಿ ಐಪಿಒಗೆ ಬರುವ ಬಗ್ಗೆ ಕಂಪನಿ ಪರಿಶೀಲಿಸಲಿದೆ ಎಂದು ಸ್ನ್ಯಾಪ್‌ಡೀಲ್ ವಕ್ತಾರರೊಬ್ಬರು ತಿಳಿಸಿದ್ದಾರೆ. ಕಂಪನಿಯು 2021ರ ಡಿಸೆಂಬರ್‌ನಲ್ಲಿ ಸೆಬಿಗೆ ದಾಖಲೆಪತ್ರ ಸಲ್ಲಿಸಿತ್ತು.

ಬೋಟ್, ಫಾರ್ಮ್‌ಈಸಿ ಮತ್ತು ಡ್ರೂಮ್ ಕಂಪನಿಗಳು ಐಪಿಒ ನಡೆಸುವ ತಮ್ಮ ಯೋಜನೆಯನ್ನು ಈಗಾಗಲೇ ಕೈಬಿಟ್ಟಿವೆ.

ಐಟಿಸಿಯ ಮಾಲೂರಿನ ಘಟಕಕ್ಕೆ ಶ್ರೇಷ್ಠತಾ ಪ್ರಮಾಣಪತ್ರ

ಬೆಂಗಳೂರು: ಐಟಿಸಿ ಲಿಮಿಟೆಡ್ ಕಂಪನಿಯು ಕೋಲಾರ ಜಿಲ್ಲೆಯ ಮಾಲೂರಿನಲ್ಲಿ ಹೊಂದಿರುವ ಆಹಾರ ತಯಾರಿಕಾ ಘಟಕವು ‘ಎಡಬ್ಲ್ಯುಎಸ್ ಪ್ಲಾಟಿನಂ–ಲೆವೆಲ್’ ಪ್ರಮಾಣಪತ್ರ ಪಡೆದ ಏಷ್ಯಾದ ಮೊದಲ ಘಟಕ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

ನೀರಿನ ನಿರ್ವಹಣೆಯಲ್ಲಿ ಇದು ವಿಶ್ವದಲ್ಲಿ ಶ್ರೇಷ್ಠ ಮಾನ್ಯತೆ ಎಂದು ಕಂಪನಿಯ ಪ್ರಕಟಣೆ ಹೇಳಿದೆ. ‘ಯಿಪ್ಪಿ!’ ಬ್ರ್ಯಾಂಡ್‌ನ ನೂಡಲ್ ಸಿದ್ಧಪಡಿಸುವ ಈ ಘಟಕವು ಏಕೀಕೃತ ಜಲಾನಯನ ಅಭಿವೃದ್ಧಿ ಯೋಜನೆಯನ್ನು ಕೈಗೊಂಡಿದೆ.

ಐಟಿಸಿ ಕಂಪನಿ ಕೈಗೆತ್ತಿಕೊಂಡಿರುವ ಸುಸ್ಥಿರ ಬೆಳವಣಿಗೆ ಯೋಜನೆಗೆ ಇದು ಅನುಗುಣವಾಗಿದೆ. ಕಂಪನಿಯು 2030ರೊಳಗೆ ತಾನು ಬಳಸುವ ನೀರಿಗಿಂತ ಐದು ಪಟ್ಟು ಹೆಚ್ಚು ಮಳೆನೀರನ್ನು ಸಂಗ್ರಹಿಸುವ ಸಾಮರ್ಥ್ಯ ಹೊಂದುವ ಗುರಿಯನ್ನು ಇಟ್ಟುಕೊಂಡಿದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

2ನೇ ವರ್ಷದ ಚಿರಸ್ಮರಣೆ

ಶ್ರೀ ಎಲ್. ಮಹೇಶ್ (ಬಾಬು)
(BBMP Class-1 Contractor), ಮಲ್ಲೇಶ್ವರಂ, ಬೆಂಗಳೂರು.
ಮರಣ: 10–12–2020
ನೀವು ನಮ್ಮನ್ನು ಅಗಲಿ ಇಂದಿಗೆ 2 ವರ್ಷ ಕಳೆದರೂ ನಿಮ್ಮ ಸವಿ ನೆನಪು ನಮ್ಮ ಹೃದಯಾಂತರಾಳದಲ್ಲಿ ಅಚ್ಚಳಿಯದೆ ಉಳಿದಿದೆ ನಿಮ್ಮ ದಿವ್ಯ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ನೀಡಲಿ.
ತಾಯಿ: ಶ್ರೀಮತಿ ವಿ ರತ್ನಮ್ಮ
ಧರ್ಮಪತ್ನಿ: ಶ್ರೀಮತಿ ದೇವಕಿ ಮಹೇಶ್,
ಪುತ್ರಿ: ಕು ಪೂಜಿತ ನಾರಾಯಣ್, ಪುತ್ರ: ಕು ನಿಶಾಂತ್ ಸೂರ್ಯ,
ದಿ|| ನಂಜಮ್ಮ ಕೆ ಎಂ ಚನ್ನೇಗೌಡರ ಕುಟುಂಬ ಹಾಗು ಬಂಧು ಮಿತ್ರರು.

ಜೋಯಾಲುಕ್ಕಾಸ್: ಸೀಸನ್ ಆಫ್ ಗಿವಿಂಗ್ ಕೊಡುಗೆ

ಬೆಂಗಳೂರು: ಚಿನ್ನಾಭರಣ ಮಾರಾಟ ಕಂಪನಿ ಜೋಯಾಲುಕ್ಕಾಸ್ ‘ಸೀಸನ್ ಆಫ್ ಗಿವಿಂಗ್’ ಅಭಿಯಾನಕ್ಕೆ ಚಾಲನೆ ನೀಡಿದ್ದು, ಇದರ ಭಾಗವಾಗಿ ಗ್ರಾಹಕರಿಗೆ ವಜ್ರಗಳ ಮೇಲೆ ಶೇಕಡ 25ರಷ್ಟು ರಿಯಾಯಿತಿ ಸಿಗಲಿದೆ. ಅಲ್ಲದೆ, ಆಯ್ದ ವಜ್ರಾಭರಣಗಳನ್ನು ವಿಶೇಷ ಬೆಲೆಗೆ ಮಾರಾಟ ಮಾಡಲಾಗುತ್ತದೆ.

ಈ ಕೊಡುಗೆಗಳು ಜೋಯಾಲುಕ್ಕಾಸ್‌ನ ಎಲ್ಲ ಮಳಿಗೆಗಳಲ್ಲಿ ಲಭ್ಯವಿರಲಿವೆ. ‘ಪ್ರತಿ ಆಚರಣೆಯೂ ನಮ್ಮ ಗ್ರಾಹಕರಿಗೆ ಸ್ಮರಣೀಯ ಆಗಿರಬೇಕು ಎಂದು ನಾವು ಬಯಸುತ್ತೇವೆ’ ಎಂದು ಜೋಯಾಲುಕ್ಕಾಸ್ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಜಾಯ್ ಅಲುಕ್ಕಾಸ್ ಹೇಳಿದ್ದಾರೆ.

ಸೀಸನ್ ಆಫ್ ಗಿವಿಂಗ್ ಸಂದರ್ಭದಲ್ಲಿ ಖರೀದಿಸುವ ಆಭರಣಗಳ ಮೇಲೆ ಒಂದು ವರ್ಷದ ಉಚಿತ ವಿಮೆ ಸಿಗಲಿದೆ, ಜೀವನಪರ್ಯಂತ ಉಚಿತ ನಿರ್ವಹಣೆಯ ಕೊಡುಗೆಯೂ ಸಿಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಮುದ್ರೆಮನೆ ಕಾಫಿ

(50 ಕೆಜಿಗೆ)	
ಎಪಿ	₹12900
ಎಸಿ	₹6580
ಆರ್‌ಪಿ	₹8500
ಆರ್‌ಸಿ	₹4530

ಅಡಿಕೆ ದರ: ಎರಡೇ ತಿಂಗಳಿಗೆ ₹ 15 ಸಾವಿರ ಕುಸಿತ

● ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಅಡಿಕೆ ಧಾರಣೆ ಎರಡು ತಿಂಗಳ ಅಂತರದಲ್ಲಿ ₹ 15 ಸಾವಿರದಷ್ಟು ಕುಸಿದಿದೆ. ಮಳೆಯಿಂದಾಗಿ ಹೆಚ್ಚಾದ ಕೊಳೆ ರೋಗ, ಹಳದಿ ಎಲೆ ರೋಗ, ಎಲೆಚುಕ್ಕಿ ರೋಗಗಳ ಬಾಧೆಯಲ್ಲಿ ನಲುಗಿರುವ ರೈತರು ಬೆಲೆ ಕುಸಿತದ ಕಷ್ಟವನ್ನೂ ಅನುಭವಿಸುವಂತಾಗಿದೆ.

ಪ್ರಸಕ್ತ ವರ್ಷದ ಸೆಪ್ಟೆಂಬರ್ ಮೊದಲ ವಾರದಲ್ಲಿ ರೈತರು ಅಧಿಕ ಪ್ರಮಾಣದಲ್ಲಿ ಬೆಳೆಯುವ ರಾಶಿ ಇಡಿ ಪ್ರಕಾರದ ಅಡಿಕೆ ಬೆಲೆ ಕ್ವಿಂಟಲ್‌ಗೆ ₹ 58 ಸಾವಿರ ಇತ್ತು. ಅಕ್ಟೋಬರ್‌ನಲ್ಲಿ ₹ 50 ಸಾವಿರದ ಆಸುಪಾಸು ಇತ್ತು. ನಂತರ ಪ್ರತಿ ವಾರವೂ ಕಡಿಮೆಯಾಗುತ್ತಾ ಸಾಗಿ, ಡಿಸೆಂಬರ್ ಎರಡನೇ ವಾರದಲ್ಲಿ ₹ 39 ಸಾವಿರಕ್ಕೆ ತಲುಪಿದೆ.

2014–15ರಲ್ಲಿ ರಾಶಿ ಇಡಿ ಧಾರಣೆ ₹ 1 ಲಕ್ಷದ ಗಡಿ ಮುಟ್ಟಿ ಸಾರ್ವಕಾಲಿಕ ದಾಖಲೆ ಸೃಷ್ಟಿಸಿತ್ತು.

ನಂತರ ಮತ್ತೆ ಕುಸಿತ ಕಂಡಿತ್ತು. ಕಳೆದ ನಾಲ್ಕು ವರ್ಷಗಳಿಂದ ₹ 50 ಸಾವಿರ ಆಸುಪಾಸಿನಲ್ಲೇ ಸ್ಥಿರತೆ ಕಂಡಿತ್ತು.

ರಾಜ್ಯದಲ್ಲಿ ಪ್ರತಿವರ್ಷ ಸರಾಸರಿ 6 ಲಕ್ಷ ಟನ್ ಅಡಿಕೆ ಉತ್ಪಾದಿಸಲಾಗುತ್ತಿದೆ. ದೇಶದಲ್ಲಿ ಬೆಳೆಯುವ ಅಡಿಕೆಯಲ್ಲಿ ರಾಜ್ಯದ ಪ್ರಮಾಣ ಶೇ 50ಕ್ಕಿಂತ ಹೆಚ್ಚಿದೆ. ರಾಜ್ಯದಲ್ಲಿ ಪ್ರತಿವರ್ಷ ಸುಮಾರು ₹ 30 ಸಾವಿರ ಕೋಟಿ ಮೌಲ್ಯದ ಅಡಿಕೆ ವಹಿವಾಟು ನಡೆಯುತ್ತದೆ.

ದಕ್ಷಿಣ ಏಷ್ಯಾದ ರಾಷ್ಟ್ರಗಳ ಮಧ್ಯೆ ಇರುವ ಪ್ರಾದೇಶಿಕ ಸಹಕಾರ ಒಪ್ಪಂದಗಳ ಲಾಭ ಪಡೆದು ಕಂಪನಿಗಳು ಭೂತಾನ್ ಸೇರಿದಂತೆ ಕೆಲವು ದೇಶಗಳಿಂದ ಅಗ್ಗದ ದರಕ್ಕೆ ಅಡಿಕೆ ಆಮದು ಮಾಡಿಕೊಳ್ಳುತ್ತಿರುವುದು ಧಾರಣೆ ಕುಸಿತಕ್ಕೆ ಕಾರಣ ಎಂದು ಹೇಳುತ್ತಾರೆ ಅಡಿಕೆ ಬೆಳೆಗಾರರ ಸಂಘದ ಅಧ್ಯಕ್ಷ ಬಿ.ಎ. ರಮೇಶ್ ಹೆಗ್ಡೆ.

ಗುಜರಾತ್, ಮಹಾರಾಷ್ಟ್ರ, ದೆಹಲಿ ಸೇರಿದಂತೆ ಉತ್ತರ ಭಾರತದ ಗುಟ್ಕಾ, ಪಾನ್‌ಮಸಾಲ ಕಂಪನಿಗಳೇ ರಾಜ್ಯದ ಅಡಿಕೆಗೆ ಪ್ರಮುಖ ಮಾರುಕಟ್ಟೆ. ಅವಶ್ಯಕತೆ ಇರುವಷ್ಟು ದಾಸ್ತಾನು ಸಂಗ್ರಹವಾದ ನಂತರ ಖರೀದಿ ಸ್ಥಗಿತಗೊಳಿಸುತ್ತಾರೆ ಇದು ಸಹ ಧಾರಣೆ ಕುಸಿತಕ್ಕೆ ಕಾರಣ ಎನ್ನುವುದು ಅಡಿಕೆ ಮಂಡಿ ವರ್ತಕರ ವಿವರಣೆ.

> **ಗುಜರಾತ್ ಸೇರಿ ಹಲವು ರಾಜ್ಯಗಳಲ್ಲಿ ಪಾನ್‌ಮಸಾಲ ತಯಾರಿಕೆ ತಗ್ಗಿದೆ. ಮಾರುಕಟ್ಟೆಯಲ್ಲಿ ಬೇಡಿಕೆ ಕುಸಿದಿರುವುದರಿಂದ ಧಾರಣೆ ಇಳಿಯುತ್ತಿದೆ**
> **ಕೆ.ಸಿ.ಮಲ್ಲಿಕಾರ್ಜುನ್**, ಕಾರ್ಯದರ್ಶಿ, ಅಡಿಕೆ ವರ್ತಕರ ಸಂಘ.

ಅಶ್ಲೀಲ ವಿಡಿಯೊ: ಆದೇಶವಿಲ್ಲದೆ ಕ್ರಮ ಕೈಗೊಳ್ಳಲಾಗದು– ವಾಟ್ಸ್‌ಆ್ಯಪ್

ನವದೆಹಲಿ (ಪಿಟಿಐ): ‘ನ್ಯಾಯಾಂಗದ ಅಧಿಕಾರಿಯೊಬ್ಬರು ಮಹಿಳೆಯೊಂದಿಗೆ ಇರುವ ಅಶ್ಲೀಲ ವಿಡಿಯೊವೊಂದು ವಾಟ್ಸ್‌ಆ್ಯಪ್‌ನಲ್ಲಿ ಹರಿದಾಡಿದ್ದು, ಈ ಸಂಬಂಧ ಸೂಕ್ತ ಆದೇಶ ಹೊರಡಿಸದ ಹೊರತು ಕ್ರಮ ಕೈಗೊಳ್ಳಲು ಸಾಧ್ಯವಿಲ್ಲ’ ಎಂದು ವಾಟ್ಸ್‌ಆ್ಯಪ್ ಶುಕ್ರವಾರ ದೆಹಲಿ ಹೈಕೋರ್ಟ್‌ಗೆ ತಿಳಿಸಿದೆ.

ಈ ಸಂಬಂಧ ಸಲ್ಲಿಕೆಯಾಗಿರುವ ಅರ್ಜಿಯೊಂದನ್ನು ನ್ಯಾಯಮೂರ್ತಿ ಯಶವಂತ್ ವರ್ಮಾ ವಿಚಾರಣೆ ನಡೆಸಿದರು. ‘ನಾವು ಯಾವ ಕೆಲಸವನ್ನು ಮಾಡಲು ಸಾಧ್ಯವಿಲ್ಲವೊ ಆ ಕೆಲಸ ಮಾಡಬೇಕೆಂದು ಅರ್ಜಿದಾರರು ನಿರೀಕ್ಷಿಸುತ್ತಿದ್ದಾರೆ. ಸೂಕ್ತ ಮೊಬೈಲ್ ಸಂಖ್ಯೆಗಳನ್ನು ಒದಗಿಸದಿದ್ದರೆ ಆರೋಪಿಗಳ ವಿರುದ್ಧ ನಾವು ಯಾವ ಕ್ರಮವನ್ನೂ ಕೈಗೊಳ್ಳಲು ಆಗುವುದಿಲ್ಲ. ಅರ್ಜಿದಾರರು ನ್ಯಾಯಾಲಯಕ್ಕೆ ಮಾಹಿತಿ ನೀಡಿದ್ದಾರೆ. ಹೀಗಾಗಿ ನ್ಯಾಯಾಲಯವೇ ಏನಾದರೂ ಕ್ರಮ ತೆಗೆದುಕೊಳ್ಳಬೇಕು’ ಎಂದು ವಾಟ್ಸ್‌ಆ್ಯಪ್ ಪರವಾಗಿ ನ್ಯಾಯಾಲಯಕ್ಕೆ ಹಾಜರಾಗಿದ್ದ ವಕೀಲ ಕಪಿಲ್ ಸಿಬಲ್ ತಿಳಿಸಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

✓ ಕರ್ನಾಟಕದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80000. 7760014526, 7795199673

✓ ತಕ್ಷಣ ಬೇಕಾಗಿದ್ದಾರೆ: ಟಾಟಾಮೋಟಾರ್ಸ್, ಟಯೋಟಾ, ಬ್ರಿಟಾನಿಯಾ, ಆನ್‌ಲೈನ್‌ಗಳಿಗೆ SSLC,PUC,Degree-Diplomaದವರುಗಳು (ವಿದ್ಯಾರ್ಹತೆಯಿಲ್ಲದವರಿಗೂ) 18,000- 56,000/- ವಸತಿಯೂಟದೊಂದಿಗೆ 9035520339/ 9036125229

ಸುವರ್ಣಾವಕಾಶ ಕರ್ನಾಟಕದಾದ್ಯಂತ ಹೆಸರಾಂತ ಕಂಪನಿಗಳಿಗೆ ಹಾಗು ಆಫೀಸ್‌ಗಳಿಗೆ ವಿದ್ಯಾರ್ಹತೆಯಿರುವ ಹಾಗು ಇಲ್ಲದ ಯುವಕ/ಯುವತಿಯರು ಬೇಕಾಗಿದ್ದಾರೆ, Salary+OT 15,800 to 29,000. ಸಂಪರ್ಕಿಸಿ: 7996055015

Drivers

ಪ್ರಮುಖ ಟ್ಯಾಕ್ಸಿ ಕಂಪನಿಗೆ ಡ್ರೈವರ್ ಬೇಕಾಗಿದ್ದಾರೆ (ತಕ್ಷಣವೇ ಸೇರುವಿಕೆ) ಬೆಂಗಳೂರಿನಾದ್ಯಂತ ಮುಕ್ತ ಸ್ಥಾನ ಆಟೋಮ್ಯಾಟಿಕ್ ಕಾರ್: ಒತ್ತಡ ಮುಕ್ತ ಚಾಲನೆ ಸಂಬಳ : 18000-20000 ಪ್ರತಿ ತಿಂಗಳು + ಕುಟುಂಬಕ್ಕೆ ಖಾಸಗಿ ವಿಮೆ + ಮಕ್ಕಳ ಶೈಕ್ಷಣಿಕ ಬೆಂಬಲ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 08047106868

Marketing & Sales

SALES & MARKETING EXECUTIVES Urgently required for reputed Company. Young target oriented preferable. ATTRACTIVE SALRY & INCENTIVES .Send resumes to whatsApp : +919440807570.

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ತಕ್ಷಣ: 9611224633/9611225344

✓ ಮನೆಯಿಂದಲೇ ಕೆಲಸ. ವಿದ್ಯಾರ್ಥಿಗಳಿಗೆ, ಗೃಹಿಣಿಯರಿಗೆ ಮತ್ತು ವಯಸ್ಕರಿಗೆ ಮನೆಯಲ್ಲಿಯೇ ಕುಳಿತು ತಮ್ಮ ಬಿಡುವಿನ ವೇಳೆಯಲ್ಲಿ ನಾವು ಕೊಡುವ ಫಾರಂನಲ್ಲಿ ಅಕ್ಷರ ಮತ್ತು ಅಂಕಿಗಳನ್ನು ತುಂಬುವ ಮೂಲಕ ತಿಂಗಳಿಗೆ 15,000- 20,000 ಗಳಿಸುವ ಸುವರ್ಣಾವಕಾಶ. ಗ್ರಾಮೀಣ ಅಭ್ಯರ್ಥಿಗಳಿಗೆ ಕೊರಿಯರ್ ಸೌಲಭ್ಯವಿದೆ. ತಕ್ಷಣ ಸಂಪರ್ಕಿಸಿ: 9611225388/ 9611225266

✓ ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ 15,000-20,000/- ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 8884777502, 8884777503.

ರಿಯಲ್ ಎಸ್ಟೇಟ್ ಸೆಲ್ಲಿಂಗ್

Old Airport Road

2BHK 1100 SFT White marble Flooring Adjacent to Old Airport Rd Car Prkg and Semi FurnMurugeshpalya for IMMEDIATE SALE CONTACT 9701378389 NO Brokers

Sites

Mysore

15X25 METERS, KHB Colony, Hootagalli, Adjacent to Vijayanagar 4th Stage, Near Hunsur Road, Mysuru. 8748027590

ಬಿಲ್ಡರ್ ಎಸೆನ್ಷಿಯಲ್

Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ಭವಿಷ್ಯ

Astrology

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100%ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್. ಉಚಿತ:ಭವಿಷ್ಯ:ಖಚಿತ:ಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು ಶ್ರೀಕ್ಷೇತ್ರಧರ್ಮಸ್ಥಳ: 9900510171

ಪ್ರವಾಸ

Travel Agencies

6 ದಿನಗಳ ದುಬೈ ಶಾಪಿಂಗ್ ಫೆಸ್ಟಿವಲ್ ದುಬೈ,ಅಬುದಾಬಿ ಶಾರ್ಜಾ. 11 ದಿನಗಳ ರಾಜಸ್ಥಾನ್ ಸ್ಪೆಷಲ್. 9 ದಿನಗಳ ಗುಜರಾತ್ ಪ್ರವಾಸ. 3 ದಿನಗಳ ಅಹೋಬಿಲಂ ಪ್ರವಾಸ. ವಿವರಗಳಿಗೆ ಸಂಪರ್ಕಿಸಿ ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್ 9900080793 9880079588

Travel

27.01.2023ರಿಂದ 15ದಿನಗಳ 4`ಜ್ಯೋತಿರ್ಲಿಂಗ`ಸಮೇತ ದ್ವಾರಕಾ,ಅಹಮದಾಬಾದ್, ಮಾತೃಗಯಾ,ರನ್`ಆಫ್`ಕಚ್, ಪಾವಘಡ,ಭುಜ್` ವಿಮಾನ`ಮತ್ತು`AC`ಬಸ್ಸು 28.12.2022ರಿಂದ ಪಂಚರಾಮಕ್ಷೇತ್ರ`ಸಮೇತ ಭದ್ರಾಚಲಂ,ರಾಮಾನುಜ`ಪ್ರತಿಮೆ ವಿಶಾಖಪಟ್ಟಣ,ಹೈದರಾಬಾದ್ 13ದಿನಗಳು`AC`ಬಸ್ಸಿನಲ್ಲಿ ಏಷ್ಯನ್`ಟ್ರಾವೆಲ್`ಲೈನ್ಸ್. 164/3,ಅರ್.ವಿ.ರಸ್ತೆ, ಬೆಂಗಳೂರು~04. ಸಂಪರ್ಕಿಸಿ:`ಷಣ್ಮುಗಾನಂದ~ 8105657052/ 9480182865.

28.01.2023ರಿಂದ 7/9ದಿನಗಳ ವಿಮಾನ,AC`ಬಸ್ಸಿನಲ್ಲಿ ಕಾಶಿವಿಶ್ವನಾಥ,ಬೈದ್ಯನಾಥ್, 2`ಜ್ಯೋತಿರ್ಲಿಂಗ`ಸಮೇತ ಅಯೋಧ್ಯ,ಅಲಹಾಬಾದ್, ಗಯಾ.ಹಾಗೂ`7/9ದಿನಗಳ ರಾಮೇಶ್ವರ,ಕನ್ಯಾಕುಮಾರಿ, ಮದುರೈ,ನವಗ್ರಹ ಏಷ್ಯನ್`ಟ್ರಾವೆಲ್`ಲೈನ್ಸ್. 164/3,ಅರ್.ವಿ.ರಸ್ತೆ ಬೆಂಗಳೂರು~04. ಸಂಪರ್ಕಿಸಿ:`ಷಣ್ಮುಗಾನಂದ~ 8105657052/ 9480182865.

Pilgrimage Tours

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್3/1/23 ಪೂರಿ ಜಗನ್ನಾಥ್, ಕೋನಾರ್ಕ್, ಭುನೇಶ್ವರ್ 4/1/23 ಕಾಶಿ ಯಾತ್ರೆ.18/1/23 ರಾಯಲ್ ರಾಜಸ್ಥಾನ 9964527782, 9591017782

Book Your Classifieds Ads Online Log in to dhclassifieds.com
Contact : 9845114560 : 9731810277 9901641752 : 9886213331 080 - 45557163 / 164
DH DECCAN HERALD ಪ್ರಜಾವಾಣಿ

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಎಸ್‌ಐಪಿ ಮೂಲಕ ದಾಖಲೆ ಹೂಡಿಕೆ

ನವದೆಹಲಿ (ಪಿಟಿಐ): ವ್ಯವಸ್ಥಿತ ಹೂಡಿಕೆ ಯೋಜನೆಗಳ (ಎಸ್‌ಐಪಿ) ಮೂಲಕ ಮ್ಯೂಚುವಲ್ ಫಂಡ್‌ಗಳಲ್ಲಿ ನವೆಂಬರ್‌ನಲ್ಲಿ ಸಾರ್ವಕಾಲಿಕ ದಾಖಲೆಯ ₹ 13,306 ಕೋಟಿ ಬಂಡವಾಳ ಹೂಡಿಕೆ ಆಗಿದೆ. ಹೂಡಿಕೆದಾರರಲ್ಲಿ ಪ್ರಬುದ್ಧತೆ ಮತ್ತು ವಿಶ್ವಾಸ ಹೆಚ್ಚಾಗುತ್ತಿರುವುದನ್ನು ಇದು ಸೂಚಿಸುತ್ತಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಆದರೆ, ಈಕ್ವಿಟಿ ಆಧಾರಿತ ಮ್ಯೂಚುವಲ್ ಫಂಡ್ ಯೋಜನೆಗಳಲ್ಲಿ ನವೆಂಬರ್ ತಿಂಗಳಿನಲ್ಲಿ ಆಗಿರುವ ಹೂಡಿಕೆಯು ಅಕ್ಟೋಬರ್ ತಿಂಗಳ ಹೂಡಿಕೆಗೆ ಹೋಲಿಸಿದರೆ ಶೇಕಡ 76ರಷ್ಟು ಕುಸಿದಿದೆ. ನವೆಂಬರ್‌ನಲ್ಲಿ ₹ 2,258 ಕೋಟಿ ಬಂಡವಾಳ ಹೂಡಿಕೆ ಆಗಿದೆ ಎಂದು ಭಾರತೀಯ

ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟ (ಎಎಂಎಫ್‌ಐ) ಶುಕ್ರವಾರ ತಿಳಿಸಿದೆ.

ಅಕ್ಟೋಬರ್‌ನಲ್ಲಿ ಎಸ್‌ಐಪಿ ಮೂಲಕ ಎಲ್ಲ ಮ್ಯೂಚುವಲ್ ಫಂಡ್‌ಗಳಲ್ಲಿ ₹ 13,041 ಕೋಟಿ ಹೂಡಿಕೆ ಆಗಿತ್ತು. ಮೇ ತಿಂಗಳಿನಿಂದ ಈಚೆಗೆ ಎಸ್‌ಐಪಿ ಮೂಲಕ ಪ್ರತಿ ತಿಂಗಳು ₹ 12 ಸಾವಿರ ಕೋಟಿಗಿಂತಲೂ ಹೆಚ್ಚಿಗೆ ಬಂಡವಾಳ ಹೂಡಿಕೆ ಆಗುತ್ತಿದೆ. ಪ್ರಸಕ್ತ ಹಣಕಾಸು ವರ್ಷದ ಎಂಟು ತಿಂಗಳಿನಲ್ಲಿ ಒಟ್ಟಾರೆ ಒಳಹರಿವು ₹ 87,275 ಕೋಟಿ ಆಗಿದೆ.

‘ಎಸ್‌ಐಪಿ ಮೂಲಕ ಹೂಡಿಕೆಯು ನಿರಂತರವಾಗಿ ಹೆಚ್ಚಾಗುತ್ತ ಇರುವುದು ಭಾರತದ ಈಕ್ವಿಟಿ ಮಾರುಕಟ್ಟೆಗಳಲ್ಲಿ ಕಂಡುಬಂದಿರುವ ಆರೋಗ್ಯಕರ ಬೆಳವಣಿಗೆ. ಸಣ್ಣ ಹೂಡಿಕೆದಾರರ ಪಾಲಿಗೆ ಅತ್ಯಂತ ಒಳ್ಳೆಯ ಹೂಡಿಕೆ ಆಯ್ಕೆ ಎಸ್‌ಐಪಿ ಎಂಬುದು ಈಗಾಗಲೇ ಸಾಬೀತಾಗಿರುವ ಅಂಶ’ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ಹೇಳಿದ್ದಾರೆ. ಮಾರುಕಟ್ಟೆಗಳಲ್ಲಿ ಕುಸಿತ ಕಂಡು ಬಂದಾಗ ಹೂಡಿಕೆದಾರರು ಎಸ್‌ಐಪಿ ನಿಲ್ಲಿಸಬಾರದು ಎಂದು ಸಲಹೆ ನೀಡಿದ್ದಾರೆ.

ವಿದೇಶಿ ಹೂಡಿಕೆದಾರರು ಲಾಭ ಗಳಿಕೆಯ ಉದ್ದೇಶದಿಂದ ಷೇರುಗಳನ್ನು ಮಾರಾಟ ಮಾಡುತ್ತಿದ್ದರೂ, ದೇಶಿ ಹೂಡಿಕೆದಾರರು ಎಸ್‌ಐಪಿ ಮೂಲಕ ಹಣ ತೊಡಗಿಸುತ್ತಿರುವುದು ಸಾರ್ವಕಾಲಿಕ ದಾಖಲೆಯ ಮಟ್ಟದಲ್ಲಿ ಇದೆ. ಇದು ದೇಶಿ ಹೂಡಿಕೆದಾರರು ಹೆಚ್ಚು ಪ್ರಬುದ್ಧರಾಗುತ್ತಿದ್ದಾರೆ ಎಂಬುದನ್ನು ತೋರಿಸುತ್ತಿದೆ ಎಂದು ಎಲ್‌ಕೆಪಿ ಸೆಕ್ಯುರಿಟೀಸ್‌ನ ಸಂಶೋಧನಾ ಮುಖ್ಯಸ್ಥ ಎಸ್. ರಂಗನಾಥನ್ ಹೇಳಿದ್ದಾರೆ.

ಮ್ಯೂಚುವಲ್ ಫಂಡ್ ಕಂಪನಿಗಳಲ್ಲಿ ಆರಂಭವಾಗಿರುವ ಎಸ್‌ಐಪಿ ಖಾತೆಗಳ ಸಂಖ್ಯೆಯು ಈಗ 6.04 ಕೋಟಿಗೆ ಹೆಚ್ಚಳ ಕಂಡಿದೆ.

ದೇಶದ ಮ್ಯೂಚುವಲ್ ಫಂಡ್ ಉದ್ಯಮದಲ್ಲಿ ಒಟ್ಟು 43 ಕಂಪನಿಗಳು ಇವೆ. ಇಷ್ಟು ಕಂಪನಿಗಳು ನಿರ್ವಹಿಸುತ್ತಿರುವ ಸಂಪತ್ತಿನ ಒಟ್ಟು ಮೌಲ್ಯವು ನವೆಂಬರ್ ಅಂತ್ಯಕ್ಕೆ ₹ 40.37 ಲಕ್ಷ ಕೋಟಿಗೆ ಏರಿಕೆ ಆಗಿದೆ.

ಮುಂಬೈ ಧಾರಣೆ

ಶೇಂಗಾ

9–12-2022

ಜಾವಾ 70/80(ಹೊಸ)	11750-11800
ಜಾವಾ 80/90(ಹೊಸ)	10850-10900
ದಪ್ಪ ಮಧ್ಯಪ್ರದೇಶ(ಹೊಸ)	9300-9400
ದಪ್ಪ ಗುಜರಾತ್(ಹೊಸ)	9950-10050

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1525 (1525)
ಒಂದು ವಾರದ ಡೆಲಿವರಿ	1520 (1520)
ಸೋಯಾ ಕಚ್ಚಾ	1125 (1170)
ಪಾಮ್ ವಾರದ ಡೆಲಿವರಿ	930 (928)
ಸೂರ್ಯಕಾಂತಿ ಎಣ್ಣೆ ಕಚ್ಚಾ	--- (---)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
53,675 (53,650)
ಬೆಳ್ಳಿ ಕೆ.ಜಿ 66.200 (64,450)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಬಂಟ್ವಾಳ	
ಕೋಕ	12500-25000
ಹೊಸತು	27500-38000
ಹಳತು	48000-54500
ಬೆಳ್ತಂಗಡಿ	
ಹೊಸತು	30000-37000
ಹಳತು	40000-48000
ಭದ್ರಾವತಿ	
ರಾಶಿ	36699-40599
ಹೊನ್ನಾಳಿ	
ರಾಶಿ	40500-40500
ಹೊಸನಗರ	
ಬಿಳಿಗೋಟು	20899-22899
ಚಾಲಿ	33799-33799
ಕೆಂಪುಗೋಟು	27121-33299
ರಾಶಿ	39889-41899
ಕಾರ್ಕಳ	
ಹೊಸತು	25000-37500
ಹಳತು	40000-54500
ಕುಮಟ	
ಚಿಪ್ಪು	26019-32006
ಕೋಕ	16199-27989
ಫ್ಯಾಕ್ಟರಿ	10169-19929
ಹಳೆಚಾಲಿ	35699-40599
ಹೊಸಚಾಲಿ	30509-33000
ಶಿರಸಿ	
ಬೆಟ್ಟೆ	38299-42818
ಬಿಳಿಗೋಟು	20199-32014
ಚಾಲಿ	37518-40599
ರಾಶಿ	44079-46599
ಶಿವಮೊಗ್ಗ	
ಗೊರಬಲು	17000-30568
ಹೊಸತು	39109-40599
ರಾಶಿ	39069-44299
ಸರಕು	59069-80112
ಸಿದ್ದಾಪುರ	
ಬಿಳಿಗೋಟು	25099-32608
ಕೋಕ	20229-28699
ಚಾಲಿ	35809-39699
ಕೆಂಪುಗೋಟು	26119-28699
ರಾಶಿ	36409-39899
ತಟ್ಟಿಬೆಟ್ಟೆ	33119-36809
ಶಿರಸಿ	
ಬೆಟ್ಟೆ	35159-40299
ಬಿಳಿಗೋಟು	22399-35018
ಚಾಲಿ	37098-40800
ಕೆಂಪುಗೋಟು	21296-29099
ರಾಶಿ	37299-43129
ಯಲ್ಲಾಪುರ	
ಅಪಿ	50930-53179
ಬಿಳಿಗೋಟು	24899-34319
ಕೋಕ	16109-29499
ಹಳೆ ಚಾಲಿ	32069-40609
ಹೊಸ ಚಾಲಿ	30099-31899
ಕೆಂಪುಗೋಟು	24342-33199
ರಾಶಿ	41670-49899
ತಟ್ಟಿಬೆಟ್ಟೆ	36090-40899

ಹಸಿವಿನಿಂದ ಮೃತಪಟ್ಟ ವರದಿ ಇಲ್ಲ: ಸ್ಮೃತಿ ಇರಾನಿ

ನವದೆಹಲಿ (ಪಿಟಿಐ): ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಜನರು ಹಸಿವಿನಿಂದ ಮೃತಪಟ್ಟ ವರದಿ ಇಲ್ಲ ಎಂದು ಕೇಂದ್ರ ಸರ್ಕಾರ ಶುಕ್ರವಾರ ಲೋಕಸಭೆಯಲ್ಲಿ ಮಾಹಿತಿ ನೀಡಿದೆ.

ಪ್ರಶ್ನೆಯೊಂದಕ್ಕೆ ಉತ್ತರಿಸಿದ ಕೇಂದ್ರ ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಸ್ಮೃತಿ ಇರಾನಿ ಅವರು, ಜಾಗತಿಕ ಹಸಿವು ಸೂಚ್ಯಂಕದಲ್ಲಿ ಭಾರತದ ವಾಸ್ತವ ಸ್ಥಿತಿಯನ್ನು ಸರಿಯಾಗಿ ತಿಳಿಸಿಲ್ಲ ಎಂದು ಹೇಳಿದರು. 2022ನೇ ಸಾಲಿನ ಜಾಗತಿಕ ಹಸಿವು ಸೂಚ್ಯಂಕದಲ್ಲಿ 127 ರಾಷ್ಟ್ರಗಳ ಪೈಕಿ ಭಾರತ 107ನೇ ಸ್ಥಾನ ಪಡೆದಿದೆ.

ವಿದೇಶಿ ವಿನಿಮಯದಲ್ಲಿ ಭಾರಿ ಏರಿಕೆ

ಮುಂಬೈ (ಪಿಟಿಐ): ಭಾರತದ ವಿದೇಶಿ ವಿನಿಮಯ ಮೀಸಲು ಸಂಗ್ರಹವು ಡಿಸೆಂಬರ್ 2ಕ್ಕೆ ಕೊನೆಗೊಂಡ ವಾರದಲ್ಲಿ ₹ 90,200 ಕೋಟಿ ಏರಿಕೆ ಕಂಡಿದ್ದು, ಒಟ್ಟಾರೆ ಮೀಸಲು ಸಂಗ್ರಹವು ₹46.01 ಲಕ್ಷ ಕೋಟಿಗೆ ಏರಿಕೆ ಆಗಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಶುಕ್ರವಾರ ತಿಳಿಸಿದೆ.

ಇದನ್ನೂ ಸೇರಿಸಿದರೆ, ಸತತ ನಾಲ್ಕನೇ ವಾರವೂ ಮೀಸಲು ಸಂಗ್ರಹ ಏರಿಕೆ ಆದಂತಾಗಿದೆ. ನವೆಂಬರ್ 11ಕ್ಕೆ ಕೊನೆಗೊಂಡ ವಾರದ ಬಳಿಕ ಮೀಸಲು ಸಂಗ್ರಹದ ಎರಡನೇ ಗರಿಷ್ಠ ಏರಿಕೆ ಇದಾಗಿದೆ.

ನವೆಂಬರ್ 11ರಂದು ಮೀಸಲು ಸಂಗ್ರಹವು ₹ 1.20 ಲಕ್ಷ ಕೋಟಿಯಷ್ಟು ಏರಿಕೆ ಕಂಡಿತ್ತು.

ವಿದೇಶಿ ಕರೆನ್ಸಿಗಳ ಸಂಗ್ರಹವು ₹ 79,458 ಕೋಟಿಯಷ್ಟು ಏರಿಕೆ ಕಂಡು ₹ 40.75 ಲಕ್ಷ ಕೋಟಿಗೆ ಏರಿಕೆ ಆಗಿರುವುದು ಒಟ್ಟಾರೆ ಸಂಗ್ರಹದಲ್ಲಿ ಭಾರಿ ಏರಿಕೆಗೆ ಕಾರಣವಾಗಿದೆ ಎಂದು ಆರ್‌ಬಿಐ ತಿಳಿಸಿದೆ.

2021ರ ಅಕ್ಟೋಬರ್‌ನಲ್ಲಿ ಮೀಸಲು ಸಂಗ್ರಹವು ಸಾರ್ವಕಾಲಿಕ ದಾಖಲೆ ಮಟ್ಟವನ್ನು ತಲುಪಿತ್ತು. ಆ ಬಳಿಕ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ ಕುಸಿಯುವುದನ್ನು ತಡೆಯಲು ಆರ್‌ಬಿಐ ಕ್ರಮ ಕೈಗೊಂಡಿದ್ದರಿಂದಾಗಿ ಮೀಸಲು ಸಂಗ್ರಹವು ಇಳಿಕೆ ಕಾಣಲಾರಂಭಿಸಿತ್ತು.

ಡಿಸೆಂಬರ್ 2ಕ್ಕೆ ಕೊನೆಗೊಂಡ ವಾರದಲ್ಲಿ ಚಿನ್ನದ ಮೀಸಲು ಸಂಗ್ರಹವು ₹8,856 ಕೋಟಿ ಹೆಚ್ಚಾಗಿ ₹3.36 ಲಕ್ಷ ಕೋಟಿಗೆ ಏರಿಕೆ ಕಂಡಿದೆ.

ಅಂತರರಾಷ್ಟ್ರೀಯ ಹಣಕಾಸು ನಿಧಿಯಲ್ಲಿನ (ಐಎಂಎಫ್) ಭಾರತದ ಮೀಸಲು ಸಂಗ್ರಹವು ₹615 ಕೋಟಿ ಹೆಚ್ಚಾಗಿದ್ದು ₹41,820 ಕೋಟಿಗೆ ಏರಿಕೆ ಆಗಿದೆ ಎಂದು ಆರ್‌ಬಿಐ ತಿಳಿಸಿದೆ.

ರಾಜ್ಯ ಶಾರ್ಟ್‌ಕೋರ್ಸ್ ಈಜು ಚಾಂಪಿಯನ್‌ಶಿಪ್‌ಗೆ ತೆರೆ; ಮಿಂಚಿದ ಧ್ಯಾನ್

ಬಿಎಸಿ, ಡಾಲ್ಫಿನ್‌ಗೆ ಸಮಗ್ರ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ರಾಜ್ಯ ಶಾರ್ಟ್‌ಕೋರ್ಸ್ ಈಜು ಚಾಂಪಿಯನ್‌ಶಿಪ್‌ನ ಜೂನಿಯರ್ ವಿಭಾಗದಲ್ಲಿ ಚಾಂಪಿಯನ್ ಆದ ಬೆಂಗಳೂರಿನ ಬಸವನಗುಡಿ ಈಜು ಕೇಂದ್ರ ತಂಡ –ಪ್ರಜಾವಾಣಿ ಚಿತ್ರ/ ಡಿ.ವಿ.ಧನುಷ್

ಮಂಡ್ಯ: ಬೆಂಗಳೂರಿನ ಬಸವನಗುಡಿ ಈಜು ಕೇಂದ್ರ (ಬಿಎಸಿ) ಮತ್ತು ಡಾಲ್ಫಿನ್ ಅಕ್ವಟಿಕ್ಸ್ ತಂಡಗಳು ರಾಜ್ಯ ಶಾರ್ಟ್‌ಕೋರ್ಸ್ ಈಜು ಚಾಂಪಿಯನ್‌ಶಿಪ್‌ನಲ್ಲಿ ಕ್ರಮವಾಗಿ ಜೂನಿಯರ್ ಮತ್ತು ಸಬ್ ಜೂನಿಯರ್ ವಿಭಾಗಗಳಲ್ಲಿ ಸಮಗ್ರ ಪ್ರಶಸ್ತಿ ಗೆದ್ದುಕೊಂಡವು.

ಪಿಇಟಿ ಈಜುಕೇಂದ್ರದಲ್ಲಿ ಶುಕ್ರವಾರ ಮುಕ್ತಾಯಗೊಂಡ ಕೂಟದ ಜೂನಿಯರ್ ವಿಭಾಗದಲ್ಲಿ ಬಿಎಸಿ ಒಟ್ಟು 816 ಪಾಯಿಂಟ್ಸ್ ಕಲೆಹಾಕಿತು. ಡಾಲ್ಫಿನ್ ಅಕ್ವಟಿಕ್ಸ್ (485) ಮತ್ತು ಗ್ಲೋಬಲ್ ಸ್ವಿಮ್ ಸೆಂಟರ್ (115) ಕ್ರಮವಾಗಿ ಎರಡು ಹಾಗೂ ಮೂರನೇ ಸ್ಥಾನ ಪಡೆದುಕೊಂಡವು.

ಸಬ್ ಜೂನಿಯರ್ ವಿಭಾಗದಲ್ಲಿ ಡಾಲ್ಫಿನ್ ತಂಡ 217 ಪಾಯಿಂಟ್ಸ್‌ಗಳೊಂದಿಗೆ ಅಗ್ರಸ್ಥಾನ ಪಡೆದರೆ, ಬಿಎಸಿ (170) 'ರನ್ನರ್ಸ್ ಅಪ್' ಆಯಿತು. ಡಿಕೆವಿ ಈಜುಕೇಂದ್ರ (93) ಮೂರನೇ ಸ್ಥಾನ ಗಳಿಸಿತು.

ವೈಯಕ್ತಿಕ ಪ್ರಶಸ್ತಿ: ಬಾಲಕರ ವಿಭಾಗದಲ್ಲಿ ಕೃಷ್ಣ ನಂದಕುಮಾರ್ (ಪಿ.ಎಂ.ಈಜುಕೇಂದ್ರ, ಗುಂಪು–3), ಧ್ಯಾನ್ ಎಂ. (ಗ್ಲೋಬಲ್, ಗುಂಪು–1) ಮತ್ತು ಅಕ್ಷಜ್ ಠಾಕೂರಿಯ (ಡಾಲ್ಫಿನ್, ಗುಂಪು–2), ಬಾಲಕಿಯರ ವಿಭಾಗದಲ್ಲಿ ಮೀರಾ ನಂಬಿಯಾರ್ (ಡಾಲ್ಫಿನ್, ಗುಂಪು–3), ನೈಶಾ ಶೆಟ್ಟಿ (ಡಾಲ್ಫಿನ್, ಗುಂಪು–1) ಹಾಗೂ ನೈಶಾ (ಬಿಎಸಿ, ಗುಂಪು–2) ಅವರು ವೈಯಕ್ತಿಕ ಪ್ರಶಸ್ತಿ ಪಡೆದುಕೊಂಡರು.

ಫಲಿತಾಂಶ: ಬಾಲಕರ ವಿಭಾಗ: ಗುಂಪು–1: 400 ಮೀ. ಮೆಡ್ಲೆ: ಪವನ್ ಧನಂಜಯ (ಬಿಎಸಿ, 4 ನಿ. 51.81 ಸೆ.)–1

25 ಮೀ. ಫ್ರೀಸ್ಟೈಲ್: ಧ್ಯಾನ್ ಎಂ. (ಗ್ಲೋಬಲ್, ಕಾಲ: 11.26 ಸೆ.)–1, ರಿಷಭ್ ಸಿಂಗ್ (ಡಾಲ್ಫಿನ್)–2, ಬಾಸಿತ್ ಅಹ್ಮದ್ (ಬಿಸಿಎಸ್ ಎಂಇಜಿ)–3

50 ಮೀ. ಬ್ರೆಸ್ಟ್‌ಸ್ಟ್ರೋಕ್: ಬಾಸಿತ್ ಅಹ್ಮದ್ (ಬಿಎಸ್‌ಸಿ ಎಂಇಜಿ, ಕಾಲ: 31.06 ಸೆ.)–1, ಸೂರ್ಯ ಜೋಯಪ್ಪ (ಬಿಎಸಿ)–2, ಸುಯೋಗ್ ಎಲ್.ಗೌಡ (ನೆಟ್ಟಕಲ್ಲಪ್ಪ ಈಜು ಕೇಂದ್ರ)–3

200 ಮೀ. ಬ್ಯಾಕ್‌ಸ್ಟ್ರೋಕ್: ಆಕಾಶ್ ಮಣಿ (ಬಿಎಸಿ, ಕಾಲ: 2 ನಿ. 11.35 ಸೆ.)–1, ಅಂಕಿತ್ ಭಟ್ (ಡಾಲ್ಫಿನ್)–2, ಡಿ.ಜ್ಞಾನ್ (ಮಂಗಳಾ ಈಜು ಕ್ಲಬ್)–3

100 ಮೀ. ಫ್ರೀಸ್ಟೈಲ್: ಧ್ಯಾನ್ ಎಂ. (ಗ್ಲೋಬಲ್, ಕಾಲ: 53.59 ಸೆ.)–1, ತರುಣ್ ಅರುಣ್ ಗೌಡ (ಬಿಎಸಿ)–2, ಸ್ವಯಂ ಎ. (ಬಿಎಸಿ)–3

4X50 ಮೀ. ಮೆಡ್ಲೆ: ಬಿಎಸಿ (ಕಾಲ: 1 ನಿ.50.80 ಸೆ.)–1, ಬಿಎಸ್‌ಸಿ ಎಂಇಜಿ–2, ಪಿ.ಎಂ.ಈಜು ಕೇಂದ್ರ–3

ಗುಂಪು–2: 400 ಮೀ. ಮೆಡ್ಲೆ: ರಾಘವ್ ಸ್ವಚ್ಛಂದಮ್ (ನೆಟ್ಟಕಲ್ಲಪ್ಪ ಈಜು ಕೇಂದ್ರ, ಕಾಲ: 4 ನಿ.56.60 ಸೆ.)–1, ಸೂರ್ಯ ಜೆ.ಟಿ (ಬಿಎಸಿ)–2, ದಕ್ಷ್ ಮಠ (ಬಿಎಸಿ)–3

25 ಮೀ. ಫ್ರೀಸ್ಟೈಲ್: ಅಕ್ಷಜ್ ಠಾಕೂರಿಯ (ಡಾಲ್ಫಿನ್, ಕಾಲ: 12.60 ಸೆ.)–1, ಷಣ್ಮುಖ್ ಎಂ.ಜಿ (ಬಿಎಸಿ)–2, ದಕ್ಷಣ್ ಎಸ್. (ಬಿಎಸಿ)–3

50 ಮೀ. ಬ್ರೆಸ್ಟ್‌ಸ್ಟ್ರೋಕ್: ಅನ್ಮುಲ್ ಕುಮಾರ್ ನಿಶಾದ್ (ಬಿಎಸ್‌ಸಿ ಎಂಇಜಿ, ಕಾಲ: 32.51 ಸೆ.)–1, ವಿಶಾಖನ್ ಸವರಣನ್ (ಬಿಎಸಿ)–2, ದಕ್ಷ್ ಮಠ (ಬಿಎಸಿ)–3

200 ಮೀ. ಬ್ಯಾಕ್‌ಸ್ಟ್ರೋಕ್: ಅಮನ್ ಸುಂಗರ್ (ಸ್ವಿಮ್ಮರ್ಸ್ ಕ್ಲಬ್ ಬೆಳಗಾವಿ, ಕಾಲ: 2 ನಿ. 13.23 ಸೆ.)–1, ಸೂರ್ಯ ಜೆ.ಟಿ (ಬಿಎಸಿ)–2, ವೇದಾಂತ ವಿ.ಎಂ. (ಬಿಎಸಿ)–3

100 ಮೀ. ಫ್ರೀಸ್ಟೈಲ್: ಅಕ್ಷತ್ ಠಾಕೂರಿಯ (ಡಾಲ್ಫಿನ್, ಕಾಲ: 57.24 ಸೆ.)–1, ರೇಣುಕಾಚಾರ್ಯ ಹೊದ್ಮನಿ (ಬಿಎಸಿ)–2, ನಿಶಾನ್ (ಡಾಲ್ಫಿನ್)–3

4X50 ಮೀ. ಮೆಡ್ಲೆ: ಬಿಎಸಿ 'ಬಿ' (ಕಾಲ: 1 ನಿ. 59.25 ಸೆ.)–1, ಬಿಎಸಿ 'ಎ'–2, ಡಾಲ್ಫಿನ್ 'ಎ'–3

ಬಾಲಕಿಯರ ವಿಭಾಗ: ಗುಂಪು–1: 400 ಮೀ. ಮೆಡ್ಲೆ: ಅನ್ಮು ದೇಶಪಾಂಡೆ (ಡಾಲ್ಫಿನ್, ಕಾಲ: 5 ನಿ. 36.84 ಸೆ.)–1, ಅಂಜನಾ ಶಿವಕುಮಾರ್ (ಬಿಎಸಿ)–2

25 ಮೀ. ಫ್ರೀಸ್ಟೈಲ್: ಲಕ್ಷ್ಮಿ ತ್ರಿವಕ್ರಮ್ ನಿಕಂ (ಬಿಎಸಿ, ಕಾಲ: 13.14 ಸೆ.)–1, ಸಾಕ್ಷಿ ಎಸ್.ದ್ಯಾಮನ್ನವರ್ (ಡಾಲ್ಫಿನ್)–2, ವರ್ಷಾ ಪಿ. ಶ್ರೀಯಾನ್ (ಬಿಎಸಿ)–3

50 ಮೀ. ಬ್ರೆಸ್ಟ್‌ಸ್ಟ್ರೋಕ್: ಮೇಘಾಂಜಲಿ (ಗ್ಲೋಬಲ್, ಕಾಲ: 37.16 ಸೆ.)–1, ಆರಾಧನಾ ಎಸ್.ಗೌಡ (ಡಾಲ್ಫಿನ್)–2, ವರ್ಷಾ ಪಿ.ಶ್ರೀಯಾನ್ (ಬಿಎಸಿ)–3

200 ಮೀ. ಬ್ಯಾಕ್‌ಸ್ಟ್ರೋಕ್: ಆರುಷಿ ಅಗರವಾಲ್ (ಡಾಲ್ಫಿನ್, ಕಾಲ: 2 ನಿ. 29.35ಸೆ.)–1, ಅಂಬರ್ ಜೆ. ಸಿಂಗ್ (ಡಾಲ್ಫಿನ್)–2, ಶ್ರುತಿ ಕೆ.ಆರ್. (ಗ್ಲೋಬಲ್)–3

100 ಮೀ. ಫ್ರೀಸ್ಟೈಲ್: ಲಕ್ಷ್ಮಿ ತ್ರಿವಿಕ್ರಮ್ ನಿಕಂ (ಬಿಎಸಿ, ಕಾಲ: 1 ನಿ. 00.34 ಸೆ.)–1, ಸಾಕ್ಷಿ ಎಸ್. ದ್ಯಾಮನ್ನವರ್ (ಡಾಲ್ಫಿನ್)–2, ಎಂ.ವಿ.ರಿಷಿಕಾ (ಸೌಂದರ್ಯಾ ಈಜು ಕೇಂದ್ರ)–3

ಗುಂಪು–2: 400 ಮೀ. ಮೆಡ್ಲೆ: ಸಬಾ ಸುಹಾನಾ (ಡಾಲ್ಫಿನ್ ಅಕ್ವಟಿಕ್ಸ್, ಕಾಲ: 5 ನಿ. 22.16 ಸೆ.)–1. ತಾನ್ಯಾ ಎಸ್. (ಡಾಲ್ಫಿನ್)–2, ನೈಶಾ (ಬಿಎಸಿ)–3

25 ಮೀ. ಫ್ರೀಸ್ಟೈಲ್: ನೈಶಾ (ಬಿಎಸಿ, ಕಾಲ: 13.49 ಸೆ.)–1, ಚಾರಣಿ ತುಮು (ಗ್ಲೋಬಲ್)–2, ಆರ್ನ ಎಂ.ಪಿ. (ಬಿಎಸಿ)–3

50 ಮೀ. ಬ್ರೆಸ್ಟ್‌ಸ್ಟ್ರೋಕ್: ತಾನ್ಯಾ ಎಸ್. (ಡಾಲ್ಫಿನ್, ಕಾಲ: 36.69 ಸೆ.)–1, ರಿಯಾನಾ ಧೃತಿ ಫೆರ್ನಾಂಡಿಸ್ (ಡಾಲ್ಫಿನ್)–2, ಮಿಹಿಕಾ ದತ್ತಾ (ಡಾಲ್ಫಿನ್)–3

200 ಮೀ. ಬ್ಯಾಕ್‌ಸ್ಟ್ರೋಕ್: ನೈಶಾ, (ಕಾಲ: 2 ನಿ. 30.81 ಸೆ.)–1, ತಾನ್ಯಾ ಎಂ.ಎನ್–2, ನಕ್ಷತಾ ಗೌತಮ್–3 (ಎಲ್ಲರೂ ಬಿಎಸಿ)

100 ಮೀ. ಫ್ರೀಸ್ಟೈಲ್: ಆರ್ನ ಎಂ.ಪಿ. (ಬಿಎಸಿ, ಕಾಲ: 1 ನಿ. 01.38 ಸೆ.)–1, ತಿಸ್ಯಾ ಸೋನರ್ (ಬಿಎಸಿ)–2, ಸುಹಾಸಿನಿ ಘೋಷ್ (ಡಾಲ್ಫಿನ್)–3

ಟಿಟಿ: ತನಿಷ್ಕಾ, ಶ್ರೀರಾಮ್‌ಗೆ ಪ್ರಶಸ್ತಿ

ಪ್ರಶಸ್ತಿಯೊಂದಿಗೆ ಶ್ರೀರಾಮ್ ಮತ್ತು ತನಿಷ್ಕಾ

ಬೆಂಗಳೂರು: ಬಿಟಿಟಿ ತಂಡದ ತನಿಷ್ಕಾ ಕಪಿಲ್ ಭೈರವ್ ಮತ್ತು ಬಿಎನ್‌ಎಂನ ಶ್ರೀರಾಮ್ ಕಿರಣ್ ಅವರು ಸಿವಿಎಲ್ ಶಾಸ್ತ್ರಿ ಸ್ಮಾರಕ ರಾಜ್ಯ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನ ಕ್ರಮವಾಗಿ ಹೋಪ್ಸ್ ಬಾಲಕಿ ಮತ್ತು ಹೋಪ್ಸ್ ಬಾಲಕರ ವಿಭಾಗದಲ್ಲಿ ಪ್ರಶಸ್ತಿ ಜಯಿಸಿದರು.

ಕೆನರಾ ಯೂನಿಯನ್‌ನಲ್ಲಿ ನಡೆಯುತ್ತಿರುವ ಟೂರ್ನಿಯ ಬಾಲಕಿಯರ ಫೈನಲ್ ಪಂದ್ಯದಲ್ಲಿ ಶುಕ್ರವಾರ ತನಿಷ್ಕಾ 11-3, 11-4, 11-5ರಿಂದ ಸ್ಕೈ ತಂಡದ ಐರೇನ್ ಅನ್ನಾ ಸುಭಾಶ್ ವಿರುದ್ಧ ಗೆದ್ದರು.

ಬಾಲಕರ ಪ್ರಶಸ್ತಿ ಸುತ್ತಿನಲ್ಲಿ ಶ್ರೀರಾಮ್ 11-9, 12-10, 12-14, 11-9ರಿಂದ ತಮ್ಮದೇ ತಂಡದ ಸುಧನ್ವ ಜಿ. ರಾವ್ ವಿರುದ್ಧ ಜಯಿಸಿದರು.

ಭಾರತ ಎ ತಂಡಕ್ಕೆ ಗೆಲುವಿನ 'ಸೌರಭ'

ಸಿಲೆಟ್ (ಪಿಟಿಐ): ಎಡಗೈ ಸ್ಪಿನ್ನರ್ ಸೌರಭ್ ಕುಮಾರ್ (74ಕ್ಕೆ6) ಶಿಸ್ತಿನ ದಾಳಿಯ ಬಲದಿಂದ ಭಾರತ ಎ ತಂಡವು ಬಾಂಗ್ಲಾದೇಶ ಎ ವಿರುದ್ಧ ಇನಿಂಗ್ಸ್ ಮತ್ತು 123 ರನ್‌ಗಳಿಂದ ಗೆದ್ದಿತು.

ಇಲ್ಲಿ ನಡೆದ 'ಟೆಸ್ಟ್' ಪಂದ್ಯದಲ್ಲಿ ಭಾರತ 'ಎ' 310 ರನ್‌ಗಳ ಮುನ್ನಡೆ ಸಾಧಿಸಿತ್ತು. ಬಾಂಗ್ಲಾ ಎ ತಂಡವು 2ನೇ ಇನಿಂಗ್ಸ್‌ನಲ್ಲಿ 79.5 ಓವರ್‌ಗಳಲ್ಲಿ 187 ರನ್ ಗಳಿಸಲು ಮಾತ್ರ ಶಕ್ತವಾಯಿತು.

ಈ ಸರಣಿಯ ಮೊದಲ ಪಂದ್ಯದಲ್ಲಿಯೂ ಸೌರಭ್ 5 ವಿಕೆಟ್ ಗಳಿಸಿದ್ದರು. ಉತ್ತರಪ್ರದೇಶದ ಸೌರಭ್ ಈ ಸರಣಿಯಲ್ಲಿ ಒಟ್ಟು 15 ವಿಕೆಟ್‌ಗಳನ್ನು ತಮ್ಮ ಬುಟ್ಟಿಗೆ ಹಾಕಿಕೊಂಡಿದ್ದಾರೆ.

ಆತಿಥೇಯ ತಂಡದ ಶಾದ್ಮನ್ ಇಸ್ಲಾಮ್ (ಔಟಾಗದೆ 93) ಮತ್ತು ಶಹಾದತ್ ಹುಸೇನ್ (29 ರನ್) ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 54 ರನ್ ಸೇರಿಸಿದರು. ಆದರೂ ತಂಡವನ್ನು ಸೋಲಿನ ದವಡೆಯಿಂದ ಪಾರು ಮಾಡಲು ಸಾಧ್ಯವಾಗಲಿಲ್ಲ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಬಾಂಗ್ಲಾದೇಶ ಎ: 252, ಭಾರತ: 9ಕ್ಕೆ562, ಎರಡನೇ ಇನಿಂಗ್ಸ್: ಬಾಂಗ್ಲಾದೇಶ ಎ: 79.5 ಓವರ್‌ಗಳಲ್ಲಿ 187 (ಶಾದ್ಮನ್ ಇಸ್ಲಾಂ ಔಟಾಗದೆ 93, ಸೌರಭ್ ಕುಮಾರ್ 74ಕ್ಕೆ6, ಉಮೇಶ್ ಯಾದವ್ 34ಕ್ಕೆ2, ನವದೀಪ್ ಸೈನಿ 54ಕ್ಕೆ2) ಫಲಿತಾಂಶ: ಭಾರತ ಎ ತಂಡಕ್ಕೆ ಇನಿಂಗ್ಸ್ ಹಾಗೂ 123 ರನ್‌ಗಳ ಜಯ.

ಯೋಧಾಸ್‌ಗೆ ಜಯ

ಹೈದರಾಬಾದ್ (ಪಿಟಿಐ): ಚುರುಕಿನ ಆಟವಾಡಿದ ಯು.ಪಿ.ಯೋಧಾಸ್ ತಂಡದವರು ಪ್ರೊ ಕಬಡ್ಡಿ ಲೀಗ್‌ನಲ್ಲಿ ಗೆಲುವು ಪಡೆದರು.

ಗಚಿಬೌಲಿ ಒಳಾಂಗಣ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಯೋಧಾಸ್ 45–41 ಪಾಯಿಂಟ್ಸ್‌ಗಳಿಂದ ಪುಣೇರಿ ಪಲ್ಟನ್ ತಂಡವನ್ನು ಮಣಿಸಿತು.

ಜೈಪುರ ಪಿಂಕ್ ಪ್ಯಾಂಥರ್ಸ್ ಮತ್ತು ಗುಜರಾತ್ ಜೈಂಟ್ಸ್ ತಂಡಗಳ ನಡುವಿನ ಪಂದ್ಯ 51–51 ಪಾಯಿಂಟ್ಸ್‌ಗಳಿಂದ 'ಟೈ'ನಲ್ಲಿ ಕೊನೆಗೊಂಡಿತು.

ಇಂದಿನ ಪಂದ್ಯಗಳು

ಬೆಂಗಳೂರು ಬುಲ್ಸ್– ಮುಂಬಾ

ತಮಿಳ್ ತಲೈವಾಸ್– ಹರಿಯಾಣ ಸ್ಟೀಲರ್ಸ್

ಪಟ್ನಾ ಪೈರೇಟ್ಸ್– ಬೆಂಗಾಲ್ ವಾರಿಯರ್ಸ್

ಪಾಯಿಂಟ್ಸ್ ಪಟ್ಟಿ

(ಅಗ್ರ ಆರು ತಂಡಗಳು)

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್
ಜೈಪುರ	22	15	6	1	82
ಪುಣೇರಿ	22	14	6	2	80
ಬೆಂಗಳೂರು	21	13	7	1	73
ಯುಪಿ	22	12	8	2	71
ತಲೈವಾಸ್	21	10	7	4	66
ಡೆಲ್ಲಿ	22	10	10	2	63

ಪ್ರಶಸ್ತಿಯೊಂದಿಗೆ ಆರಾಧ್ಯ ಕ್ಷಿತಿಜ್ ಮತ್ತು ಹರ್ಷಿಣಿ ನಾಗರಾಜ್

ಏಷ್ಯನ್ ಜೂನಿಯರ್ ಟೆನಿಸ್ ಹರ್ಷಿಣಿ, ಕ್ಷಿತಿಜ್‌ಗೆ ಪ್ರಶಸ್ತಿ

ಬೆಂಗಳೂರು: ಹರ್ಷಿಣಿ ನಾಗರಾಜ್ ಮತ್ತು ಆರಾಧ್ಯ ಕ್ಷಿತಿಜ್ ಅವರು ಏಷ್ಯನ್ ಜೂನಿಯರ್ ಟೂರ್ 16 ವರ್ಷದೊಳಗಿನವರ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ ಬಾಲಕಿ ಮತ್ತು ಬಾಲಕರ ಸಿಂಗಲ್ಸ್ ವಿಭಾಗಗಳಲ್ಲಿ ಪ್ರಶಸ್ತಿ ಜಯಿಸಿದರು.

ಇಲ್ಲಿಯ ಟಾಪ್‌ಸ್ಪಿನ್ ಅಕಾಡೆಮಿಯಲ್ಲಿ ನಡೆದ ಟೂರ್ನಿಯ ಬಾಲಕಿಯರ ಸಿಂಗಲ್ಸ್ ಫೈನಲ್‌ನಲ್ಲಿ ಶುಕ್ರವಾರ ಹರ್ಷಣಿ 6-2, 6-4ರಿಂದ ಜಯಾ ಕಪೂರ್ ವಿರುದ್ಧ ಜಯಿಸಿದರು. ಬಾಲಕರ ಸಿಂಗಲ್ಸ್ ಪ್ರಶಸ್ತಿ ಸುತ್ತಿನ ಸೆಣಸಾಟದಲ್ಲಿ ಆರಾಧ್ಯ 6-2, 6-4ರಿಂದ ಪಿ. ಲೋಗನಾಥನ್ ಅವರನ್ನು ಸೋಲಿಸಿದರು.

ಬಾಲಕರ ಡಬಲ್ಸ್‌ನಲ್ಲಿ ಶ್ರೀಕರ್ ದೋನಿ ಮತ್ತು ಪಿ. ಶ್ರವಣಕುಮಾ ಚ6-2, 6-4ರಿಂದ ಅರ್ಜುನ್ ಪ್ರೇಮ್‌ಕುಮಾರ್ ಮತ್ತು ಡಿ. ವೆಂಕಟರಾಮನ್ ಅವರನ್ನು ಮಣಿಸಿ ಪ್ರಶಸ್ತಿ ಗೆದ್ದರು. ಬಾಲಕಿಯರ ಡಬಲ್ಸ್ ಫೈನಲ್‌ನಲ್ಲಿ ಮೇಘನಾ ಜಿ.ಡಿ. ಮತ್ತು ಹರಿತಾಶ್ರೀ ವೆಂಕಟೇಶ್ 6-7 (3), 6-1, 10-6ರಿಂದ ಸೆಜಲ್ ಭುತಾದ-ಜಯಾ ಕಪೂರ್ ಎದುರು ಗೆದ್ದರು.

ರಾಷ್ಟ್ರೀಯ ಸ್ಕೇಟಿಂಗ್ ನಾಳೆಯಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರೋಲರ್ ಸ್ಕೇಟಿಂಗ್ ಸಂಸ್ಥೆಯು ಭಾನುವಾರದಿಂದ 60ನೇ ರಾಷ್ಟ್ರೀಯ ರೋಲರ್ ಸ್ಕೇಟಿಂಗ್ ಚಾಂಪಿಯನ್‌ಷಿಪ್ ಆಯೋಜಿಸುತ್ತಿದೆ ಎಂದು ಭಾರತ ರೋಲರ್ ಸ್ಕೇಟಿಂಗ್ ಫೆಡರೇಷನ್ ಪ್ರಧಾನ ಕಾರ್ಯದರ್ಶಿ ನರೇಶ್ ಕುಮಾರ್ ಶರ್ಮಾ ತಿಳಿಸಿದ್ದಾರೆ.

'ಬೆಂಗಳೂರಿನ ತ್ಯಾಗರಾಜನಗರದಲ್ಲಿರುವ ಚೆನ್ನಮ್ಮನ ಕೆರೆ ಅಚ್ಚುಕಟ್ಟು ಆಟದ ಮೈದಾನದಲ್ಲಿ ಡಿ. 11ರಂದು ಚಾಂಪಿಯನ್‌ಷಿಪ್ ಉದ್ಘಾಟನೆಯಾಗಲಿದೆ. ಬೆಂಗಳೂರು ಮತ್ತು ತುಮಕೂರಿನಲ್ಲಿ ಸ್ಪರ್ಧೆಗಳು ನಡೆಯಲಿವೆ. ಕರ್ನಾಟಕ ಸೇರಿದಂತೆ ಒಟ್ಟು 29 ರಾಜ್ಯಗಳಿಂದ 3,912 ಸ್ಕೇಟಿಂಗ್‌ಪಟುಗಳು ಸ್ಪರ್ಧಿಸಲಿದ್ದಾರೆ. ಇದರಲ್ಲಿ 2,214 ಬಾಲಕಿಯರಿದ್ದಾರೆ' ಎಂದು ಶುಕ್ರವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಅವರು ತಿಳಿಸಿದರು.

'11 ವಿಭಾಗಗಳಲ್ಲಿ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ. ಕೇಂದ್ರ ಯುವಜನ ಸೇವೆ ಮತ್ತು ಕ್ರೀಡಾ ಸಚಿವ ಅನುರಾಗ್ ಠಾಕೂರ್ ಮತ್ತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉದ್ಘಾಟಿಸಲಿದ್ದಾರೆ' ಎಂದರು.

ನೆಟ್‌ಬಾಲ್ ಇಂದಿನಿಂದ

ಬೆಂಗಳೂರು: ದಕ್ಷಿಣ ವಲಯ 15ನೇ ನೆಟ್‌ಬಾಲ್ ಚಾಂಪಿಯನ್‌ಷಿಪ್ ಚಿಕ್ಕಮಗಳೂರಿನ ಎಐಟಿ ಆವರಣದಲ್ಲಿರುವ ಬಿಜಿಎಸ್ ಕ್ರೀಡಾಂಗಣದಲ್ಲಿ ಶನಿವಾರ ಮತ್ತು ಭಾನುವಾರ ನಡೆಯಲಿದೆ.

ಕರ್ನಾಟಕ ಅಮೆಚೂರ್ ನೆಟ್‌ಬಾಲ್ ಸಂಸ್ಥೆ, ಚಿಕ್ಕಮಗಳೂರು ನೆಟ್‌ಬಾಲ್ ಸಂಸ್ಥೆಯ ಸಹಯೋಗದಲ್ಲಿ ಚಾಂಪಿಯನ್‌ಷಿಪ್ ಆಯೋಜನೆಯಾಗಿದೆ. ಕೇರಳ, ತೆಲಂಗಾಣ, ಪುದುಚೇರಿ, ತಮಿಳುನಾಡು, ಆಂಧ್ರಪ್ರದೇಶ, ಕರ್ನಾಟಕದ ತಂಡಗಳು ಭಾಗವಹಿಸಲಿವೆ ಎಂದು ಕರ್ನಾಟಕ ಅಮೆಚೂರ್ ನೆಟ್‌ಬಾಲ್ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಗಿರೀಶ್ ಸಿ. ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕರ್ನಾಟಕ ತಂಡಗಳು: ಪುರುಷರು: ಶ್ರೀಕಾಂತ್ ಎಚ್.ಎಸ್, ನಿತಿನ್, ಚಂದ್ರಾಶೇಖರ್, ಸುಜನ್, ಸುಗನ್, ಆಕಾಶ್, ರೋಹಿತ್ ಪಿ.ಡಿ, ಮಯೂರ್, ವರುಣ್, ಹರ್ಷ ಎ, ಶಾಫಿ, ಸಂದೀಪ್. **ಮಹಿಳೆಯರು:** ನಂದಿನಿ ಎಲ್.ಜಿ, ಮೇಘನಾ ಬಿ.ಸಿ, ಶಿವಲೀಲಾ, ಸುರಭಿ, ಶಾಲಿನಿ ಕೆ, ಮಾನಸಾ ಎಲ್.ಜಿ, ಸಿಂಚನಾ, ಚಂದನಾ, ದಿಶಾ, ಡೆಲ್ಸಿಯಾ ಮತ್ತು ಮನಸ್ವಿ.

ಚೀನಾ: ಕೋವಿಡ್ ನಿಯಮ ಸಡಿಲಿಕೆ, ಪ್ರಕರಣಗಳ ಸಂಖ್ಯೆ ಹೆಚ್ಚಳ

ಬೀಜಿಂಗ್(ಎಪಿ): ತೀವ್ರ ಆರ್ಥಿಕ ಕುಸಿತವನ್ನು ಹಿಮ್ಮೆಟ್ಟಿಸಲು ಆಡಳಿತಾರೂಢ ಕಮ್ಯುನಿಸ್ಟ್ ಸರ್ಕಾರವು ಕೋವಿಡ್–19 ಮಾರ್ಗದರ್ಶಿ ನಿಯಮಗಳನ್ನು ಸಡಿಲಿಸಿದ ಬೆನ್ನಲ್ಲೇ, ಚೀನಾದ ಶಾಲೆಗಳು ಮತ್ತು ವಾಣಿಜ್ಯ ಚಟುವಟಿಕೆಯ ಸ್ಥಳಗಳಲ್ಲಿ ಕೋವಿಡ್ ಪ್ರಕರಣಗಳು ಪತ್ತೆಯಾಗಿವೆ ಎಂದು ಶುಕ್ರವಾರ ಸಾಮಾಜಿಕ ಮಾಧ್ಯಮ ಬಳಕೆದಾರರು ವರದಿ ಮಾಡಿದ್ದಾರೆ.

ಆದರೆ, ಸರ್ಕಾರದ ಅಧಿಕೃತದ ಅಂಕಿಅಂಶಗಳ ಪ್ರಕಾರ ಹೊಸ ಪ್ರಕರಣಗಳ ಸಂಖ್ಯೆಯಲ್ಲಿ ಇಳಿಕೆಯಾಗಿದೆ. ಅದರಲ್ಲೂ ಜನಸಂಖ್ಯೆ ಹೆಚ್ಚಿರುವ ದೊಡ್ಡ ಭಾಗಗಳಲ್ಲಿ ಬುಧವಾರವಷ್ಟೇ ಸರ್ಕಾರ ಜನರಿಗೆ ಕೋವಿಡ್ ಕಡ್ಡಾಯ ಪರೀಕ್ಷೆಯ ನಿರ್ಬಂಧವನ್ನು ಸಡಿಲಿಸಿದ್ದು, ಇಲ್ಲಿ ಪ್ರಕರಣಗಳು ವರದಿಯಾಗಿಲ್ಲ ಎನ್ನಲಾಗಿದೆ.

ಕೋವಿಡ್ ನಿರ್ಬಂಧ ತೆರವಿನ ಬಳಿಕ ಬೀಜಿಂಗ್‌ನ ರಸ್ತೆಯೊಂದರಲ್ಲಿ ಶುಕ್ರವಾರ ಕಾರ್ಮಿಕರು ಕೆಲಸಕ್ಕೆ ಹಾಜರಾಗುವ ಮುನ್ನ ಪಿಪಿಇ ಕಿಟ್ ಧರಿಸಿ ಮಾತುಕತೆಯಲ್ಲಿ ತೊಡಗಿದ್ದರು —ಎಎಫ್‌ಪಿ ಚಿತ್ರ

ಬೀಜಿಂಗ್ ಮತ್ತು ಇತರ ನಗರಗಳಲ್ಲಿ ತಮ್ಮ ಶಾಲಾ–ಕಾಲೇಜು ಸಹಪಾಠಿಗಳು ಹಾಗೂ ಕಚೇರಿಗಳಲ್ಲಿ ಸಹೋದ್ಯೋಗಿಗಳು ಹೆಚ್ಚಿನ ಸಂಖ್ಯೆಯಲ್ಲಿ ಅನಾರೋಗ್ಯಪೀಡಿತರಾಗುತ್ತಿದ್ದು, ಗೈರುಹಾಜರಾಗುತ್ತಿದ್ದಾರೆ. ಸಿಬ್ಬಂದಿ ಕೊರತೆಯಿಂದ ಕೆಲವೆಡೆ ವಾಣಿಜ್ಯ ಚಟುವಟಿಕೆಗಳನ್ನು ಸ್ಥಗಿತಗೊಳಿಸಲಾಗಿದೆ ಎಂದು ಸಾಮಾಜಿಕ ಮಾಧ್ಯಮ ಬಳಕೆದಾರರು ಹೇಳಿದ್ದಾರೆ.

ಬಳಕೆದಾರರಲ್ಲಿ ಇದುವರೆಗೆ ಯಾರೊಬ್ಬರೂ ಒಟ್ಟು ಪ್ರಕರಣಗಳ ಸಂಖ್ಯೆಯನ್ನು ಅಧಿಕೃತವಾಗಿ ತಿಳಿಸಿಲ್ಲ ಎನ್ನಲಾಗಿದೆ.

ಕೋವಿಡ್‌ನ ಕಠಿಣ ಮಾರ್ಗದರ್ಶಿ ನಿಯಮಗಳ ಕಾರಣಕ್ಕಾಗಿ ಸರ್ಕಾರವು ಲಕ್ಷಾಂತರ ಜನರನ್ನು ಮನೆಯಿಂದ ಹೊರಬರದಂತೆ ನಿರ್ಬಂಧ ವಿಧಿಸಿತ್ತು. ಇದರಿಂದ ಚೀನಾದಾದ್ಯಂತ ಅಧ್ಯಕ್ಷ ಷಿ ಜಿನ್‌ಪಿಂಗ್ ರಾಜೀನಾಮೆಗೆ ಆಗ್ರಹಿಸಿದ ಪ್ರತಿಭಟನೆ ನಡೆದಿತ್ತು. ಅಲ್ಲದೇ ನಿರ್ಬಂಧ ಸಡಿಲಿಕೆಯ ಬೇಡಿಕೆಗಳನ್ನು ಪ್ರತಿಭಟನಕಾರರು ಇಟ್ಟಿದ್ದರು. ಆರ್ಥಿಕ ಹಿನ್ನಡೆಯನ್ನು ಮನಗಂಡಿದ್ದ ಸರ್ಕಾರವು ನ. 11ರ ಬಳಿಕ ಹಂತಹಂತವಾಗಿ ನಿರ್ಬಂಧಗಳನ್ನು ತೆರವುಗೊಳಿಸಿತ್ತು.

ಪ್ರತಿಭಟನಾ ರ್‍ಯಾಲಿ

ಬ್ರಿಟನ್ ಸರ್ಕಾರಿ ಸ್ವಾಮ್ಯದ ರಾಯಲ್ ಮೇಲ್ 10 ಸಾವಿರ ಉದ್ಯೋಗ ಕಡಿತ ಮಾಡಿರುವುದನ್ನು ವಿರೋಧಿಸಿ ಅಂಚೆ ನೌಕರರು ಮತ್ತು ಕಮ್ಯುನಿಕೇಷನ್ ವರ್ಕರ್ಸ್ ಯೂನಿಯನ್ (ಸಿಡಬ್ಲ್ಯುಯು) ಕಾರ್ಯಕರ್ತರು ಲಂಡನ್‌ನ ಪಾರ್ಲಿಮೆಂಟ್ ಸ್ಕ್ವೇರ್‌ನಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದರು – ಎಎಫ್‌ಪಿ ಚಿತ್ರ

ರಷ್ಯಾ ಮೆಗಾ ಶಾಪಿಂಗ್ ಮಾಲ್‌ನಲ್ಲಿ ಬೆಂಕಿ

ಮಾಸ್ಕೊ (ರಾಯಿಟರ್ಸ್/ಎಎಫ್‌ಪಿ): ರಷ್ಯಾದ ರಾಜಧಾನಿ ಮಾಸ್ಕೊ ಸಮೀಪದ ಖಿಮ್ಕಿಯಲ್ಲಿ ಬೃಹತ್ ಶಾಪಿಂಗ್ ಮಾಲ್‌ನಲ್ಲಿ ಶುಕ್ರವಾರ ನಸುಕಿನಲ್ಲಿ ಭಾರಿ ಬೆಂಕಿ ಕಾಣಿಸಿಕೊಂಡು ಸ್ಫೋಟ ಸಂಭವಿಸಿದೆ. ಘಟನೆಯಲ್ಲಿ ಒಬ್ಬ ವ್ಯಕ್ತಿ ಮೃತಪಟ್ಟಿರುವುದು ವರದಿಯಾಗಿದೆ.

ಮಾಲ್‌ನ ಕಟ್ಟಡದ ಒಂದು ಭಾಗ ಕುಸಿದು ಬಿದ್ದಿದೆ. ಸುಮಾರು 7 ಸಾವಿರ ಚದರ ಮೀಟರ್ ವ್ಯಾಪ್ತಿ ಇರುವ ಮಾಲ್‌ನಲ್ಲಿ ಹರಡಿದ ಬೆಂಕಿ ಜ್ವಾಲೆ ನಂದಿಸಲು ಅಗ್ನಿಶಾಮಕ ಸಿಬ್ಬಂದಿ ಪ್ರಯಾಸಪಡಬೇಕಾಯಿತು.

'ಯುದ್ಧ ಅಂತ್ಯಕ್ಕೆ ಒಪ್ಪಂದ ಅಗತ್ಯ': ಉಕ್ರೇನ್ ಮೇಲೆ ಕಳೆದ ಫೆಬ್ರುವರಿಯಿಂದ ನಡೆಸುತ್ತಿರುವ ವಿಶೇಷ ಸೇನಾ ಕಾರ್ಯಾಚರಣೆ ಕೊನೆಗೊಳಿಸಲು ಅಂತಿಮ ಒಪ್ಪಂದಕ್ಕೆ ಬರಬೇಕಾದ ಅಗತ್ಯವಿದೆ ಎಂದು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಶುಕ್ರವಾರ ಪ್ರತಿಪಾದಿಸಿದ್ದಾರೆ.

ವಿದೇಶದಿಂದ ಮರಳಿದ ವಿದ್ಯಾರ್ಥಿಗಳಿಗೆ ಅವಕಾಶ

ಪರಿಹಾರ ಕಂಡುಹಿಡಿಯಲು ಕೇಂದ್ರ ಸರ್ಕಾರಕ್ಕೆ 'ಸುಪ್ರೀಂ' ಸೂಚನೆ

ನವದೆಹಲಿ (ಪಿಟಿಐ): 'ಯುದ್ಧ ಹಾಗೂ ಇತರ ಕಾರಣಗಳಿಂದಾಗಿ ಉಕ್ರೇನ್, ಚೀನಾ ಸೇರಿದಂತೆ ವಿವಿಧ ದೇಶಗಳಿಂದ ಹಿಂತಿರುಗಿರುವ ವೈದ್ಯಕೀಯ ವಿದ್ಯಾರ್ಥಿಗಳಿಗೆ ಭಾರತೀಯ ವಿಶ್ವವಿದ್ಯಾಲಯಗಳಲ್ಲಿ ವ್ಯಾಸಂಗ ಮುಂದುವರಿಸಲು ಅವಕಾಶ ಕಲ್ಪಿಸುವ ದಿಸೆಯಲ್ಲಿ ಸೂಕ್ತ ಪರಿಹಾರ ಕಂಡುಹಿಡಿಯಿರಿ' ಎಂದು ಸುಪ್ರೀಂ ಕೋರ್ಟ್ ಶುಕ್ರವಾರ ಕೇಂದ್ರ ಸರ್ಕಾರ ಹಾಗೂ ರಾಷ್ಟ್ರೀಯ ವೈದ್ಯಕೀಯ ಆಯೋಗಕ್ಕೆ (ಎನ್‌ಎಂಸಿ) ಸೂಚಿಸಿದೆ.

ಈ ಸಂಬಂಧ ಹಲವು ಅರ್ಜಿಗಳು ಸಲ್ಲಿಕೆಯಾಗಿದ್ದು, ನ್ಯಾಯಮೂರ್ತಿಗಳಾದ ಬಿ.ಆರ್.ಗವಾಯಿ ಹಾಗೂ ವಿಕ್ರಂ ನಾಥ್ ಅವರನ್ನೊಳಗೊಂಡ ದ್ವಿಸದಸ್ಯ ನ್ಯಾಯಪೀಠವು ಇವುಗಳ ವಿಚಾರಣೆ ನಡೆಸಿತು.

'ಈ ಹಂತದಲ್ಲಿ ಪರಿಹಾರ ಕಂಡುಹಿಡಿಯದಿದ್ದರೆ ವಿದ್ಯಾರ್ಥಿಗಳ ಭವಿಷ್ಯವೇ ಡೋಲಾಯಮಾನವಾಗಲಿದೆ. ಹೀಗಾಗಿ ತುರ್ತಾಗಿ ಪರಿಹಾರ ಕಂಡುಹಿಡಿಯಬೇಕು. ಅಗತ್ಯವಿದ್ದರೆ ಕೇಂದ್ರವು ಇದಕ್ಕಾಗಿ ತಜ್ಞರ ಸಮಿತಿಯನ್ನೂ ರಚಿಸಬಹುದು' ಎಂದು ನ್ಯಾಯಪೀಠ ಹೇಳಿದೆ.

'ಕೇಂದ್ರ ಸರ್ಕಾರವು ನಮ್ಮ ಸಲಹೆಗೆ ಪ್ರಾಮುಖ್ಯತೆ ನೀಡುತ್ತದೆ ಎಂದು ಭಾವಿಸಿದ್ದೇವೆ. ವಿದ್ಯಾರ್ಥಿಗಳು ಈ ದೇಶದ ಆಸ್ತಿಯಾಗಿದ್ದು ಅವರ ಭವಿಷ್ಯ ಕಾಪಾಡುವ ದೃಷ್ಟಿಯಿಂದ ಈ ಸಮಸ್ಯೆಗೆ ಸೂಕ್ತ ಪರಿಹಾರ ಕಂಡುಕೊಳ್ಳುತ್ತದೆ ಎಂದೂ ಅಂದುಕೊಂಡಿದ್ದೇವೆ. ಈ ವಿಚಾರದಲ್ಲಿ ನಿರ್ದೇಶನ ನೀಡುವ ಬದಲು ಎನ್‌ಎಂಸಿಯೊಂದಿಗೆ ಸಮಾಲೋಚನೆ ನಡೆಸಿ ಸೂಕ್ತ ಪರಿಹಾರ ಕಂಡುಹಿಡಿಯುವಂತೆ ಕೇಂದ್ರಕ್ಕೆ ಮನವಿ ಮಾಡುತ್ತೇವೆ' ಎಂದು ತಿಳಿಸಿದೆ.

'ಬಹುತೇಕ ವಿದ್ಯಾರ್ಥಿಗಳು ಕೋರ್ಸ್ ಪೂರ್ಣಗೊಳಿಸಿದ್ದಾರೆ. ಆದರೆ ಕ್ಲಿನಿಕಲ್ ತರಬೇತಿ ಪೂರ್ಣಗೊಳಿಸಲು ಅವರಿಗೆ ಸಾಧ್ಯವಾಗಿಲ್ಲ. ಪೋಷಕರು ತಮ್ಮ ಮಕ್ಕಳ ವ್ಯಾಸಂಗಕ್ಕಾಗಿ ಸಾಕಷ್ಟು ಹಣ ವೆಚ್ಚ ಮಾಡಿರುತ್ತಾರೆ. ಪರಿಹಾರ ಸಾಧ್ಯವಾಗದೆ ಇದ್ದರೆ ಅವರು ಸಂಕಷ್ಟಕ್ಕೆ ಸಿಲುಕಲಿದ್ದಾರೆ' ಎಂದೂ ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಉಕ್ರೇನ್‌ನಿಂದ ವಾಪಾಸಾಗಿರುವ ವೈದ್ಯಕೀಯ ವಿದ್ಯಾರ್ಥಿಗಳಿಗೆ ಭಾರತೀಯ ವಿಶ್ವವಿದ್ಯಾಲಯಗಳಲ್ಲಿ ವ್ಯಾಸಂಗ ಮುಂದುವರಿಸಲು ಅವಕಾಶ ಕಲ್ಪಿಸಲಾಗದು ಎಂದು ಕೇಂದ್ರ ಸರ್ಕಾರ ಈ ಹಿಂದೆ ಸುಪ್ರೀಂ ಕೋರ್ಟ್‌ಗೆ ತಿಳಿಸಿತ್ತು. ಕಾನೂನಿನಲ್ಲಿ ಇದಕ್ಕೆ ಅವಕಾಶ ಇಲ್ಲ. ಹಾಗೊಮ್ಮೆ ಅವಕಾಶ ನೀಡಿದರೆ ಇಡೀ ವೈದ್ಯಕೀಯ ವ್ಯವಸ್ಥೆಗೇ ತೊಂದರೆಯಾಗಲಿದೆ ಎಂದೂ ಹೇಳಿತ್ತು.

ಚೀನಾದ ಇಬ್ಬರು ಅಧಿಕಾರಿಗಳಿಗೆ ನಿರ್ಬಂಧ

ವಾಷಿಂಗ್ಟನ್ (ಎಎಫ್‌ಪಿ): ಟಿಬೆಟ್‌ನಲ್ಲಿ ಕೈದಿಗಳಿಗೆ ಚಿತ್ರಹಿಂಸೆ ಮತ್ತು ಹತ್ಯೆ ಹಾಗೂ ಒತ್ತಾಯಪೂರ್ವಕವಾಗಿ ಕ್ರಿಮಿನಾಶಕ ನೀಡುವುದು ಸೇರಿದಂತೆ ಗಂಭೀರ ಮಾನವ ಹಕ್ಕುಗಳ ಉಲ್ಲಂಘನೆ ಆರೋಪದ ಮೇಲೆ ಚೀನಾದ ಇಬ್ಬರು ಹಿರಿಯ ಅಧಿಕಾರಿಗಳ ಮೇಲೆ ಅಮೆರಿಕ ಶುಕ್ರವಾರ ನಿರ್ಬಂಧ ವಿಧಿಸಿದೆ.

ವು ಯಿಂಗ್‌ಜೀ ಮತ್ತು 2018 ರಿಂದ ಹಿಮಾಲಯ ಪ್ರದೇಶದಲ್ಲಿ ಚೀನಾದ ಪೊಲೀಸ್ ಮುಖ್ಯಸ್ಥರಾಗಿರುವ ಝಾಂಗ್ ಹಾಂಗ್‌ಬೊ ಅವರು ನಿರ್ಬಂಧಕ್ಕೆ ಒಳಗಾದ ಅಧಿಕಾರಿಗಳು.

ಕಲ್ಲಿದ್ದಲು ಗಣಿ ಸ್ಫೋಟ: 10 ಮಂದಿ ಸಾವು

ಜಕಾರ್ತ, ಇಂಡೊನೇಷ್ಯಾ (ಎಪಿ): ಇಂಡೊನೇಷ್ಯಾದ ಸುಮಾತ್ರ ಪ್ರಾಂತ್ಯದ ಸವಲುಂಟೊ ಜಿಲ್ಲೆಯಲ್ಲಿರುವ ಖಾಸಗಿ ಒಡೆತನದ ಕಲ್ಲಿದ್ದಲು ಗಣಿಯಲ್ಲಿ ಶುಕ್ರವಾರ ಸಂಭವಿಸಿದ ಸ್ಫೋಟದಲ್ಲಿ 10 ಗಣಿ ಕಾರ್ಮಿಕರು ಮೃತರಾಗಿದ್ದು, ಇಬ್ಬರನ್ನು ರಕ್ಷಿಸಲಾಗಿದೆ.

ಕಾಣೆಯಾದ ಒಬ್ಬರಿಗಾಗಿ ಸ್ಥಳೀಯ ರಕ್ಷಣಾ ತಂಡದಿಂದ ರಕ್ಷಣಾ ಕಾರ್ಯಾಚರಣೆ ನಡೆಸಲಾಗಿದೆ. ಗಣಿಯಲ್ಲಿ ಮೀಥೇನ್ ಹಾಗೂ ಹಾನಿಕಾರಕ ಅನಿಲಗಳಿಂದ ಸ್ಫೋಟ ಸಂಭವಿಸಿದ್ದು, ಒಟ್ಟು 12 ಕಾರ್ಮಿಕರು ಇದ್ದರು ಎನ್ನಲಾಗಿದೆ.

ಸವಲುಂಟೊ ಜಿಲ್ಲೆಯ ಖಾಸಗಿ ಗಣಿಯಲ್ಲಿ ಶುಕ್ರವಾರ ಸಂಭವಿಸಿದ್ದ ಗಣಿ ಸ್ಫೋಟದ ನಂತರ ರಕ್ಷಣಾ ಕಾರ್ಯಾಚರಣೆ ನಡೆಸುತ್ತಿರುವ ರಕ್ಷಣಾ ತಂಡ. –ಎಎಫ್‌ಪಿ ಚಿತ್ರ

ಬಕಿಂಗ್‌ಹ್ಯಾಮ್ ಅರಮನೆಗೆ ಭಾರತದ ಹೈಕಮಿಷನರ್ ಭೇಟಿ

ಲಂಡನ್ (ಪಿಟಿಐ): ಬಕಿಂಗ್ ಹ್ಯಾಮ್ ಅರಮನೆಯಲ್ಲಿ ನಡೆದ ಸಮಾರಂಭದಲ್ಲಿ ಬ್ರಿಟನ್‌ನ ಭಾರತೀಯ ಹೈಕಮಿಷನರ್ ವಿಕ್ರಮ್ ದೊರೈಸ್ವಾಮಿ ಅವರು ರಾಜ 3ನೇ ಚಾರ್ಲ್ಸ್ ಅವರನ್ನು ಭೇಟಿಯಾದರು. ಈ ಮೂಲಕ ತಮ್ಮನ್ನು ಪರಿಚಯಿಸಿಕೊಂಡ ಭಾರತದ ಮೊದಲ ರಾಜತಾಂತ್ರಿಕ ಎಂಬ ಹೆಗ್ಗಳಿಗೆ ಪಾತ್ರರಾದರು.

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಬ್ರಿಟನ್ ರಾಜನಿಗೆ ಬರೆದ 'ಲೆಟರ್ಸ್ ಆಫ್ ಕಮಿಷನ್' ಪತ್ರವನ್ನು ಗುರುವಾರ 3ನೇ ಚಾರ್ಲ್ಸ್‌ಗೆ ಹಸ್ತಾಂತರಿಸಿದರು. ಈ ಪ್ರಕ್ರಿಯೆಯು ಹೊಸ ಹೈಕಮಿಷನರ್ ಅವರಿಗೆ ಮಾನ್ಯತೆ ನೀಡುವುದು ಮತ್ತು ಇವರು ಭಾರತವನ್ನು ಪ್ರತಿನಿಧಿಸುತ್ತಾರೆ ಎಂದು ಅವರಿಗೆ ಔಪಚಾರಿಕವಾಗಿ ತಿಳಿಸುವುದನ್ನು ಸಂಕೇತಿಸುತ್ತದೆ.

ಲಂಡನ್‌ನ ಬಕಿಂಗ್‌ಹ್ಯಾಮ್ ಅರಮನೆಯಲ್ಲಿ ಶುಕ್ರವಾರ ಭಾರತೀಯ ಹೈಕಮಿಷನರ್ ಯು.ಕೆ. ವಿಕ್ರಮ್ ದೊರೈಸ್ವಾಮಿ ಅವರು ರಾಜ ಮೂರನೇ ಚಾರ್ಲ್ಸ್ ಅವರನ್ನು ಭೇಟಿ ಮಾಡಿ, ತಮ್ಮ ಪರಿಚಯ ಪತ್ರವನ್ನು ಸಲ್ಲಿಸಿದರು– ಪಿಟಿಐ ಚಿತ್ರ

ಬೈಡನ್ ಭಾಷಣ ಹಿಂದಿ ಅನುವಾದಕ್ಕೆ ಒತ್ತಾಯ

ವಾಶಿಂಗ್ಟನ್ (ಪಿಟಿಐ): ಅಮೆರಿಕದ ರಾಜಕೀಯದಲ್ಲಿ ಏಷ್ಯನ್–ಅಮೆರಿಕನ್ನರ ಪ್ರಭಾವ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ, ಜೋ ಬೈಡನ್ ಅವರ ಭಾಷಣಗಳನ್ನು ಹಿಂದಿ ಹಾಗೂ ಏಷ್ಯಾದ ಇತರ ಹಲವು ಭಾಷೆಗಳಿಗೆ ಅನುವಾದಿಸಬೇಕೆಂದು ಅಲ್ಲಿನ ಅಧ್ಯಕ್ಷೀಯ ಆಯೋಗವು ಶ್ವೇತ ಭವನಕ್ಕೆ ಒತ್ತಾಯಿಸಿದೆ.

ಏಷ್ಯನ್–ಅಮೆರಿಕನ್ನರು (ಎಎ), ಸ್ಥಳೀಯ ಹವಾಯಿಯನ್ನರು ಮತ್ತು ಪೆಸಿಫಿಕ್ ಐಲ್ಯಾಂಡರ್ಸ್ (ಎನ್‌ಎಚ್‌ಪಿಐ) ಅಧ್ಯಕ್ಷರ ಸಲಹಾ ಆಯೋಗವು ಸಭೆಯಲ್ಲಿ ಈ ಶಿಫಾರಸು ಮಾಡಿತು.

ಸಂಕ್ಷಿಪ್ತ ಸುದ್ದಿ

ಕರ್ತಾರ್‌ಪುರ: ಹಂಗಾಮಿ ಅಧಿಕಾರಿ ನೇಮಕ

ಲಾಹೋರ್ (ಪಿಟಿಐ): ಕರ್ತಾರ್‌ಪುರ ಕಾರಿಡಾರ್ ವ್ಯವಹಾರ ನಿರ್ವಹಣೆಗೆ ಪಾಕಿಸ್ತಾನ ಸರ್ಕಾರ ಮೂರು ತಿಂಗಳ ಅವಧಿಗೆ ಅಧಿಕಾರಿಯನ್ನು ನೇಮಿಸಿದೆ.

ಪಾಕಿಸ್ತಾನದ ಅಲ್ಪಸಂಖ್ಯಾತ ಸಮುದಾಯದ ಧಾರ್ಮಿಕ ಸ್ಥಳಗಳ ನಿರ್ವಹಣೆ ಹೊಣೆ ಹೊತ್ತಿರುವ ನಿರ್ವಸಿತರ ಟ್ರಸ್ಟ್ ಆಸ್ತಿ ಮಂಡಳಿಯು(ಇಟಿಪಿಬಿ) ಮೂರು ತಿಂಗಳ ಅವಧಿಗೆ ಕರ್ತಾರ್‌ಪುರ ಕಾರಿಡಾರ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ (ಸಿಇಒ) ನೇಮಕ ಕುರಿತು ಬುಧವಾರ ಅಧಿಸೂಚನೆ ಹೊರಡಿಸಿತ್ತು.

ಈ ಪ್ರಕಾರ, ಇಟಿಪಿಬಿ ಹೆಚ್ಚುವರಿ ಕಾರ್ಯದರ್ಶಿ ಸನಾವುಲ್ಲಾ ಖಾನ್ ಅವರಿಗೆ ಮೂರು ತಿಂಗಳ ಕಾಲ ಕರ್ತಾರ್‌ಪುರ ಕಾರಿಡಾರ್ ಯೋಜನೆ ನಿರ್ವಹಣಾ ಘಟಕದ ಸಿಇಒ ಜವಾಬ್ದಾರಿ ವಹಿಸಲಾಗಿದೆ.

ಸಿಖ್ ಧರ್ಮದ ಸ್ಥಾಪಕ ಗುರುನಾನಕ್ ದೇವ್ ಅವರು ತಮ್ಮ ಜೀವನದ ಕೊನೆಯ ಕೆಲವು ವರ್ಷಗಳನ್ನು ಕಳೆದ ಸ್ಥಳವಾದ ಪಾಕಿಸ್ತಾನದ ಗುರುದ್ವಾರ ದರ್ಬಾರ್ ಸಾಹಿಬ್‌ನಿಂದ ಭಾರತದ ಪಂಜಾಬ್‌ನಲ್ಲಿರುವ ಗುರುದಾಸ್‌ಪುರ ಜಿಲ್ಲೆಯ ದೇರಾ ಬಾಬಾ ನಾನಕ್ ದೇಗುಲಕ್ಕೆ, 4 ಕಿ.ಮೀ. ಇರುವ ಕರ್ತಾರ್‌ಪುರ ಕಾರಿಡಾರ್ ಸಂಪರ್ಕ ಕಲ್ಪಿಸುತ್ತದೆ.

ಸಲಿಂಗ ಮದುವೆ : ಮಸೂದೆಗೆ ಅಂಗೀಕಾರ

ವಾಷಿಂಗ್ಟನ್ (ಎಪಿ): ಸಲಿಂಗ ಮದುವೆ ಮಸೂದೆಗೆ ಜನಪ್ರತಿನಿಧಿಗಳ ಸಭೆ ಗುರುವಾರ ಒಪ್ಪಿಗೆ ನೀಡಿದೆ. ಈ ಮಸೂದೆಗೆ ಸಹಿ ಮಾಡುವುದಾಗಿ ಅಧ್ಯಕ್ಷ ಜೋ ಬೈಡನ್ ಅವರು ಈಗಾಗಲೇ ಹೇಳಿದ್ದಾರೆ. ಆದ್ದರಿಂದ ದೇಶದಾದ್ಯಂತ ನಡೆದ ದಶಕಗಳ ಹೋರಾಟಕ್ಕೆ ಸಿಕ್ಕ ಜಯ ಇದಾಗಿದೆ.

ಸಲಿಂಗ ಮದುವೆಯನ್ನು ಕಾನೂನುಬದ್ಧಗೊಳಿಸಿ 2015ರಲ್ಲಿ ಸುಪ್ರೀಂ ಕೋರ್ಟ್ ನೀಡಿದ ತೀರ್ಪಿನ ನಂತರ ಮದುವೆ ಆದ ನೂರಾರು ಜೋಡಿಗಳು ನಿಟ್ಟುಸಿರುಬಿಡುವಂತಾಗಿದೆ. ಮಹಿಳೆಯಿಂದ ಗರ್ಭಪಾತದ ಹಕ್ಕನ್ನು ಸುಪ್ರೀಂ ಕೋರ್ಟ್ ಈ ಜೂನ್‌ನಲ್ಲಿ ಹಿಂಪಡೆದಿತ್ತು. ಈ ಹಿನ್ನೆಲೆಯಲ್ಲಿ ಸಲಿಂಗ ಮದುವೆಯ ಹಕ್ಕನ್ನು ನಿರಾಕರಿಸಬಹುದು ಎಂಬ ಆತಂಕ ಸಲಿಂಗ ಜೋಡಿಗಳಲ್ಲಿತ್ತು.

'ಭಾರತ ವಿಶ್ವದ ಮತ್ತೊಂದು ಬಲಿಷ್ಠ ಶಕ್ತಿಯಾಗಲಿದೆ'

ವಾಷಿಂಗ್ಟನ್ (ಪಿಟಿಐ): ವಿಶಿಷ್ಟ ತಂತ್ರಗಾರಿಕೆಯನ್ನು ಹೊಂದಿರುವ ಭಾರತ ಕೇವಲ ಅಮೆರಿಕದ ಮಿತ್ರರಾಷ್ಟ್ರವಾಗಿ ಉಳಿಯುವುದಿಲ್ಲ, ಜಗತ್ತಿನ ಮತ್ತೊಂದು ಬಲಿಷ್ಠ ಶಕ್ತಿಯಾಗಿ ಹೊರಹೊಮ್ಮಲಿದೆ ಎಂದು ಶ್ವೇತಭವನದ ಉನ್ನತ ಅಧಿಕಾರಿ ತಿಳಿಸಿದ್ದಾರೆ.

ಅಮೆರಿಕದ ಆಸ್ಪೆನ್ ಸೆಕ್ಯೂರಿಟಿ ಫೋರಂ ಸಭೆಯಲ್ಲಿ ಭಾರತದ ಕುರಿತು ಕೇಳಲಾದ ಪ್ರಶ್ನೆಗೆ ಉತ್ತರಿಸಿದ ಶ್ವೇತಭವನದ ಏಷ್ಯಾ ಸಮನ್ವಯಾಧಿಕಾರಿ ಕರ್ಟ್ ಕ್ಯಾಂಪ್ಬೆಲ್, 21ನೇ ಶತಮಾನದಲ್ಲಿ ಭಾರತ, ಅಮೆರಿಕದ ಪಾಲಿಗೆ ಅತ್ಯಂತ ಮಹತ್ವದ ದ್ವಿಪಕ್ಷೀಯ ಬಾಂಧವ್ಯವಾಗಿದೆ ಎಂದು ಹೇಳಿದರು.

'ಕಳೆದ 20 ವರ್ಷಗಳಲ್ಲಿ ಭಾರತ–ಅಮೆರಿಕ ನಡುವಿನ ದ್ವಿಪಕ್ಷೀಯ ಸಂಬಂಧದಷ್ಟು ವೇಗವಾಗಿ ಬಲಿಷ್ಠವಾಗಿರುವ ಬೇರೆ ಯಾವುದೇ ದ್ವಿಪಕ್ಷೀಯ ಸಂಬಂಧದ ಬಗ್ಗೆ ನನಗೆ ತಿಳಿದಿಲ್ಲ' ಎಂದು ಹೇಳಿದರು.



ಕ್ರೊವೇಷ್ಯಾ ಆಟಗಾರರ ಗೆಲುವಿನ ಸಂಭ್ರಮ(ಎಡ)– ದುಃಖಿತ ಬ್ರೆಜಿಲ್ ತಂಡದ ನೇಮರ್ ಅವರನ್ನು ಸಂತೈಸಿದ ಸಹ ಆಟಗಾರ ಡ್ಯಾನಿ ಅಲ್ವೇಸ್ –ಎಎಫ್‌ಪಿ ಚಿತ್ರಗಳು

ಸೆಮಿಫೈನಲ್‌ಗೆ ಲಗ್ಗೆಯಿಟ್ಟ ಕ್ರೊವೇಷ್ಯಾ ತಂಡ; 4–2 ಗೋಲುಗಳ ಗೆಲುವು

ಶೂಟೌಟ್‌ನಲ್ಲಿ ಬ್ರೆಜಿಲ್ 'ಔಟ್'

ಅಲ್ ರಯಾನ್ (ರಾಯಿಟರ್ಸ್/ ಎಎಫ್‌ಪಿ): ಐದು ಬಾರಿಯ ಚಾಂಪಿಯನ್ ಬ್ರೆಜಿಲ್ ತಂಡವನ್ನು ಮಣಿಸಿದ ಕ್ರೊವೇಷ್ಯಾ, ಫಿಫಾ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯ ಸೆಮಿಫೈನಲ್ ಪ್ರವೇಶಿಸಿತು.

ಅಲ್ ರಯಾನ್‌ನ ಎಜುಕೇಷನ್ ಸಿಟಿ ಕ್ರೀಡಾಂಗಣದಲ್ಲಿ ಶುಕ್ರವಾರ ರಾತ್ರಿ ನಡೆದ ಕ್ವಾರ್ಟರ್ ಫೈನಲ್‌ನಲ್ಲಿ ಕ್ರೊವೇಷ್ಯಾ ತಂಡ ಪೆನಾಲ್ಟಿ ಶೂಟೌಟ್‌ನಲ್ಲಿ 4–2 ರಲ್ಲಿ ರೋಚಕ ಗೆಲುವು ಪಡೆಯಿತು.

ನಿಗದಿತ ಹಾಗೂ ಹೆಚ್ಚುವರಿ ಅವಧಿಯ ಆಟದ ಬಳಿಕ ಎರಡೂ ತಂಡಗಳು 1–1 ರಲ್ಲಿ ಸಮಬಲ ಸಾಧಿಸಿದ್ದವು. ಪೆನಾಲ್ಟಿ ಶೂಟೌಟ್‌ನಲ್ಲಿ ಕ್ರೊವೇಷ್ಯಾದ ನಿಕೊಲಾ ವ್ಲಾಸಿಚ್, ಲೊವ್ರೊ ಮಜೊವ್, ಲುಕಾ ಮಾಡ್ರಿಚ್ ಮತ್ತು ಮಿಸ್ಲಾವ್ ಒರ್ಸಿಚ್ ಅವರು ಗೋಲು ಗಳಿಸಿದರು.

ಬ್ರೆಜಿಲ್ ಪರ ಕ್ಯಾಸೆಮಿರೊ ಮತ್ತು ಪೆಡ್ರೊ ಮಾತ್ರ ಚೆಂಡನ್ನು ಗುರಿ ಸೇರಿಸಿದರು. ರಾಡ್ರಿಗೊ ಅವರ ಮೊದಲ ಕಿಕ್‌ಅನ್ನು ಕ್ರೊವೇಷ್ಯಾ ಗೋಲ್‌ಕೀಪರ್ ಡಾಮ್ನಿಕ್ ಲಿವಕೊವಿಚ್ ಯಶಸ್ವಿಯಾಗಿ ತಡೆದರು. ನಾಲ್ಕನೇ ಕಿಕ್ ತೆಗೆದುಕೊಂಡ ಮಾರ್ಕಿನೋಸ್ ಅವರು ಒದ್ದ ಚೆಂಡು ಗೋಲ್‌ಪೋಸ್ಟ್ ಕಂಬಕ್ಕೆ ಬಡಿದು ವಾಪಸಾಯಿತು.

ಈ ವೇಳೆ ಕ್ರೊವೇಷ್ಯಾ ಆಟಗಾರರು ಗೆಲುವಿನ ಸಂಭ್ರಮ ಆಚರಿಸಿದರೆ, 6ನೇ ಪ್ರಶಸ್ತಿಯ ಆಸೆ ಕೈಬಿಟ್ಟ ಬ್ರೆಜಿಲ್ ತಂಡ ದವರು ಕಣ್ಣೀರಿಟ್ಟರು. ಸ್ಟಾರ್ ಆಟಗಾರ ನೇಮರ್ ವಿಶ್ವಕಪ್ ಎತ್ತಿಹಿಡಿಯಬೇಕು ಎಂದು ಕನಸು ಕಂಡಿದ್ದ ಅಭಿಮಾನಿಗಳೂ ನಿರಾಸೆ ಅನುಭವಿಸಿದರು.

ಜಿದ್ದಾಜಿದ್ದಿನ ಹೋರಾಟ: ಮೊದಲ 90 ನಿಮಿಷಗಳ ಆಟದಲ್ಲಿ ಜಿದ್ದಾಜಿದ್ದಿನ ಹೋರಾಟ ನಡೆಯಿತು. ಪ್ರಥಮಾರ್ಧದಲ್ಲಿ ಉಭಯ ತಂಡಗಳಿಂದ ಗೋಲು ಗಳಿಸುವ ಉತ್ತಮ ಪ್ರಯತ್ನ ನಡೆಯಲಿಲ್ಲ.

2ನೇ ಅವಧಿಯಲ್ಲಿ ಬ್ರೆಜಿಲ್ ತನ್ನ ಆಕ್ರಮಣದ ವೇಗವನ್ನು ಹೆಚ್ಚಿಸಿತು. ಇದರಿಂದ ಗೋಲು ಗಳಿಸುವ ಹಲವು ಅವಕಾಶಗಳು ಸೃಷ್ಟಿಯಾದವು. ನೇಮರ್‌ಗೆ ಮೂರು ಉತ್ತಮ ಅವಕಾ ಶಗಳು ಲಭಿಸಿದರೂ, ಯಶಸ್ಸು ಕಾಣಲಿಲ್ಲ. ಲಿವಕೊವಿಚ್ ಅವರು ತಡೆಯಾಗಿ ನಿಂತರು. ಹೆಚ್ಚುವರಿ ಅವಧಿಯಲ್ಲಿ ನೇಮರ್ (105 + 1 ನೇ ನಿ.) ಗೋಲು ಗಳಿಸಿ ಬ್ರೆಜಿಲ್‌ಗೆ ಗೆಲುವಿನ ನಿರೀಕ್ಷೆ ಮೂಡಿಸಿದ್ದರು. ಆದರೆ ಬ್ರೂನೊ ಪೆಟ್ಕೊವಿಚ್ (117ನೇ ನಿ.) ಅವರು ಕ್ರೊವೇಷ್ಯಾ ತಂಡದ ನೆರವಿಗೆ ನಿಂತರು. ಇದರಿಂದ ವಿಜೇತರನ್ನು ನಿರ್ಣಯಿಸಲು ಪೆನಾಲ್ಟಿ ಶೂಟೌಟ್‌ನ ಮೊರೆ ಹೋಗಲಾಯಿತು.

ಪೆನಾಲ್ಟಿ ಶೂಟೌಟ್‌ನಲ್ಲಿ ಬ್ರೆಜಿಲ್ ಆಟಗಾರ ರೊಡ್ರಿಗೊ ಗೋಲು ತಡೆದ ಕ್ರೊವೇಷ್ಯಾ ಗೋಲ್‌ಕೀಪರ್ ಡಾಮ್ನಿಕ್ ಲಿವಕೊವಿಚ್

ಪೆಲೆ ದಾಖಲೆ ಸರಿಗಟ್ಟಿದ ನೇಮರ್

ನೇಮರ್ ಅವರು ಅಂತರರಾಷ್ಟ್ರೀಯ ಪಂದ್ಯಗಳಲ್ಲಿ 77 ಗೋಲುಗಳನ್ನು ಗಳಿಸುವ ಮೂಲಕ ಬ್ರೆಜಿಲ್ ಪರ ಅತ್ಯಧಿಕ ಗೋಲು ಗಳಿಸಿದ ದಿಗ್ಗಜ ಆಟಗಾರ ಪೆಲೆ ಅವರ ದಾಖಲೆ ಸರಿಗಟ್ಟಿದರು.
ಪೆಲೆ 1957 ಮತ್ತು 1971ರ ಅವಧಿಯಲ್ಲಿ 77 ಗೋಲುಗಳನ್ನು ಹೊಡೆದಿದ್ದರು.

ಪೋರ್ಚುಗಲ್‌ಗೆ ಮೊರೊಕ್ಕೊ ತಂಡದ ಸವಾಲು

ದೋಹಾ (ರಾಯಿಟರ್ಸ್): ಐತಿಹಾಸಿಕ ಸಾಧನೆಯ ಹಂಬಲದಲ್ಲಿರುವ ಮೊರೊಕ್ಕೊ ತಂಡ, ಫಿಫಾ ವಿಶ್ವಕಪ್ ಟೂರ್ನಿಯ ಕ್ವಾರ್ಟರ್ ಫೈನಲ್‌ನಲ್ಲಿ ಶನಿವಾರ ಪೋರ್ಚುಗಲ್ ವಿರುದ್ಧ ಪೈಪೋಟಿ ನಡೆಸಲಿದೆ.

ಟೂರ್ನಿಯಲ್ಲಿ ಈಗಾಗಲೇ ಅಚ್ಚರಿಯ ಫಲಿತಾಂಶದಿಂದ ಸದ್ದು ಮಾಡಿರುವ ಮೊರೊಕ್ಕೊ, ಅಲ್ ತುಮಾಮಾ ಕ್ರೀಡಾಂಗಣದಲ್ಲಿ ಗೆಲುವಿನ ಓಟ ಮುಂದುವರಿಸುವ ಕನಸಿನಲ್ಲಿದೆ. ಆದರೆ ಪ್ರೀ ಕ್ವಾರ್ಟರ್ ಫೈನಲ್‌ನಲ್ಲಿ ಸ್ವಿಟ್ಜರ್ಲೆಂಡ್ ತಂಡವನ್ನು 6–1 ರಿಂದ ಬಗ್ಗುಬಡಿದಿದ್ದ ಪೋರ್ಚುಗಲ್ ತಂಡ ಮೊರೊಕ್ಕೊಗೆ ತಡೆಯೊಡ್ಡಲು ಸಜ್ಜಾಗಿದೆ.

36 ವರ್ಷಗಳ ಹಿಂದೆ ಮೆಕ್ಸಿಕೊದಲ್ಲಿ ನಡೆದಿದ್ದ ಟೂರ್ನಿಯಲ್ಲಿ 16ರ ಘಟ್ಟ ಪ್ರವೇಶಿಸಿದ್ದ ಮೊರೊಕ್ಕೊ ಈ ಸಾಧನೆ ಮಾಡಿದ ಆಫ್ರಿಕಾದ ಮೊದಲ ದೇಶ ಎಂಬ ಗೌರವ ಪಡೆದುಕೊಂಡಿತ್ತು. ಇದೀಗ ಟೂರ್ನಿಯ ಸೆಮಿಫೈನಲ್ ಪ್ರವೇಶಿಸುವ ಆಫ್ರಿಕಾ ಮತ್ತು ಅರಬ್ ನಾಡಿನ ಮೊದಲ ತಂಡ ಎಂಬ ಐತಿಹಾಸಿಕ ಸಾಧನೆ ಮಾಡುವ ವಿಶ್ವಾಸದಲ್ಲಿದೆ.

ಸ್ವಿಟ್ಜರ್ಲೆಂಡ್ ವಿರುದ್ಧ ಹ್ಯಾಟ್ರಿಕ್ ಸಾಧಿಸಿದ್ದ ಪೋರ್ಚುಗಲ್‌ನ ಗೊನ್ಸಾಲೊ ರಾಮೋಸ್ ಮೇಲೆ ಎಲ್ಲರ ಚಿತ್ತ ನೆಟ್ಟಿದೆ. ಕೋಚ್ ಫೆರ್ನಾಂಡೊ ಸಾಂಟೋಸ್ ಈ ಪಂದ್ಯದಲ್ಲೂ ರೊನಾಲ್ಡೊ ಜಾಗದಲ್ಲಿ ರಾಮೋಸ್ ಅವರನ್ನು ಕಣಕ್ಕಿಳಿಸುವ ಸಾಧ್ಯತೆಯೇ ಅಧಿಕ. ಜಾವೊ ಫೆಲಿಕ್ಸ್ ಮತ್ತು ಬ್ರೂನೊ ಫೆರ್ನಾಂಡಿಸ್ ಅವರೂ ಉತ್ತಮ ಲಯದಲ್ಲಿ ಆಡುತ್ತಿದ್ದಾರೆ.

ಕ್ವಾರ್ಟರ್ ಫೈನಲ್‌ನಲ್ಲಿ ಇಂದು ಫ್ರಾನ್ಸ್– ಇಂಗ್ಲೆಂಡ್ ಸೆಣಸು

ಎಂಬಾಪೆ ಮೇಲೆ ನಿರೀಕ್ಷೆ ಭಾರ

ದೋಹಾ (ರಾಯಿಟರ್ಸ್): ಫ್ರಾನ್ಸ್ ಮತ್ತು ಇಂಗ್ಲೆಂಡ್ ತಂಡಗಳು ಫಿಫಾ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯ ಕ್ವಾರ್ಟರ್ ಫೈನಲ್‌ನಲ್ಲಿ ಶನಿವಾರ ಪರಸ್ಪರ ಎದುರಾಗಲಿದ್ದು, ಸಹಜವಾಗಿ ಎಲ್ಲರ ಚಿತ್ತ ಕಿಲಿಯಾನ್ ಎಂಬಾಪೆ ಮೇಲೆ ನೆಟ್ಟಿದೆ.

ಅಲ್ ಖೋರ್‌ನಲ್ಲಿರುವ ಅಲ್ ಬೈತ್ ಕ್ರೀಡಾಂಗಣದಲ್ಲಿ ಸಮಬಲದ ಪೈಪೋಟಿ ನಡೆಯುವ ಸಾಧ್ಯತೆಯಿದೆ. ಹಾಲಿ ಚಾಂಪಿಯನ್ ಫ್ರಾನ್ಸ್ ತಂಡದ ಸ್ಟ್ರೈಕರ್‌ಗಳು ಮತ್ತು ಇಂಗ್ಲೆಂಡ್‌ನ ಡಿಫೆಂಡರ್‌ಗಳ ನಡುವಿನ ಹಣಾಹಣಿ, ಫುಟ್‌ಬಾಲ್ ಪ್ರೇಮಿಗಳಿಗೆ ಸಾಕಷ್ಟು ರಸದೌತಣ ಉಣಬಡಿಸಲಿದೆ.

ಫ್ರಾನ್ಸ್ ತಂಡದ ನಿರೀಕ್ಷೆಯ ಭಾರ ಎಂಬಾಪೆ ಮೇಲಿದೆ. ಐದು ಗೋಲುಗಳು ಮತ್ತು ಎರಡು ಅಸಿಸ್ಟ್‌ಗಳ ಮೂಲಕ ಅವರು ಎದುರಾಳಿ ತಂಡಗಳಿಗೆ ನುಂಗಲಾರದ ತುತ್ತಾಗಿ ಪರಿಣಮಿಸಿದ್ದಾರೆ. ಆಕರ್ಷಕ ಡ್ರಿಬ್ಲಿಂಗ್ ಮತ್ತು ಚೆಂಡನ್ನು ಬಿರುಸಿನ ವೇಗದಲ್ಲಿ ಗೋಲುಪೆಟ್ಟಿಗೆಯತ್ತ ಕಳಿಸಬಲ್ಲ ಅವರ ಸಾಮರ್ಥ್ಯ ಈಗಾಗಲೇ ಅನಾವರಣಗೊಂಡಿದೆ.

ಈ ಪಂದ್ಯವನ್ನು ಎಂಬಾಪೆ ಮತ್ತು ಇಂಗ್ಲೆಂಡ್‌ನ ಡಿಫೆಂಡರ್ ಕೈಲಿ ವಾಕರ್ ನಡುವಿನ ಹೋರಾಟ ಎಂದೇ ಬಿಂಬಿಸಲಾಗಿದೆ. ಇಬ್ಬರೂ ವೇಗದ ಆಟದ ಮೂಲಕ ಗಮನ ಸೆಳೆದಿದ್ದಾರೆ. ಎಂಬಾಪೆ ಅಲ್ಲದೆ ಒಲಿವಿಯರ್ ಜಿರೋಡ್, ಉಸ್ಮಾನ್ ದೆಂಬೆಲೆ ಮತ್ತು ಆಂಟೋನ್ ಗ್ರೀಸ್‌ಮನ್ ಅವರೂ ಫ್ರಾನ್ಸ್ ಪರ ಮಿಂಚುವ ವಿಶ್ವಾಸದಲ್ಲಿದ್ದಾರೆ.

ಅನುಭವಿ ಮತ್ತು ಯುವ ಆಟಗಾರರನ್ನು ಒಳಗೊಂಡಿರುವ ಇಂಗ್ಲೆಂಡ್ ತಂಡ ಸೆಮಿ ಪ್ರವೇಶದ ಕನಸಿನೊಂದಿಗೆ ಕಣಕ್ಕಿಳಿಯಲಿದೆ. 2018ರ ಟೂರ್ನಿಯಲ್ಲಿ ಇಂಗ್ಲೆಂಡ್ ಪರ ಅತಿಹೆಚ್ಚು ಗೋಲುಗಳನ್ನು ಗಳಿಸಿದ್ದ ಹ್ಯಾರಿ ಕೇನ್, ಕತಾರ್‌ನಲ್ಲಿ ಇದುವರೆಗೆ ಒಂದು ಸಲ ಮಾತ್ರ ಚೆಂಡನ್ನು ಗುರಿ ಸೇರಿಸಿದ್ದಾರೆ. ಆದರೆ ಮೂರು ಗೋಲುಗಳಿಗೆ ಅಸಿಸ್ಟ್ ಮೂಲಕ ಅವರೂ ಮಿಂಚಿದ್ದಾರೆ.

ಜಾಕ್ ಗ್ರೀಲಿಶ್, ರಹೀಂ ಸ್ಟರ್ಲಿಂಗ್ ಅಲ್ಲದೆ ಯುವ ಆಟಗಾರರಾದ ಜೂಡ್ ಬೆಲಿಂಗ್‌ಹ್ಯಾಂ ಮತ್ತು ಮಾರ್ಕಸ್ ರ್‍ಯಾಷ್‌ಫೋರ್ಡ್ ಅವರು ಇಂಗ್ಲೆಂಡ್‌ನ ಬಲ ಹೆಚ್ಚಿಸಿದ್ದಾರೆ. ಡಿಫೆಂಡರ್‌ಗಳಿಗೆ ಹೋಲಿಸಿದರೆ ಇಂಗ್ಲೆಂಡ್ ತಂಡ ಫ್ರಾನ್ಸ್‌ಗಿಂತ ಹೆಚ್ಚಿನ ಶಕ್ತಿ ಹೊಂದಿದೆ. ಇದು ಹಾಲಿ ಚಾಂಪಿಯನ್ನರಿಗೆ ಮುಳುವಾಗಿ ಪರಿಣಮಿಸುವ ಸಾಧ್ಯತೆಯಿದೆ.

'ಎಂಬಾಪೆ ಅವರ ವೇಗದ ಆಟಕ್ಕೆ ತಡೆಯೊಡ್ಡುವುದು ನನ್ನ ಕೆಲಸ. ಆ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿಭಾಯಿಸಬಲ್ಲೆ' ಎಂದು ವಾಕರ್ ಅವರು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಹೇಳಿದ್ದಾರೆ.

ಇಂಗ್ಲೆಂಡ್ ಮತ್ತು ಫ್ರಾನ್ಸ್ ತಂಡಗಳು ವಿಶ್ವಕಪ್ ಟೂರ್ನಿಯಲ್ಲಿ ಎರಡು ಸಲ ಎದುರಾಗಿದ್ದು, ಎರಡೂ ಪಂದ್ಯಗಳಲ್ಲಿ ಆಂಗ್ಲರ ನಾಡಿನ ತಂಡ ಗೆದ್ದಿದೆ. 1966ರ ಟೂರ್ನಿಯ ಗುಂಪು ಹಂತದ ಪಂದ್ಯವನ್ನು 2–0 ಗೋಲುಗಳಿಂದ ಹಾಗೂ 1982ರ ಟೂರ್ನಿಯ ಪಂದ್ಯವನ್ನು 3–1 ಗೋಲುಗಳಿಂದ ಜಯಿಸಿತ್ತು.

ಕಿಲಿಯಾನ್ ಎಂಬಾಪೆ – ಎಎಫ್‌ಪಿ ಚಿತ್ರ

ಹ್ಯಾರಿ ಕೇನ್ –ಎಎಫ್‌ಪಿ ಚಿತ್ರ

- ಈ ಬಾರಿಯ ಟೂರ್ನಿಯಲ್ಲಿ ಇಂಗ್ಲೆಂಡ್ ಅತಿಹೆಚ್ಚು ಗೋಲುಗಳನ್ನು ಗಳಿಸಿದ್ದು, ನಾಲ್ಕು ಪಂದ್ಯಗಳಲ್ಲಿ ಒಟ್ಟು 12 ಸಲ ಚೆಂಡನ್ನು ಗುರಿ ಸೇರಿಸಿದೆ.
- ಫ್ರಾನ್ಸ್ ತಂಡದ ಫಾರ್ವರ್ಡ್ ಆಟಗಾರ ಎಂಬಾಪೆ ನಾಲ್ಕು ಪಂದ್ಯಗಳಿಂದ ಐದು ಗೋಲು ಗಳಿಸಿದ್ದಾರೆ.
- ಇಂಗ್ಲೆಂಡ್ ಪರ ಅತಿಹೆಚ್ಚು ಗೋಲು ಗಳಿಸಿರುವ ವೇಯ್ನ್ ರೂನಿ (53 ಗೋಲು) ಅವರ ದಾಖಲೆ ಸರಿಗಟ್ಟಲು ಹ್ಯಾರಿ ಕೇನ್‌ಗೆ ಇನ್ನೊಂದು ಗೋಲು ಬೇಕು

ಇಂದಿನ ಪಂದ್ಯ

ಕ್ವಾರ್ಟರ್ ಫೈನಲ್

ಮೊರೊಕ್ಕೊ	Vs ಪೋರ್ಚುಗಲ್	ರಾತ್ರಿ 8.30
ಇಂಗ್ಲೆಂಡ್	Vs ಫ್ರಾನ್ಸ್	ತಡರಾತ್ರಿ 12.30

ಲೈವ್: ಸ್ಪೋರ್ಟ್ಸ್ 18, ಎಂಟಿವಿ, ಜಿಯೊ ಸಿನೆಮಾ ಆ್ಯಪ್

ಬಲಾಬಲ	
ಒಟ್ಟು ಪಂದ್ಯ	31
ಇಂಗ್ಲೆಂಡ್ ಗೆಲುವು	17
ಫ್ರಾನ್ಸ್ ಗೆಲುವು	9
ಡ್ರಾ	5

ವಿಕ್ಟರ್‌ಗೆ ಸೋಲುಣಿಸಿದ ಪ್ರಣಯ್

ಬ್ಯಾಂಕಾಕ್ (ಪಿಟಿಐ): ಭಾರತದ ಎಚ್.ಎಸ್. ಪ್ರಣಯ್ ಅವರು ಬಿಡಬ್ಲ್ಯುಎಫ್ ವಿಶ್ವ ಟೂರ್ ಫೈನಲ್ಸ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಅಂತಿಮವಾಗಿ ಜಯ ಗಳಿಸಿದರು.

ಇಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಶುಕ್ರವಾರ ಪ್ರಣಯ್ 14–21, 21–17, 21–18ರಿಂದ ವಿಶ್ವ ಕ್ರಮಾಂಕದಲ್ಲಿ ಅಗ್ರಸ್ಥಾನದಲ್ಲಿರುವ, ಒಲಿಂಪಿಕ್ ಚಾಂಪಿಯನ್ ವಿಕ್ಟರ್ ಅಕ್ಸೆಲ್ಸೆನ್ ಅವರಿಗೆ ಆಘಾತ ನೀಡಿದರು. ಆದರೆ ಎ ಗುಂಪಿನ ಮೊದಲೆರಡು ಪಂದ್ಯಗಳಲ್ಲಿ ಸೋತಿದ್ದ ಕಾರಣ ಅವರು ಈಗಾಗಲೇ ಸೆಮಿಫೈನಲ್ ಅರ್ಹತೆಯಿಂದ ಹೊರಬಿದ್ದಿದ್ದರು. ಅಭಿಯಾನ ಅಂತ್ಯಗೊಳಿಸುವ ಮೊದಲು ಡೆನ್ಮಾರ್ಕ್‌ನ ಪ್ರಮುಖ ಆಟಗಾರನನ್ನು ಮಣಿಸಿದ ಸಮಾಧಾನ ಅವರದಾಯಿತು. 51 ನಿಮಿಷಗಳಲ್ಲಿ ಈ ಪಂದ್ಯ ಮುಗಿಯಿತು.

ಅಕ್ಸೆಲ್ಸೆನ್ ವಿರುದ್ಧ ಪ್ರಣಯ್ ಅವರಿಗೆ ಇದು ಎರಡನೇ ಜಯವಾಗಿದೆ. ಕಳೆದ ವರ್ಷ ಇಂಡೊನೇಷ್ಯಾ ಮಾಸ್ಟರ್ಸ್ ಟೂರ್ನಿಯಲ್ಲಿ ಭಾರತದ ಆಟಗಾರ ಗೆದ್ದಿದ್ದರು.

ಕಬಡ್ಡಿ: ಎಂಟರ ಘಟ್ಟಕ್ಕೆ ಬೆಂಗಳೂರು ಉತ್ತರ ವಿವಿ

ಬೆಂಗಳೂರು: ಮೈಸೂರು ವಿಶ್ವವಿದ್ಯಾಲಯ ಹಾಗೂ ಬೆಂಗಳೂರು ಉತ್ತರ ವಿಶ್ವವಿದ್ಯಾಲಯ ತಂಡಗಳು ದಕ್ಷಿಣ ವಲಯ ಅಂತರ ವಿಶ್ವವಿದ್ಯಾಲಯ ಕಬಡ್ಡಿ ಚಾಂಪಿಯನ್‌ಷಿಪ್ ಕ್ವಾರ್ಟರ್ ಫೈನಲ್ ತಲುಪಿವೆ

ಭಾರತೀಯ ವಿಶ್ವವಿದ್ಯಾಲಯಗಳ ಸಂಘ ಮತ್ತು ಬೆಂಗಳೂರು ನಗರ ವಿಶ್ವವಿದ್ಯಾಲಯವು, ಬೆಂಗಳೂರಿನ ಕೋರಮಂಗಲದ ಸಂತ ಫ್ರಾನ್ಸಿಸ್ ಕಾಲೇಜಿನ ಸಹಯೋಗದೊಂದಿಗೆ ಟೂರ್ನಿ ಆಯೋಜಿಸಲಾಗಿದೆ.

ಒಟ್ಟು 112 ತಂಡಗಳು ಟೂರ್ನಿಯಲ್ಲಿ ಸ್ಪರ್ಧಿಸಿವೆ.

ಆಸ್ಟ್ರೇಲಿಯಾ ತಂಡದ ಬೆತ್ ಮೂನಿ ಬ್ಯಾಟಿಂಗ್–ಪಿಟಿಐ ಚಿತ್ರ

ಮೂನಿ ಮಿಂಚು; ಆಸ್ಟ್ರೇಲಿಯಾಕ್ಕೆ ಜಯ

ನವೀ ಮುಂಬೈ: ಬೆತ್ ಮೂನಿ ಅಮೋಘ ಬ್ಯಾಟಿಂಗ್‌ನಿಂದಾಗಿ ಪ್ರವಾಸಿ ಆಸ್ಟ್ರೇಲಿಯಾ ತಂಡವು ಶುಕ್ರವಾರ ಇಲ್ಲಿ ನಡೆದ ಮೊದಲ ಟಿ20 ಪಂದ್ಯದಲ್ಲಿ ಜಯಭೇರಿ ಬಾರಿಸಿತು.

ಡಿ.ವೈ. ಪಾಟೀಲ ಕ್ರೀಡಾಂಗಣದಲ್ಲಿ ನಡೆದ ಸರಣಿಯ ಮೊದಲ ಪಂದ್ಯದಲ್ಲಿ ಆಸ್ಟ್ರೇಲಿಯಾ ತಂಡವು 9 ವಿಕೆಟ್‌ಗಳಿಂದ ಜಯಿಸಿತು. ಐದು ಪಂದ್ಯಗಳ ಸರಣಿಯಲ್ಲಿ 1–0 ಮುನ್ನಡೆ ಸಾಧಿಸಿತು.

ಟಾಸ್ ಗೆದ್ದ ಆಸ್ಟ್ರೇಲಿಯಾ ತಂಡದ ನಾಯಕಿ ಅಲಿಸಾ ಹೀಲಿ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳಾದ ರಿಚಾ ಘೋಷ್ (36; 20ಎ, 4X5, 6X2) ಹಾಗೂ ದೀಪ್ತಿ ಶರ್ಮಾ (ಔಟಾಗದೆ 36; 15ಎ, 4X8) ಅವರ ಆಟದ ಬಲದಿಂದ ಭಾರತ ತಂಡವು 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 172 ರನ್ ಗಳಿಸಿತು.

ಅದಕ್ಕುತ್ತರವಾಗಿ ಆಸ್ಟ್ರೇಲಿಯಾ ತಂಡವು 18.1 ಓವರ್‌ಗಳಲ್ಲಿ 1 ವಿಕೆಟ್‌ಗೆ 173 ರನ್ ಗಳಿಸಿ ಗೆದ್ದಿತು. ಆರಂಭಿಕ ಬ್ಯಾಟರ್ ಬೆತ್ ಮೂನಿ (ಔಟಾಗದೆ 89, 57ಎ) ಅವರ ಅಬ್ಬರದ ಬ್ಯಾಟಿಂಗ್ ಮುಂದೆ ಭಾರತ ನೀಡಿದ್ದ ಗುರಿ ಬೇಗನೆ ಕರಗಿತು.

ಆತಿಥೇಯ ತಂಡದ ಬೌಲರ್‌ಗಳ ಎಸೆತಗಳನ್ನು ಲೀಲಾಜಾಲವಾಗಿ ಎದುರಿಸಿದ ಮೂನಿ 16 ಬೌಂಡರಿಗಳನ್ನು ಬಾರಿಸಿದರು. 157.14ರ ಸ್ಟ್ರೈಕ್‌ರೇಟ್‌ನಲ್ಲಿ ರನ್ ಗಳಿಸಿದರು. ಅವರು ಮತ್ತು ಅಲೀಸಾ ಹೀಲಿ (37; 23ಎ) ಮೊದಲ ವಿಕೆಟ್ ಜೊತೆಯಾಟದಲ್ಲಿ 73 ರನ್ ಸೇರಿಸಿದರು. ದೇವಿಕಾ ವೈದ್ಯ ಅವರ ಎಸೆತದಲ್ಲಿ ಅಲೀಸಾ ಔಟಾಗುವುದರೊಂದಿಗೆ ಜೊತೆಯಾಟ ಮುರಿಯಿತು.

ಆದರೆ ಮೂನಿ ಜೊತೆಗೂಡಿದ ತಹಿಲಾ ಮೆಕ್‌ಗ್ರಾ (ಔಟಾಗದೆ 40; 29ಎ, 4X4, 6X1) ಮುರಿಯದ ಎರಡನೇ ವಿಕೆಟ್ ಜೊತೆಯಾಟದಲ್ಲಿ 100 ರನ್ ಸೇರಿಸಿದರು.

ಸಂಕ್ಷಿಪ್ತ ಸ್ಕೋರು: ಭಾರತ: 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 172 (ಶಫಾಲಿ ವರ್ಮಾ 21, ಸ್ಮೃತಿ ಮಂದಾನ 28, ಹರ್ಮನ್‌ಪ್ರೀತ್ ಕೌರ್ 21, ದೇವಿಕಾ ವೈದ್ಯ ಔಟಾಗದೆ 25, ರಿಚಾ ಘೋಷ್ 36, ದೀಪ್ತಿ ಶರ್ಮಾ ಔಟಾಗದೆ 36, ಎಲಿಸಾ ಪೆರಿ 10ಕ್ಕೆ2) ಆಸ್ಟ್ರೇಲಿಯಾ: 18.1 ಓವರ್‌ಗಳಲ್ಲಿ 1 ವಿಕೆಟ್‌ಗೆ 173 (ಬೆತ್ ಮೂನಿ ಔಟಾಗದೆ 89, ಅಲೀಸಾ ಹೀಲಿ 37, ತಹಿಲಾ ಮೆಕ್‌ಗ್ರಾ ಔಟಾಗದೆ 40, ದೇವಿಕಾ ವೈದ್ಯ 33ಕ್ಕೆ1) ಫಲಿತಾಂಶ: ಆಸ್ಟ್ರೇಲಿಯಾ ತಂಡಕ್ಕೆ 9 ವಿಕೆಟ್‌ಗಳ ಜಯ. ಸರಣಿಯಲ್ಲಿ 1–0 ಮುನ್ನಡೆ.

ರಾಹುಲ್ ಬಳಗಕ್ಕೆ ಸಮಾಧಾನಕರ ಗೆಲುವಿನ ಸವಾಲು

ಕ್ಲೀನ್ ಸ್ವೀಪ್‌ನತ್ತ ಬಾಂಗ್ಲಾ ಚಿತ್ತ

ಛತ್ತೀಸಗಢ(ಪಿಟಿಐ): ಈಗಾಗಲೇ ಸರಣಿ ಗೆಲುವಿನ ಅವಕಾಶವನ್ನು ಕೈಚೆಲ್ಲಿರುವ ಭಾರತ ತಂಡ ಶನಿವಾರ ಬಾಂಗ್ಲಾದೇಶ ಎದುರು ನಡೆಯಲಿರುವ ಕೊನೆಯ ಏಕದಿನ ಪಂದ್ಯದಲ್ಲಿ ಸಮಾಧಾನಕರ ಜಯದತ್ತ ಚಿತ್ತ ನೆಟ್ಟಿದೆ.

ಹೆಬ್ಬೆರಳಿನ ಗಾಯದಿಂದಾಗಿ ಹೊರಬಿದ್ದಿರುವ ರೋಹಿತ್ ಶರ್ಮಾ ಅವರ ಬದಲಿಗೆ ಕನ್ನಡಿಗ ಕೆ.ಎಲ್. ರಾಹುಲ್ ಈ ಪಂದ್ಯದಲ್ಲಿ ನಾಯಕತ್ವ ವಹಿಸಲಿದ್ದಾರೆ. ಕಳೆದೆರಡೂ ಪಂದ್ಯಗಳಲ್ಲಿ ರಾಹುಲ್ ವಿಕೆಟ್‌ಕೀಪಿಂಗ್ ಮಾಡಿದ್ದರು. ಆದರೆ ಈ ಪಂದ್ಯದಲ್ಲಿ ಇಶಾನ್ ಕಿಶನ್ ಅವರಿಗೆ ಕೀಪಿಂಗ್ ಮತ್ತು ಶಿಖರ್ ಜೊತೆಗೆ ಇನಿಂಗ್ಸ್ ಆರಂಭಿಸುವ ಅವಕಾಶ ಲಭಿಸಬಹುದು.

ಬೆಂಚ್‌ನಲ್ಲಿರುವ ರಜತ್ ಪಾಟೀದಾರ್ ಅಥವಾ ರಾಹುಲ್ ತ್ರಿಪಾಠಿ ಅವರಿಗೂ ಕಣಕ್ಕಿಳಿಯುವ ಅವಕಾಶ ಸಿಗುವ ಸಾಧ್ಯತೆ ಇದೆ. ಅವರಿಗಾಗಿ ಯಾರು ಸ್ಥಾನ ತೆರವು ಮಾಡಿಕೊಡಲಿದ್ದಾರೆಂಬುದು ಖಚಿತವಾಗಿಲ್ಲ. ಬೌಲಿಂಗ್ ವಿಭಾಗದ ಹೊಣೆಯು ಶಾರ್ದೂಲ್ ಠಾಕೂರ್ ಹಾಗೂ ಸಿರಾಜ್ ಮೇಲೆ ಬೀಳಬಹುದು. ಆದರೆ 2–0ಯಿಂದ ಮುಂದಿರುವ ಬಾಂಗ್ಲಾ ತಂಡವು ಕ್ಲೀನ್‌ಸ್ವೀಪ್ ಮೇಲೆ ಕಣ್ಣಿಟ್ಟಿದೆ. ಮೆಹದಿ ಹಸನ್ ಮಿರಾಜ್ ಅವರು ಎರಡೂ ಪಂದ್ಯಗಳಲ್ಲಿ ಅಮೋಘವಾಗಿ ಆಡಿದ್ದಾರೆ. ಆದ್ದರಿಂದ ಅದೇ ತಂಡವನ್ನು ಇಲ್ಲಿಯೂ ಕಣಕ್ಕಿಳಿಸುವ ಸಾಧ್ಯತೆ ಇದೆ. ಆದರೆ, ಇದೇ 14ರಿಂದ ಟೆಸ್ಟ್ ಸರಣಿ ಆರಂಭವಾಗಲಿದೆ. ಅದರಲ್ಲಿ ಆಡುವ ಆಟಗಾರರಿಗೆ ವಿಶ್ರಾಂತಿ ನೀಡುವ ಸಾಧ್ಯತೆಯೂ ಇದೆ.

ಆರಂಭ: ಬೆಳಿಗ್ಗೆ 11.30

ನೇರಪ್ರಸಾರ: ಸೋನಿ ಸ್ಪೋರ್ಟ್ಸ್

ಕುಲದೀಪ್ ಯಾದವ್ ಹಾಗೂ ಶಹಬಾಜ್ ಅಹಮದ್ ಅಭ್ಯಾಸ–ಎಎಫ್‌ಪಿ ಚಿತ್ರ

ಕ್ರಿಕೆಟ್: ಆಸ್ಟ್ರೇಲಿಯಾ ಬೃಹತ್ ಮೊತ್ತ

ಅಡಿಲೇಡ್ (ಎಎಫ್‌ಪಿ): ಮಾರ್ನಸ್ ಲಾಬುಷೇನ್ (163) ಮತ್ತು ಟ್ರಾವಿಸ್ ಹೆಡ್ (175) ಅವರ ಭರ್ಜರಿ ಶತಕದ ನೆರವಿನಿಂದ ಆಸ್ಟ್ರೇಲಿಯಾ ತಂಡ, ವೆಸ್ಟ್ ಇಂಡೀಸ್ ವಿರುದ್ಧದ ಎರಡನೇ ಕ್ರಿಕೆಟ್ ಟೆಸ್ಟ್ ಪಂದ್ಯದಲ್ಲಿ ಬೃಹತ್ ಮೊತ್ತ ಪೇರಿಸಿದೆ.

ಅಡಿಲೇಡ್ ಓವಲ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪಂದ್ಯದ ಎರಡನೇ ದಿನವಾದ ಶುಕ್ರವಾರ ಆತಿಥೇಯ ತಂಡ 7 ವಿಕೆಟ್‌ಗೆ 511 ರನ್ ಗಳಿಸಿ ಇನಿಂಗ್ಸ್ ಡಿಕ್ಲೇರ್ ಮಾಡಿಕೊಂಡಿತು. ಆರಂಭಿಕ ಆಘಾತ ಅನುಭವಿಸಿರುವ ವೆಸ್ಟ್ ಇಂಡೀಸ್ ತಂಡ ದಿನದಾಟದ ಅಂತ್ಯಕ್ಕೆ 4 ವಿಕೆಟ್‌ಗಳಿಗೆ 102 ರನ್ ಗಳಿಸಿದೆ.

ಆಸ್ಟ್ರೇಲಿಯಾ ತಂಡ 3 ವಿಕೆಟ್‌ಗೆ 330 ರನ್‌ಗಳಿಂದ ಶುಕ್ರವಾರ ಬ್ಯಾಟಿಂಗ್ ಮುಂದುವರಿಸಿತ್ತು. ಲಾಬುಷೇನ್ ಮತ್ತು ಹೆಡ್ ಅವರು ನಾಲ್ಕನೇ ವಿಕೆಟ್‌ಗೆ 297 ರನ್‌ಗಳ ಜತೆಯಾಟ ನೀಡಿದರು.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್; ಆಸ್ಟ್ರೇಲಿಯಾ 137 ಓವರ್‌ಗಳಲ್ಲಿ 7 ವಿಕೆಟ್‌ಗೆ 511 ಡಿಕ್ಲೇರ್ಡ್ (ಮಾರ್ನಸ್ ಲಾಬುಷೇನ್ 163, ಟ್ರ್ಯಾವಿಸ್ ಹೆಡ್ 175, ಅಲೆಕ್ಸ್ ಕೇರಿ ಔಟಾಗದೆ 41, ಅಲ್ಜರಿ ಜೋಸೆಫ್ 107ಕ್ಕೆ 2, ಡೆವೊನ್ ಥಾಮಸ್ 53ಕ್ಕೆ 2) ವೆಸ್ಟ್ ಇಂಡೀಸ್: 37 ಓವರ್‌ಗಳಲ್ಲಿ 4 ವಿಕೆಟ್‌ಗೆ 102 (ಕ್ರೆಗ್ ಬ್ರಾಥ್‌ವೇಟ್ 19, ತೇಜ್‌ನಾರಾಯಣ ಚಂದ್ರಪಾಲ್ ಬ್ಯಾಟಿಂಗ್ 47, ಮೈಕಲ್ ನೇಸರ್ 20ಕ್ಕೆ 2, ನೇಥನ್ ಲಿಯೊನ್ 13ಕ್ಕೆ 1)

ಆರ್ಚರಿ ಟ್ರಯಲ್ಸ್ 18ಕ್ಕೆ

ಬೆಂಗಳೂರು: ರಾಷ್ಟ್ರೀಯ ಮಿನಿ (14 ವರ್ಷದೊಳಗಿನವರು) ಆರ್ಚರಿ ಚಾಂಪಿಯನ್‌ಷಿಪ್‌ಗೆ ರಾಜ್ಯ ತಂಡದ ಆಯ್ಕೆಗಾಗಿ ಡಿ. 18ರಂದು ಕಂಠೀರವ ಕ್ರೀಡಾಂಗಣದಲ್ಲಿ ಟ್ರಯಲ್ಸ್ ನಡೆಯಲಿದೆ. ರಾಷ್ಟ್ರೀಯ ಚಾಂಪಿಯನ್‌ಷಿಪ್ ಆಂಧ್ರದ ವಿಜಯವಾಡದಲ್ಲಿ 2023ರ ಜ. 7ರಿಂದ ನಡೆಯಲಿದೆ. ರಾಜ್ಯ ಆರ್ಚರಿ ಸಂಸ್ಥೆಯ ಗೌರವ ಕಾರ್ಯದರ್ಶಿ ಟಿ. ಅನಂತರಾಜು ಅವರಲ್ಲಿ ಇದೇ 17ರೊಳಗೆ ನೋಂದಾಯಿಸಲು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ದೇವೆಂದ್ರ ಸಿಂಗ್, ವಯಸ್ಸು 69 ವರ್ಷ, ಬಿಹಾರ ರಾಜ್ಯದ ವೈಶಾಲಿ ಜಿಲ್ಲೆ ನಿವಾಸಿ. ತುಂಬಾ ದಿನಗಳಿಂದ ನಾನು ಗ್ಯಾಸ್ಟ್ರಿಟಿಸ್, ಮಲಬದ್ಧತೆ ಹಾಗೂ ಅಸಿಡಿಟಿ ಸಮಸ್ಯೆಗಳಿಂದ ಬಳಲುತ್ತಿದ್ದೆ. ಹಾಗಾಗಿ ನನ್ನನ್ನು ಹೊಟ್ಟೆ ನೋವು ಕೂಡ ಬಾಧಿಸುತ್ತಿತ್ತು. ಮಲವಿಸರ್ಜನೆ ಸಮಯದಲ್ಲೂ ಸಮಸ್ಯೆ ಆಗುತ್ತಿತ್ತು. ಹಲವಾರು ರೀತಿಯ ಔಷಧಿಗಳನ್ನು ಸೇವಿಸಿದೆ, ಆದರೂ ನಿವಾರಣೆ ಕಂಡಿರಲಿಲ್ಲ. ನಂತರ ಒಂದು ದಿನ ನನಗೆ ಪೇಟ್ ಸಫಾ ಆಯುರ್ವೇದಿಕ ಹರಳುಗಲು ಮತ್ತು ಮಾತ್ರೆಗಳ ವಿಷಯ ತಿಳಿಯಿತು, ಅದನ್ನು ಬಳಸಿದ ನನಗೆ ಫಲಿತಾಂಶ ಸಿಕ್ಕಿತು. ಪೇಟ್ ಸಫಾ ಆಯುರ್ವೇದಿಕ ಹರಳುಗಳು ಮತ್ತು ಮಾತ್ರೆಗಳು ನನಗೆ ಸಮಸ್ಯೆಗಳಿಂದ ಮುಕ್ತನಾಗಲು ಪರಿಣಾಮಕಾರಿ ಫಲಿತಾಂಶ ನೀಡಿದವು. ಈಗ ನಾನು ಆರಾಮಾಗಿ ಇರುವುದರಿಂದ ಪೇಟ್‌ಸಫಾಗೆ ಧನ್ಯವಾದಗಳು.

ನನ್ನ ಹೆಸರು ಘುಸ್‌ರಾಜ್ ಸೋನಿ, ವಯಸ್ಸು 50 ವರ್ಷ, ರಾಜಸ್ಥಾನದ ಬಿಕಾನೇರ್ ಜಿಲ್ಲೆ ನಿವಾಸಿ. ನಾನು ಬಹುದಿನಗಳಿಂದ ಗ್ಯಾಸ್, ಕಾನ್‌ಸ್ಟಿಪೇಶನ್, ಅಸಿಡಿಟಿಯಂತಹ ಭಾರಿ ಸಮಸ್ಯೆಗಳಿಂದ ಬಳಲುತ್ತಿದ್ದೆ. ಇದರಿಂದಾಗಿ ಹೊಟ್ಟೆಯಲ್ಲಿನ ಕೂಡ ನೋವು ಆರಂಭವಾಗಿತ್ತು. ಹೀಗಾಗಿ ಪ್ರತಿದಿನ ಬೆಳಗಿನ ಕಾರ್ಯ ಮುಗಿಸಿಕೊಳ್ಳುವಲ್ಲಿ ಕೂಡ ಸಮಸ್ಯೆಯಾಗಿತ್ತು. ನಂತರ ಒಂದು ದಿನ ನನ್ನ ಸ್ನೇಹಿತನೊಬ್ಬ ಆಯುರ್ವೇದಿಕ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಪೇಟ್ ಸಫಾ ಹರಳುಗಳು ಮತ್ತು ಮಾತ್ರೆಗಳ ಬಗ್ಗೆ ತಿಳಿಸಿದ; ಅದು ನನ್ನ ಕಾನ್‌ಸ್ಟಿಪೇಶನ್, ಗ್ಯಾಸ್ ಮತ್ತು ಅಸಿಡಿಟಿ ಸಮಸ್ಯೆಗೆ ರಾಮಬಾಣವಾಗಿ ಪರಿಣಮಿಸಿತು. ಇದು ನಿಜವಾಗ್ಯೂ ತುಂಬಾ ಪರಿಣಾಮಕಾರಿ ಫಲಿತಾಂಶ ನೀಡಿತು. ಮಾತ್ರೆಗಳು ಬಾಯಿಯಲ್ಲಿ ಅಂಟಿಕೊಳ್ಳಲಿಲ್ಲ ಹಾಗು ಅದರ ಬಳಕೆಯ ವ್ಯಸನಕ್ಕೆ ಕೂಡ ನಾನು ಈಡಾಗಲಿಲ್ಲ.

ಗೋಪಾಲ್ ಸಪಂತ ದೇವರೆ, ವಯಸ್ಸು 70 ವರ್ಷ, ಮಹಾರಾಷ್ಟ್ರ ರಾಜ್ಯದ ಜಾಲಗಾಂವ್ ನಿವಾಸಿ. ಕಳೆದ 3–4 ವರ್ಷಗಳಿಂದ ನಾನು ಮಲಬದ್ಧತೆ, ಗ್ಯಾಸ್ಟ್ರಿಟಿಸ್ ಮತ್ತು ಅಸಿಡಿಟಿ ಸಮಸ್ಯೆಗಳಿಂದ ಬಳಲುತ್ತಿದ್ದೆ ಇದರಿಂದಾಗಿ ನನ್ನ ಮುಖ ಕಳೆಗುಂದಿದಂತಾಗಿತ್ತು. ಆದರೆ ಒಂದು ದಿನ 16 ನೈಸರ್ಗಿಕ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಪೇಟ್ ಸಫಾ ಹರಳುಗಳು ಮತ್ತು ಮಾತ್ರೆಗಳ ಬಗ್ಗೆ ಮಾಹಿತಿ ಸಿಕ್ಕಿತು. ಅದರ ಮೇಲಿನ ನಿರ್ದೇಶನಗಳ ಪ್ರಕಾರ ದಿನನಿತ್ಯ ನಾನು ಅದನ್ನು ಸೇವಿಸತೊಡಗಿದೆ. ನೀವು ನಂಬುವಿರೊ ಇಲ್ಲವೊ... ಮರುದಿನವೇ ನನ್ನ ಹೊಟ್ಟೆಯಲ್ಲಿನ ಬಾವೆಲ್ ಸಮಸ್ಯೆ ಪರಿಹಾರವಾಗಿತ್ತು. ಇದೊಂದು ಸಂಪೂರ್ಣ ಆಯುರ್ವೇದಿಕ ಉತ್ಪನ್ನ ಆಗಿದ್ದರಿಂದ, ಇದು ಯಾವುದೇ ಅಡ್ಡಪರಿಣಾಮ ಬೀರುವುದಿಲ್ಲ.

petsaffa.com | 24x7 Helpline: 91197 88888 | Available at all medical & general stores

ಹರಿಹರ ತಾಲ್ಲೂಕಿನ ಬೆಳ್ಳೂಡಿಯಲ್ಲಿ ಇಂದು ಕುಸ್ತಿ ಆಯ್ಕೆ ಟ್ರಯಲ್ಸ್

ಸೇನೆ, ರೈಲ್ವೆ ಇಲಾಖೆಯವರಿಗೆ ಅವಕಾಶ: ಆಕ್ಷೇಪ

• ಡಿ.ಕೆ. ಬಸವರಾಜು

ದಾವಣಗೆರೆ: ರಾಷ್ಟ್ರೀಯ ಸೀನಿಯರ್ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಸ್ಪರ್ಧಿಸುವ ಕರ್ನಾಟಕ ತಂಡದ ಆಯ್ಕೆ ಟ್ರಯಲ್ಸ್‌ನಲ್ಲಿ ಸೇನೆ ಹಾಗೂ ರೈಲ್ವೆ ಪೊಲೀಸ್ ಇಲಾಖೆಯ ಕುಸ್ತಿಪಟುಗಳಿಗೂ ಸ್ಪರ್ಧಿಸುವ ಅವಕಾಶ ನೀಡುತ್ತಿರುವುದಕ್ಕೆ ಆಕ್ಷೇಪ ವ್ಯಕ್ತವಾಗಿದೆ.

ಡಿ.21ರಿಂದ 25ರವರೆಗೆ ವಿಶಾಖಪಟ್ಟಣದಲ್ಲಿ ಸ್ಪರ್ಧೆ ನಡೆಯಲಿದೆ. ಅದಕ್ಕಾಗಿ ಹರಿಹರ ತಾಲ್ಲೂಕಿನ ಬೆಳ್ಳೂಡಿಯ ಕನಕ ಗುರುಪೀಠದಲ್ಲಿ ಕರ್ನಾಟಕ ರಾಜ್ಯದ ಕುಸ್ತಿ ತಂಡದ ಆಯ್ಕೆ ನಡೆಯಲಿದೆ. ವಿವಿಧ ವಿಭಾಗಗಳಲ್ಲಿ ಒಟ್ಟು 10 ಜನ ಕುಸ್ತಿಪಟುಗಳನ್ನು ಆಯ್ಕೆ ಮಾಡಲಾಗುತ್ತಿದೆ. ಸೇನೆ ಹಾಗೂ ರೈಲ್ವೆ ಇಲಾಖೆಗೆ ಸೇರಿರುವ ಕ್ರೀಡಾಪಟುಗಳಿಗೆ ಟ್ರಯಲ್ಸ್‌ನಲ್ಲಿ ಅವಕಾಶ ನೀಡಿರುವುದರಿಂದ ಹಲವು ವರ್ಷಗಳಿಂದ ಕ್ರೀಡಾ ವಸತಿನಿಲಯ ಹಾಗೂ ಇತರೆಡೆ ತರಬೇತಿ ಪಡೆಯುತ್ತಿರುವ ಕುಸ್ತಿಪಟುಗಳಿಗೆ ಅನ್ಯಾಯವಾಗಲಿದೆ ಎಂದು ದಾವಣಗೆರೆಯ ಕುಸ್ತಿಪಟುಗಳು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

> **ಭಾರತೀಯ ಕುಸ್ತಿ ಸಂಸ್ಥೆಯ ಆದೇಶದ ಮೇರೆಗೆ ಸೇನೆ ಹಾಗೂ ರೈಲ್ವೆ ಕ್ರೀಡಾಪಟುಗಳಿಗೆ ಅವಕಾಶ ಕಲ್ಪಿಸಲಾಗಿದೆ. ಟ್ರಯಲ್ಸ್‌ನಲ್ಲಿ 65ರಿಂದ 70 ಮಂದಿ ಭಾಗವಹಿಸುವ ನಿರೀಕ್ಷೆ ಇದೆ. ವಿನೋದ್ ಕುಮಾರ್ ಕೆ.**
> ತಾಂತ್ರಿಕ ಸಮಿತಿಯ ಅಧ್ಯಕ್ಷ, ಕರ್ನಾಟಕ ರಾಜ್ಯ ಕುಸ್ತಿ ಸಂಸ್ಥೆ.

'ಈಗಾಗಲೇ ಉದ್ಯೋಗದಲ್ಲಿರುವ ಸೇನೆ ಹಾಗೂ ರೈಲ್ವೆ ಇಲಾಖೆ ಸಿಬ್ಬಂದಿ ಇಲ್ಲಿಗೆ ಬಂದರೆ ಈಗಾಗಲೇ ಕ್ರೀಡಾ ವಸತಿ ನಿಲಯಗಳಲ್ಲಿ ತರಬೇತಿ ಪಡೆಯುತ್ತಿರುವವರಿಗೆ ಅವಕಾಶ ಕಡಿಮೆಯಾಗಲಿದೆ. ಆ ಕ್ರೀಡಾಪಟುಗಳು ತಮ್ಮ ಇಲಾಖೆಯಲ್ಲಿ ಟ್ರಯಲ್ಸ್ ಆಡಿ ಸೋತಿರುತ್ತಾರೆ. ಅವರಿಗೆ ಇಲ್ಲಿ ಅವಕಾಶ ಕೊಡಬಾರದು' ಎಂದು ಕ್ರೀಡಾ ನಿಲಯ ವಿದ್ಯಾರ್ಥಿಗಳು ಆಗ್ರಹಿಸಿದ್ದಾರೆ.

'ಸೇನೆ ಹಾಗೂ ರೈಲ್ವೆ ಇಲಾಖೆ ಕುಸ್ತಿಪಟುಗಳನ್ನು ಇದುವರೆಗೆ ಆಯ್ಕೆ ಟ್ರಯಲ್ಸ್‌ನಲ್ಲಿ ಪರಿಗಣಿಸಿರಲಿಲ್ಲ. ಇದೀಗ ಅವಕಾಶ ನೀಡಲಾಗುತ್ತಿದೆ. ಸೇನೆ, ಪೊಲೀಸ್ ಹಾಗೂ ರೈಲ್ವೆ ಇಲಾಖೆಯ ಉದ್ಯೋಗಗಳಿಗೆ ಕ್ರೀಡಾಕೋಟಾದ ಪ್ರಮಾಣಪತ್ರ ನೀಡಬೇಕು. ಟ್ರಯಲ್ಸ್‌ನಲ್ಲಿ ವಿಜೇತರಾದರೆ ಈ ಪ್ರಮಾಣಪತ್ರ ಸಿಗುತ್ತದೆ. ಅದರಿಂದ ನಾವು ವಂಚಿತರಾಗುವ ಆತಂಕವಿದೆ' ಎಂದು ಕುಸ್ತಿಪಟು ಪರಶುರಾಮ್ ಹೇಳಿದ್ದಾರೆ.

'ಸೇನೆಯಲ್ಲಿರುವ ರಫೀಕ್ ಹೊಳಿ, ಅರ್ಜುನ್ ಹಲಕುರ್ಕಿ ಅವರು ಇಲ್ಲಿಯವರೇ. ಈ ಹಿಂದೆಯೂ ರಾಜ್ಯ ತಂಡ ಪ್ರತಿನಿಧಿಸಿದ್ದಾರೆ. ಯಾವುದೇ ಕ್ರೀಡಾಪಟು ರಾಜ್ಯ ತಂಡ ಪ್ರತಿನಿಧಿಸದಿದ್ದರೆ ಸೌಲಭ್ಯಗಳು ಸಿಗುವುದಿಲ್ಲ. ದೇಶಸೇವೆ ಮಾಡುವವರಿಗೂ ಅವಕಾಶ ಇರಬೇಕು. 'ಏಕಲವ್ಯ', 'ಕ್ರೀಡಾ ರತ್ನ'ದಂತಹ ಪ್ರಶಸ್ತಿಗಳಿಗೆ ಅವಕಾಶ ದೊರೆಯಲು ಇದು ಅಗತ್ಯವಾಗಿದೆ ಎಂದು ಸೇನೆ ಹಾಗೂ ರೈಲ್ವೆ ಇಲಾಖೆಯ ಮೊದಲಿನಿಂದಲೂ ಮನವಿ ಮಾಡಿರುವುದರಿಂದ ಈ ವರ್ಷ ಅವರಿಗೆ ಅವಕಾಶ ಕಲ್ಪಿಸಲಾಗಿದೆ. ಹರಿಯಾಣ, ದೆಹಲಿ, ಮಹಾರಾಷ್ಟ್ರಗಳಲ್ಲಿ ಇಂತಹ ಪದ್ಧತಿ ಇದೆ ' ಎಂದು ಕರ್ನಾಟಕ ರಾಜ್ಯ ಕುಸ್ತಿ ಸಂಸ್ಥೆಯ ತಾಂತ್ರಿಕ ಸಮಿತಿ ಅಧ್ಯಕ್ಷ ಕೆ. ವಿನೋದ್‌ಕುಮಾರ್ 'ಪ್ರಜಾವಾಣಿ'ಗೆ ತಿಳಿಸಿದರು.

ಸ್ನಾನದ ಕೋಣೆಯಲ್ಲೂ ಹಸಿರು ತುಂಬಲಿ...

ಶರವಣಿ

ಸ್ನಾನದ ಕೋಣೆಯಲ್ಲಿ ಗಿಡವೆ!? ಹುಬ್ಬೇರಿಸಬೇಡಿ. ಸ್ನಾನದ ಕೋಣೆಯಲ್ಲೂ ಗಿಡಗಳನ್ನು ಬೆಳೆಸಬಹುದು. ಅಲ್ಲಿ ಬೆಳೆಯುವ ಕೆಲ ಪ್ರಕಾರದ ಗಿಡಗಳು ಕೋಣೆಯ ಅಂದ ಹೆಚ್ಚಿಸುವ ಜೊತೆಗೆ ಆಹ್ಲಾದಕರ ಭಾವ ಹೊಮ್ಮಿಸುತ್ತವೆ. ಬಾತ್ ರೂಮಿಗೆ ಯಾವ ಯಾವವು ಉತ್ತಮ, ಬೆಳೆಸುವುದು ಹೇಗೆ? ಇಲ್ಲಿ ಓದಿ...

ಮನೆಯ ಹೊರಗೂ-ಒಳಗೂ ಸಸ್ಯ ಸಂಕುಲವಿದ್ದರೆ ಸೊಗಸು. ಕೆಲವು ಜಾತಿಯ ಗಿಡಗಳಿಗೆ ಪ್ರಕಾಶಮಾನವಾದ ಸೂರ್ಯನ ಬೆಳಕು, ಹೆಚ್ಚಿನ ಆರ್ದ್ರತೆ ಮತ್ತು ಹೆಚ್ಚು ಆರೈಕೆಯ ಅಗತ್ಯವಿರುತ್ತದೆ. ಇನ್ನೂ ಕೆಲವಕ್ಕೆ ಕಡಿಮೆ ಬೆಳಕು, ಕಡಿಮೆ ಆರ್ದ್ರತೆ ಮತ್ತು ಕಡಿಮೆ ಆರೈಕೆ ಸಾಕು. ಹೀಗಾಗಿ, ಕೆಲವನ್ನು ಮನೆಯ ಹೊರಗೆ ಬೆಳೆಸಬೇಕಾಗುತ್ತದೆ, ಕೆಲವನ್ನು ಮನೆಯ ಒಳಗೂ ಬೆಳೆಸಬಹುದು.

ಕಳೆದ ಕೆಲವು ವರ್ಷಗಳಿಂದ ಮನೆಯಲ್ಲಿ ಬೆಳೆಸುವ ಗಿಡಗಳು ಹೆಚ್ಚು ಜನಪ್ರಿಯವಾಗುತ್ತಿವೆ. ಇದರಿಂದ ಮನೆಯ ಅಂದವನ್ನು ಹೆಚ್ಚಿಸುವುದು ಮಾತ್ರವಲ್ಲ, ಮನೆಯಲ್ಲಿ ಸುಳಿಯುವ ಗಾಳಿಯಲ್ಲಿ ಜೀವಚೈತನ್ಯವನ್ನೂ ತುಂಬಬಹುದು ಎನ್ನುವುದು ಮನದಟ್ಟಾಗಿದೆ. ಅಷ್ಟೆ ಅಲ್ಲ, ಈ ಪ್ರವೃತ್ತಿ ಬಾತ್‌ರೂಮ್ ಸೇರಿದಂತೆ ಮನೆಯ ಪ್ರತಿಯೊಂದು ಕೋಣೆಗೂ ವಿಸ್ತರಿಸಿದೆ. ಆದರೆ, ಲಿವಿಂಗ್ ರೂಮಿನಲ್ಲಿ ಎಂಥ ಗಿಡಗಳನ್ನಿಡಬೇಕು, ಬೆಡ್ ರೂಮಿನಲ್ಲಿ ಇಡಬಹುದಾದ ಗಿಡಗಳು ಯಾವವು? ಮತ್ತು ಬಾತ್ ರೂಮಿಗೆ ಎಂಥವು ಸೂಕ್ತ ಎನ್ನುವುದನ್ನು ತಿಳಿದುಕೊಳ್ಳಬೇಕು.

ಬಾತ್ ರೂಮಿನಲ್ಲಿ ಸರಿಯಾದ ಗಾಳಿ ಬೆಳಕು ಇರುವುದಿಲ್ಲ. ಬಹುತೇಕ ಸಮಯ ಆ ಕೋಣೆಯ ಬಾಗಿಲು ಮುಚ್ಚಿಯೇ ಇರುತ್ತವೆ. ಅಲ್ಲಿ ಗಿಡಗಳನ್ನು ಬೆಳೆಸುವುದು ಹೇಗೆ ಎಂಬ ಗೊಂದಲವೂ ಇರಬಹುದು. ಆದರೆ, ಈ ಕೆಲವು ಸಸ್ಯಗಳನ್ನು ಅಂಥ ವಾತಾವಣದಲ್ಲೂ ಬೆಳೆಸಲು ಸಾಧ್ಯವಿದೆ.

ಅಲೊವೆರಾ(ಲೋಳೆಸರ)

ಅಲೊವೆರಾ ಅಥವಾ ಲೋಳೆಸರವನ್ನೂ ನೀವು ಬಾತ್ ರೂಮ್‌ನಲ್ಲಿ ಬೆಳೆಸಬಹುದು. ಫೇಸ್‌ಮಾಸ್ಕ್ ಆಗುವ, ಚರ್ಮಕ್ಕೆ ಕಾಂತಿ ತುಂಬುವುದು ಸೇರಿದಂತೆ ಅನೇಕ ಔಷಧಿಯ ಗುಣಗಳನ್ನು ಹೊಂದಿರುವ ಈ ಸಸ್ಯವನ್ನು ಕೋಣೆಯ ಕಿಟಕಿಗೆ ಇಡುವುದು ಸೂಕ್ತ. ವಾರಕ್ಕೊಮ್ಮೆ ಬಿಸಿಲಿಗೆ ಇಟ್ಟು ಚೆನ್ನಾಗಿ ನೀರು ಹಾಕಿದರೆ ಸೊಗಸಾಗಿ ಬೆಳೆಯುತ್ತದೆ.

ಕ್ಯಾಲಥಿಯಾ

ಬಾತ್‌ರೂಮ್‌ನ ಅಂದ ಹೆಚ್ಚಿಸುವ ಗಿಡ ಇದು. ಈ ಒಂದೇ ಸಸ್ಯ 3–4 ಬಣ್ಣಗಳಲ್ಲಿ ಮೈದಳೆಯುವುದನ್ನು ನೋಡುವುದೇ ಒಂದು ಆನಂದ. ನೇರವಾದ ಸೂರ್ಯನ ಬೆಳಕು ಹಾಗೂ ಹೆಚ್ಚು ಗಾಳಿಯ ಅಗತ್ಯ ಇದಕ್ಕಿಲ್ಲ. ಸೂರ್ಯನ ಕಿರಣಗಳು ನೇರವಾಗಿ ಬಿದ್ದರೆ ಇದರ ಎಲೆಗಳು ಮುದುಡುತ್ತವೆ ಮತ್ತು ಎಲೆಗಳ ನೈಸರ್ಗಿಕ ಬಣ್ಣ ಹಾಳಾಗುತ್ತದೆ. ಆದ್ದರಿಂದ ಸ್ನಾನದ ಕೋಣೆ ಇದಕ್ಕೆ ಪ್ರಶಸ್ತವಾದ ಜಾಗ. ಸರಿಯಾದ ಪ್ರಮಾಣದಲ್ಲಿ ನೀರು, ತೇವಾಂಶದ ಮಟ್ಟ ಮತ್ತು ಒಳಾಂಗಣ ಗಾಳಿಯಷ್ಟೆ ಇದಕ್ಕೆ ಮುಖ್ಯ.

ಸ್ಪೈಡರ್ ಪ್ಲಾಂಟ್

ಇದು ಸ್ನಾನಗೃಹಕ್ಕೆ ಹೇಳಿ ಮಾಡಿಸಿದ ಸಸ್ಯವಾಗಿದೆ. ತೆಳ್ಳಗಿನ, ಉದ್ದವಾದ, ಕಮಾನಿನಂತಹ ಎಲೆಗಳು ಗಾಢ ಹಸಿರು ಮತ್ತು ತಿಳಿಯಾದ ಬಿಳಿ ಬಣ್ಣದ ವಿಶ್ರಣವನ್ನು ಹೊಂದಿರುತ್ತವೆ. ಇದೂ ತೇವದಲ್ಲಿ ಬೆಳೆವ ಮತ್ತು ಕಡಿಮೆ ಬೆಳಕಿನ ಅವಶ್ಯಕತೆ ಇರುವ ಸಸ್ಯ. ಇದನ್ನು ಸುಲಭವಾಗಿ ವಿಂಗಡಿಸಬಹುದು ಮತ್ತು ಬೇರೆ ಬೇರೆ ಕಡೆ ಮರು ನೆಡಬಹುದು. ಇದನ್ನು ತೂಗು ಕುಂಡದಲ್ಲಿ ನೆಡುವುದರಿಂದ ಕಡಿಮೆ ಜಾಗದಲ್ಲಿ ಬೆಳೆಸಬಹುದು.

ನೆನಪಿರಲಿ

ಸ್ನಾನಗೃಹಕ್ಕೆ ಸಸ್ಯಗಳನ್ನು ಆಯ್ಕೆಮಾಡುವಾಗ ಈ ಕೆಲ ಸಂಗತಿಗಳನ್ನು ಗಮನದಲ್ಲಿಟ್ಟುಕೊಳ್ಳಿ:

- ಹೆಚ್ಚಿನ ಆರ್ದ್ರತೆಯಲ್ಲಿ ಬೆಳೆಯಬಹುದಾದ ಮತ್ತು ತೇವಾಂಶವನ್ನು ಸಹಿಸಿಕೊಳ್ಳಬಲ್ಲ ಸಸ್ಯಗಳನ್ನು ಆರಿಸಿ
- ನಿಮ್ಮ ಸ್ನಾನಗೃಹಕ್ಕೆ ತಕ್ಕ ಮಟ್ಟಿಗೆ ನೈಸರ್ಗಿಕ ಬೆಳಕು ಮತ್ತು ಗಾಳಿ ಹರಿದಾಡಲು ಜಾಗವಿದೆಯೇ ನೋಡಿ
- ಬಿಸಿನೀರು, ಹಬೆ ನೇರವಾಗಿ ಗಿಡದ ಮೇಲೆ ಬೀಳದಂತಹ ಜಾಗದಲ್ಲಿ ಸಸ್ಯಗಳನ್ನು ಇಡಿ
- ಅಗತ್ಯಕ್ಕನುಗುಣವಾಗಿ ಈ ಗಿಡಗಳಿಗೆ ಗೊಬ್ಬರ ಮತ್ತು ಪೋಷಕಾಂಶಗಳನ್ನು ಪೂರೈಸಿ

ಒಳಾಂಗಣ ಬಿದಿರು

ಹೊಲ-ತೋಟ, ಕಾಡಲ್ಲಿ ಬೆಳೆಯುವ ಬಿದರನ್ನು ಬಾತ್‌ರೂಮ್‌ನಲ್ಲಿ ಬೆಳೆಸಲು ಸಾಧ್ಯವೇ ಎಂದು ಗಾಬರಿಯಾಗಬೇಡಿ. ಇದು ಮನೆಯ ಒಳಾಂಗಣದಲ್ಲಿ ಬೆಳೆಸುವ ಅಲಂಕಾರಿಕ ಬಿದಿರಿನ ತಳಿ. ಇದಕ್ಕೆ ಅತಿಯಾದ ಸೂರ್ಯನ ಬೆಳಕು ಅಗತ್ಯವಿಲ್ಲ. ಆದರೆ ವಾರಕ್ಕೊಮ್ಮೆ ಮುಂಜಾನೆಯ ಬೆಳಕಿಗೆ ಒಡ್ಡಬೇಕು. ನೀರು ಸಹ ಮಿತವಾಗಿರಬೇಕು. ವಾರಕ್ಕೆ ಎರಡು ಬಾರಿ ಮಣ್ಣು ಒಣಗಿದಾಗ ನೀರು ಹಾಕಿದರೆ ಸಾಕು. ಚಂದ ಬೆಳೆಯುತ್ತದೆ. ಮನೆಯ ಅಂದವನ್ನೂ ಹೆಚ್ಚಿಸುತ್ತದೆ.

ಸ್ನೇಕ್ ಪ್ಲಾಂಟ್

ಸಾಮಾನ್ಯವಾಗಿ ಮನೆಯ ಯಾವುದೇ ಮೂಲೆಯಲ್ಲಿಟ್ಟರೂ ತನ್ನಷ್ಟಕ್ಕೆ ತಾನು ಬದುಕಬಲ್ಲ, ಬೆಳೆಯಬಲ್ಲ ಸಸ್ಯ ಸ್ನೇಕ್ ಪ್ಲಾಂಟ್. ಇದು ಏಷ್ಯಾ, ಆಫ್ರಿಕಾ ಮೂಲದಿಂದ ಬಂದಿದೆ. ಹಸಿರು ಬಣ್ಣದ ಕತ್ತಿ ಆಕಾರದ ಇದರ ಎಲೆಗಳು ಮನೆಯ ಅಂದವನ್ನೂ ಹೆಚ್ಚಿಸುತ್ತವೆ. ನೋಡಲು ಕೃತಕ ಸಸ್ಯದಂತೆ ಕಾಣುವ ಈ ಸಸ್ಯವನ್ನು ಬೆಳೆಸುವುದು ತುಂಬಾ ಸುಲಭ. ಇದಕ್ಕೆ ಹೆಚ್ಚು ನೀರಿನ ಅಗತ್ಯ ಇರುವುದಿಲ್ಲ. ಪಾಟ್ ನಲ್ಲಿನ ಮಣ್ಣು ಒಣಗಿದಾಗ ಮಾತ್ರ ನೀರು ಹಾಕುತ್ತಿದ್ದರೂ ಸಾಕು. ಈ ಸಸ್ಯವು ಬಿಸಿಲು ಕಡಿಮೆ ಇರುವ ಸ್ಥಳದಲ್ಲಿ ಚೆನ್ನಾಗಿ ಬೆಳೆಯುತ್ತದೆ.

ಕ್ಯಾಕ್ಟಸ್ ಸಸ್ಯಗಳು

ಇವುಗಳನ್ನು ಕಳ್ಳಿ ಗಿಡ ಎಂದೂ ಕರೆಯಲಾಗುತ್ತದೆ. ಈ ಗಿಡಗಳನ್ನು ಒಳಾಂಗಣದಲ್ಲಿ ಬೆಳೆಸುವುದು ಸುಲಭ. ಸ್ನಾನದ ಕೋಣೆಯಲ್ಲೂ ಸೊಗಸಾಗಿ ಬೆಳೆಯಬಲ್ಲವು. ಆದರೆ, ಈ ಗುಂಪಿನಲ್ಲಿ ಹಲವಾರು ವೈವಿಧ್ಯಗಳಿದ್ದು, ಸುಲಭವಾಗಿ ಆರೈಕೆ ಮಾಡಬಲ್ಲ ಗುಂಪಿನ ಕ್ಯಾಕ್ಟಸ್ ಸಸ್ಯಗಳನ್ನು ಆರಿಸಿಕೊಳ್ಳುವುದು ಮುಖ್ಯ.

ಇದಷ್ಟೆ ಅಲ್ಲದೆ, ಶಾಂತಿ ಲಿಲಿ, ಮನಿ ಪ್ಲಾಂಟ್, ಪೊಥೋಸ್, ಬೆಗೊನಿಯಾಸ್, ಬೋಸ್ಟನ್, ಆರ್ಕಿಡ್‌ಗಳು ಸೇರಿದಂತೆ ಅನೇಕ ಸಸ್ಯಗಳನ್ನು ನೀವು ಬಾತ್ ರೂಮಿನಲ್ಲಿ ಬೆಳೆಸಬಹುದು. ❖

ತಂತ್ರಜ್ಞಾನ

ರಿಯಲ್ ಮಿ 5G ಸ್ಮಾರ್ಟ್‌ಫೋನ್

ರಿಯಲ್‌ಮಿ 10 ಪ್ರೊ ಮತ್ತು 10 ಪ್ರೊ + 5G ಭಾರತದಲ್ಲಿ ಬಿಡುಗಡೆಯಾಗಿದ್ದು, ರಿಲಯನ್ಸ್ ಜಿಯೊ 5G ಮೂಲಕ ಕಾರ್ಯನಿರ್ವಹಿಸುತ್ತಿದೆ ಎಂದು ಕಂಪನಿ ಹೇಳಿದೆ.

ರಿಯಲ್‌ಮಿ 10 ಪ್ರೊ: 6.72 ಇಂಚಿನ ಫುಲ್ ಎಚ್‌ಡಿ + ಎಲ್‌ಸಿಡಿ ಡಿಸ್‌ಪ್ಲೇ, ಕ್ವಾಲ್ಕಂ ಸ್ನ್ಯಾಪ್‌ಡ್ರ್ಯಾಗನ್ 695 ಒಕ್ಟಾ ಕೋರ್ ಪ್ರೊಸೆಸರ್ ಹೊಂದಿದೆ.

6GB / 8GB LPDDR4X ಎಂಬ ಎರಡು RAM ಆಯ್ಕೆ, 128GB ಸ್ಟೋರೇಜ್, ಆ್ಯಂಡ್ರಾಯ್ಡ್ 13 ಆಧಾರಿತ ರಿಯಲ್‌ಮಿ UI 4.0 ಓಎಸ್, ಹಿಂಭಾಗದಲ್ಲಿ 108 ಮೆಗಾಪಿಕ್ಸೆಲ್ ಮುಖ್ಯ ಕ್ಯಾಮೆರಾ ಜತೆಗೆ 2 ಮೆಗಾಪಿಕ್ಸೆಲ್ ಮ್ಯಾಕ್ರೊ ಸೆನ್ಸರ್, ಹಾಗೂ 16 ಮೆಗಾಪಿಕ್ಸೆಲ್ ಸೆಲ್ಫಿ ಇದರಲ್ಲಿದೆ. ಜತೆಗೆ 5,000mAh ಬ್ಯಾಟರಿ ಮತ್ತು 33W ಫಾಸ್ಟ್ ಚಾರ್ಜಿಂಗ್ ಬೆಂಬಲ ಇದರಲ್ಲಿದೆ ಎಂದು ರಿಯಲ್‌ಮಿ ತಿಳಿಸಿದೆ.

ಹೈಪರ್‌ಸ್ಪೇಸ್ ಗೋಲ್ಡ್, ಡಾರ್ಕ್ ಮ್ಯಾಟರ್ ಮತ್ತು ನೆಬ್ಯುಲಾ ಬ್ಲೂ ಎಂಬ ಮೂರು ಬಣ್ಣಗಳಿದ್ದು, 6GB RAM + 128GB ಮಾದರಿಗೆ ₹18,999 ದರ ಮತ್ತು 8GB RAM + 128GB ಆವೃತ್ತಿಗೆ ₹19,999 ದರ ಹೊಂದಿದೆ.

ರಿಯಲ್‌ಮಿ 10 Pro + 5G: ಹೊಸ ಸ್ಮಾರ್ಟ್‌ಫೋನ್‌ನಲ್ಲಿ 6.7 ಇಂಚಿನ ಫುಲ್‌ಎಚ್‌ಡಿ + ಡಿಸ್‌ಪ್ಲೇ, ಮೀಡಿಯಾಟೆಕ್ ಡೈಮೆನ್ಸಿಟಿ 1080 ಒಕ್ಟಾ ಕೋರ್ ಪ್ರೊಸೆಸರ್ ಜತೆಗೆ Mali-G68 MC4 GPU ಗ್ರಾಫಿಕ್ಸ್ ಬೆಂಬಲ ಹೊಂದಿದೆ. ಆ್ಯಂಡ್ರಾಯ್ಡ್ 13 ಆಧಾರಿತ ರಿಯಲ್‌ಮಿ UI 4.0 ಓಎಸ್ ಈ ಸ್ಮಾರ್ಟ್‌ಫೋನ್‌ನಲ್ಲಿದೆ ಎಂದು ಕಂಪನಿ ಹೇಳಿದೆ.

6GB / 8GB LPDDR4X ಎಂಬ ಎರಡು RAM ಜತೆಗೆ, 128GB ಸ್ಟೋರೇಜ್ ಹೊಸ ರಿಯಲ್‌ಮಿ 10 Pro + 5G ಸ್ಮಾರ್ಟ್‌ಫೋನ್‌ನಲ್ಲಿದೆ. 108 ಮೆಗಾಪಿಕ್ಸೆಲ್ ಮುಖ್ಯ ಕ್ಯಾಮೆರಾ ಜತೆಗೆ 8 ಮೆಗಾಪಪಿಕ್ಸೆಲ್ ಅಲ್ಟ್ರಾ ವೈಡ್ ಲೆನ್ಸ್, 2 ಮೆಗಾಪಿಕ್ಸೆಲ್ ಮ್ಯಾಕ್ರೊ ಕ್ಯಾಮೆರಾ ಇದರಲ್ಲಿದೆ. ಜತೆಗೆ 5,000mAh ಬ್ಯಾಟರಿ ಮತ್ತು 67W ಫಾಸ್ಟ್ ಚಾರ್ಜಿಂಗ್ ಇದರಲ್ಲಿದೆ.

ಹೈಪರ್‌ಸ್ಪೇಸ್ ಗೋಲ್ಡ್, ಡಾರ್ಕ್ ಮ್ಯಾಟರ್ ಮತ್ತು ನೆಬ್ಯುಲಾ ಬ್ಲೂ ಎಂಬ ಬಣ್ಣಗಳಿದ್ದು, 6GB RAM + 128GB ಮಾದರಿಗೆ ₹24,999 ದರ ಮತ್ತು 8GB RAM + 128GB ಆವೃತ್ತಿಗೆ ₹25,999 ದರ ಹೊಂದಿದೆ.

ಆರಂಭಿಕ ಕೊಡುಗೆಯಾಗಿ ಸೀಮಿತ ಅವಧಿಗೆ ರಿಯಲ್‌ಮಿ ಇ-ಸ್ಟೋರ್, ಫ್ಲಿಪ್‌ಕಾರ್ಟ್ ಮತ್ತು ಅಧಿಕೃತ ರಿಟೇಲರ್ ಮೂಲಕ ಖರೀದಿಸುವ ಗ್ರಾಹಕರಿಗೆ ₹1,000 ಕ್ಯಾಶ್‌ಬ್ಯಾಕ್ ದೊರೆಯಲಿದೆ.

ಸ್ನ್ಯಾಪ್‌ಡ್ರ್ಯಾಗನ್ 8+ ಜನರೇಶನ್ 1 ಸ್ಮಾರ್ಟ್‌ಫೋನ್

ಏಸಸ್ ರಾಗ್ ಫೋನ್ 6 ಡಯಾಬ್ಲೊ ಇಮೋರ್ಟಲ್ ಎಡಿಶನ್ ಬಿಡುಗಡೆಯಾಗಿದ್ದು, ಹೊಸ ಸ್ನ್ಯಾಪ್‌ಡ್ರ್ಯಾಗನ್ 8 + ಜನರೇಶನ್ 1 ಪ್ರೊಸೆಸರ್ ಹೊಂದಿದೆ.

ಏಸಸ್ ರಾಗ್ ಫೋನ್ 6 ಸ್ಮಾರ್ಟ್‌ಫೋನ್ ಭಾರತೀಯ ಮಾರುಕಟ್ಟೆಗೆ ಕಳೆದ ಜುಲೈನಲ್ಲಿಯೇ ಬಿಡುಗಡೆಯಾಗಿತ್ತು. ಈ ಬಾರಿ ನೂತನ ಪ್ರೊಸೆಸರ್ ಜತೆಗೆ, ಡಯಾಬ್ಲೊ ಇಮೋರ್ಟಲ್ ಎಡಿಶನ್ ಮಾರುಕಟ್ಟೆಗೆ ಲಗ್ಗೆ ಇರಿಸಿದೆ.

ಹೊಸ ಮಾದರಿಯಲ್ಲಿ 16GB LPDDR5 RAM ಮತ್ತು 512GB UFS 3.1 ಸ್ಟೋರೇಜ್ ಇರಲಿದೆ. ಡಯಾಬ್ಲೊ ಇಮೋರ್ಟಲ್ ಗ್ರಾಫಿಕ್ಸ್, ಆಕರ್ಷಕ ವಿನ್ಯಾಸ ನೂತನ ಸ್ಮಾರ್ಟ್‌ಫೋನ್‌ನ ವಿಶೇಷತೆಯಾಗಿದೆ ಎಂದು ಕಂಪನಿ ತಿಳಿಸಿದೆ.

6.78 ಇಂಚಿನ ಡಿಸ್‌ಪ್ಲೇ, 50 ಮೆಗಾಪಿಕ್ಸೆಲ್ ಸಹಿತ ಪ್ರಮುಖ ಕ್ಯಾಮೆರಾ, ಜತೆಗೆ 13 ಮೆಗಾಪಿಕ್ಸೆಲ್ ಅಲ್ಟ್ರಾ ವೈಡ್ ಆ್ಯಂಗಲ್, 5 ಮೆಗಾಪಿಕ್ಸೆಲ್ ಮ್ಯಾಕ್ರೊ ಲೆನ್ಸ್ ಕ್ಯಾಮೆರಾ ಹಾಗೂ 12 ಮೆಗಾಪಿಕ್ಸೆಲ್ ಸೆಲ್ಫಿ ಇದರಲ್ಲಿದೆ ಎಂದು ಏಸಸ್ ತಿಳಿಸಿದೆ. ಹೊಸ ಆವೃತ್ತಿ ಬೆಲೆ ವಿವರವನ್ನು ಕಂಪನಿ ಬಹಿರಂಗಪಡಿಸಿಲ್ಲ. ❖

ವೈವಿಧ್ಯಮಯ ‘ಫೇಸ್‌ಪ್ಯಾಕ್’

ಬ್ಯೂಟಿ ಟಿಪ್ಸ್

ಮುಖದ ತ್ವಚೆಯಲ್ಲಿ ಜಿಡ್ಡು ಅಥವಾ ಎಣ್ಣೆ ಅಂಶವಿರುವುದು ಹಲವರಿಗೆ ಕಿರಿಕಿರಿ. ಅದು ಮುಖದ ಕಾಂತಿಯನ್ನು ಕುಗ್ಗಿಸುತ್ತದೆ. ಈ ಎಣ್ಣೆಯುಕ್ತ ಚರ್ಮದ ಸಮಸ್ಯೆ ಪರಿಹಾರಕ್ಕೆ ಈ ಕೆಳಗಿನ ಸಲಹೆಗಳನ್ನು ಪಾಲಿಸಬಹುದು.

- ಕ್ಯಾರೆಟ್ ತುರಿದು ಅದಕ್ಕೆ ಒಂದು ಚಮಚ ಜೇನು ತುಪ್ಪ, 1 ಚಮಚ ಕಡಲೆ ಹಿಟ್ಟು ಹಾಗೂ 4 ಹನಿ ನಿಂಬೆರಸವನ್ನು ಸೇರಿಸಿ, ಮಿಶ್ರಣ ಮಾಡಿ ಮುಖಕ್ಕೆ ಲೇಪಿಸಿಕೊಂಡು 20 ನಿಮಿಷ ಒಣಗಲು ಬಿಡಿ. ನಂತರ ನೀರಿನಿಂದ ಮುಖ ತೊಳೆಯಬೇಕು.
- ಒಂದು ಚಮಚ ಶ್ರೀಗಂಧದ ಪೌಡರ್‌ಗೆ 2 ಚಮಚ ಕಡ್ಲೆ ಹಿಟ್ಟು ಹಾಗೂ ಒಂದು ಚಮಚ ರೋಸ್‌ವಾಟರ್ ಸೇರಿಸಿ. ಮಿಶ್ರಣ ಮಾಡಿಕೊಂಡು ಮುಖಕ್ಕೆ ಲೇಪಿಸಿ. 20 ನಿಮಿಷ ಒಣಗಲು ಬಿಡಿ. ನಂತರ ನೀರಿನಿಂದ ಮುಖ ತೊಳೆಯಿರಿ.
- ಪಪ್ಪಾಯಿ ಹಣ್ಣಿನ ತಿರುಳಿಗೆ 2 ಟೇಬಲ್ ಚಮಚ ನಿಂಬೆ ರಸ ಸೇರಿಸಿ ಮಿಕ್ಸ್ ಮಾಡಿ. ಮುಖಕ್ಕೆ ಹಚ್ಚಿ. 20 ನಿಮಿಷ ಬಿಟ್ಟು, ನೀರಿನಿಂದ ಮುಖ ತೊಳೆಯಿರಿ.
- ಸೇಬನ್ನು ಮಿಕ್ಸಿಗೆ ಹಾಕಿ ರಸ ಮಾಡಿಕೊಳ್ಳಿ. ಒಂದು ಚಮಚ ಸೇಬಿನ ರಸಕ್ಕೆ ಅರ್ಧ ಚಮಚ ನಿಂಬೆ ರಸ ಸೇರಿಸಿ ಮುಖಕ್ಕೆ ಹಚ್ಚಿ. 20 ನಿಮಿಷ ಬಿಡಿ. ನಂತರ ನೀರಿನಿಂದ ಮುಖ ತೊಳೆಯಿರಿ.
- ನಿತ್ಯ ಅರಿಶಿನ ಪುಡಿಗೆ ಮೊಸರನ್ನು ಬೆರೆಸಿ ಮುಖಕ್ಕೆ ಹಚ್ಚಿ. 20 ನಿಮಿಷ ಬಿಡಿ. ನಂತರ ನೀರಿನಿಂದ ಮುಖ ತೊಳೆಯಿರಿ. ಇದರಿಂದ ಮುಖದ ತ್ವಚೆ ತುಂಬಾ ಮೃದುವಾಗುತ್ತದೆ.
- ಸ್ನಾನ ಮಾಡಿ ಅಥವಾ ಮುಖ ತೊಳೆದು ಮೇಕಪ್ ಮಾಡುವ ಮೊದಲು ರೋಸ್ ವಾಟರ್ ಅನ್ನು ಹತ್ತಿಯಿಂದ ಅದ್ದಿಕೊಂಡು ಮುಖದ ಎಲ್ಲ ಭಾಗಗಳನ್ನು ಸ್ವಚ್ಛಗೊಳಿಸಿ, ಒರೆಸಿಕೊಳ್ಳಿ. ಇದರಿಂದ ಮುಖದಲ್ಲಿರುವ ಎಣ್ಣೆ ಅಂಶ ಕಡಿಮೆಯಾಗಿ ತ್ವಚೆಯ ಕಾಂತಿ ಹೆಚ್ಚುತ್ತದೆ. ಈ ಚಿಕಿತ್ಸೆಯನ್ನು ಎಲ್ಲ ವಿಧದ ಮುಖ ಚರ್ಮವುಳ್ಳವರು ಸಹ ಮಾಡಬಹುದು.

(ವಿವಿಧ ಮೂಲಗಳಿಂದ)

ಹೋಂ ಮೇಡ್ ಚಾಕೊಲೇಟ್

ವೇದಾವತಿ ಎಚ್. ಎಸ್.

ನಳಪಾಕ

ಚಾಕೊಲೇಟ್ ಸಾಸ್

ಬೇಕಾಗುವ ಸಾಮಗ್ರಿಗಳು: ಒಂದು ಕಪ್ ಕೊಕೊ ಪೌಡರ್, ಒಂದು ಚಮಚ ಮೈದಾಹಿಟ್ಟು, ಅರ್ಧಕಪ್ ಸಕ್ಕರೆ ಪುಡಿ, ಚಿಟಿಕೆ ಉಪ್ಪು, 2 ಕಪ್ ಹಾಲು, ಒಂದು ಚಮಚ ಬೆಣ್ಣೆ, ಅರ್ಧ ಚಮಚ ವೆನಿಲ್ಲಾ ಎಸೆನ್ಸ್.

ತಯಾರಿಸುವ ವಿಧಾನ: ಕೊಕೊ ಪೌಡರ್, ಮೈದಾಹಿಟ್ಟು, ಸಕ್ಕರೆಪುಡಿ ಇಷ್ಟನ್ನು ಜರಡಿಗೆ ಹಾಕಿ ಜರಡಿ ಹಿಡಿಯಿರಿ. ಬಳಿಕ ಹಾಲನ್ನು ಸೇರಿಸಿ ಗಂಟಾಗದ ರೀತಿಯಲ್ಲಿ ಮಿಶ್ರಣ ಮಾಡಿ, ಒಲೆಯ ಮೇಲಿಟ್ಟು, ಸಣ್ಣ ಉರಿಯಲ್ಲಿ ಗಟ್ಟಿಯಾಗುವವರೆಗೂ ಮಿಶ್ರಣ ಮಾಡಿ. ಬಳಿಕ ಬೆಣ್ಣೆ ಮತ್ತು ವೆನ್ನಿಲಾ ಎಸೆನ್ಸ್ ಬೆರೆಸಿ ಮಿಶ್ರಣವನ್ನು ಒಲೆಯಿಂದ ಇಳಿಸಿ.

ಐಸ್‌ಕ್ರೀಂ

ಬೇಕಾಗುವ ಸಾಮಗ್ರಿಗಳು: ಅರ್ಧ ಲೀಟರ್ ಫ್ರೆಶ್ ಕ್ರೀಂ, 400 ಗ್ರಾಂ ಕಂಡೆನ್ಸ್ಡ್ ಹಾಲು, ಸಿಹಿ ಇಲ್ಲದ ಕೊಕೊ ಪೌಡರ್ ನಾಲ್ಕು ಚಮಚ.

ತಯಾರಿಸುವ ವಿಧಾನ: ತಾಜಾ ಕ್ರೀಂ ಅನ್ನು ಒಂದು ಗಂಟೆ ಫ್ರಿಜ್‌ನಲ್ಲಿಡಿ. ಬಳಿಕ ಬೌಲಿಗೆ ಹಾಕಿ 10 ರಿಂದ 15 ನಿಮಿಷ ಚೆನ್ನಾಗಿ ಬೀಟ್ ಮಾಡಿ. ಈಗ ಕಂಡೆನ್ಸ್ಡ್ ಹಾಲು ಹಾಗೂ ಕೊಕೊ ಪೌಡರ್ ಸೇರಿಸಿ. 8 ರಿಂದ 10 ನಿಮಿಷ ಕಡಿಮೆ ಸ್ಪೀಡ್‌ನಲ್ಲಿ ಬೀಟ್ ಮಾಡಿ. ಈ ಮಿಶ್ರಣವನ್ನು ಒಂದು ಬಾಕ್ಸಿಗೆ ಹಾಕಿ ಗಟ್ಟಿಯಾಗಿ ಮುಚ್ಚಳದಿಂದ ಮುಚ್ಚಿ. 6 ರಿಂದ ಎಂಟು ಗಂಟೆಗಳ ಕಾಲ ಫ್ರೀಜರ್‌ನಲ್ಲಿಡಿ. ಸ್ಕೂಪ್‌ನಲ್ಲಿ ತೆಗೆದು ಸವಿಯಿರಿ.

ಚಾಕೊಲೇಟ್

ಬೇಕಾಗುವ ಸಾಮಗ್ರಿಗಳು: ಒಂದು ಕಪ್ ಸಕ್ಕರೆಪುಡಿ, ಅರ್ಧ ಕಪ್ ಕೊಕೊ ಪೌಡರ್, ಅರ್ಧಕಪ್ ಹಾಲಿನ ಪುಡಿ, 1 ಕಪ್ ತೆಂಗಿನ ಎಣ್ಣೆ.

ತಯಾರಿಸುವ ವಿಧಾನ: ಸಕ್ಕರೆಪುಡಿ, ಕೊಕೊ ಪೌಡರ್, ಹಾಲಿನಪುಡಿ ಇವುಗಳನ್ನು ಒಟ್ಟಿಗೆ ಹಾಕಿ ಜರಡಿ ಹಿಡಿಯಿರಿ. ಬಳಿಕ ಒಂದು ಪಾತ್ರೆಗೆ ಅರ್ಧದಷ್ಟು ನೀರು ಹಾಕಿಕುದಿಸಿ. ಕುದಿಯುತ್ತಿರುವ ನೀರಿನ ಮೇಲೆ ಅದಕ್ಕೆ ಹೊಂದುವಂತೆ ಬೌಲನ್ನು ಪಾತ್ರೆಯ ಮೇಲಿಟ್ಟು ನೀರು ತಾಕದಂತೆ ಇಡಿ. ತೆಂಗಿನ ಎಣ್ಣೆಯನ್ನು ಹಾಕಿ, ಬಳಿಕ ಜರಡಿ ಹಿಡಿದ ಪುಡಿಯನ್ನು ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ. ಈ ಮಿಶ್ರಣವು ಹೊಳಪು ಬರುವವರೆಗೂ ಮಿಶ್ರಣ ಮಾಡಿ. ನಂತರ ಒಲೆ ಆರಿಸಿ. ಮಿಶ್ರಣವನ್ನು ಚಾಕೊಲೇಟ್ ಅಚ್ಚಿಗೆ ಹಾಕಿ, ಬೇಕಿದ್ದರೆ ಗೋಡಂಬಿ, ಬಾದಾಮಿ ಹಾಕಬಹುದು. ಇದನ್ನು 2 ಗಂಟೆ ಫ್ರಿಜ್‌ನಲ್ಲಿ ಇಡಿ. ಸಿಹಿಯಾದ ಚಾಕೊಲೇಟ್ ಸವಿಯಲು ಸಿದ್ಧ.

ನೀರಿನೊಳಗೆ 'ಫಾರ್ ರಿಜಿಸ್ಟ್ರೇಷನ್'

ಪೃಥ್ವಿ ಅಂಬಾರ್ ಹಾಗೂ ಮಿಲನ ನಾಗರಾಜ್ ನಾಯಕ - ನಾಯಕಿಯಾಗಿ ನಟಿಸಿರುವ 'ಫಾರ್ ರಿಜಿಸ್ಟ್ರೇಷನ್' ಚಿತ್ರೀಕರಣ ಇತ್ತೀಚೆಗಷ್ಟೇ ಮುಗಿದಿದೆ.

ಪೃಥ್ವಿ ಅಂಬಾರ್ ಹಾಗೂ ಮಿಲನ ನಾಗರಾಜ್ ನಾಯಕ - ನಾಯಕಿಯಾಗಿ ನಟಿಸಿರುವ 'ಫಾರ್ ರಿಜಿಸ್ಟ್ರೇಷನ್' ಚಿತ್ರೀಕರಣ ಇತ್ತೀಚೆಗಷ್ಟೇ ಮುಗಿದಿದೆ.

ಕೊನೆಯ ದೃಶ್ಯವೊಂದನ್ನು ಈಜುಕೊಳದಲ್ಲಿ ಚಿತ್ರೀಕರಿಸಲಾಗಿದೆ. ನೀರಿನ ಒಳಗೆ ಕ್ಯಾಮೆರಾ ಇಟ್ಟು ಚಿತ್ರೀಕರಿಸಿದ್ದೇವೆ ಎಂದಿದ್ದಾರೆ ನಿರ್ದೇಶಕ ನವೀನ್ ದ್ವಾರಕಾನಾಥ್.

ಛಾಯಾಗ್ರಾಹಕ ಅಭಿಷೇಕ್ ಕಾಸರಗೋಡು ಈ ಹಾಡನ್ನು ಚಿತ್ರೀಕರಿಸಿದ್ದಾರೆ. ಇಮ್ರಾನ್ ಸರ್ದಾರಿಯಾ ನೃತ್ಯ ನಿರ್ದೇಶಿಸಿದ್ದಾರೆ. ಚಿತ್ರದ ಫಸ್ಟ್ ಲುಕ್‌ಗೆ ಭಾರೀ ಮೆಚ್ಚುಗೆ ವ್ಯಕ್ತವಾಗಿದೆ. ನಿರ್ದೇಶನವಿರುವ ಈ ಹಾಡಿನಲ್ಲಿ ನಾಯಕ- ನಾಯಕಿ ಅಭಿನಯಿಸಿದ್ದಾರೆ.

ಚಿತ್ರ ಫೆ. 10ರಂದು ಚಿತ್ರ ತೆರೆ ಕಾಣಲಿದೆ. ನಿಶ್ಚಲ್ ಫಿಲಂಸ್ ಮೂಲಕ ಎನ್.ನವೀನ್ ರಾವ್ ಈ ಚಿತ್ರ ನಿರ್ಮಾಣ ಮಾಡಿದ್ದಾರೆ. ನವೀನ್ ದ್ವಾರಕಾನಾಥ್ ನಿರ್ದೇಶಿಸಿದ್ದಾರೆ. ಕಥೆ, ಚಿತ್ರಕಥೆಯನ್ನು ನಿರ್ದೇಶಕರೇ ಬರೆದಿದ್ದಾರೆ. ಹರೀಶ್ ಸಂಗೀತ ನಿರ್ದೇಶನ, ಅಭಿಷೇಕ್ ಕಲ್ಲತ್ತಿ- ಅಭಿಷೇಕ್ ಕಾಸರಗೋಡು ಛಾಯಾಗ್ರಹಣ ಹಾಗೂ ಮನು ಶೆಡ್ಗಾರ್ ಅವರ ಸಂಕಲನವಿದೆ.

ರವಿಶಂಕರ್, ಬಾಬು ಹಿರಣ್ಣಯ್ಯ, ಸ್ವಾತಿ, ಸುಧಾ ಬೆಳವಾಡಿ, ತಬಲನಾಣಿ, ರಮೇಶ್ ಭಟ್, ಸಿಹಿಕಹಿ ಚಂದ್ರು ತಾರಾಬಳಗದಲ್ಲಿದ್ದಾರೆ.

ಪೃಥ್ವಿ ಅಂಬಾರ್, ಮಿಲನ ನಾಗರಾಜ್

ನಿರ್ದೇಶಕ, ನಾಯಕನೇ 'ರಿಚ್ಚಿ'

'ರಿಚ್ಚಿ' ಇದು ಸಿನಿಮಾ ಹೆಸರು ಮಾತ್ರವಲ್ಲ. ನಿರ್ದೇಶಕ ಹಾಗೂ ನಾಯಕನ ಹೆಸರು ಕೂಡ. ಹೌದು ತಮ್ಮ ಹೆಸರನ್ನೇ ಚಿತ್ರದ ಶೀರ್ಷಿಕೆಯಾಗಿಸಿದ್ದಾರೆ ರಿಚ್ಚಿ. ಚಿತ್ರದ ನಿರ್ಮಾಪಕರೂ ಇವರೆ. ಚಿತ್ರೀಕರಣ ಇತ್ತೀಚೆಗೆ ಪೂರ್ಣಗೊಂಡಿದೆ. ನಾಯಕಿಯಾಗಿ 'ಕನ್ನಡತಿ' ಧಾರಾವಾಹಿ ಖ್ಯಾತಿಯ ರಮೋಲ ಅಭಿನಯಿಸಿದ್ದಾರೆ.

ಮಾರುತಿ ಮೂವಿ ಮೇಕರ್ಸ್ ಲಾಂಛನದಲ್ಲಿ ನಿರ್ಮಾಣವಾಗಿರುವ 'ಈ ಚಿತ್ರದ ಚಿತ್ರೀಕರಣ ಮುಕ್ತಾಯವಾಗಿದೆ. ರಾಕೇಶ್ ರಾವ್ 'ರಿಚ್ಚಿ' ಚಿತ್ರದ ಸಹ ನಿರ್ಮಾಪಕರು. ಬೆಂಗಳೂರು, ಮೈಸೂರು, ಮಡಿಕೇರಿ ಹಾಗೂ ಮಂಗಳೂರಿನಲ್ಲಿ ಚಿತ್ರೀಕರಣ ನಡೆದಿದೆ. ಲವ್ ಮತ್ತು ಸಸ್ಪೆನ್ಸ್ ಥ್ರಿಲ್ಲರ್ ಕಥಾಹಂದರ ಹೊಂದಿರುವ ಈ ಚಿತ್ರ ಉತ್ತಮವಾಗಿ ಮೂಡಿಬಂದಿದೆ. ಕನ್ನಡ ಹಾಗೂ ಹಿಂದಿ ಭಾಷೆಗಳಲ್ಲಿ ನಿರ್ಮಾಣವಾಗಿದೆ.

ಅಗಸ್ತ್ಯ ಸಂತೋಷ್ ಅವರು ಸಂಗೀತ ನೀಡಿರುವ ನಾಲ್ಕು ಹಾಡುಗಳು ಈ ಚಿತ್ರದಲ್ಲಿವೆ. ಸೋನು ನಿಗಮ್, ಕುನಾಲ್ ಗಾಂಜಾವಾಲ ಹಾಗೂ ಅಂಕಿತ ಕುಂಡು ಹಾಡುಗಳನ್ನು ಹಾಡಿದ್ದಾರೆ. ಗೌಸ್ ಪೀರ್, ಆನಂದ್ ಹಾಗೂ ವಿನೋದ್ ಹಾಡುಗಳನ್ನು ಬರೆದಿದ್ದಾರೆ. ಹಿಂದಿ ಭಾಷೆಯಲ್ಲಿ ಈ ಚಿತ್ರದ ಹಾಡುಗಳನ್ನು ಜಾವೇದ್ ಅಲಿ, ಪಲಾಕ್ ಮುಚ್ಚಲ್ ಹಾಗೂ ಕುನಾಲ್ ಗಾಂಜಾವಾಲ ಹಾಡಿದ್ದಾರೆ.

ವೀರೇಶ್ ಎನ್.ಟಿ.ಎ ಛಾಯಾಗ್ರಹಣ, ಅರ್ಜುನ್ ಕಿಟ್ಟು ಸಂಕಲನ, ಚಿನ್ನಿಪ್ರಕಾಶ್, ಧನಂಜಯ ಹಾಗೂ ಭೂಷಣ್ ನೃತ್ಯ ನಿರ್ದೇಶನ ಹಾಗೂ ವಿಕ್ರಮ್ ಮೋರ್, ಡಿಫರೆಂಟ್ ಡ್ಯಾನಿ ಅವರ ಸಾಹಸ ನಿರ್ದೇಶನ ಈ ಚಿತ್ರಕ್ಕಿದೆ. ಮನೋಜ್, ಮಿಮಿಕ್ರಿ ಗೋಪಿ, ಚಂದ್ರಪ್ರಭ, ರಾಘವೇಂದ್ರ ತಾರಾಬಳಗದಲ್ಲಿದ್ದಾರೆ.

'ರಿಚ್ಚಿ' ಚಿತ್ರದಲ್ಲಿ ರಿಚ್ಚಿ, ರಮೋಲ

ಸಿನಿ ಹನಿ

'ಎಸ್‌ಎಲ್‌ವಿ'ಗೆ ಒಮಾನ್‌ನಲ್ಲಿ ಸ್ವಾಗತ

ಸೌರಭ್ ಕುಲಕರ್ಣಿ ನಿರ್ದೇಶನದ 'ಸಿರಿ ಲಂಬೋದರ ವಿವಾಹ' (ಎಸ್‌ಎಲ್‌ವಿ) ಚಿತ್ರ ಒಮಾನ್ ದೇಶದ ಸೋಹಾರ್ ಮತ್ತು ಮಸ್ಕತ್ ನಗರಗಳಲ್ಲಿ ವಿಶೇಷ ಪ್ರದರ್ಶನ ಕಂಡಿತು. ಎರಡೂ ನಗರಗಳ ಕನ್ನಡ ಸಂಘಗಳ ಸಹಕಾರದೊಂದಿಗೆ ಸುಮಾರು 400 ಜನ ಚಿತ್ರ ವೀಕ್ಷಿಸಿದರು.

ಇದೊಂದು ಪಕ್ಕಾ ಕಮರ್ಷಿಯಲ್ ಎಂಟರ್ಟೈನರ್ ಚಿತ್ರ. ಇದರಲ್ಲಿನ ಸಸ್ಪೆನ್ಸ್ ಕಥಾಹಂದರವನ್ನು ಎಲ್ಲರೂ ಇಷ್ಟಪಟ್ಟಿದ್ದಾರೆ. ಇದೊಂದು ಬೇರೆ ತರಹದ ಚಿತ್ರ ಮತ್ತು ಇತ್ತೀಚಿನ ದಿನಗಳಲ್ಲಿ ಇಂತಹ ಹಾಸ್ಯ-ಕುತೂಹಲ ಮಿಶ್ರಿತ ಸಿನಿಮಾ ನೋಡಿರಲಿಲ್ಲ ಎನ್ನುವುದು ಅನಿವಾಸಿ ಕನ್ನಡಿಗರ ಅಭಿಪ್ರಾಯ ಎಂದರು ನಿರ್ದೇಶಕ ಸೌರಭ್.

ಅಂಜನ್ ಎ. ಭಾರದ್ವಾಜ್ - ದಿಶಾ ರಮೇಶ್ ನಾಯಕ-ನಾಯಕಿಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ರಾಜೇಶ್ ನಟರಂಗ, ಸುಂದರ್ ವೀಣಾ, ಬಲ ರಾಜವಾಡಿ, ಪಿ.ಡಿ.ಸತೀಶ್ ಚಂದ್ರ ತಾರಾಗಣದಲ್ಲಿದ್ದಾರೆ. ವರ್ಸ್ಯಾಟೋ ವೆಂಚರ್ಸ್, ಪವಮಾನ ಕ್ರಿಯೇಷನ್ಸ್, ಫೋರೆಸ್ ನೆಟ್ ವರ್ಕ್ ಸೊಲೂಷ್ಯನ್ಸ್ ಬ್ಯಾನರ್ ಅಡಿ ಈ ಚಿತ್ರ ನಿರ್ಮಾಣವಾಗಿದೆ. ಇನ್ನು ಎರಡು ತಿಂಗಳಲ್ಲಿ ರಾಜ್ಯದಲ್ಲಿ ಈ ಚಿತ್ರ ತೆರೆ ಕಾಣಲಿದೆ ಎಂದರು ಅವರು.

ಒಮಾನ್ ದೇಶದ ಮಸ್ಕತ್‌ನಲ್ಲಿ 'ಎಸ್‌ಎಲ್‌ವಿ' ಚಿತ್ರ ಪ್ರದರ್ಶನಕ್ಕೆ ಸೇರಿದ ಪ್ರೇಕ್ಷಕರು

'ಪಾದರಾಯ'ಕ್ಕೆ ನಾಗಶೇಖರ್ ಹೀರೊ

ಚಕ್ರವರ್ತಿ ಚಂದ್ರಚೂಡ್ ಮತ್ತೆ ನಿರ್ದೇಶನಕ್ಕೆ ಇಳಿದಿದ್ದಾರೆ. ಹನುಮ ಜಯಂತಿಯಂದೇ ತಮ್ಮ ಮೊದಲ ಪ್ಯಾನ್ ಇಂಡಿಯಾ ಸಿನಿಮಾದ ಶೀರ್ಷಿಕೆಯನ್ನು ಅನಾವರಣ ಮಾಡಿದ್ದಾರೆ. ಚಿತ್ರಕ್ಕೆ 'ಪಾದರಾಯ' ಎಂಬ ಟೈಟಲ್ ಇಡಲಾಗಿದ್ದು, ಈ ಚಿತ್ರವನ್ನು ನಿರ್ಮಾಪಕ ಹಾಗೂ ವಿತರಕ ಜಾಕ್ ಮಂಜು ಅವರು ನಿರ್ಮಾಣ ಮಾಡಲಿದ್ದಾರೆ.

ಜಾಕ್ ಮಂಜು ಹಾಗೂ ಚಕ್ರವರ್ತಿ ಚಂದ್ರಚೂಡ್

ಚಿತ್ರದಲ್ಲಿ 'ಮೈನಾ', 'ಸಂಜು ವೆಡ್ಸ್ ಗೀತಾ' ಸಿನಿಮಾ ಖ್ಯಾತಿಯ ನಿರ್ದೇಶಕ ನಾಗಶೇಖರ್ ನಾಯಕ ನಟನಾಗಿ ನಟಿಸಲಿದ್ದಾರೆ. ನೈಜ ಘಟನೆ ಆಧರಿಸಿದ ಈ ಚಿತ್ರಕ್ಕೆ ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ನಿರ್ದೇಶನ ಮಾಡಲಿದ್ದಾರೆ ಚಕ್ರವರ್ತಿ ಚಂದ್ರಚೂಡ್. ಈ ಚಿತ್ರ ಏಕಕಾಲದಲ್ಲಿ ಕನ್ನಡ, ತೆಲುಗು, ತಮಿಳು, ಹಿಂದಿ ಹಾಗೂ ಮಲಯಾಳಂನಲ್ಲಿ ನಿರ್ಮಾಣವಾಗಿ ಬಿಡುಗಡೆಯಾಗಲಿದೆ. ನಾಗಶೇಖರ್ ಚಿತ್ರಕ್ಕೆ ಸಹ ನಿರ್ಮಾಪಕ ಕೂಡ ಆಗಿದ್ದಾರೆ.

'ಪಾದರಾಯ' ಎಂದರೆ ಹನುಮಂತ. ಅಂಜನಾದ್ರಿ ಸುತ್ತಮುತ್ತ ನಡೆಯುವ ಕಥೆ ಚಿತ್ರಲ್ಲಿದೆ. 2013-14ರಲ್ಲಿ ನಡೆದ ನೈಜ ಘಟನೆ ಆಧರಿಸಿದ ಸಿನಿಮಾ ಇದಾಗಿದೆ. ಈ ಘಟನೆ ಆರು ರಾಜ್ಯಕ್ಕೆ ಸಂಬಂಧಿಸಿದ್ದು, ಯೂನಿವರ್ಸಲ್ ಸಬ್ಜೆಕ್ಟ್ ಆಗಿರುವ ಕಾರಣ ಪ್ಯಾನ್ ಇಂಡಿಯಾ ಸಿನಿಮಾ ಮಾಡುತ್ತಿದ್ದೇವೆ. ಶಾಲಿನಿ ಆರ್ಟ್ಸ್ ಬ್ಯಾನರ್‌ನಡಿ ಜಾಕ್ ಮಂಜು ಈ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದಾರೆ. ಚಿತ್ರಕ್ಕೆ ನಾಯಕಿ ಹುಡುಕಾಟದಲ್ಲಿದ್ದೇವೆ. ಜನವರಿಯಲ್ಲಿ ಚಿತ್ರೀಕರಣ ಆರಂಭಿಸಲಿದ್ದೇವೆ. ಸಿನಿಮಾ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಸದ್ಯದಲ್ಲೇ ಹಂಚಿಕೊಳ್ಳುತ್ತೇನೆ ಎಂದಿದ್ದಾರೆ ಚಕ್ರವರ್ತಿ ಚಂದ್ರಚೂಡ್. ಅಜನೀಶ್ ಲೋಕನಾಥ್ ಸಂಗೀತ ನಿರ್ದೇಶನ, ತಮಿಳು ಚಿತ್ರರಂಗದ ಹೆಸರಾಂತ ಸಂಕಲನಕಾರ ಆಂಟೋನಿ ಚಿತ್ರದ ಸಂಕಲನ ಜವಾಬ್ದಾರಿ ಹೊತ್ತಿದ್ದಾರೆ. ಸತ್ಯ ಹೆಗಡೆ ಛಾಯಾಗ್ರಹಣ ಚಿತ್ರಕ್ಕಿರಲಿದೆ.

ಇಂದು ಬೆಂಗಳೂರು ಶ್ರೀ ಅವನಿ ಶೃಂಗೇರಿ ಶಂಕರ ಮಠದಲ್ಲಿ ಹಿಂದೆಂದೂ ಕಾಣದ ಮಾರಾಟಕ್ಕೆ ಸಾಕ್ಷಿಯಾಗಲಿದೆ.

ಭಾರತದ ಅತಿ ದೊಡ್ಡ ಉಡುಪುಗಳ ರಿಯಾಯಿತಿ ಮಾರಾಟ

ಸವಾಲಿನ ಬೆಲೆಗಳು ! ಆನ್‌ಲೈನ್ ಬೆಲೆಗಳಿಗೆ ಹೋಲಿಸಿದರೆ ತುಂಬಾ ಕಡಿಮೆ !!

ವಿಶೇಷ ಮಕ್ಕಳು, ಮಹಿಳೆಯರು ಮತ್ತು ಪುರುಷರ ಉಡುಪುಗಳ ಮಾರಾಟ

THE BEAR HOUSE | rocstar | INDIGO NATION | JOHN MILLER | FLYING MACHINE | NUMERO UNO THE REAL DENIM

SPECIAL COUNTER PRETTYSECRETS ರೂ.1750 ರಿಂದ 3500 ಬೆಲೆಯ ಲೇಡೀಸ್ ಪ್ರೆಟಿಸೆಕ್ರೆಟ್ ನೈಟಿ, ನೈಟ್ ಸೂಟ್‌ಗಳು, ಒಳ ಉಡುಪುಗಳು ಈಗ ಕೇವಲ ರೂ.250 ರಿಂದ 350ಕ್ಕೆ ಮಾರಾಟ

ರೂ.2100 ರಿಂದ 4750 ಬೆಲೆಯ ಕಾಟನ್ ಹೋಸರಿ ಅಂತಾರಾಷ್ಟ್ರೀಯ ಬ್ರಾಂಡೆಡ್ ಗಾರ್ಮೆಂಟ್ಸ್ ಈಗ ಕೇವಲ ರೂ.1000 ರಿಂದ 200 ಕ್ಕೆ ಮಾತ್ರ

ರೂ.999 ರಿಂದ 1990 ಬೆಲೆಯ ಟಾಪ್ಸ್, ಜೀನ್ಸ್, ಪ್ಯಾಂಟ್, ವಿವಿಧ ಬಣ್ಣಗಳ ಕುರ್ತೀಸ್, ವೆಸ್ಟರ್ನ್ ಟಾಪ್ಸ್, ಲೆಗ್ಗಿನ್ಸ್, ಪ್ಲಾಜೊ Rs. 99 to Rs. 199

ರೂ.2500 ರಿಂದ 3999ಬೆಲೆಯ ಶರ್ಟ್, ಪ್ಯಾಂಟ್, ಪ್ಯೂರ್ ವುಲೆನ್ ಸ್ವೆಟರ್ಸ್ , ಟಿ ಶರ್ಟ್ ಇತ್ಯಾದಿ. Rs 250 to Rs. 450

ರೂ. 2100 ದಿಂದ 6500 ಮೌಲ್ಯದ ಪ್ರೀಮಿಯಂ ಪ್ಯೂರ್ 100% ಕಾಟನ್ ಶರ್ಟ್, ಪ್ಯಾಂಟ್, ಜೀನ್ಸ್, Rs. 450 to Rs. 590

FORMAL & CASUAL WEAR
JOHN MILLER | NUMERO UNO | INDIGO NATION
Rs. 3000-7000 Getns- Jeans, Pants, Linen Shirt, Trousers, T-shirts will be sold from Rs. 450 to Rs. 1250

PARTY WEAR
JOHN MILLER | NUMERO UNO | INDIGO NATION
Rs. 4000 to 6500/- Worth Product will be sold only Rs. 599 to Rs. 999

WINTER WEAR
JOHN MILLER | FLYING MACHINE | INDIGO NATION
Rs. 2600/- to Rs. 7000 worth Winter Wear Ladies & Gents : Sweat Shirts, Sweaters, Lowers, Huddies, Jackets only Rs. 1250

Garments are sold here at such low prices which the people of Bengaluru could never imagine.
This sale is open only to retail customers, Wholesalers need not contact.

ರೂ.900 ರಿಂದ 1750 ಬೆಲೆಯ ಪಾರ್ಕ್ ಅವೆನ್ಯೂ ಇಂಪೋರ್ಟೆಡ್ ಪ್ಯೂರ್ ಲೇದರ್ ಬೆಲ್ಟ್ ಈಗ ಕೇವಲ ರೂ.150 ರಿಂದ 250 ಕ್ಕೆ ಮಾತ್ರ

Note : 1. Don's compare this sale with other sales 2. Counters will be closed as soon as the garments are sold.

10ನೇ, 11ನೇ ಮತ್ತು 12ನೇ ಡಿಸೆಂಬರ್ 2022 (ಶನಿವಾರ, ಭಾನುವಾರ ಮತ್ತು ಸೋಮವಾರ)

All Cards / Digital Payments Accepted | Entry & Parking Free | Sale Time : 10 am to 9 pm

This Big Bumper Sale Only For 3 Days

ಶ್ರೀ ಅವನಿ ಶೃಂಗೇರಿ ಶಂಕರ ಮಠ

ವೆಸ್ಟ್ ಆಫ್ ಕಾರ್ಡ್ ರಸ್ತೆ, ಮಹಾಲಕ್ಷ್ಮಿಪುರಂ ಲೇಔಟ್, ಬೆಂಗಳೂರು - 560 086 (ಮೋದಿ ಆಸ್ಪತ್ರೆ ರಸ್ತೆ)